ಧಾರವಾಡ ಮುರುಘಾಮಠದ ಶ್ರೀ ಮೃತ್ಯುಂಜಯ ವಿಶೇಷ ವ್ಯಾಖ್ಯಾನಮಾಲೆ : ಮೂರು

ವೀರಶೈವ ಧರ್ಮ - ತತ್ತ್ವ - ಸಿದ್ಧಾಂತ

ಉಪನ್ಯಾಸಕರು :
ಡಾ. ಜ. ಚ. ನಿ.

ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೭೭

ವೀರಶೈವ ಧರ್ಮ-ತತ್ತ್ವ-ಸಿದ್ಧಾಂತ

ಉಪನ್ಯಾಸಕರು :
ಡಾ. ಜ. ಚ. ನಿ.

ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೭೭

ಪ್ರಕಾಶಕರು :
ಸಿ. ಎಸ್. ಕಣವಿ
ನಿರ್ದೇಶಕರು,
ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ ಡಿಸೆಂಬರ : ೧೯೭೭
ಪ್ರತಿಗಳು : ೨೦೦೦

ಬೆಲೆ : ಸಾದಾ ಪ್ರತಿ : ರೂ. ೧೦-೦೦
ಉತ್ತಮ ಪ್ರತಿ : ರೂ. ೧೩-೦೦

ಮುದ್ರಕರು :
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ, ಧಾರವಾಡ

ಕನ್ನಡ ಅಧ್ಯಯನಪೀಠ

ಧಾರವಾಡ ಮುರುಘಾಮಠದ
ಶ್ರೀ ಮೃತ್ಯುಂಜಯ ವಿಶೇಷ ವ್ಯಾಖ್ಯಾನ ಮಾಲೆ : ೩

ವೀರಶೈವ ಧರ್ಮ-ತತ್ತ್ವ-ಸಿದ್ಧಾಂತ

ಪ್ರಧಾನ ಸಂಪಾದಕರು
ಡಾ. ಎಂ. ಎಸ್. ಸುಂಕಾಪುರ

ಹಾರೈಕೆ

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಆಶ್ರಯದಲ್ಲಿ ನಡೆಯುತ್ತಿರುವ 'ಧಾರವಾಡದ ಶ್ರೀ ಮೃತ್ಯುಂಜಯ ವಿಶೇಷವ್ಯಾಖ್ಯಾನಮಾಲೆ' ಒಂದು ಅಪೂರ್ವ ಉಪಕ್ರಮ. ಶ್ರೀ ಮೃತ್ಯುಂಜಯ ಅಪ್ಪಗಳು ಈ ಯುಗದ ದೇವ ಮಾನವರು. 'ಸಕಲ ಜೀವಾತ್ಮರಿಗೆ ಲೇಸನೇ ಬಯಸುವ' ಅವರ ಬದುಕು ಸಮಾಜ ಸೇವೆಗೆ ಮೀಸಲಾಗಿತ್ತು. ಶ್ರೀಸಾಮಾನ್ಯನ ಸೇವೆಯಲ್ಲಿಯೇ ಅವರು ಶಿವಯೋಗದ ಅನುಭವವನ್ನು ಪಡೆಯುತ್ತ, ಅನಂತ ಭಕ್ತಕೋಟಿಯನ್ನು ಉದ್ಧರಿಸಿದುದು ಒಂದು ಅನನ್ಯಸಿದ್ಧಿಯಾಗಿದೆ.

ಪೂಜ್ಯ ಶ್ರೀಗಳವರ ಸ್ಮರಣೆಯನ್ನು ಹಲವು ವಿಧವಾಗಿ ಜೀವಂತವಾಗಿಡಬಯಸಿದ ಅವರ ಭಕ್ತವೃಂದ ಅವರ ಹೆಸರಿನಲ್ಲಿ ಈ ವ್ಯಾಖ್ಯಾನಮಾಲೆಯನ್ನು ಪ್ರಾರಂಭಿಸಿದುದು ಪ್ರಶಂಸನೀಯ ಕಾರ್ಯವಾಗಿದೆ. ಪ್ರತಿವರ್ಷವೂ ನಡೆಯುವ ಈ ಉಪನ್ಯಾಸ ಮಾಲೆಯ ಕಾರ್ಯಕ್ರಮಗಳು ವೀರಶೈವ ಧರ್ಮ, ಸಾಹಿತ್ಯ, ಸಂಸ್ಕೃತಿ ಮೊದಲಾದ ವಿಷಯಗಳ ಮೇಲೆ ಹೊಸಬೆಳಕನ್ನು ಚೆಲ್ಲುತ್ತವೆ. ಗ್ರಂಥರೂಪದಲ್ಲಿ ಪ್ರಕಟ ವಾಗುವ ಇಲ್ಲಿಯ ಉಪನ್ಯಾಸಗಳು ನಾಡಿನ ಜಿಜ್ಞಾಸುಗಳಿಗೆ ಕೈದೀವಿಗೆಯಾಗಿ ಉಳಿಯುತ್ತವೆ.

ಈ ವರ್ಷದ ವ್ಯಾಖ್ಯಾನಕಾರರು ಡಾ. ಜ. ಚ. ನಿ. ಅವರು. ಕನ್ನಡ ಸಾರಸ್ವತ ಪ್ರಪಂಚಕ್ಕೆ, ಧರ್ಮಗುರುಗಳ ಸ್ಥಾನದಲ್ಲಿದ್ದುಕೊಂಡು ಇವರಷ್ಟು ಸೇವೆ ಸಲ್ಲಿಸಿದವರು ದೊರೆಯುವುದು ವಿರಳ. 'ವೀರಶೈವ ಧರ್ಮ, ತತ್ತ್ವ, ಸಿದ್ಧಾಂತ' ಎಂಬ ವಿಷಯವಾಗಿ ಅವರು ನೀಡುವ ಉಪನ್ಯಾಸ ಅತ್ಯಂತ ಮನನೀಯವಾದದ್ದೆಂದು ಬೇರೆ ಹೇಳ ಬೇಕಾಗಿಲ್ಲ. ಉಪನ್ಯಾಸ ನಡೆಯುತ್ತಿರುವ ಕಾಲದಲ್ಲಿಯೇ ಈ ಉಪನ್ಯಾಸ ಗ್ರಂಥ ಪ್ರಕಟವಾಗುತ್ತಿರುವುದು ಒಂದು ವಿಶೇಷ. ಡಾ. ಜ. ಚ. ನಿ. ಅವರ ಈ ಅನುಕರಣೀಯ ಕಾರ್ಯವನ್ನು ನಾವು ತುಂಬು ಹೃದಯದಿಂದ ಶ್ಲಾಘಿಸದಿರೆವು.

ಪ್ರಥಮ ಉಪನ್ಯಾಸಗ್ರಂಥವಾದ ಡಾ. ಆರ್. ಆರ್. ದಿವಾಕರ ಅವರ 'ಶರಣರ ಅನುಭವ ಅನುಭಾವ ಅನುಭೂತಿ'ಯನ್ನೂ ದ್ವಿತೀಯ ಉಪನ್ಯಾಸ ಗ್ರಂಥವಾದ ಡಾ. ಸಿದ್ಧಯ್ಯ ಪುರಾಣಿಕರ 'ಬಸವಣ್ಣನವರ ಜೀವನ ಹಾಗೂ ಸಂದೇಶ'ವನ್ನೂ ಬರಮಾಡಿಕೊಂಡಂತೆ ಈ ತೃತೀಯ ಉಪನ್ಯಾಸಗ್ರಂಥವಾದ 'ವೀರಶೈವ ಧರ್ಮ-ತತ್ತ್ವ-ಸಿದ್ಧಾಂತ'ವನ್ನೂ ಸಹೃದಯರು ಹೃತ್ಪೂರ್ವಕವಾಗಿ ಸ್ವಾಗತಿಸುವರೆಂದು ನಂಬಿದ್ದೇವೆ. ಈ ಉಪನ್ಯಾಸವನ್ನು ಅನುಗ್ರಹಿಸಿದ ಶ್ರೀಶೈಲ ಸೂರ್ಯಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಚನ್ನಬಸವರಾಜ ದೇಶಿಕೇಂದ್ರ ಮಹಾಸ್ವಾಮಿಗಳು ನಿಡುಮಾಮಿಡಿ (ಡಾ. ಜ. ಚ. ನಿ.) ಅವರಿಗೆ ನಮ್ಮ ಕೃತಜ್ಞತೆಗಳು..

ಶ್ರೀ ಮುರುಘಾಮಠ, ಧಾರವಾಡ
೨೯-೧೨-೭೭

ಶ್ರೀ ಮಹಾಂತಸ್ವಾಮಿಗಳು

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ವಿಸ್ತಾರವಾಗಿ, ವೈವಿಧ್ಯಪೂರ್ಣವಾಗಿ ಬೆಳೆಯುತ್ತಿರುವ ಒಂದು ಮಹತ್ವದ ಸಂಸ್ಥೆ. ಕನ್ನಡಸಾಹಿತ್ಯ, ಭಾಷಾವಿಜ್ಞಾನ, ಜನಪದಸಾಹಿತ್ಯಗಳ ಜೊತೆಗೆ ನಮ್ಮ ನಾಡಿನ ಜೈನ, ವೀರಶೈವ, ಬ್ರಾಹ್ಮಣ ಈ ಪ್ರಮುಖ ಧರ್ಮಗಳ ಸಾಹಿತ್ಯ, ತತ್ತ್ವ, ಸಿದ್ಧಾಂತಗಳನ್ನು ತನ್ನ ಅಧ್ಯಯನಕಕ್ಷೆಯೊಳಗೆ ಬರಮಾಡಿಕೊಂಡಿದೆ. ಈಗಾಗಲೇ ಈ ಕ್ಷೇತ್ರಗಳಲ್ಲಿ ಗಣನೀಯವಾದ ಕಾರ್ಯವನ್ನು ಮಾಡಿದೆ.

ವೀರಶೈವಧರ್ಮಕ್ಕೆ ಸಂಬಂಧಿಸಿದಂತೆ ೧೯೬೨ರಲ್ಲಿಯೇ ಪ್ರಾರಂಭವಾದ 'ಸಮಗ್ರ ವಚನವಾಙ್ಮಯ ಪ್ರಕಟನಯೋಜನೆ' ಅಭೂತಪೂರ್ವ ಕಾರ್ಯವನ್ನು ನಿರ್ವಹಿಸಿದೆ. ಅನಂತರ ಅಧ್ಯಯನಪೀಠದಲ್ಲಿ ಅಧಿಷ್ಠಾನಗೊಂಡ 'ಶ್ರೀಬಸವೇಶ್ವರ ಪೀಠ' ಈ ದಿಶೆಯಲ್ಲಿ ಇನ್ನೊಂದು ಅನನ್ಯವಾದ ಸಾಧನೆಯನ್ನು ಮಾಡುತ್ತಲಿದೆ. ೧೯೭೪ ರಿಂದ ಪ್ರಾರಂಭವಾದ 'ಧಾರವಾಡ ಶ್ರೀ ಮೃತ್ಯುಂಜಯ ವ್ಯಾಖ್ಯಾನ ಮಾಲೆ' ಜ್ಞಾನಪ್ರಸಾರಕಾರ್ಯದಲ್ಲಿ ಮತ್ತೊಂದು ಮೈಲುಗಲ್ಲಾಗಿದೆ.

ಧಾರವಾಡದ ಶ್ರೀ. ನಿ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳು ಜ್ಞಾನಪ್ರಸಾರ ಕಾರ್ಯದಲ್ಲಿ ತೋರಿದ ಆಸ್ಥೆ, ಮಾಡಿದ ಕಾರ್ಯ ಅನುಪಮವಾದುವು. ನಮ್ಮ ನಾಡಿನ ಸಾವಿರ ಸಾವಿರ ವಿದ್ಯಾರ್ಥಿಗಳನ್ನು ಸಲುಹಿ, ಅವರ ವಿದ್ಯಾರ್ಜನೆಗೆ ಮಾರ್ಗ ಮಾಡಿಕೊಟ್ಟಿದ್ದಲ್ಲದೆ, 'ಶ್ರೀ ಬಾಲಲೀಲಾ ಮಹಾಂತಶಿವಯೋಗೀಶ್ವರ ಗ್ರಂಥಮಾಲೆ' ಯನ್ನು ಕಟ್ಟಿ, ಬೆಳೆಸಿ, ತನ್ಮೂಲಕ ಜಿಜ್ಞಾಸುಗಳಿಗೂ ಜ್ಞಾನಪ್ರಸಾದವನ್ನು ನೀಡಿದರು. ಇಂಥ ದಿವ್ಯತೇಜೋಮೂರ್ತಿಗಳು ನಿತ್ಯಸ್ಮರಣೀಯರು. ಅವರ ಸ್ಮರಣೆಯನ್ನು ವಿಶ್ವವಿದ್ಯಾಲಯದ ಮಟ್ಟದಲ್ಲಿಯೂ ಶಾಶ್ವತವಾಗಿರಿಸಲು ಹಾಗೂ ಅವರ ಜೀವನದ ಧ್ಯೇಯವಾಗಿದ್ದ ಜ್ಞಾನಪ್ರಸಾರದ ಕಾರ್ಯವನ್ನು ನಿರಂತರವಾಗಿ ಮುಂದುವರಿಸಲು ಈ ವ್ಯಾಖ್ಯಾನಮಾಲೆಯನ್ನು ೧೯೭೪ ರಿಂದ ಪ್ರಾರಂಭಿಸಲಾಗಿದೆ.

ಈ ವ್ಯಾಖ್ಯಾನಮಾಲೆಯ ಪ್ರಥಮ ಉಪನ್ಯಾಸವನ್ನು ನಮ್ಮ ರಾಷ್ಟ್ರದ ಗಣ್ಯ ವ್ಯಕ್ತಿಗಳೂ ಸಾಹಿತಿಗಳೂ ಆದ ಡಾ. ರಂ. ರಾ. ದಿವಾಕರ ಅವರು ನೀಡಿದರು. ಎರಡನೆಯ ಉಪನ್ಯಾಸ ನೀಡಿದರು ಕನ್ನಡದ ಸುಪ್ರಸಿದ್ಧ ಕವಿಗಳೂ ಸಾಹಿತಿಗಳೂ ಆದ ಡಾ. ಸಿದ್ಧಯ್ಯ ಪುರಾಣಿಕ ಅವರು. ಇವರಿಬ್ಬರ ಉಪನ್ಯಾಸಗಳು ಗ್ರಂಥರೂಪದಲ್ಲಿ ಪ್ರಕಟವಾಗಿದ್ದು, ಅವು ಜಿಜ್ಞಾಸುಗಳ, ವಿಮರ್ಶಕರ ಪ್ರಶಂಸೆಗೆ ಪಾತ್ರವಾಗಿವೆ.

ಈ ಮೂರನೆಯ ಉಪನ್ಯಾಸವನ್ನು ನೆರವೇರಿಸಿಕೊಟ್ಟವರು ಪರಮಪೂಜ್ಯರಾದ ಶ್ರೀಶೈಲ ಸೂರ್ಯಸಿಂಹಾಸನಾಧೀಶ್ವರ ಶ್ರೀಜಗದ್ಗುರು ಚನ್ನಬಸವರಾಜ ದೇಶಿಕೇಂದ್ರ ಮಹಾಸ್ವಾಮಿಗಳು, ನಿಡುಮಾಮಿಡಿ ಅವರು. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ವಿಪುಲವಾಗಿ ಕೃಷಿ ಮಾಡಿದ ಅವರು ಈ ಕ್ಷೇತ್ರದಲ್ಲಿಯೂ ಜಗದ್ಗುರುಗಳಾಗಿದ್ದಾರೆಂದು ಹೇಳಬಹುದು. ವೀರಶೈವ ಧರ್ಮ, ತತ್ತ್ವ, ಸಿದ್ಧಾಂತಗಳಲ್ಲಿಯೂ ಅವರದು ಅನುಪಮ ಸಾಧನೆ. ಅವರ 'ಜೀವನ ಸಿದ್ಧಾಂತ' ಸಂಪುಟಗಳು ಬಹುದೊಡ್ಡ ಕೊಡುಗೆಗಳಾಗಿವೆ. ಶ್ರೀಗಳವರು ನಮ್ಮಲ್ಲಿಗೆ ಬರಲು ಅನುಗ್ರಹಿಸಿದ್ದುದು ನಮ್ಮ ಭಾಗ್ಯವೆಂದೇ ಭಾವಿಸಿದ್ದೇವೆ. ಅವರು ನೀಡುವ 'ವೀರಶೈವ ಧರ್ಮ, ತತ್ತ್ವ, ಸಿದ್ಧಾಂತ' ಎಂಬ ವಿಷಯದ ಉಪನ್ಯಾಸವು ನಮಗೆಲ್ಲ ಮಾರ್ಗದರ್ಶನವನ್ನು ನೀಡುವಂತಹದು. ಗ್ರಂಥ ರೂಪದಲ್ಲಿ ಪ್ರಕಟವಾಗುವಂತೆ ಅವರು ಉಪನ್ಯಾಸವನ್ನು ಮುಂಚೆಯೇ ಬರೆದು ಕೊಟ್ಟುದು ಒಂದು ಸ್ಮರಣೀಯ ವಿಷಯವಾಗಿದೆ. ಅವರ ಈ ಕೃಪೆಗೆ ನಾವು ಎಂದೆಂದಿಗೂ ಋಣಿಯಾಗಿದ್ದೇವೆ. ಅವರ ಶ್ರೀಚರಣಗಳಿಗೆ ಧನ್ಯತೆಯಿಂದ ನಮ್ಮ ವಂದನೆಗಳನ್ನು ಸಲ್ಲಿಸುತ್ತೇವೆ.

ಕನ್ನಡ ಅಧ್ಯಯನಪೀಠ ಹುಟ್ಟಿದಂದಿನಿಂದಲೂ ಅದರ ಪೋಷಣೆಯ ಭಾರ ವನ್ನು ಹೊತ್ತಿರುವ, ನಿರಂತರ ಸ್ಫೂರ್ತಿಯ ಕೇಂದ್ರವಾಗಿರುವ ಮಾನ್ಯ ಕುಲಪತಿ ಡಾ. ಆರ್. ಸಿ. ಹಿರೇಮಠ ಅವರಿಗೆ ನಮ್ಮ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸದಿರೆವು.

ಈ ಗ್ರಂಥ ಪ್ರಕಟನೆಯ ಕಾರ್ಯದಲ್ಲಿ ವಿಶೇಷ ಆಸ್ಥೆ ವಹಿಸಿದ ಶ್ರೀಚೆನ್ನವೀರ ಕಣವಿ ಹಾಗೂ ಶ್ರೀ ಎಸ್. ಬಿ. ನಾಯಕ ಅವರಿಗೂ, ಅಚ್ಚುಕಟ್ಟಾಗಿ ಅಚ್ಚುಮಾಡಿಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯದ ಮುದ್ರಣಾಲಯದ ಅಧಿಕಾರಿಗಳಿಗೂ ಮತ್ತು ಅವರ ಸಿಬ್ಬಂದಿ ವರ್ಗಕ್ಕೂ ನಮ್ಮ ಕೃತಜ್ಞತೆಗಳು.

ಎಂ. ಎಸ್. ಸುಂಕಾಪುರ

ಕನ್ನಡ ಅಧ್ಯಯನ ಪೀಠ
೨೯–೧೨–೧೯೭೭

ನಮ್ಮ ನುಡಿ

ಕರ್ನಾಟಕ ವಿಶ್ವವಿದ್ಯಾಲಯ ವಿಸ್ತಾರಗೊಂಡಿದೆ. ವಿವಿಧತೆಯನ್ನು ತಳೆದಿದೆ. ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ವಿಜ್ಞಾನಶಾಸ್ತ್ರ, ಜೀವನಶಾಸ್ತ್ರಾದಿಗಳೊಡನೆ ಧಾರ್ಮಿಕಶಾಸ್ತ್ರದ ಅಧ್ಯಯನಕ್ಕೂ ಅನುವು ಮಾಡಿಕೊಟ್ಟಿದೆ. ಇದರಿಂದಾಗಿ ಸಾಮಾಜಿಕರು ತತ್ತ್ವಾಧ್ಯಯನ ನಿರತರಾಗಲು ಅವಕಾಶವಾಗಿದೆ. ನಮ್ಮಂಥವರೂ ಸಹ ಇಲ್ಲಿ ಬಂದು ಕಲಿತ ಪಾಠವನ್ನು ಒಪ್ಪಿಸುವಂತಾಗಿದೆ; ಅಧ್ಯಯನಪೀಠವು ಹೊಸ ಅರಿಕೆಯ ಹೊಸ ಹೊತ್ತಿಗೆಗಳನ್ನು ಹೊರ ತರುತ್ತಿದೆ. ಹೊಸ ಹೊಂಬೆಳಕನ್ನು ತಂದು ತುಂಬುತ್ತಿದೆ. ಹೊಸ ಮನ್ವಂತರಕ್ಕೆ, ಮನ್ವಂತರ ಜೀವನಕ್ಕೆ, ವಿಶಿಷ್ಟ ವಿಚಾರಕ್ಕೆ ಹೊಂದಿಸುವ ಪ್ರಯತ್ನ ಸಾಗಿದೆ; ಹೊಸ ಬಾಳಿಗೆ ಅನುವಾಗುವ ಹೊಸ ಅನುಭವ-ಹೊಸ ಅರ್ಥಗಳ ಭಾವಗಳ ಜೋಡಣೆಯುಂಟಾಗಿದೆ; ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಮುಖ್ಯಸ್ಥರಾದ ಡಾ॥ ಎಂ. ಎಸ್. ಸುಂಕಾಪುರ ಅವರ ಆದರಾಭಿಮಾನಪೂರ್ಣವಾದ ಬಿನ್ನಹದ ಮೇರೆಗೆ. ಮರಳಿ ನಮ್ಮ ಹಳೆಯ ಅಧ್ಯಯನ ವಿಷಯವಾದ ಈ ವೀರಶೈವ ಮತ-ತತ್ತ್ವ-ಸಿದ್ಧಾಂತಗಳ ಬಗೆಗೆ ಮತ್ತೆ ಮೆಲಕು ಹಾಕಬೇಕಾಯಿತು. ಈ ಬಗೆಗೆ ಸು. ೨೫ ವರುಷಗಳ ಹಿಂದೆ ಚಿಂತನಪರ ಅಭ್ಯಾಸ ಮಾಡಿ 'ಶಿವಾದ್ವೈತದರ್ಶನ', ಮತ್ತು ೧೨ ವರುಷಗಳ ಹಿಂದೆ ವಿಚಾರ ವಿಶ್ಲೇಷಣಗಳೊಡನೆ ಸೃಜನಾತ್ಮಕ ಭಾಗಗಳೊಡನೆ 'ಜೀವನ ಸಿದ್ಧಾಂತ' ಎಂಬೀ ಎರಡು ಹೊಸ ಹೊತ್ತಿಗೆಗಳನ್ನು ಹೊರತರಲಾಯಿತು. ಇದೀಗ ವೀರಶೈವ ವಿಶಿಷ್ಟ ವಚನ ವಾಙ್ಮಯದ ಅನುಭವಾಮೃತದಂತಿರುವ 'ಶೂನ್ಯ ಸಂಪಾದನೆ'ಯ ಮೇಲೆ ಬರೆದ ಬೃಹತ್ ಗ್ರಂಥ 'ಸಂಪಾದನೆಯ ಸೊಂಪು' (ಸಮಗ್ರ ವಿವೇಚನೆ) ಹೆಸರಿನಲ್ಲಿ ನಾಲ್ಕು ಸಂಪುಟಗಳಲ್ಲಿ ಹೊರಬರುತ್ತಲಿದೆ. ಈಗಾಗಲೆ ಪ್ರಥಮ ಸಂಪುಟ ಹೊರಬಂದಿದೆ; ಉಳಿದವು ಬರಲಿವೆ. 'ಧ್ವನಿ' 'ಕಾವ್ಯ' 'ರಸ' 'ಸೌಂದರ್ಯದರ್ಶನ' 'ಶೀಲಶೈಲಿ' 'ಸ್ಥಿತಿಬಿಂಬ' ಎಂಬ ಆರು ಲಾಕ್ಷಣಿಕ ಕನ್ನಡ ಸಾಹಿತ್ಯ ಕೃತಿಗಳು ರಚಿತವಾಗಿವೆ. ಇವನ್ನು ರೂಪಿಸುವಾಗ ಮಾಡಿದ ಅಧ್ಯಯನ ಇಂದಿನ ಈ ಧಾರ್ಮಿಕ ಕೃತಿಯ ಮೇಲೆ ದೀಪ್ತಿಯನ್ನು ಚೆಲ್ಲಿದೆ.

ಅನಿತರಲ್ಲಿ ಈ 'ವೀರಶೈವ ಮತ-ತತ್ತ್ವ-ಸಿದ್ಧಾಂತ' ವಿಷಯವಾಗಿ ಭಾಷಣಕ್ಕೆ ಬರೆಪಕ್ಕೆ ಒಲವಿನ ಕರೆ. ಕರೆಗೆ ಓಗೊಟ್ಟು ಕಾರ್ಯಕ್ಕೆ ಇಳಿಯಲಾಗಿದೆ. ಇದರಲ್ಲಿ ಹಿಂದಿನ ಅಭಿಪ್ರಾಯಗಳು ಅಲ್ಲಲ್ಲಿ ಮೂಡಿರುವಲ್ಲಿ ಅಚ್ಚರಿಯೇನಿರದು; ಅನಿವಾರ್ಯವೂ ಅಹುದು. ಆದರೆ ಬಹುಭಾಗಗಳಲ್ಲಿ ಹೊಚ್ಚಹೊಸತನದ ಚಿಂತನಪರತೆ ಚಿಮ್ಮದಿಲ್ಲ;

ಅಭಿನವ ಅನುಮೇಯಗಳು ಅಭಿವ್ಯಕ್ತವಾಗದಿಲ್ಲ. ಅಲ್ಲದೆ ಅಲ್ಲಲ್ಲಿ ಹೊಸತಿರುವು ಹೊಸ ಆಯಾಮಗಳು ತೋರದಿಲ್ಲ. ಆದರೆ ಅವುಗಳ ತೂಕ ಬಣ್ಣ ಬೆಲೆ ನೆಲೆ ಯಾವ ಹಂತದವೆಂಬುದು ಸಹೃದಯರಿಗೆ ಸೇರಿದ ಮಾತು. ಮತಪ್ರಾಚೀನತೆಯ ಬಗೆಗೆ ಇದೇ ಕೊನೆಯ ನಿರ್ಣಯವೆಂದು ಹೇಳಲಾರೆವಾದರೂ ಈ ಬಗೆಗೆ ಇಂದೊಂದು ದಿಕ್ ಸೂಚಿಯೆಂದು ಹೇಳದಿರೆವು. ಮತ್ತು ಮತ-ತತ್ತ್ವ-ಸಿದ್ಧಾಂತಗಳ ಸಕೀಲ ಸಂಬಂಧವಿಷಯ ಹಾಗು ಸಂಶ್ಲೇಷಣ-ವಿಶ್ಲೇಷಣಗಳು ಹಳತಲ್ಲ, ವಿಕಾಸ ನಿರ್ದೇಶನಗಳೂ ಹಳತಲ್ಲ.

ಈ ಕೃತಿಯನ್ನು ರೂಪಿಸಿದ ಕಾಲಾವಕಾಶ ತೀರ ಅತ್ಯಲ್ಪವಿದ್ದ ಕಾರಣ ಅಲ್ಲಲ್ಲಿ ಕೊರತೆಯೂ ಕಾಣದಿರದು.

ಬೀಡು : ವಿಜಾಪೂರ
೧೦–೧೨–೧೯೭೭

ಜ. ಚ. ನಿ.

ಪರಿವಿಡಿ

ವೀರಶೈವಧರ್ಮ

ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ ।
ನಿರ್ದಿಷ್ಟಮುತ್ತರೇ ಭಾಗೇ ವೀರಶೈವಮತಂ ಪರಂ ॥
ವಿದ್ಯಾಯಾಂ ಶಿವರೂಪಾಯಾಂ ರಮಂತೇ ಯೇ ವಿಶೇಷತಃ ।
ತಸ್ಮಾದೇತೇ ಮಹಾಭಾಗಾ ವೀರಶೈವಾ ಇತಿ ಸ್ಮೃತಾಃ ॥

—ಸಿದ್ಧಾಂತ ಶಿಖಾಮಣಿ

ವೀರಶೈವ ಏನು? ಇದೊಂದು ಕುಲವೆ, ಪಂಥವೆ, ಜಾತಿಯೆ? ಇದು ಕುಲವಲ್ಲ, ಪಂಥವಲ್ಲ; ಜಾತಿ ಮುನ್ನವೆ ಅಲ್ಲ. ಇದು ವರ್ಣವೂ ಅಲ್ಲ, ಪಕ್ಷ ಪಂಗಡವಲ್ಲ. ಇವೆಲ್ಲ ವೀರಶೈವ ಮತದಲ್ಲಿ ಸೂತಕಗಳು; ಅಂದರೆ ಮೈಲಿಗೆಗಳು. ಇವನ್ನು ಮುಟ್ಟುವಂತಿಲ್ಲ; ಮುಟ್ಟಿದರೆ ಕೈದೊಳೆಯಬೇಕು; ನುಡಿದರೆ ಬಾಯ್ದೊಳೆಯಬೇಕು. ವೀರಶೈವರ ದೃಷ್ಟಿಯಲ್ಲಿ ಕುಲ ವ್ಯಾಕುಲ, ಪಂಥ ಪರಿಪಂಥಿ, ಜಾತಿ ಮಾನವೀಯ ಆರಾತಿ; ಅಥವಾ ಅದು ದೇವಪ್ರಕೃತಿ ನಿರ್ಮಿತಿ. ವರ್ಣ ಇದೊಂದು ವಿವರ್ಣ. ವೀರಶೈವದಲ್ಲಿ ಇವುಗಳಿಗೆ ನೆಲೆಯಿಲ್ಲ, ಬೆಲೆಯಿಲ್ಲ.

ಕುಲ, ಪಂಥ ಎಂಬ ಪದಗಳು ತಮ್ಮ ಮೂಲಾರ್ಥದ ಹೊಲಬುಗೆಟ್ಟಿವೆ. ಸಂಕುಚಿತ ಸೀಮಿತ ಅರ್ಥಾನರ್ಥಗಳಿಂದ ಕೂಡಿವೆ. ಜಾತಿ ಪದವೂ ತನ್ನ ಮೂಲ ವಿಶಾಲಾರ್ಥದಿಂದ ವಂಚಿತವಾಗಿದೆ. ಮಾನವ ನಿರ್ಮಿತ ಯಾವ ಪಂಥವೂ ಜಾತಿಯಲ್ಲ. ಇದು ಪರಮ ಅಥವಾ ಪ್ರಕೃತಿ ಸಿದ್ಧ. ಎಂಬತ್ತುನಾಲ್ಕು ಜೀವರಾಶಿಯಲ್ಲಿ ಮಾನವರದೊಂದು ಜಾತಿ. ಮಾನವರಚಿತ ಪಕ್ಷ ಪಂಗಡಗಳು ಜಾತಿಯಲ್ಲ. ಇವುಗಳಿಗೆ ಜಾತಿಯೆಂದು ಬಳಸುವುದು ಉಚಿತವೂ ಅಲ್ಲ. 'ನಿತ್ಯತ್ವೇ ಸತಿ ಅನೇಕ ಸಮವೇತತ್ವಂ ಜಾತಿಃ' ಅನೇಕರಲ್ಲಿ ಅಥವಾ ಅನೇಕಗಳಲ್ಲಿ ನಿತ್ಯವಾಗಿ (ಬಿಡದೆ) ಸಮವಾಯ ಸಂಬಂಧದಲ್ಲಿ ಇರುವುದೆ 'ಜಾತಿ' ಎನಿಸುತ್ತದೆ.

ಮತವೆಂದರೆ ಅಭಿಪ್ರಾಯ, ಆಶಯ, ಧರ್ಮ, ತತ್ತ್ವ ಎಂದು ಅರ್ಥಗಳು. ಅಭಿಪ್ರಾಯ ನಿಷ್ಠೆಗಳು ಗುರಿ–ಉದ್ದೇಶಗಳು. ಆಶಯನಿಷ್ಠ ಬಯಕೆ. ಉಭಯ ನಿಷ್ಠ ಭಾವ.

ಧರ್ಮವೆಂದರೆ ಕರ್ತವ್ಯಕಾರ್ಯ, ಆಚಾರ–ವಿಚಾರ, ಸ್ವಾಭಾವಿಕ ನಿಯಮ, ನೀತಿರೀತಿ, ನ್ಯಾಯ ನೈಜತೆ. ತತ್ತ್ವವೆಂದರೆ ಅದರತನ, ಅದನ್ನು ಅಂದರೆ ಕಾರಣವನ್ನು ಅಧಿಕರಿಸಿ ಆದುದು; ಸತ್ಯಜ್ಞಾನ. ಇವೆಲ್ಲವೂ ವೀರಶೈವದಲ್ಲಿವೆ. ಅದರದೇ ಆದ ಆಶಯವಿದೆ, ಅಭಿಪ್ರಾಯವಿದೆ; ಧರ್ಮವಿದೆ, ತತ್ತ್ವವಿದೆ. ಅದರದೇ ಆದ ಸಿದ್ಧಾಂತವೂ ಇದೆ. ಅದ್ದ ರಿಂದ ಅದು ವೀರಶೈವ ಮತ. ಅದು ಕಾಮಿಕಾದಿ ಶಿವಾಗಮಗಳ ಮಿಗಿಲಾಗಿ ಸಿದ್ಧಾಂತವೆಂಬ ಮಹಾತಂತ್ರದ ಉತ್ತರ ಭಾಗದಲ್ಲಿ ನಿರ್ದಿಷ್ಟವಾಗಿದೆ. ವೀರಶಿವರೂಪ ವಾದ ವಿದ್ಯೆಯಲ್ಲಿ ರತರಾದವರು ವೀರಶೈವರು. ವೀರಶಿವನ ಅಭಿಪ್ರಾಯವನ್ನು ಧರ್ಮ ವನ್ನು ತತ್ತ್ವವನ್ನು ಆಚರಿಸುವವರು ವೀರಶೈವರು.

ವೀರಶೈವವೆಂದರೆ ವೀರಶಿವನಿಂದಾದ ಮತವೆಂದು, ವೀರ ರಸವುಳ್ಳ ಶಿವ (ಭದ್ರ) ನಿಂದಾದ ತತ್ತ್ವವೆಂದು–ಸಿದ್ಧಾಂತವೆಂದು ಅರ್ಥ. ಆ ವೀರಶಿವನಾರು? ಆತನಿಂದಾದ ವೀರಶೈವದ ತತ್ತ್ವವೇನು, ಸಿದ್ಧಾಂತವೇನು? ಈ ಮೂರನ್ನು ಅರಿವುದೆ ಅಳಿವುದೆ ಈ ಬರೆಹದ ಬಗೆಯಾಗಿದೆ.

ವೀರಶಿವ ಯಾರು? ಈ ಹೆಸರಿನವರೊಬ್ಬರು ಇರುವರೆ? ಇದ್ದರೆ ಅವರಾರು? ಎಂದು ಕೇಳುವಂತಾದುದಕ್ಕೆ ತಲೆ ತಗ್ಗಿಸಬೇಕಾಗುತ್ತದೆ. ಪುರಾತನ ಚಾರಿತ್ರ್ಯದತ್ತ ದೃಷ್ಟಿ ಮನ ಭಾವಗಳನ್ನು ಚಲ್ಲದೆ, ಹತ್ತಿರದ ಮುಂದು ಹಿಂದಿನ ಹೊಟ್ಟೆ ಬೆನ್ನು ಗಳನ್ನಷ್ಟೆ ತುರಿಸಿಕೊಳ್ಳುವ ತವಕ ಮತ್ತು ಸೀಮಿತ ಸಂಕುಚಿತ ಪಟ್ಟು ಇಂದಿನ ಹಲವು ವೀರಶೈವರದಾಗಿದೆ. ಇದು ದುರದೃಷ್ಟ; ಇದಿರಲಿ.

ವೀರಶಿವನೆಂದರೆ ವೀರಭದ್ರ. ಶಿವ–ಭದ್ರ ಎರಡೂ ಒಂದೇ ಅರ್ಥದ ಪರ್ಯಾಯ ಪದಗಳು. 'ಭದ್ರಂ ಶಿವಂ ಮಂಗಲಂ' ಎಂದು ಅಮರಕೋಶ ಸಾರಿದೆ. ವೀರಭದ್ರ ನೆಂದರೂ ವೀರಶಿವನೆಂದರೂ ಒಂದೆ ! ವೀರಭದ್ರನು ಪಾರ್ವತಿಪತಿಯಾದ ಶಿವನ ಸಮ ಕಾಲೀನನು. ರುದ್ರತನಯನು. ರುದ್ರ ಬೇರೆ, ಶಿವ ಬೇರೆ. (ಈ ಬಗೆಗೆ ನಮ್ಮ 'ಅಚ್ಚಾಳು ವೀರಭದ್ರ' ಎಂಬ ಹೊತ್ತಗೆಯನ್ನು ನೋಡಬೇಕು.) ಶಿವನಿಂದಾದುದು ಶೈವ ಮತ. ವೀರಶಿವನಿಂದಾದುದು ವೀರಶೈವಮತ. ಶೈವಮತದಷ್ಟೆ ವೀರಶೈವವೂ ಪುರಾತನವಾದುದು. ಇದು ಆದಿ ವೀರಶೈವವನ್ನು ಕುರಿತ ಮಾತು.

> "......ಸಂಪೂಜಿತಃ ಶಿವವಿಧಾನರತೋಮಹಾತ್ಮಾ
> ಸ ವೀರ ಭದ್ರಃ ಶಶಿಶೇಖರೋಽಸೌ
> ಶಿವಪ್ರಿಯೋ ರುದ್ರಸಮಃ ತ್ರಿಲೋಕ್ಯಾಮ್ ।
> ಲಿಂಗಸ್ಯಾರ್ಚನಯುಕ್ತೋಽಸೌ ವೀರಭದ್ರ ಅಭವತ್ತದಾ
> ತದ್ರೂಪಸ್ಯೈವ ಲಿಂಗಸ್ಯ ಯೇನ ಸರ್ವಮಿದಂ ಜಗತ್ ॥"
>
> —ಸ್ಕಂದ ಪುರಾಣ

ವೀರಶೈವವನ್ನು ಮೂಬಗೆಯಾಗಿ ವಿಂಗಡಿಸಲಾಗಿದೆ: ಅನಾದಿ ವೀರಶೈವ, ಆದಿ ವೀರಶೈವ, ಆಧುನಿಕ ವೀರಶೈವ ಎಂದು. ಅನಾದಿ ವೀರಶೈವ ವೇದಗಳಿಗಿಂತ ಪೂರ್ವದ್ದು. ಅದರ ನಿರ್ಮಾಪಕ ಶ್ರೀರುದ್ರ. ಅದು ರುದ್ರಮತವೆಂದಿದ್ದಿತು. ರುದ್ರ ಪಂಚಾಕ್ಷರಿ ಮಂತ್ರವಾಗಿತ್ತು. 'ರುದ್ರಾಯನಮಃ' ಎಂಬುದು ವಾಮದೇವ ಮಂತ್ರದಲ್ಲಿ ಸೇರಿಕೊಂಡು ಈಗಲೂ ಪಠಿತವಾಗುತ್ತಿದೆ. ರುದ್ರವೀಣೆಯಲ್ಲಿ ರುದ್ರಜಪ ಸಾಗುತ್ತಿತ್ತು. ಅನಾದಿ ರುದ್ರನದೇ ಆದ ಒಂದು ಸಂಸ್ಕೃತಿಯಿದೆ; ವೀರಕ್ರಾಂತಿಯಿದೆ. (ಈ ಬಗೆಗೂ ನಮ್ಮ 'ಅಚ್ಚಾಳು ವೀರಭದ್ರ' ಗ್ರಂಥವನ್ನೋದಬೇಕು.) ಅಂತೆಯೆ ವೀರಶೈವಧರ್ಮ ತತ್ತ್ವಕ್ಕೂ ಅನಾದಿತ್ವವಿದೆ. ಈ ಬಗೆಗೆ ಶ್ರೀ ತೋಂಟದ ಸಿದ್ಧೇಶ್ವರರು ಹೀಗೆ ಹೇಳಿದ್ದಾರೆ:

> ಅನಾದಿವಿಡಿದು ಬಂದ ಗುರು, ಅನಾದಿವಿಡಿದು ಬಂದ ಲಿಂಗ;
> ಅನಾದಿವಿಡಿದು ಬಂದ ಜಂಗಮ,
> ಅನಾದಿವಿಡಿದು ಬಂದ ಗುರು–ಶಿಷ್ಯಸಂಬಂಧ;
> ಅನಾದಿವಿಡಿದು ಬಂದ ಪಾದೋದಕ–ಪ್ರಸಾದ,
> ಅನಾದಿವಿಡಿದು ಬಂದ ಭಕ್ತಿ ಜ್ಞಾನ ವೈರಾಗ್ಯ
> ಅನಾದಿವಿಡಿದು ಬಂದ ಪ್ರಸಿದ್ಧವಾದ ವೀರಶೈವಾಚಾರ ಸಂಪತ್ತು,
> ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ.

ವೀರಶೈವದ ಅನಾದಿತ್ವ ನಿರೂಪಣೆ ಇಲ್ಲಿದೆ,

> "ಮಹೇಶ್ವರ ಸಹಸ್ರಾಂಶಾದ್ರುದದೇವ ಸಮುದ್ಭವಃ"
>
> —ವಾತುಲಾಗಮ

"ಅಖಂಡ ಮಹಾಜ್ಯೋತಿ ಪ್ರಣವದ ಕುಂಡಲಾಕಾರವಾಗಿಹ ಕಲಾಬ್ರಹ್ಮದಲ್ಲಿ ರುದ್ರನುತ್ಪತ್ತ್ಯವಾದನು."

> "ದೇವಾ ಹ ವೈ ಸ್ವರ್ಗಂ ಲೋಕಮುಗಮನ್,
> ತೇ ದೇವಾ ರುದ್ರಮಪ್ರಚ್ಛನ್
> ಕೋ ಭವಾನಿತಿ? – ಸೋಽಬ್ರವೀತ್
> ಅಹಮೇಕಃ ಪ್ರಥಮಮಾಸಂ ವರ್ತಾಮಿ ಚ, ಭವಿಷ್ಯಾಮಿ ಚ
> ನಾನ್ಯಃ ಕಶ್ಚಿನ್ಮತ್ತೋ ವ್ಯತಿರಿಕ್ತ ಇತಿ"
>
> —ಅಥರ್ವ ಶಿರಸ್ಸು

ಈ ಸೃಷ್ಟಿಯ ಮೊದಲ ಮಾನವ ಮತ್ತು ಏಕೈಕ ಮಾನವ ಶ್ರೀರುದ್ರದೇವ. ರುದ್ರದೇವನ ಉತ್ಪತ್ತಿ ಜ್ಯೋತಿರೂಪ ಓಂಕಾರದಿಂದ. "……ಓಂಕಾರವೆ ಜ್ಯೋತಿ

ರೂಪ. ಓಂಕಾರವೆ ಮೂಲ ಮಂತ್ರ. ಓಂಕಾರವೆ ಗೋಪ್ಯಮುಖ. ಓಂಕಾರ ಸ್ವರೂಪವೆ ಬೀಜರೂಪ. ಓಂಕಾರದಿಂದಲೇ ಅನಾದಿರುದ್ರನ ಉತ್ಪತ್ತಿ……" ಎಂದು ಪಂಚಬ್ರಹ್ಮೋದಯ ಭಾಷ್ಯ ಚಿತ್ರಿಸಿದೆ. ಆ ವಿಶ್ವಾಧಿಕನೂ ವಿಶ್ವಾಧಿಪನೂ ಆಗಿದ್ದ ನಲ್ಲದೆ ರುದ್ರಗಣರಿಗೆ ಮೋಕ್ಷಮಾರ್ಗ ಪ್ರದರ್ಶಕನೂ ಆಗಿದ್ದನು. 'ವಿಶ್ವಾಧಿಕೋ ರುದ್ರಃ' 'ವಿಶ್ವಾಧಿಕೋ ರುದ್ರೋ ಮಹರ್ಷಿಃ' ಎಂದು ಶ್ರುತಿಗಳು ಸಾರಿವೆ. ಮತ್ತು 'ಮೋಕ್ಷ ಮಾರ್ಗಂ ಪ್ರದರ್ಶಯೇತಿ, ಸಾಕ್ಷಾತ್ ಪರಂಜ್ಯೋತಿಃ ಪರಶಿವಃ ಕಾರ್ಯರುದ್ರಮುಪಾ ದಿಶತ್ ।" ಎಂದು ವೀರಶೈವ ಸದಾಚಾರ ಸಂಗ್ರಹ ಗ್ರಂಥದಲ್ಲಿ ಉಕ್ತವಾಗಿದೆ.

"ನಾದಪ್ರಿಯಂ ನಾದಮಯಂ ನಾದಲಿಂಗಂ ಮಹೇಶ್ವರಂ
ಆದಿಮಧ್ಯಾಂತರಹಿತಂ ವೇದ ವೇದವಿದಂ ಪರಂ
ಮಂತ್ರಮೂರ್ತಿ ಮಹಾರುದ್ರಂ ಓಮಿತಿ ಜ್ಯೋತಿರೂಪಕಂ ।" – ಶ್ರುತಿ

"ರುದ್ರಾಣಾಮಪಿ ಯೋ ರುದ್ರಃ ಪ್ರಭಾ ಪ್ರಭವತಾಮಪಿ ।
ಯೋಗಿನಾಮಪಿ ಯೋ ಯೋಗೀ ಕಾರಣಾನಾಂ ಚ ಕಾರಣಂ ॥"
—ಉಪಮನ್ಯು ಶಿವಾಚಾರ್ಯ

ಇವುಗಳಿಂದ ರುದ್ರದೇವನು ನಾದಾತ್ಮನೂ, ಲಿಂಗಸ್ವರೂಪನೂ, ಮಂತ್ರ ಮೂರ್ತಿಯೂ, ಜ್ಯೋತಿರೂಪನೂ, ರುದ್ರಗಣರಿಗೆ ರುದ್ರನೂ, ಯೋಗಿಗಳಿಗೆ ಯೋಗಿಯೂ, ಮಹಾಕಾರಣನೂ ಆಗಿದ್ದನೆಂಬುದು ಅಭಿವ್ಯಕ್ತವಾಗುತ್ತದೆ. "ರುದ್ರೋ ಲಿಂಗಮು ಮಾ ಪೀಠಂ ತಸ್ಮೈ ನಮೋ ನಮ:" ಎಂದು ರುದ್ರ ಹೃದಯೋಪನಿಷತ್ ಹೇಳಿದೆ. "ಶ್ರೀ ರುದ್ರ ಪ್ರೀತ್ಯರ್ಥೇ ಭಸ್ಮ ತ್ರಿಪುಂಡ್ರಧಾರಣೇ ವಿನಿಯೋಗಃ" ಎಂದು ಕಾಲಾಗ್ನಿ ರುದ್ರೋಪನಿಷತ್ತು ಕೀರ್ತಿಸಿದೆ. ಭಸ್ಮತ್ರಿಪುಂಡ್ರಧಾರಣ ರುದ್ರದೇವನ ಕರುಣೆಗಾಗಿ ವಿನಿಯೋಗಿಸಲ್ಪಟ್ಟಿದೆಯೆಂದು ಹೇಳುವಲ್ಲಿ ಔಚಿತ್ಯವಿಲ್ಲದಿಲ್ಲ.

ಜ್ಯೋತಿರೂಪ ರುದ್ರನಿಗೆ ಜ್ಯೋತಿರೂಪ (ಅಗ್ನಿರತಿ ಭಸ್ಮ) ಭಸ್ಮಧಾರಣ ವಿಹಿತವಲ್ಲವೆ? ಆತನ ಆ ಮೈಬೆಳಗಾದ ವಿಭೂತಿಧಾರಣವಾದ ಬಳಿಕ 'ರುದ್ರಮಂತ್ರಜಾ-ಪೀ ಭವತಿ' ರುದ್ರಮಂತ್ರ ಜಪಾಧಿಕಾರವುಂಟಾಗುವುದು. ಹೀಗೆ ಅನಾದಿಕಾಲದ ರುದ್ರನದೇ ಆದ ವೀರಶೈವಾಚಾರ ಸಂಪತ್ತು ಪುರಾತನ ಸಂಸ್ಕೃತ ಸಾಹಿತ್ಯದಲ್ಲಿ ಸಿಕ್ಕುತ್ತದೆ. (ಈ ಬಗೆಗೆ ಇನ್ನೂ ಹೆಚ್ಚು ತಿಳಿಯಬಯಸಿದಲ್ಲಿ 'ವಿಭೂತಿ' ಗ್ರಂಥಕ್ಕೆ ಬರೆದ ನಮ್ಮ 'ಅನಾದಿ –ಆದಿ – ಆಧುನಿಕ ವೀರಶೈವ – ವೀರಶೈವರು' ಎಂಬ ಬರಹವನ್ನು ಓದಬೇಕು.)

"ಕಕ್ಷೆಯಲ್ಲಿ ಲಿಂಗವ ಧರಿಸಿಕೊಂಡಾತನು ಬ್ರಹ್ಮನು,
ಕರಸ್ಥಲದಲ್ಲಿ ಲಿಂಗವ ಧರಿಸಿಕೊಂಡಾತನು ವಿಷ್ಣುವು,

ಉತ್ತಮಾಂಗದಲ್ಲಿ ಲಿಂಗವ ಧರಿಸಿಕೊಂಡಾತನು ರುದ್ರನು,
...."

ಎಂಬೀ ಪ್ರಭುವಚನಾಭಿಪ್ರಾಯದಂತೆ ರುದ್ರನು ಲಿಂಗಾಧಾರಿ. ಉಳಿದವರಿಗೆ ಲಿಂಗ ದೀಕ್ಷಾಧಿಕಾರಿ.

ರುದ್ರೇಣ ದೀಕ್ಷಿತೋ ಭೂತ್ವಾ ಸ್ಕಂದಃ ಶಿವಸಮೋಽಭವತ್ ।
ಶಿವಾಚಾರ ರಹಸ್ಯಸ್ಯ ಪಾತ್ರತಾಂ ಪ್ರಥಮಮಂ ಗತಃ ॥"

—ಆದಿತ್ಯಪುರಾಣ

ಶೈವಸ್ಕಂದನು ರುದ್ರದೇವನಿಂದ ದೀಕ್ಷಿತನಾಗಿ ಶಿವಾಚಾರದ ರಹಸ್ಯವನ್ನು ಪ್ರಥಮದಲ್ಲಿ ಪಡೆಯುತ್ತಾನೆ. ಬಳಿಕ ಅನೇಕರು ಪಡೆದು ರುದ್ರಗಣರೆಂದು ಹೆಸರಾಗುತ್ತಾರೆ.ಸಾಸಿರ ಸಾಸಿರ ರುದ್ರಗಣರು, ಗಂಗೆವಾಲುಕ ಸಮರುದ್ರರು ಭೂಮಿಗೆ ಅವತರಿಸುವರು, ಭೂರುದ್ರರೆಂದೆನಿಸುವರು. ಇದೆಲ್ಲ ಪ್ರಾಗೈತಿಹಾಸಿಕ ಕಾಲದ ಮಾತು. ಅನಾದಿ ರುದ್ರಮತದ ಮಾತು. ಆದರೂ ಇಂದಿಗೂ ಅನೇಕ ಮನೆತನಗಳಿಗೆ ರುದ್ರನು ಮನೆ ದೇವನಾಗಿದ್ದಾನೆ; ಉಪಾಶ್ಯನಾಗಿದ್ದಾನೆ.

"ಸಂತಿ ರುದ್ರೇಣ ಕಥಿತಾಃ ಶಿವಧರ್ಮಾಃ ಸನಾತನಾಃ ।
ವೀರಭದ್ರೋ ಯಥಾ ರುದ್ರಃ ತಥಾ ಅನ್ಯೇ ಗುರುವಃ ಸ್ಮೃತಾಃ ॥"

—ಸ್ಕಂದ ಪುರಾಣ

ಸನಾತನ ಶಿವ (ಮಂಗಲ) ಧರ್ಮಗಳು ರುದ್ರ ನಿರೂಪಿತಗಳು. ಆ ರುದ್ರಧರ್ಮಗಳನ್ನು ಆತನ ಪುತ್ರ ವೀರಭದ್ರನು ಮುಂದುವರಿಸುವನು. ರುದ್ರ – ವೀರಭದ್ರರಂತೆ ಬೇರೆ ಬೇಕಾದಷ್ಟು ಗುರುಗಳಿರುವರು.

"ರೌದ್ರಂ ಲಿಂಗಂ ಮಹಾವಿಷ್ಣುರ್ಭಕ್ತ್ಯಾ ಶುದ್ಧಂ ಶಿಲಾಮಯಂ ।
ಚಾರುಚಿತ್ತಂ ಸಮಬ್ಯಚ್ರ್ಯ ಲಬ್ಧವಾಭ್ಯತ್ತಮಂ ಪದಂ॥ "

—ಪದ್ಮ ಪುರಾಣ

ಅನಾದಿ ವೀರಶೈವ ಭಕ್ತ ವಿಷ್ಣು. ಆತ ರುದ್ರಲಿಂಗವನ್ನು ಅರ್ಚಿಸಿ ಉತ್ತಮ ಪದವನ್ನು ಪಡೆವನು.

ಆ ರುದ್ರಪುತ್ರನೆ ವೀರಭದ್ರನು. ಈತನ ಸಮಕಾಲೀನನು ಗಿರಿಜೆಯ ಗಂಡ ಶಿವನು. ಈತನಲ್ಲಿ ವೀರೇಶನು ಅಚ್ಚುಮೆಚ್ಚಿನ ಬಂಟನಾಗಿದ್ದನು. ಈತನು ಶಿವನ ಸುತನಲ್ಲ. ಕಣ್ಣಲ್ಲಿ ತಲೆಯಲ್ಲಿ ಜಡೆಯಲ್ಲಿ ಜನಿಸಿದವನಲ್ಲ. ಶಿವನಿಂದ ಶಿವದೀಕ್ಷೆಯನ್ನು

ಪಡೆದ ಪ್ರಯುಕ್ತ ನೇತ್ರಸಂಜಾತ (ಈಗ ಕರಕಂಜಾತ ಎಂದು ಹೇಳುವಂತೆ) ಹೇಳುವ ಸಂಪ್ರದಾಯ ಅಂದಿತ್ತು. ಅದು ಬರಬರುತ್ತ ವಾಚ್ಯಾರ್ಥಕ್ಕೆ ತಿರುಗಿದೆ. ವೀರಭದ್ರನು ಮಠಾಧಿಪತಿಯೂ ಆಗಿರಬೇಕು. ವೀರೇಶನು ತನ್ನ ತಂದೆ ರುದ್ರದೇವನಿಂದ ಅಂಕುರಿಸಿದ ರುದ್ರಮತವನ್ನು ಋದ್ಧಿಗೆ ತರುವನು. ವೀರ ಸಂತತಿ ಅಂದರೆ ವೀರೇಶನ ಶಿಷ್ಯರು ವೃದ್ಧಿಸುವರು; ವೀರಗಣರು ಹೆಚ್ಚುವರು.

"ವೀರಾದಿಗೋತ್ರ ಸಂಭೂತಾ ಆರಾಧ್ಯಾ ಹಿ ಸಹಸ್ರಶಃ
ಭೂಮಂಡಲಮಲಂಚಕ್ರುರ್ವೀರಶೈವೋದ್ಧಿಧೀರ್ಷಯಾ
ದುಂಡಿ ನಂದಿ ಮಹಾಕಾಳ ಪ್ರಮುಖಾ ಗಣನಾಯಕಾಃ
ಚತುರ್ದಶ ಸಹಸ್ರಂ ಹಿ ಕೈಲಾಸಾವರಣಾಧಿಪಾಃ
ಮತಪ್ರವರ್ತಕಾಃ ಸರ್ವೇ ಗುರುಪೀಠಾಧಿರೋಹಿಣಃ ॥

ಎಂದು 'ಕ್ರಿಯಾಸಾರ'ದಲ್ಲಿ ಉಕ್ತವಾಗಿದೆ. ವೀರಗೋತ್ರಸಂಭೂತರು ವೀರಗಣರಾದರು. ಅವರು ಆರಾಧ್ಯ(ಪೂಜ್ಯ)ರಾಗಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿದ್ದರು. ಅವರೇ ವೀರಮಾಹೇಶ್ವರರು. ಅಲ್ಲದೆ ಅಸಂಖ್ಯ ಶೈವರು ವೀರಮತವನ್ನು ಸ್ವೀಕರಿಸುವರು. ಅವರಲ್ಲಿ ದುಂಡಿ ನಂದಿ ಮಹಾಕಾಳ ವಿನಾಯಕಾದಿಗಳು ಪ್ರಮುಖರು. ಈ ಗಣನಾಯಕರು ಹದಿನಾಲ್ಕು ಸಾವಿರ ಜನರಿದ್ದು ಕೈಲಾಸ ಪ್ರದೇಶವನ್ನು ಆವರಿಸಿದ್ದರಂತೆ ! ಅಲ್ಲದೆ ಹಲವರು ಅಧಿಪರಾಗಿದ್ದು ಮತಪ್ರವರ್ತಕರಾಗಿದ್ದರಂತೆ; ಮತ್ತು ಗುರುಪೀಠಾ-ರೋಹಿಗಳಾಗಿದ್ದರಂತೆ ! ಎಲ್ಲಕ್ಕೂ ಮಿಗಿಲಾಗಿ ವೀರಶೈವ ಮತಪ್ರಕರ್ಷಕ್ಕಾಗಿ ಪ್ರಸಾರಕ್ಕಾಗಿ ಭೂಮಂಡಲವನ್ನೆ ಅಲಂಕರಿಸಿದರಂತೆ ! ಅಂದರೆ ವಿಶ್ವದಲ್ಲೆಲ್ಲ ಹರಡಿ ಹಬ್ಬಿದರಂತೆ !

ಇದರಿಂದ ಅರಿಕೆಯಾಗುವುದೇನೆಂದರೆ ರುದ್ರಮತದ ಬಳಿಕ ವೀರಮತ ವಿಶೇಷವಾಗಿ ವರ್ಧಿಸುವುದು. ದುಂಡಿ ನಂದಿ ಮೊದಲಾದ ಶೈವರು ವೀರಮತ ಸ್ವೀಕರಿಸಿದ್ದರಿಂದ ಇದಕ್ಕೆ ವೀರಶೈವಮತವೆಂದು ಹೆಸರಾಯಿತು. ಇದಕ್ಕೆ ಇದು ಇನ್ನೊಂದು ಕಾರಣ.

ಇದಲ್ಲದೆ ಗೋತ್ರಪುರುಷರಲ್ಲಿ ವೀರೇಶನೆ ಮುಮ್ಮೊದಲಿಗನು. ಗೋತ್ರವೆಂದರೆ ಪಸುಗಳ ಹಟ್ಟಿ, ಹಸುಗಳ ಗುಂಪು, ಗೋರಕ್ಷಕ ಎಂದರ್ಥಗಳಾಗುವುದಲ್ಲದೆ ವಂಶ, ಕುಲ, ಸಂತತಿ ಎಂದರ್ಥಗಳೂ ಆಗುತ್ತವೆ. ಈ ಎರಡು ಅರ್ಥಗಳಲ್ಲಿ ವೀರೇಶನು ಪ್ರಪ್ರಥಮ 'ಗೋತ್ರ' ಪುರುಷನಾದನು. ತನ್ನ ತಂದೆ ರುದ್ರದೇವನು ನಿರ್ಮಿಸಿದ ಮತ್ತು ಅಷ್ಟಾವರಣಗಳಲ್ಲಿ ಒಂದಾದ ವಿಭೂತಿ ಉತ್ಪತ್ತಿಗಾಗಿ ಗೋಸಮೂಹವನ್ನು ರಕ್ಷಿಸುವ ಕೃತ್ಯಕರ್ತನಾಗಿ, ವೀರಗೋತ್ರಕ್ಕೆ (ವಂಶ ಅಥವಾ ಸಂತತಿಗೆ) ಜನಕನಾಗಿ ಅಂದರೆ ಆದ್ಯಕರ್ತ

ನಾಗಿ, ವೀರಸಂತತಿಗಲ್ಲದೆ ಶೈವಸಂತತಿಗೂ ಗುರುವಾಗಿ ನಾಯಕನಾಗಿ ಇರುವುದರಿಂದ ವೀರೇಶನು ಗೋತ್ರ ಪುರುಷರಲ್ಲಿ ಪ್ರಪ್ರಥಮಿಗನಾಗಿದ್ದಾನೆ. ರುದ್ರ–ಭದ್ರರ ಪ್ರಭಾವಕ್ಕೆ ಒಳಗಾದ ಶಿವ–ಶಿವಗಣರೆಲ್ಲರೂ ಅವರ ಮತಕ್ಕೆ ಒಳಗಾಗಿ ಅವರ ಅನುಯಾಯಿಗಳಾಗುತ್ತಾರೆ, ವೀರಶೈವರೆನಿಸುತ್ತಾರೆ. ಅಂತೆಯೆ ಕೈಲಾಸಾವರಣಕ್ಕೆ ಅಧಿಪತಿಗಳೂ ಆಗುತ್ತಾರೆ. ವೀರಮತ ಅಥವಾ ವೀರಶೈವ ಮತ ಪ್ರವರ್ತಕರೂ ಆಗುತ್ತಾರೆ.

ವೀರೇಶನು ಶಿವಗಣರ ಮೇಲೆ ತನ್ನ ಪ್ರಭಾವವನ್ನು ಬೀರಿದಂತೆ ದೇವಗಣರ ಮೇಲೂ ಬೀರಿದಾತನು. ಇದು ಆತನ ದಕ್ಷಯಜ್ಞ ನಿರೋಧ ಕ್ರಾಂತಿಯಿಂದ ಸಿದ್ಧವಾಗಿದೆ. ಕೊನೆಯಲ್ಲಿ ದೇವಗಣರನ್ನೆಲ್ಲ ಕರೆದೊಯ್ದು ಶಿವನಿಗೆ ಶರಣಾಗತರನ್ನಾಗಿಸಿ 'ಶಿವಾಯ ನಮಃ' ಎಂದು ಅವರಿಂದೆನಿಸಿ, ಅಭಿವಂದಿಸಿ ಶಿವದೀಕ್ಷಾ ಸಂಸ್ಕಾರವನ್ನಿತ್ತು ವೀರಗಣ – ದೇವಗಣ ಸಮನ್ವಯಕ್ಕೆ ಆರ್ಯ–ದ್ರವಿಡ ಸಮನ್ವಯಕ್ಕೆ ನಾಂದಿ ಹಾಡುತ್ತಾನೆ. ಹೀಗಾಗಿ ವೀರಸಂತತಿ ವರ್ಧಿಸುತ್ತದೆ. ಅಂದಿನಿಂದ ಶಿವಪಂಚಾಕ್ಷರಿಗೆ ಮಹತ್ವ ಬರುತ್ತದೆ. ಗೋವಿಂದನ ನಯನ ಉಂಗುಟುದ ಮೇಲಿದ್ದು ವೀರಭದ್ರನಿಗೆ 'ಕಣ್ಣಡಿಕ'ನೆಂದು ಹೆಸರಾಗಿ, ಆತನ ಅನುಯಾಯಿಗಳಿಗೆ ಕನ್ನಡಿಗರೆಂದು ಹೇಳುವ ರೂಢಿ ಬಂದಿದೆ. ಇದರಿಂದಾಗಿ 'ಕನ್ನಡಿಗ' ತನಕ್ಕೂ ಆತನೇ ಮೂಲ ಪುರುಷನೆನಿಸಿದ್ದಾನೆ. ರುದ್ರನ ತರುವಾಯ ವೀರಭದ್ರನಿಗೆ ವಿಶಿಷ್ಟ ಸ್ಥಾನ ಮೀಸಲಾಗಿದೆ.

"ರುದ್ರನೆಂಬಾತನೊಬ್ಬ ಗಣೇಶ್ವರನು,
ಭದ್ರನೆಂಬಾತನೊಬ್ಬ ಗಣೇಶ್ವರನು,
ಶಂಕರನೆಂಬಾತನೊಬ್ಬ ಗಣೇಶ್ವರನು,
ಶಶಿಧರನೆಂಬಾತನೊಬ್ಬ ಗಣೇಶ್ವರನು,
ಪೃಥ್ವಿಯೇ ಪೀಠ, ಆಕಾಶವೇ ಲಿಂಗ–ಅಂತಹನೊಬ್ಬ ಗಣೇಶ್ವರನು,
ಬಲ್ಲಾಳನ ವಧುವ ಬೇಡಿದಾತನೊಬ್ಬ ಗಣೇಶ್ವರನು,
ಸಿರಿಯಾಳನ ಮಗನ ಭಿಕ್ಷವ ಬೇಡಿದಾತನೊಬ್ಬ ಗಣೇಶ್ವರನು,
ಕಾಮದಹನವ ಮಾಡಿದಾತನೊಬ್ಬ ಗಣೇಶ್ವರನು,
ಬ್ರಹ್ಮಕಪಾಲ–ವಿಷ್ಣು ಕಂಕಾಳವನಿಕ್ಕಿ ಆಡುವಲ್ಲಿ,
ನೀಲಕಂಠನೆಂಬಾತನೊಬ್ಬ ಗಣೇಶ್ವರನು,
ಇವರೆಲ್ಲರು ನಮ್ಮ ಗೊಗ್ಗೇಶ್ವರನ ಲಿಂಗದಲ್ಲಿ ಅಡಗಿಪ್ಪರು,
—ಪ್ರ. ವ. ಪು–೨೪೪, ವ–೨೦೨.

ಕಾಮನ ಕಣ್ಣ ಮುಳ್ಳು ಕಳೆದು,
ಭೂಮಿಯ ತೈಲದ ಸೀಮೆಯ ಕೆಡಿಸಿ,
ಹೋಮವನುರುಹಿ, ದಕ್ಷನ ತಲೆಯ ಹರಿದ

ನಿಸ್ಸೀಮ ಶರಣರ ನಿಲವನರಿಯಬಹುದೆ?
ಅರಿವಿಂಗಸಾಧ್ಯ; ಉಪಮೆಗೆ ಕಡೆ ಮುಟ್ಟದು,–
ಗುಹೇಶ್ವರನ ಶರಣರೆಂತಹರೆಂಬುದ ಕಂಡಾ ಬಸವಣ್ಣಾ !"

—ಶೂ. ಸಂ; ಮ. ಶಂ. ದೇ. ಪ್ರಕರಣ, ವ–೪೧.

ಮೊದಲ ವಚನದ ಗಣೇಶ್ವರರ ಕ್ರಮ ಗಮನೀಯ. ಇದರಲ್ಲಿ ಉಕ್ತರಾದ ಗಣೇಶ್ವರರಲ್ಲಿ ಮೊದಲಿಗನು ರುದ್ರ, ಎರಡನೆಯವನೆ ವೀರಭದ್ರ. ರುದ್ರನ ಬಳಿಕ ಗಣೇಶ್ವರತ್ವ ಅಂದರೆ ಪ್ರಜಾನಾಯಕತ್ವ ವೀರೇಶನಿಗೆ ಮೀಸಲು. ವೀರೇಶನ ಬಳಿಕ ಶಂಕರ ಶಶಿಧರಾದಿಗಳಿಗೆ !

ಎರಡನೆಯ ವಚನದಿಂದ 'ನಿಸ್ಸೀಮ ಶರಣತ್ವ' ವೀರೇಶನಿಗೆ ಸುಸ್ಪಷ್ಟವಾಗಿದೆ. ಅದು ಕೇವಲ ನಾಮರೂಪಾತ್ಮಕವಾಗಿಯೆ ಅಲ್ಲ, ಗುಣ ಕ್ರಿಯಾತ್ಮಕವಾಗಿಯೂ ಇದ್ದಿತು. ಅದರಿಂದಾಗಿ ಆ ವೀರೇಶನ ಶರಣತ್ವ ಅರಿವಿಂಗಸಾಧ್ಯ – ಉಪಮೆಗೆ ಅಸಾಧ್ಯ.

ಅಂತಹ ಆ ವೀರಶಿವನಿಂದ ಬಂದುದು ವೀರಶೈವಮತ. ವೀರಶೈವವೆಂದರೆ ಶಕ್ತಿವಿಶಿಷ್ಟಾದ್ವೈತವೆಂದರ್ಥ. 'ವೀರ' ಎಂದರೆ ಶಕ್ತಿವಂತ, ಅರ್ಥಾತ್ ಶಕ್ತಿವಿಶಿಷ್ಟ, 'ಶೈವ' ಎಂದರೆ ಶಿವಸಂಬಂಧವುಳ್ಳ ಅದ್ವೈತ. 'ಶಿವಮದ್ವೈತಂ ಚತುರ್ಥಂ ಮನ್ಯಂತೇ' ಎಂದು ಶ್ರುತಿ ಸಾರಿದೆ. ಅವಸ್ಥಾತ್ರಯಗಳನ್ನು ಗೆದ್ದು ತುರೀಯಾವಸ್ಥೆಗೆ ಏರಿದವನೆ ವೀರಶೈವನು. ಸ್ಥೂಲ ಸೂಕ್ಷ್ಮ ಕಾರಣ ತನುತ್ರಯಗಳನ್ನು ಗುರುಕಾರುಣ್ಯದಿಂದ ನಿರಸನಗೊಳಿಸಿ ತನು ತನ (ಭಾವ)ವನ್ನು ತೀರಿಸಿ ಅಂಗತ್ರಯನಾಗಿ ಲಿಂಗತ್ರಯ ಪೂಜಕ (ಭಕ್ತ)ನಾಗಿರುವಾತನೆ ವೀರಶೈವನು. ಇಲ್ಲಿ ಶಿವಲಿಂಗವನ್ನು 'ಶೈವ' ಎಂದು ಹೇಳ ಲಾಗುತ್ತದೆ. ವೀರಭದ್ರನು ಅಂಗವೀರ ಅಂದರೆ ಕಾಯವೀರ; ಮತ್ತು ಲಿಂಗವೀರ ಅಂದರೆ ಆತ್ಮವೀರ. ಆತ ಶಿವಾತ್ಮಸ್ವರೂಪನಾಗಿದ್ದಂತೆ ಶಕ್ತಿ(ವೀರ)ಸಂಪನ್ನನೂ ಆಗಿದ್ದನು. ಇದರಿಂದಾಗಿ ವೀರಶೈವ ಮತವೆಂದು ಹೇಳುವಲ್ಲಿ ಔಚಿತ್ಯವಿಲ್ಲದಿಲ್ಲ.

ಸಹಕಾರ ಸಮನ್ವಯಗಳ ತಳಹದಿಯುಳ್ಳುದು ವೀರಶೈವ. ವೀರಭದ್ರನ ವೀರ ಶೈವವು ವೀರಶ್ರೀ – ಭದ್ರಶ್ರೀಗಳ ಆಧಾರದ ಮೇಲೆ ರೂಪಿತವಾಗಿದೆ. ಮತ್ತು ಸ್ವಾರ್ಥ ರಹಿತ ಸಮಾಜವಾದವನ್ನೇ ತನ್ನ ಜೀವಾಳವನ್ನಾಗಿಸಿಕೊಂಡಿದೆ. "ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ" – ಋಗ್ವೇದ. 'ವಿಶ್ವದ ಎಲ್ಲ ಮೂಲೆಗಳಿಂದ ಶುಭಗಳೇ ಬರುತಿರಲಿ' ಎಂದು ಹಾರೈಸುವುದೆ ವೀರಭದ್ರನ ಜೀವನ ಧ್ಯೇಯವಾಗಿತ್ತು. ಶಿವತ್ವ ಕ್ಕಾಗಿ ತನ್ನೆಲ್ಲ ವೀರತನವನ್ನು ಉಪಯೋಗಿಸಿಕೊಂಡನು. ಇದರಿಂದಾಗಿಯೊ ಏನೊ ಆತನು ಚನ್ನಮಲ್ಲನಾಗಿ, ಚನ್ನವೀರನಾಗಿ ಮೆರೆಯುತಿರುವನು. ಭದ್ರಪದದ ಸಂವಾದಿ ಚನ್ನಪದ ವೀರ ಶಬ್ದಾರ್ಥವನ್ನು ಉಗ್ಗಡಿಸುತ್ತದೆ. ಕನ್ನಡದ ಮಲ್ಲಪದ ವೀರ

ಶಿವತ್ವವನ್ನು ವ್ಯಷ್ಟಿ–ಸಮಷ್ಟಿಗಳಲ್ಲಿ ಸಮನಿಸುವಂತೆ ಎಸಗುವುದೆ ವೀರಶೈವ ಮತದ ಮೂಲಧ್ಯೇಯ; ಮೌಲ್ಯ ಉಪಾದೇಯ. ಈ ಮತವೆಂಬ ಭವ್ಯಭವನದ ಭದ್ರ ತಳಹದಿಯೂ ಇದೇ ಆಗಿದೆ.

> "ಭದ್ರಂ ಕರ್ಣೇಭಿಃ ಶ್ರುಣು ವಾಮದೇವಾ:
> ಭದ್ರಂ ಪಶ್ಯೇಮಾಕ್ಷಿಭಿರ್ಯಜತ್ರಾಃ
> ಸ್ಥಿರೈರಂಗೈಸ್ತುಷ್ಟುವಾಗ್ಂ ಶಸ್ತನೂಭಿಃ
> ವ್ಯಸೇಮ ದೇವಹಿತಂ ಯದಾಯು: ।"

ವೀರಭದ್ರನ ಭಾವವೇ ಈ ಶ್ರುತಿಯಲ್ಲಿ ಪಡಿಮೂಡಿದಂತಿದೆ. ಆತನ ಮನದ ಮನೀಷೆಯೂ ಇದೆ ಆಗಿತ್ತು. ದೇವ ಹಿತದೊಡನೆ ಮಾನವಹಿತವೂ ತನ್ನಿಂದ ನಡೆಯಬೇಕು, ತನ್ನ ಪ್ರತಿಯೊಬ್ಬ ವೀರಗಣನಿಂದ ನಡೆವಂತಾಗಬೇಕೆಂಬುದೇ ಆತನ ಆಸೆ, ಅಭಿಲಾಷೆ. ಅಂತೆಯೇ ಆತನಿಂದಾದ ವೀರಶೈವ ಮತದಭಿಲಾಷೆ. ತನ್ನ ಹಿತ, ತನ್ನ ಉನ್ನತಿ, ತನ್ನ ಸಮೃದ್ಧಸಂಪತ್ತಿ-ಇವುಗಳನ್ನೆ ಆತ ಯೋಚಿಸುವವನಲ್ಲ. ಅಂತೆಯೇ ಈ ಉದಾತ್ತವಾಸನೆ ವೀರಗಣರಲ್ಲಿಯೂ ಹರಿದು ಬಂದಿದೆ. ಇದಲ್ಲದೆ ಇತರರ ಬಗೆಗೆ ನಿರ್ನಿಮಿತ್ತವಾಗಿ ದ್ವೇಷ ಅಸೂಯೆ ಮಾತ್ಸರ್ಯಗಳನ್ನು ಮುಗುಚುವವನಲ್ಲ. ಯಾವ ಬಗೆಯ ಹಾನಿಯನ್ನು ಸಹಿಸುವವನಲ್ಲ. ಪ್ರಾಣಹಾನಿ, ಪದಾರ್ಥಹಾನಿಗಳು ಘಟಿಸ ಬಾರದೆಂಬುದೆ ಆತನ ಉದ್ದೇಶ. ಇದಕ್ಕಾಗಿಯೇ ಯಜ್ಞನಿರೋಧ ಕ್ರಾಂತಿಯನ್ನು ಎಸಗಿದನು. ಆಗ್ರಹ – ಅನುಗ್ರಹಗಳೆರಡನ್ನೂ ತೋರಿ ಶತ್ರುಗಳನ್ನು ಸ್ವಕೀಯರ ನ್ನಾಗಿ ಕಂಡನು. ಸಂಹರಿಸಿದವರನ್ನು ಮರಳಿ ಸಂರಕ್ಷಿಸಿದನು. ಆರ್ಯ ದ್ರಾವಿಡ ಸಮನ್ವಯವನ್ನು ಸಾಧಿಸಿದನು. ಪ್ರಾಣಿವಧೆಯನ್ನು, ಪದಾರ್ಥ ಧ್ವಂಸವನ್ನು ನಿಲ್ಲಿಸಿದನು. ಸಾಮಾಜಿಕ ಲಾಭ ನಷ್ಟಗಳನ್ನು ಗುರುತಿಸುತ್ತಿದ್ದನು. ನಷ್ಟಕ್ಕೆ ಅವ ಕಾಶವಿರಬಾರದೆನ್ನುತ್ತಿದ್ದನು. ನಷ್ಟವಾಗದಂತೆ ನೋಡಿಕೊಳ್ಳುತ್ತಿದ್ದನು. ಮಿಗಿಲಾಗಿ ಮಾನವ ಮತ್ತು ಮಾನವೀಯತೆಗಳ ನಷ್ಟವಾಗದಂತೆ ನೋಡಿಕೊಳ್ಳುತ್ತಿದ್ದನು. ಒದಗಿದರೆ ಇದೊಂದು ಮಹಾನಷ್ಟವೆಂದು ಭಾವಿಸುತ್ತಿದ್ದನು. ವಿರೋಧ ಘರ್ಷಣೆ ಗಳೆಂದರೆ ಆಗದು. ಅನಿವಾರ್ಯ ಪ್ರಸಂಗಬಂದರೆ ಹಿಂಜರಿಯುತ್ತಿರಲಿಲ್ಲ. ನ್ಯಾಯಕ್ಕೆ ಸತ್ಯಕ್ಕೆ ಅಂಜಿಕೆಯೆಂದರೇನು? ಹಿಂಜರಿವುದೆಂದರೇನು? ತನ್ನನ್ನು ತನ್ನವರನ್ನು ತನ್ನದನ್ನು ತ್ಯಾಗಮಾಡಿ ಹೋರಾಡಿ ಗೆಲುವಿನತ್ತ ಸಾಗುತ್ತಿದ್ದನು; ಎಲ್ಲರೊಡನೆ ಸ್ನೇಹ ಸಮತೆ ಸಹಕಾರಗಳಿಂದಿರುತ್ತಿದ್ದನು. ಇದು ಆತನ ಧರ್ಮ, ಆತನ ತತ್ತ್ವ. ಭಾರತೀಯ ತತ್ತ್ವಕ್ಕೆ ಬುನಾದಿ ಹಾಕಿದಾತನು. ಅರ್ಥ ಅಧಿಕಾರಗಳಿಗೆ ಅಂಟಿಕೊಳ್ಳುವವನಲ್ಲ. ಅರ್ಥವಿಲ್ಲದ ಶೋಷಣೆಯನ್ನು ಮಾಡುವವನಲ್ಲ. ಅನಿಷ್ಟಾಚಾರಗಳನ್ನು ಕೈಕೊಳ್ಳು ವವನಲ್ಲ. ಶಾಂತಿ ಸಮನ್ವಯಗಳಿಗೆ ಅಂಟಿಕೊಂಡ ಅಂತಃಕರಣ ಆತನದು. ಅವರಿವ

ರೆಂಬ ಕವಲಿಲ್ಲ. ಎಲ್ಲರೂ ಎಲ್ಲ ಬಗೆಯಿಂದ ಎಳ್ಳನಿತೂ ಲೋಭ ವಂಚನೆ ಸ್ವಾರ್ಥ ಪ್ರವೃತ್ತಿಗಳಿಗೆ ಅಂಟಿಕೊಳ್ಳಬಾರದೆಂಬುದೇ ಆತನ ಆಶಯ. ಅಂಟಿಕೊಂಡರೆ ಅದು ಮಾನವೀಯತೆಗೆ ಶೈವೀಭದ್ರತೆಗೆ ಭಂಗವೆಂಬುದನ್ನು ಬಲವಾಗಿ ಬಗೆದಿದ್ದನು. ಭದ್ರತೆ (ಸ್ಥಿರತೆ-ಶುಭತೆ)ಯಿಲ್ಲದ ಬಾಳು ಬಾಳಲ್ಲ. ವೀರಶ್ರೀಯಿಲ್ಲದ ಬದುಕು ಬದುಕಲ್ಲ. ವೀರತನ ಭದ್ರಜೀವನಕ್ಕೆ ಸಹಕಾರಿಯಾಗಬೇಕು – ಎಂಬುದೇ ಆತನ ಆಶಯ. ಅಂತೆಯೆ ಆತನ ಆಚರಣೆ. ತನ್ನಂತೆ ಎಲ್ಲರೂ ವೀರರಾಗಿ ಧೀರರಾಗಿ ಭದ್ರಾಂತಃಕರಣಿಗಳಾಗಿ ಬಾಳಬೇಕೆಂದು ಭಾವಿಸುತ್ತಿದ್ದನು. ಯಾರ ಮೇಲೆ ತನ್ನ ಪ್ರಭುತ್ವವನ್ನು ಹೇರುತ್ತಿರಲಿಲ್ಲ. ಒಂದು ದೃಷ್ಟಿಯಲ್ಲಿ ಪ್ರಜಾಪ್ರಭುತ್ವ ಆತನದು. ಎಲ್ಲರ ಕ್ಷೇಮಕ್ಕಾಗಿ ಸಾಮ್ಯದೃಷ್ಟಿಯಿಂದ ನಡೆದನು; ನಡೆ ಹೇಳಿದನು.

ವೀರಶೈವಧರ್ಮದ ದರ್ಶನವೆ ಇದಾಗಿದೆ; ಸಿದ್ಧಾಂತವೆ ಇದಾಗಿದೆ. ಇದರ ರಕ್ಷಣೆಯೇ ವೀರೇಶನ ಮಣಿಹವಾಗಿತ್ತು. ದೇವಗಣರ ಅನ್ಯಾಯ, ಅನೀತಿ, ಅಧಿಕಾರ ದಾಹ, ಅಪೇಯಪಾನ, ಯಜ್ಞನೆಪದಲ್ಲಿ ಪ್ರಾಣಿವಧೆ, ಮಾಂಸಭಕ್ಷಣ ಮೊದಲಾದವುಗಳನ್ನು ವೀರೇಶನು ಸಹಿಸುತ್ತಿರಲಿಲ್ಲ. ಅತ್ಯಾಚಾರವೆಂದರೆ ಆತನಿಗಾಗದು, ಇವನ್ನೆಲ್ಲ ಸರಿಪಡಿಸುವುದಕ್ಕಾಗಿಯೆ ಆತನ ಅವತಾರವಾಗಿತ್ತು. ಅದಕ್ಕಾಗಿಯೆ ಅಂದೆ ಆತನು ವೀರಶೈವಧರ್ಮವನ್ನು ಸ್ಥಾಪಿಸಿದನು. ವೀರಶೈವರನ್ನು ರೂಪಿಸಿದನು. ದಕ್ಷತೆಯಿಲ್ಲದ ದಕ್ಷನನ್ನು, ನರರ ಮಾಂಸಾಹಾರಿಯಾಗಿ ನರರಿಗೆ ಸಿಂಹದಂತಿದ್ದ ನರಸಿಂಹನನ್ನು ಶಿಕ್ಷಿಸಿದ ಉದಾತ್ತ ಉದ್ದೇಶಗಳನ್ನು ಮೆಲುಕುಹಾಕಬೇಕು. ಸರ್ವ ಜೀವಾತ್ಮರಿಗೆ ಸಾರ್ವಕಾಲಿಕ ಶಾಂತಿಯನ್ನು ದಾಂತಿಯನ್ನು ತರುವುದೇ ಆತನ ಅಗತ್ಯ ಮತ್ತು ಸ್ತುತ್ಯ ಉದ್ದೇಶ. ಆ ಉದ್ದೇಶ ಉಳಿದು ಬೆಳೆದು ಬರಲಿಕ್ಕಾಗಿ ಅದೇ ಧ್ಯೇಯದ ವೀರಶೈವ ಸ್ಥಾಪನೆ. ವರ್ಗರಹಿತ–ಶೋಷಣವಿರಹಿತ–ಜಾತ್ಯತೀತ ಮತ ಸ್ಥಾಪನೆಯೆ ಆತನ ಮೂಲೋದ್ದೇಶ. ಪವಿತ್ರ ಪ್ರೇಮಪಥದಲ್ಲಿ ಮಾನವ ಜನಾಂಗಕ್ಕೆ ಒಂದು ಹೊಸ ಹೊಲಬಿನ ಹೊಸ ತಿರುವನ್ನು ತರುವುದೆ ಆತನ ಧ್ಯೇಯವಾಗಿತ್ತು. ಅಂತೆಯೇ ಅದು ಮುಂದುವರಿಯಿತು. ಜನಾಂಗದ ಅಂತರಂಗ–ಬಹಿರಂಗ ಸ್ಥಿತಿಗತಿಗಳನ್ನು ಪರಿಶುದ್ಧವಾಗಿ ಪರಿವರ್ತಿಸುವುದೆ ವೀರಶೈವದ ಅಭಿಮತ. ಇದರಿಂದಾಗಿ ಇದು ಇಡೀ ವಿಶ್ವಕ್ಕೆ ದಿಕ್ಸೂಚಿಯಾಗಿ ನಿಂತಿತು.

> "ನ ವೀರಶೈವ ಸದೃಶಂ ಮತಮಸ್ತಿ ಜಗತ್ತ್ರಯೇ ।
> ಸರ್ವಭೋಗಪ್ರದಂ ಪುಣ್ಯಂ ಶಿವಸಾಯುಜ್ಯದಾಯಕಂ ॥"

ಎಂದು ಪಾರಮೇಶ್ವರಾಗಮ ಸ್ಫೂರ್ತಿಯಿಂದ ಉದ್ಘೋಷಿಸುವಂತಾಯಿತು. ಇದು ಅಂದಿನ ವೀರಶೈವದ ಪರವನ್ನು ಹೇಳುವುದಲ್ಲದೆ ಮತಪ್ರಕ್ರಿಯೆಗಳ ಪ್ರಾಧಾನ್ಯತೆಯನ್ನೂ

ವಿಶ್ವಮಾನ್ಯವಾಗುವ ಸಾಮರ್ಥ್ಯವನ್ನೂ ಉಗ್ಗಡಿಸುವ ಗಮನಾರ್ಹ ಉಕ್ತಿಯಾಗಿದೆ. ಇದು ಕಡೆಗಣ್ಣಿನಿಂದ ಕಾಣುವ ಉಕ್ತಿಯಲ್ಲ. ವೀರಶೈವತತ್ತ್ವಗಳು, ಸಿದ್ಧಾಂತಗಳು ಜಗನ್ಮಾನ್ಯಗಳು, ಜನತೆಯನ್ನು ಧನ್ಯರನ್ನಾಗಿಸುವವುಗಳು-ಎಂಬುದು ಸಿದ್ಧವಾಗುತ್ತದೆ. ತ್ಯಾಗ-ಭೋಗ-ಯೋಗಸಮನ್ವಯವುಳ್ಳ ವೀರಶೈವ ಮತ ಅಸದೃಶವಲ್ಲವೆ? ಸದಾ ಸರ್ವರನ್ನು ಅಶಿವದಿಂದ ಶಿವದತ್ತ ಸಾಗಿಸುವ ಮತ, ಶಿವವಾಗಿಸುವ ಮತಕ್ಕಿಂತ ಮಹತ್ತರವಾದ ಮತವಿರಬಲ್ಲುದೆ ?

ಇಂತಹ ವಿಶಾಲವೂ ವಿಶುದ್ಧವೂ ತ್ರಿವಿಧಸಮನ್ವಯ ಸಮನ್ವಿತವೂ ಆದ ವೀರ ಶೈವಧರ್ಮ ವೀರೇಶನಿಂದ ಮೊಳೆತು, ವೀರಮಾಹೇಶ್ವರರಾದ ಶಿವಾಚಾರ್ಯರಿಂದ ಕಾಪುಗೊಂಡು (ಸಂರಕ್ಷಿತವಾಗಿ) ಬಸವಾದಿ ಪ್ರಮಥರಿಂದ ಬೆಳೆದು ನಿಂತ ಹೆಮ್ಮರ ವೀರಶೈವಮತ. ಇದರ ಸಮನ್ವಯಾಚಾರ-ಕ್ರಿಯಾನುಭಾವವಿಚಾರಗಳು ಜೀವನಾ ಕಾಶದ ಸೂರ್ಯಚಂದ್ರರಂತಿರುವವು. ಪ್ರಕಾಶಕಗಳೂ ಪ್ರಚೋದಕಗಳೂ ಆಗಿವೆ. ಆತ್ಮ ತಂತ್ರವಾಗಿ ಆತ್ಮೋನ್ನತಿಗೆ ಆಕರವಾಗಿವೆ. ಅಂಗತಂತ್ರವಾಗಿ ಅಂಗವು ಆತ್ಮ ಲಿಂಗದಲ್ಲಿ ಅವಿರಳಗೊಳ್ಳಲು ಅವಕಾಶವಾಗಿದೆ. ವೀರಶೈವಮತದ ಅಂಗ ವಿಶಿಷ್ಟ ವಾದುದು, ಸಮಷ್ಟಿಯಾದುದು.

ಐಕಮತ್ಯದ ಸೂತ್ರ ಅಂಗತಂತ್ರ :

'ಅಷ್ಟಾವರಣವೆ ಅಂಗ, ಪಂಚಾಚಾರವೆ ಪ್ರಾಣ…' ಎಂಬುದು ವೀರಶೈವ ಸೂತ್ರ. ಪ್ರಸಾದ, ಪಾದೋದಕ, ವಿಭೂತಿ, ರುದ್ರಾಕ್ಷಿ, ಮಂತ್ರ, ಜಂಗಮ, ಲಿಂಗ, ಗುರು-ಇವು ವೀರಶೈವದ ಮತ್ತು ವೀರಶೈವನ ಅಷ್ಟಾಂಗ. ಇವುಗಳಿಗೆ ಪರಿವಿಡಿದು ನೆಲ-ನೀರು-ಬೆಂಕಿ-ಗಾಳಿ-ಮುಗಿಲುಗಳು ಪೂರ್ವಾಶ್ರಯಗಳೆಂದು, ಉಳಿದ ಜಂಗಮ-ಲಿಂಗ-ಗುರುಗಳಿಗೆ ಆತ್ಮಾಶ್ರಯವೆಂದು ನಿರೂಪಣೆ. ಇವು ಸಮಷ್ಟಿಯೂ ಅಹುದು, ವ್ಯಷ್ಟಿಯೂ ಅಹುದು. ಇವೆಂಟು ಸೇರಿ ಒಂದಂಗವಾಗುತ್ತದೆ. ಅಂಗತ್ವ ಗುರುವಿನಿಂದ! ಗುರುದೀಕ್ಷಾನು ಗ್ರಹದಿಂದ !! ತತ್ತ್ವಾನುಸಂಧಾನಕ್ಕೆ ತಕ್ಕುದು. ಅಂದರೆ ಲಿಂಗಾರ್ಚನಕ್ಕೆ ಲಿಂಗಾರ್ಪಣಕ್ಕೆ ಲಿಂಗಾನುಭವಕ್ಕೆ ಲಿಂಗಾನಂದಕ್ಕೆ ಲಿಂಗಸಾಮರಸ್ಯಕ್ಕೆ ತಕ್ಕುದು. ಅಷ್ಟಾವರಣಗಳಲ್ಲಿ ಒಂದುತನವನ್ನು ಸಂಕೇತಿಸತಕ್ಕುದು.

ಬರೀ ಒಂದರಿಂದಾದುದು ಅಂಗವಲ್ಲ; ಆಚಾರ್ಯನ ಅನುಗ್ರಹವಿಲ್ಲದ್ದು ಅಂಗವಲ್ಲ. ಪ್ರಸಾದಾದಿ ಅಷ್ಟಾವರಣ ಸಂಗಡಿಸಿದುದು ಅಂಗ. ಪೃಥಿವ್ಯಾದಿ ಅಷ್ಟಮೂರ್ತಿ ಕೂಡಿದುದು ಸಮಷ್ಟಿ ಸೃಷ್ಟ್ಯಂಗ. ಮೊದಲಿನದು ವ್ಯಷ್ಟಿಯೆನಿಸುವ ವ್ಯಕ್ತಿನಿಷ್ಠಾಂಗ. ಬೇರು ಬೊಡ್ಡೆ ತೊಗಟೆ ಎಲೆ ನಾರು ಹೂವು ಮಿಡಿ ಹಣ್ಣು ಒಂದಾದುದು ಬಿತ್ತು.

ಪೃಥಿವ್ಯಾದಿಗಳ ಐಕಮತ್ಯದಿಂದ ವಿಶ್ವಕಲ್ಯಾಣ. ಅಷ್ಟಾವರಣಗಳ ಐಕಮತ್ಯದಿಂದ ಅಂಗಕಲ್ಯಾಣ. ಅಂಗರೆಲ್ಲರ ಐಕಮತ್ಯದಿಂದ ಸಮಾಜಕಲ್ಯಾಣ. ಅಷ್ಟಾವರಣವುಳ್ಳ ಅಂಗರೆಲ್ಲರೂ ಸರಿಸಮಾನರು. ಭೇದಕಲ್ಪನೆ ತತ್ತ್ವಬಾಹಿರವಾದುದು. ಪ್ರಗತಿ ಘಾತಕವಾದುದು. ಸಂಘಶಕ್ತಿಗೂ ಮಾರಕವಾದುದು. ಸಾಮಾಜಿಕದ ಯಾವ ಹಿತ ಸಾಧಿತವಾಗದು. ಯಾವ ಯೋಜನ-ಪ್ರಯೋಜನಗಳೂ ಉಂಟಾಗವು. ಅಂತೆಯೆ ಅಂಗಾಂಗಗಳ ಐಕಮತ್ಯವಿಲ್ಲವಾದರೆ ವೈಯಕ್ತಿಕ ಕಲ್ಯಾಣವೂ ಉಂಟಾಗದು. ವೈಯಕ್ತಿಕ ಹಾಗೂ ಸಾಮಾಜಿಕ ಆಕಾಂಕ್ಷೆಗಳು ಈಡೇರಬೇಕಾದರೆ, ಈಡೇರಿ ವಿಶ್ವಕಲ್ಯಾಣದೊಂದಿಗೆ ಸಮನ್ವಯಗೊಳಿಸಬಲ್ಲ ಶಕ್ತಿ ಸಮನಿಸಬೇಕಾದರೆ ಅಂಗ ಐಕಮತ್ಯ ಅಗತ್ಯ. ಅಷ್ಟಾಂಗ ಗಳು ಏಕಾಂಗವಾಗದೆ ಏಳ್ಗೆಯಾಗದು; ತತ್ತ್ವಪೂರ್ಣವಾಗದು. ಧರ್ಮಸಾಧನೆಯಲ್ಲಿ ಈ ಅಷ್ಟಾಂಗ ಸಂಕೀರ್ಣ ವ್ಯವಸ್ಥೆ ಅನಿವಾರ್ಯ. ಧರ್ಮಸಾಧನೆಗೆ ಅಂಗ ಆಧಾರ. ಅಂಗತ್ವಕ್ಕೆ ಅಷ್ಟಾವರಣಗಳ ಸಂಕೀರ್ಣತೆ ಆಧಾರ. ವೀರಶೈವ ತತ್ತ್ವಸಿದ್ಧಾಂತಗಳ ಅಡಿಗಲ್ಲು ಅಂಗ. ಇದು ಅಷ್ಟಾವರಣ ಪಂಚಾಚಾರಗಳೆಂಬ ಅಂಗ ಪ್ರಾಣಗಳಿಂದ ಕೂಡಿದರೆ ಮಾತ್ರ ಮುಂದಿನ ಆತ್ಮದಂತಿರುವ ಷಟ್‌ಸ್ಥಲ ಸಿದ್ಧಾಂತವನ್ನು ಧಾರಣಮಾಡಲು ಶಕ್ತವಾಗುತ್ತದೆ. ಅಷ್ಟಾವರಣರೂಪ ಅಂಗರಚನೆ ವೀರಶೈವ ದಾರ್ಶನಿಕರ ದೂರದೃಷ್ಟಿಗೆ ನಿರುಪಮ ನಿದರ್ಶನ. ಇವುಗಳಲ್ಲಿ ಯಾವುದೊಂದಿಲ್ಲದಿದ್ದರೂ ಆಗದು. ಸಮಗ್ರತೆ ಸಮನಿಸದು. ಇವುಗಳಲ್ಲಿ ಸಿದ್ಧಿ ಸಾಧ್ಯಗಳು ಸೇರಿಕೊಂಡಿವೆ. ಪ್ರಸಾದ–ಪಾದೋದಕ ಗಳೆರಡು ಸಿದ್ಧಿ. ವಿಭೂತಿ-ರುದ್ರಾಕ್ಷಿ-ಮಂತ್ರಗಳು ಸಾಧನಗಳು. ಜಂಗಮ-ಲಿಂಗ-ಗುರು ಸಾಧ್ಯರು. ಸತ್ ಚಿತ್ ಆನಂದ ಸ್ವರೂಪರು. ಕರ್ಮ–ಕಾಲ–ಮಾಯಾ ನಿವಾರಕಗಳು: ವಿಭೂತಿ–ರುದ್ರಾಕ್ಷಿ–ಮಂತ್ರಗಳು. ಇವು ಪರಿವಿಡಿದು ಅನ್ವಯವಾಗು ತ್ತವೆ. ಹಸಿವು–ದಾಹಗಳನ್ನು ನೀಗುತ್ತವೆ ಪ್ರಸಾದ ಪಾದೋದಕಗಳು. ಗುರುವು ದೀಕ್ಷಾ ಶಿಕ್ಷಾ ಮೋಕ್ಷಗುರುವಾಗಿ ಸಂಸ್ಕಾರವಿತ್ತು ಅಂಗನ ಮಲತ್ರಯಗಳನ್ನು ಮಾಣಿಸಿ ಜ್ಞಾನತ್ರಯಗಳನ್ನು ಕರುಣಿಸುತ್ತಾನೆ. ಲಿಂಗ ಇಷ್ಟ(ಕ್ರಿಯಾ)–ಪ್ರಾಣ (ಜ್ಞಾನ)–ಭಾವ (ತೃಪ್ತಿ) ಲಿಂಗವಾಗಿ ಕರ್ಮತ್ರಯಗಳನ್ನು ಕಳೆದು ಕ್ರಿಯಾತ್ರಯಗಳನ್ನು ಮಾಡ ಹಚ್ಚುತ್ತದೆ. ಜಂಗಮ ಸ್ಥಿರ–ಚರ–ಪರ-ಜಂಗಮವಾಗಿ ಗುಣತ್ರಯ ಜನ್ಯ ಜಾಡ್ಯತ್ರಯ ಗಳನ್ನು ಜಾಳಿಸಿ ಜಾಗ್ರತೆಯನ್ನುಂಟು ಮಾಡುತ್ತಾನೆ. ಲಿಂಗತ್ವ ಜಂಗಮತ್ವ ವಿಭೂತಿ ತ್ವಾದಿಗಳು ಗುರುಸಂಸ್ಕಾರದಿಂದ ಒದಗುತ್ತವೆ. ಸುಸಂಸ್ಕೃತ ಜೀವನಕ್ಕೆ ಸಂಸ್ಕಾರ ಅತ್ಯಗತ್ಯ. ಅದು ತನ್ನಿಂದ ತಾನೆ ಬಾರದು. ಬುದ್ಧಿಯ ಬೆಳವಣಿಗೆಗೆ ಶಿಕ್ಷಕರ ಶಿಕ್ಷಣ, ಕಾಯದ ಬೆಳವಣಿಗೆಗೆ ತಾಯಿಯ ಪೋಷಣೆ ಬೇಕಾಗುವಂತೆ, ಕಾಯ ಮನ ಭಾವ ಜೀವಗಳ ಉತ್ತಮಿಕೆಗೆ ಉಪದೇಶರೂಪ ಸಂಸ್ಕಾರ ಅಗತ್ಯ. ಬರೀ ಬುದ್ಧಿದೇಹಗಳು ಬೆಳೆದರೆ ಸಾಲದು, ಜೊತೆಗೆ ಭಾವಜೀವಗಳೂ ವಿಶುದ್ಧವಾಗಿ ವಿಶಾಲವಾಗಬೇಕು. ಸಂಸ್ಕೃತಿ ಸಂವೃದ್ಧಿಸಬೇಕು. ಇವು ಗೌರಸಂಸ್ಕಾರದಿಂದ ಸಾಧ್ಯ. ಗುಣಧರ್ಮಗಳ

ಪರಿಣತ ಪ್ರತಿಭೆ ಸಾಧ್ಯ. ಗುರುಕಾರುಣ್ಯದಿಂದ ಕಣ್ಣಿನ ಪರೆ ಹರಿದು ಹೋಗುತ್ತದೆ; ಕೈಯ ಸೆರೆ ಕಳಚಿ ಹೋಗುತ್ತದೆ. ಮನ ಹರಣಗಳ ಪರಿದಾಟ ಪ್ರಾಕೃತಿಕ ಚಲ್ಲಾಟ ನಿಂತುಹೋಗುತ್ತದೆ. ಸತ್ತಿಗಾಗಿ ಸಂವಿತ್ಕ್ರಿಯಾರಾಧನೆ ಸಾಗುತ್ತದೆ. ಇದರಿಂದಾಗಿ ಶಿವಾತ್ಮವಿದ್ಯಾ ಗುರುದೇವನನ್ನು ಗುರುತಿಸಿ ಆತನಿಂದ ಸಂಸ್ಕಾರ ಪಡೆದು ಮಾರ್ಗ ದರ್ಶನ ಪಡೆದು ಮುನ್ನಡೆಯಬೇಕು. ಹಸನಾದ ಹೊಲಬಿನಲ್ಲಿ ಹೊಳಪಿನ ಹೆಜ್ಜೆ ಗಳನ್ನು ಹಾಕಬೇಕು. ಗುರು ಕರುಣಿಸುವ ಕಣ್ಣರಿಕೆಯಿಂದ ಪರೆ, ಕ್ರಿಯಾಚೈತನ್ಯದಿಂದ ಕೈಸೆರೆ ತಪ್ಪುತ್ತವೆ. ಮಂತ್ರ ಮನನದಿಂದ ಮನ ಪ್ರಾಣಗಳ ಹರಿದಾಟ ನಿಂತು ಘನತೆ ಹೆಚ್ಚುತ್ತದೆ. ಪೂರ್ವಾಶ್ರಯ ನಿರಸನವಾಗುತ್ತದೆ. ಪ್ರಾಕೃತಿಕತೆ ಅಳಿದು ಅಪ್ರಾಕೃತಿಕತೆ ಅಳವಡುತ್ತದೆ. ಒಳಗೆ ಶಿರದರಮನೆಯಲ್ಲಿರುವ ಆ ಚಿತ್ಕಳೆ ಚಿದ್ಗುರುವಿನ ಚಕ್ಷು ಕಳೆಯೊಡನೆ ಹೊರಹೊಮ್ಮಿ ಬಂದು ಕರಸ್ಥಳದ ಕುರುಹಿನಲ್ಲಿ ಕರಿಗೊಂಡು ಚುಳುಕಾಗಿ ದೃಷ್ಟಲಿಂಗವೆನಿಸುತ್ತದೆ. ಕಾಯ ಅಂಗವಾಗಿ ಪ್ರಾಣ ಲಿಂಗವಾಗಿ ಭಕ್ತತ್ವವುಂಟಾಗುತ್ತದೆ. ತತ್ತ್ವಜ್ಞಾನಾರ್ಜನೆಗೆ ಷಟ್‌ಸ್ಥಲ ಸಿದ್ಧಾಂತಾನುಷ್ಠಾನಕ್ಕೆ ಅರ್ಹತೆ ಅಳವಡುತ್ತದೆ.

ಗುರು ಕರುಣಿಸಿದುದೆ ಲಿಂಗ. ಇದು ಗುರುವಿನಂತೆ ಮೂರಾಗಿ, ಆರಾಗಿ, ಒಂಬತ್ತಾಗಿ ಒಂಬತ್ತು ಅಂಗಗಳಲ್ಲಿ ಸಂಸ್ಥಾಪಿತವಾಗುತ್ತದೆ. ಇಷ್ಟ–ಪ್ರಾಣ–ಭಾವ ಇವು ತ್ರಿವಿಧಲಿಂಗಗಳು. ಇವು ಒಂದೊಂದು ಎರಡೆರಡಾಗಿ ಮತ್ತೆ ಆರಾಗುತ್ತವೆ. ಇಷ್ಟ (ಕ್ರಿಯಾ) ಲಿಂಗದಲ್ಲಿ ಆಚಾರಲಿಂಗ–ಗುರುಲಿಂಗಗಳು, ಪ್ರಾಣ (ಜ್ಞಾನ) ಲಿಂಗದಲ್ಲಿ ಶಿವಲಿಂಗ–ಚರಲಿಂಗಗಳು, ಭಾವ (ತೃಪ್ತಿ) ಲಿಂಗದಲ್ಲಿ ಪ್ರಸಾದಲಿಂಗ–ಮಹಾಲಿಂಗ ಗಳಾಗುತ್ತವೆ. ಇವೆ ಷಡ್ಲಿಂಗಗಳು. ಇವುಗಳಲ್ಲಿ ಮೊದಲಿನ ಮೂರು ಸೇರಿ ಒಂಬತ್ತಾಗುವುವು. ಇವುಗಳ ಧಾರಣದಿಂದ ಅಂಗಗಳು ಲಿಂಗಗಳಾಗುತ್ತವೆ. ಕಾಯ ಕರಣೇಂದ್ರಿಯ ಭಾವವನ್ನು ನೀಗುತ್ತವೆ. ಬೆಂಕಿ ಮುಟ್ಟಿದ ಕಟ್ಟಿಗೆ ಬೆಂಕಿಯೆ ಆಗು ವಂತಾಗುತ್ತವೆ. ಲಿಂಗ ಗುಣ ಕ್ರಿಯೆಗಳನ್ನು ಅಳವಡಿಸಿಕೊಳ್ಳುವ ಅರ್ಚನ ಅರ್ಪಣ ಅನುಭವ ಕಾರ್ಯ ಮಾತ್ರ ಅಂಗನದು. ದೀಕ್ಷಾ ಸಂಸ್ಕಾರದಿಂದ ಆಯತ ಸ್ವಾಯತ ಸನ್ನಿಹಿತವಾದ ಲಿಂಗಗಳನ್ನು ಅಂಗನು ಎಂದೂ ಎಷ್ಟೂ ಅಗಲಬಾರದು. ತ್ಯಾಗಾಂಗ ದಲ್ಲಿ ಇಷ್ಟಲಿಂಗ, ಭೋಗಾಂಗದಲ್ಲಿ ಪ್ರಾಣಲಿಂಗ, ಯೋಗಾಂಗದಲ್ಲಿ ಭಾವಲಿಂಗಗಳು ಧಾರಣವಾಗಿರುತ್ತವೆ. ತ್ಯಾಗಾಂಗದ ಇಷ್ಟಲಿಂಗ ವಕ್ಷಸ್ಥಳದಲ್ಲಿ ಧಾರಣವಾಗಬೇಕು. ನಾಭಿಯ ಕೆಳಕ್ಕೆ ಧರಿಸಬಾರದು. ಪರಮ ಕಳೆಯುನ್ನಿರಿಸಿಕೊಳ್ಳುವ ಕ್ರಿಯಾಲಿಂಗ ಪಂಚಸೂತ್ರಕ್ಕೆ ಸರಿಯಾಗಿರಬೇಕು. ಇದು ಇಷ್ಟಲಕ್ಷಣ. ಸಿಂಧೂರ ವರ್ಣದ ಶ್ರೀಶೈಲ ಶಿಲೆಯಿಂದಾದುದಿರಬೇಕು. ಸೃಷ್ಟಿ ಸ್ಥಿತಿ ಲಯಾತ್ಮಕವಾದ ಲಿಂಗದಲ್ಲಿ ಶಿವ–ಶಕ್ತಿ ಭಾಗಗಳಿರುತ್ತವೆ. ಎರಡೂ ಸಮಸಮವಾಗಿರುತ್ತವೆ. ಇಂತಿದ್ದಲ್ಲಿ ಭೋಗ–ಮೋಕ್ಷ ಪ್ರದವಾಗುತ್ತದೆ. ನಾದ–ಬಿಂದು–ಕಲೆಗಳಿಂದ ಕೂಡಿದ ಕ್ರಿಯಾಲಿಂಗವನ್ನು ವಾಮ ಕರಸ್ಥಲದಲ್ಲಿ ಇರಿಸಿ ಅರ್ಚಿಸಬೇಕು. ಇದು ವೀರಶೈವಧರ್ಮ.

"ಯೋ ಹಸ್ತಪೀಠೇ ನಿಜಲಿಂಗಮಿಷ್ಟಂ ವಿನ್ಯಸ್ಯ ತಲ್ಲೀನಮನಃ ಪ್ರಚಾರ :
ಬಾಹ್ಯಕ್ರಿಯಾಸಂಕುಲ ನಿಸ್ಪೃಹಾತ್ಮಾ ಸಂಪೂಜ್ಯಯತ್ಯಂಗ ಸ ವೀರಶೈವಃ
— ಶಂಕರ ಸಂಹಿತೆ

ವೀರಶೈವರಲ್ಲಿ ಲಿಂಗಪೂಜೆಗೆ ಲಿಂಗಭೇದವಿಲ್ಲ. ವಯೋಭೇದವಿಲ್ಲ; ವರ್ಣಾದಿ ಬೇರೆ ಕುಲ ಪಂಥ ಭೇದವಿಲ್ಲ. ಗುರು ಕಾರುಣ್ಯದಿಂದ ಇವೆಲ್ಲ ಕಳಚಿಹೋಗಿರುತ್ತವೆ. ಯಾವ ಸೂತಕಕ್ಕಿಂಬಿಲ್ಲ. ಲಿಂಗ ಪೂಜೆಯಿಂದ ಪೂಜಕನಿಗೆ ಪರಬ್ರಹ್ಮತ್ವ ಪ್ರಾಪ್ತಿ. 'ಲಿಂಗ ಪೂಜನಾದೇವ ಪ್ರಾಪ್ತಂ ಬ್ರಹ್ಮತ್ವಮುತ್ತಮಂ' ಎಂದು ಆದಿತ್ಯ ಪುರಾಣ ಪ್ರಮಾಣವಿದೆ. ಆಗಮಾನುಭೂತಿಯೂ ಇದೆ. ಲಿಂಗಧಾರಣ ನಿರೂಪಣ ಇಂದಿನದಲ್ಲ, ನಿನ್ನೆಯದಲ್ಲ. "ವೇದ ಶಾಸ್ತ್ರ ಪುರಾಣೇಷು ಕಾಮಿಕಾದ್ಯಾಗಮೇಷು ಚ। ಲಿಂಗಧಾರಣಮಾಖ್ಯಾತಂ ವೀರಶೈವಸ್ಯ ನಿಶ್ಚಯಾತ್" ಎಂದಿರುವುದಲ್ಲದೆ "ಇಪ್ಪತ್ತೊಂದು ಯುಗದವರೆಲ್ಲರೂ ಲಿಂಗವ ಪೂಜಿಸಿ, ದೃಷ್ಟವಾವುದು, ನಷ್ಟವಾವುದೆಂದರಿಯದೆ ಹೋದರು......" ಎಂದು ಚನ್ನಬಸವಣ್ಣ ನಿರೂಪಿಸಿ ಲಿಂಗಧಾರಣದ ಹಳಮೆಯನ್ನು ಹೇಳಿದ್ದಾನೆ. ಇನ್ನು ಲಿಂಗಧಾರಣದ ಹಿರಿಮೆಯನ್ನು ಲಿಂಗೋಪನಿಷತ್ತು ಮುಚ್ಚಿದ ಕಂಗಳು ತೆರೆವಂತೆ ತಿಳುಹಿದೆ :

"ಸರ್ವಂ ಲಿಂಗಸ್ವರೂಪಂ। ಜಾತಿ ವಿಷಯಾನ್ ತ್ಯಜೇತ್। ಶ್ರೌತಾಽ ಶ್ರೌತೇಷು ಧಾರಣಂ । ವೇದೋಕ್ತ ವಿಧಿನಾ ಶ್ರೌತಂ, ತದ್ರಹಿತಮಶ್ರೌತಂ । ಸರ್ವ ವರ್ಣೇಷು ಧಾರಣಂ ಕೈಲಾಸಸಿದ್ಧಿರ್ಭವತಿ । ಧಾರಣಂ ದೇಹೇ ಕೈಲಾಸಸ್ವರೂಪಂ । ಧಾರಣಂ ದೇಹೇ ಕೈವಲ್ಯ ಸ್ವರೂಪಂ । ಧಾರಣಂ ದೇಹೇ ಪ್ರಣವಸ್ವರೂಪಂ । ಧಾರಣಂ ದೇಹೇ ವೇದಸ್ವರೂಪಂ । ಧಾರಣಂ ದೇಹೇ ಬ್ರಹ್ಮ ಸ್ವರೂಪಂ । ಧಾರಣಂ ದೇಹೇ ಶಿವ ಸ್ವರೂಪಂ । ಶಿರಸಿ ಬಾಣಂ ಬಾಹು ನಾಭಿ ಪೀಠ ಪ್ರಕೃತಿರೂಪಕಂ । ದೇಹೇ ಧಾರಣಂ ಯಸ್ಯ ನ ವಿದ್ಯತೇ ತದ್ದೇಹಂ ನ ಪಶ್ಯೇತ್। ......ಸರ್ವ ದೇಹೇಷು ಲಿಂಗಧಾರಣಂ ಭವತಿ । ಇತಿ ವೇದಪುರುಷೋ ಮನ್ಯತೇ । ...... ಸ ಏವ ಪೂತಸ್ಥಃ ಸಾದ್ವೈವ ಲೌಕಿಕೋಽ ಲೌಕಿಕ ಪುರುಷ :। ಜೀವಾತ್ಮಾ ಪರಮಾತ್ಮಾ ಚ ಏವೋಚ್ಯತೇ । ಇಷ್ಟ ಪ್ರಾಣ ಭಾವೇಷು ಲಿಂಗಧಾರಣಂ ವದಂತಿ । ಇಷ್ಟೇ ಧಾರಣಂ । ತಿಸ್ರಃ ಪುರಸ್ತ್ರಿಪದಾ ವಿಶ್ವಚರ್ಷಣೀ ಪುರನಾಶೇ ಲಿಂಗಸ್ವರೂಪಜ್ಞಾ ಸಿದ್ಧಿರ್ಭವತ್ಯಜ್ಞಾನೇ ಸತಿ। ಸಂಯುಕ್ತಂ ಲಿಂಗಂ ಮೋಕ್ಷ ಏವ ಭವತ್ಯೇವ । ಮೋಕ್ಷಮೇವ ಧಾರಣಂ ವಿದ್ಯಾತ್ । ಯಾ ತೇ ರುದ್ರಶಿವಾ ತನೂರಘೋರಾಽ ಪಾಪಕಾಶಿನೀ । ಅತ್ಯಾಶ್ರಮಾಣಾಂ ಮಧ್ಯೇ ಲಿಂಗಧಾರೀ ಶ್ರೇಷ್ಠೋ ಭವತಿ । ಶಿರಸಿ ಮಹಾದೇವಸ್ತಿಷ್ಠತು ಇತಿ ಧಾರಯೇತ್ ।"

ಗುರೂಪದೇಶವಿಲ್ಲದ್ದು ಅಶ್ರೌತ. ಶಿಷ್ಯನ ಶ್ರುತಿ ಅಂದರೆ ಶ್ರವಣಕ್ಕೆ ಬಾರದ್ದು ಮನವರಿಕೆಗೆ ಬಾರದು. ಅರಿಕೆಗೆ ಬಾರದ್ದು ಅವೇದ. ಲಿಂಗಧಾರಣವುಳ್ಳ ಅಂಗ

ಕೈಲಾಸವೂ ಅಹುದು, ಕೈವಲ್ಯವೂ ಅಹುದು. ಲಿಂಗ ಅಂಗಕೈಲಾಸದಲ್ಲಿರುತ್ತದೆ. ಅಂಗ ಲಿಂಗಕೈವಲ್ಯಭಾವದಲ್ಲಿರುತ್ತದೆ. ಲಿಂಗೈಕಭಾವವೆ ಕೈವಲ್ಯ. ಧಾರಣದ ದಿವ್ಯತೆಯನ್ನಿಲ್ಲಿ ದೃಷ್ಟಿಸಬೇಕು. ಧಾರಣ ದೇಹೈಕನಿಷ್ಠವಲ್ಲ. ಇಲ್ಲಿ ದೇಹಪದ ಸರ್ವಾಂಗನಿಷ್ಠ. ಇದು 'ಸರ್ವಂ ಲಿಂಗಸ್ವರೂಪಂ' ಎಂಬೀ ಮೊದಲ್ನುಡಿಯಿಂದ ಸಂಸಿದ್ಧವಾಗಿದೆ. ಧಾರಣ ಕೇವಲ ಕ್ರಿಯಾವಿಧಾನವಲ್ಲ; ಜ್ಞಾನಾನುಭವ ವಿಧಾನವೂ ಅಹುದು. 'ಸರ್ವ ದೇಹೇಷು ಲಿಂಗಧಾರಣಂ' ಆಗುವುದೆಂದರೆ ಎಲ್ಲ ದೇಹೇಂದ್ರಿಯ ಕರಣ ಜ್ಞಾನ ಗುಣ ಕ್ರಿಯುಗಳಲ್ಲಿ ಧಾರಣವಾಗುವುದೆಂದರ್ಥ. ಆಗ ಆತನು ಲಿಂಗಜ್ಞಾನಿ, ಲಿಂಗಾನುಭಾವಿ, ಲಿಂಗಾನಂದಿಯಾಗುತ್ತಾನೆ. ಬಳಿಕ ಲಿಂಗಾಂಗ ಸಮರಸವುಂಟಾಗುತ್ತದೆ. ಆಗ ಜೀವಾತ್ಮನು ಪರಮಾತ್ಮನೆಂದೆನಿಸುತ್ತಾನೆ. ಪರಮಾತ್ಮನೆಂದರೆ ಮಹಾತ್ಮನೆಂದರ್ಥ. ಮಹಾತ್ಮನೆಂದರೆ ಲೌಕಿಕಾಲೌಕಿಕಗಳನ್ನು ಒಳಗೊಂಡಾತನೆಂದರ್ಥ. ಅವನೇ ನಿಜವಾದ ಲಿಂಗಧಾರಿ. ಅವನೇ ಅತ್ಯಾಶ್ರಮಿಗಳಲ್ಲಿ ಅತ್ಯಂತ ಶ್ರೇಷ್ಠ.

ಗುರು ಕಾರುಣ್ಯದ ಅಂಗನ ಲಿಂಗಜೀವನ ಲಿಂಗಧರ್ಮ–ಲಿಂಗವಂತಧರ್ಮ. ಧರ್ಮವು ಲಿಂಗಿಯ ಬಾಳಿನೊಂದಿಗೆ ಬೆಳೆದು ಬಂದಿದೆ; ಬೆಳಗಿ ನಿಂದಿದೆ. ಅದು ಹೊರಗಿನ ಮೈಗೆ ಮಾತ್ರ ಸೀಮಿತವಾಗಿಲ್ಲ. ಒಳಕ್ಕೂ ಇಳಿದಿದೆ. ಅಂತಃಕರಣ–ಆತ್ಮಗಳ ಬೆಳವಣಿಗೆಗೂ ಬೆಂಬಲವಾಗಿದೆ.

ಅಂಗಾಂಗಗಳಲ್ಲಿ ಲಿಂಗಧಾರಣವಾಗಿ ಅಂಗವೆಲ್ಲ ಲಿಂಗ, ಪ್ರಾಣಕ್ಕೆ ಲಿಂಗಧಾರಣವಾಗಿ ಉಸಿರೆಲ್ಲ ಲಿಂಗ; ಭಾವಕ್ಕೆ ಲಿಂಗಧಾರಣವಾಗಿ ಭಾವಭಾವನೆಗಳೆಲ್ಲ ಲಿಂಗ. ಲಿಂಗವುಳಿದು ಅಂಗನ ಬಾಳಿಲ್ಲ. ಆದುದರಿಂದ ಅಂಗನು ಅಸ್ಪರ್ಶಕವಾಗಿ ಲಿಂಗವಂತ. ಆತನಿಂದ ಲಿಂಗಜೀವನದ ಉದ್ದೀಪನ; ಲಿಂಗವಂತಿಕೆಯ ಉದ್ದೀಪನ. ಸಕಲಕ್ಕೆ ಸಕಲ ಲಿಂಗ, ಸಕಲ ನಿಷ್ಕಲಕ್ಕೆ ಸಕಲನಿಷ್ಕಲಲಿಂಗ, ನಿಷ್ಕಲಕ್ಕೆ ನಿಷ್ಕಲಲಿಂಗ ಧಾರಣ. ಸಚ್ಚಾರಿತ್ರ ನಿರ್ಮಾಣ. ಸಚ್ಚಿದಾನಂದಾನುಭೂತಿ ನಿರ್ವಹಣ. ಸತ್ಯ ಶಿವ ಸೌಂದರ್ಯ ಸಂವೇದನ, ಸಂವಹನ. ಸತ್ಯ ಶಿವ ಸೌಂದರ್ಯವೆ ಲಿಂಗ; ಲಿಂಗವೆ ಸತ್ಯ ಶಿವ ಸೌಂದರ್ಯ. ಲಿಂಗವಂತನೆಂದರೆ ಸತ್ಯವಂತ, ಶಿವಸೌಂದರ್ಯವಂತ. ಲಿಂಗ ಸತ್ಯದ ಪ್ರತೀಕ, ಶಿವಸೌಂದರ್ಯದ ಪ್ರತೀಕ. ಅಂತೆಯೆ ಅದು ಸಚ್ಚಿಲ್ಲಿಂಗ, ಶಿವಲಿಂಗ; ಸ್ವರೂಪಲಿಂಗ. ದಿವ್ಯರಸ ಪರಿಪೋಷಕವಾಗಿ ಅದು ಭಾವಲಿಂಗವಾಗಿದೆ. ಕರಸ್ಥಲದ ಕುರುಹು ಕಣ್ಣಿನ ಚಲುವು, ಉರಸ್ಥಲದ ಹೊಳಹು ಮನಕ್ಕೆ ಮನೋಹರ. ಶಿರಸ್ಥಲದ ಸುಳುಹು ಭಾವವನ್ನು ಪರವಶಗೊಳಿಸುವ ಭಾವಸೌಂದರ್ಯ.

ಲಿಂಗವಂತನಿಗೆ ಲಿಂಗವನ್ನುಳಿದು ಬೇರೆ ಬಾಳಿಲ್ಲ, ಬದುಕಿಲ್ಲ. ಲಿಂಗವಶನಾಗಿ ಲಿಂಗ ನಡೆಸಿದಂತೆ ನಡೆವನು; ಲಿಂಗ ನುಡಿಸಿದಂತೆ ನುಡಿವನು. "ಲಿಂಗವಶದಿಂದ ಬಂದ ನಡೆಗಳು; ಲಿಂಗವಶದಿಂದ ಬಂದ ನುಡಿಗಳು. ಲಿಂಗವಂತರು ತಾವು ಅಂಜಲದೇಕೆ?

ಲಿಂಗವಿರಿಸಿದಂತಿಪ್ಪುದಲ್ಲದೆ, ಕೂಡಲಸಂಗಮದೇವ ಭಕ್ತರಭಿಮಾನ ತನ್ನದೆಂಬನಾಗಿ !" ಲಿಂಗವಂತನದು ನಡೆಗೆ ತಕ್ಕ ನುಡಿ, ನುಡಿಗೆ ತಕ್ಕಂತೆ ನಡೆ. ಇದರಿಂದಾಗಿ ಈತನ ಈ ಜನ್ಮವೇ ಕಡೆ. ನಡೆ ನುಡಿ ಒಂದಾಗಿರುವಲ್ಲಿ ಸತ್ಯಸೌಂದರ್ಯವಿರುತ್ತದೆ. ಶಿವಜೀವನ ವಿರುತ್ತದೆ. ನಡೆ ಚನ್ನ, ನುಡಿ ಚನ್ನ ಆಗುವುದಕ್ಕಿಂತ ಬೇರೆ ಶಿವಸೌಂದರ್ಯವಿಲ್ಲ. ದಿಟನಡೆ--ದಿಟನುಡಿಗಳಿಗಿಂತ ಸತ್ಯ ಬೇರಿಲ್ಲ. "ನುಡಿದರೆ ಲಿಂಗ ಮೆಚ್ಚಿ ಅಹುದಹುದೆನ ಬೇಕು. ನುಡಿಯೊಳಗಾಗಿ ನಡೆಯದಿದ್ದರೆ ಕೂಡಲಸಂಗಮದೇವನೆಂತೊಲಿವನಯ್ಯ?" ಎಂಬುದು ಬಸವಣ್ಣನ ಭಾವ. ದಿಟದ ನಡೆಗೆ ಸಾಧನ ಕ್ರಿಯಾಲಿಂಗ. ದಿಟದ ನುಡಿಗೆ ಅಂದರೆ ಅರಿವಿನ (ಎಚ್ಚರದ) ನುಡಿಗೆ ಕಾರಣ ಜ್ಞಾನಲಿಂಗ. ಸಹಜ ತೃಪ್ತಿಗೆ ಸಾಧನ ಭಾವಲಿಂಗ. ನಡೆ ನುಡಿ ಅಥವಾ ಆಚಾರ ವಿಚಾರ ತೃಪ್ತಿಯಾಗಿರುವಿಕೆಯೆ ಲಿಂಗ ವಂತಿಕೆ. ಇದರಿಂದ ಶಾಂತಿಯ ಗಳಿಕೆ; ಸದ್ಗತಿಯ ಗಳಿಕೆ.

ತಾನು ಅಂಗ; ತನ್ನತನ ಲಿಂಗ. ಅಂಗ ಪುಷ್ಪವನ್ನು ಅಪ್ಪಿದ ಪರಿಮಳ ಲಿಂಗ. ಅಂಗ ಅದೊಂದು ತುಪ್ಪದಿಂದ ತೊಯ್ದ ಬತ್ತಿ, ಅದನ್ನು ಅಂಟಿದ ಜ್ಯೋತಿ ಲಿಂಗ. ಆ ಜ್ಯೋತಿಯ ಪ್ರಕಾಶ ಜಂಗಮ. ಅಂಗನು ಅರಿವು ಅಳವಟ್ಟು ಗುರು. ಆಚಾರ ಅಳವಟ್ಟು ಲಿಂಗ; ಅನುಭೂತಿ ಅಳವಟ್ಟು ಜಂಗಮ.

ಸಾಮಾನ್ಯ ವಿಶೇಷ ಎಂದು ಜಂಗಮತತ್ತ್ವ ಇಬ್ಬಗೆ. ಜಗದಲ್ಲಿದ್ದು ಜಗದ ಜಂಜಡಗಳನ್ನು ತನುವಿನ ತ್ರಿವಿಧಾವಸ್ಥೆಗಳನ್ನು ತೊಡೆದು ತೊಳಗುವ ಮಹಾನುಭಾವನು ವಿಶೇಷ ಜಂಗಮನೆನಿಸುತ್ತಾನೆ. ಅಷ್ಟಾವರಣಾಂತರ್ಗತ ಜಂಗಮನೆಂದೆನಿಸುತ್ತಾನೆ. "ಜಾನಂತ್ಯತಿಶಯಾದ್ಯೇ ತು ಶಿವಂ ವಿಶ್ವಪ್ರಕಾಶಕಂ । ಸ್ವಸ್ವರೂಪತಯಾ ತೇ ಹಿ ಜಂಗಮಾ ಇತಿ ಕೀರ್ತಿತಾಃ ॥ ಎಂದು ಜಂಗಮ ಲಕ್ಷಣವನ್ನು 'ಸಿದ್ಧಾಂತ ಶಿಖಾಮಣಿ' ಸಿದ್ಧಗೊಳಿಸಿದೆ. ಅತಿಶಯದ ಅರಿವುಳ್ಳಾತನು ಜಂಗಮ. ಆ ಅರಿವು ಶಿವವೂ ವಿಶ್ವಪ್ರಕಾಶಕವೂ ಸ್ವಸ್ವರೂಪವೂ ಆಗಿರಬೇಕು. ಇಲ್ಲಿನ ಅತಿಶಯ ಮತ್ತು ಸ್ವಸ್ವರೂಪ ಪದಗಳೆರಡೂ ಗಮನಾರ್ಹಗಳು. ಆ ಅರಿತ ಅರಿವಿನ ಹೆಚ್ಚಳಿಕೆ ವಿಶ್ರಾಂತಿಗೊಂಡಿರಬೇಕು, ನಿಷ್ಪತ್ತಿಗೊಂಡಿರಬೇಕು. ಅರಿತ ಬಳಿಕ ಅರಿಯಬೇಕಾದುದಿರಬಾರದು; ಅರಿವ ಹಂಬಲವು ಇರಬಾರದು. ಆ ಅರಿವು ಬೇರಾವುದೂ ಅಲ್ಲ; ಸ್ವಸ್ವರೂಪದ್ದು ಆಗಿರಬೇಕು. ಅದು ವಿಶ್ವವನ್ನೆ ಪ್ರಕಾಶಿಸಬಲ್ಲುದು, ಪ್ರಕಾಶಿಸುತ್ತದೆ. ಶಿವವಾಗಿರುತ್ತದೆ. ಅದನ್ನು ಅರಿತವನು, ಅರಿತು ಅವಿರಳವಾದಾತನು ಜಂಗಮನು. ಜನನ–ಜೀವನ ಗಮನ–ಮರಣಗಳ ವಿಕಾರ ವಿರಹತತ್ತ್ವವೆ ಜಂಗಮ ಲಕ್ಷಣ. ಜಂಗಮವೆಂದರೆ ಲಿಂಗ ಚೇತನ, ಅಥವಾ ಚೇತನಲಿಂಗ. ಅಂತೆಯೇ ಅದಕ್ಕೆ ಚರಲಿಂಗವೆಂದು ಮತ್ತೊಂದು ಹೆಸರು. ಸಾಕಾರವಾಗಿ ಸಾಭಾರವಾಗಿ ಲಿಂಗವೆನಿಸಿದರೆ ನಿರಾಕಾರವಾಗಿ ನಿರಾಭಾರವಾಗಿ ಜಂಗಮವೆನಿಸುತ್ತದೆ. ಸಾಕಾರ-ನಿರಾಕಾರಗಳೆರಡೂ ಭಿನ್ನವಲ್ಲ. ಎರಡೂ ಒಂದು ನಾಣ್ಯದ

ಎರಡು ಪಕ್ಕಗಳು. ಲಿಂಗ ದೀಪ, ಜಂಗಮ ದೀಪ್ತಿ. ಅದು ಸ್ವಸ್ವರೂಪದಿಂದ ವಿಶ್ವಪ್ರಕಾಶ; ಶಿದಪ್ರಕಾಶ ಅನುಪಮ ಚಿತ್ಪ್ರಕಾಶ; ಚಿದಾಕಾಶ. ಸ್ವಯ-ಚರ-ಪರ ಎಂದು ಜಂಗಮ ತ್ರಿವಿಧ. ಅದು ತಾನೆ ತಾನಾಗಿ ಸ್ವಯ, ಅಜಡವಾಗಿ ಚರ; ತನಗೊಂದೂ ಮಿಗಿಲಿಲ್ಲಾಗಿ–ಬೇರೆಯಿಲ್ಲಾಗಿ ಪರ. ಗುರುವು ಲಿಂಗವೆನಿಸಿರುವಂತೆ, ಚರವೂ ಲಿಂಗ ವೆನಿಸಿದೆ. ಗುರುಲಿಂಗ ತ್ಯಾಗಾಂಗೋತ್ತರನಿಷ್ಠ. ಚರಲಿಂಗ ಭೋಗಾಂಗೋತ್ತರನಿಷ್ಠ. ಗುರುಲಿಂಗ–ಶಿವಲಿಂಗ–ಚರಲಿಂಗ ಈ ಲಿಂಗ ಸಮನ್ವಯ ಏನನ್ನು ಬೋಧಿಸುತ್ತವೆ? ಒಂದೆ ಮೂರಾಗಿ, ಮೂರು ಒಂದೆ ಆಗಿ ಇರುವಿಕೆಯ ಅರಿವನ್ನುಂಟು ಮಾಡುವುದಿಲ್ಲವೆ? ಒಂದು ಮೂರಾಗಿರುವುದು ವಿಕಾಸವಾದ; ಮೂರು ಒಂದಾಗುವುದು ಸಮನ್ವಯ ಅಥವಾ ಸಮರಸವಾದ. ಈ ಎರಡು ವಾದಗಳೂ ವೀರಶೈವ ಜೀವಾಳ. ಈ ತ್ರಿವಿಧ ಸಮನ್ವಯ ಸಿದ್ಧಾಂತವನ್ನು ಇನ್ನೂ ವಿಸ್ತಾರವಾಗಿ ವಿಸ್ಪಷ್ಟವಾಗಿ ಅರಿಯಬೇಕೆಂಬಲ್ಲಿ ನಮ್ಮದೇ ಆದ 'ಶಿವಾದ್ವೈತ ದರ್ಶನ' ಗ್ರಂಥವನ್ನು (ಪು. ೧೩೧–೧೩೫) ಓದಬೇಕು. ಸಾಮಾಜಿಕವಾಗಿ ಮುಮ್ಮೊದಲು ಈ ತ್ರಿವಿಧ ಲಿಂಗಗಳ ಸಂಘಟನವಾಗಬೇಕು. ಈ ಮತ ಎಲ್ಲರ ಅಭಿಮತವಾಗಬೇಕು. ತಾತ್ತ್ವಿಕವಾದ ಗುರು–ಚರ ಸಮನ್ವಯ ಸಾಮಾಜಿಕವಾಗಿ ಸಮನಿಸಿದಲ್ಲಿ ಆಗ ಸಮಾಜ ಐಕಮತ್ಯಕ್ಕೆ ಬರುತ್ತದೆ. ಸಾಮಾಜಿಕ ವಾಗಿ ಐಕ್ಯಸ್ಥಲದ ಸಮನ್ವಯವಾಗುತ್ತದೆ, ಮತಶಕ್ತಿ ಅಮಿತವಾಗುತ್ತದೆ. ತ್ರಿವಿಧ ಏಕತೆಯೆ ಐಕ್ಯದ ಸೂತ್ರ; ಪೂರ್ಣತೆಯ ಪಾತ್ರ.

ವಿಭೂತಿ, ರುದ್ರಾಕ್ಷಿ, ಮಂತ್ರ ಈ ಮೂರು ಆರಾಧನ ಸಾಧನ ಸಂಪತ್ತು. ಅಷ್ಟಾ ವರಣವೆ ಅಂಗನಾದ ವೀರಶೈವನ ಹಣೆ, ಕಣ್ಣು, ಮುಖಗಳಿವು. ಇವನು ವಿಭೂತಿ ಪುರುಷನಾಗಲು ಬೇಕಾದ ತ್ರಿವಿಧ ಚಿಂತನ ಹಣೆಯಲ್ಲಿರಬೇಕು; ತ್ರಿವಿಧ ಪರಿಶುದ್ಧತೆ ಯಿರಬೇಕು. ನಿರುಪಾಧಿಕ–ಸೋಪಾಧಿಕ ಭಸಿತಧಾರಣವಿರಬೇಕು. ಕಾಮಾದಿಗಳ ಸುಟ್ಟುರುಹಿದ ಭಸ್ಮ ನಿರುಪಾಧಿಕ; ಮತ್ತು ಶಿರದರಮನೆಯ ಚಿದ್ಬೆಳಗು ನಿರುಪಾಧಿಕ ವಿಭೂತಿ. ತಾನೇ ತಂದ ಹುಲ್ಲು ನೀರುಗಳಿಂದ ಕಾಪಾಡಿದ ಹಸುವಿನ ಸಗಣಿಯಿಂದ ವಿಧಿವತ್ತಾಗಿ ಮಂತ್ರಮಯವಾಗಿ ಮಾಡಿದ ವಿಭೂತಿ, ಭಸಿತ, ಭಸ್ಮ, ಕ್ಷಾರ, ರಕ್ಷೆಗಳೆಂಬ ಶಿವನ ಮೈಬೆಳಗಿನಂತಿರುವ ಐಸಿರಿ (ಭಸ್ಮ)ಗಳನ್ನು ಅಂಗಾಂಗಗಳಲ್ಲಿ ಧರಿಸುವುದು. ಕರ್ಮ, ಚರ್ಮವ್ಯಾಧಿಗಳನ್ನು ನಿರ್ಮೂಲ ಮಾಡುವುದಲ್ಲದೆ ಹೊರಗಿಂದ ಬರುವ ಅಂಟು ರೋಗಗಳಿಗೆ ತುತ್ತಾಗದಂತಿರಿಸುತ್ತದೆ. ಸರ್ವಾಂಗ ಭಸ್ಮಸ್ನಾನ(ಲೇಪನ)ಕ್ರಿಯೆ ಯನ್ನೂ ಕ್ರಿಯಾಭಸ್ಮದಿಂದಾಚರಿಸಬೇಕು. ಶೀತಾದಿ ಯಾವ ದೋಷಗಳೂ ಬಾಧಿ ಸವು. 'ಭೂತ್ಯೈ ನ ಪ್ರಮದಿತವ್ಯಂ' –ಶ್ರುತಿ. 'ಧಾರಯೇತ್ ಯಸ್ತ್ರಿಪುಂಡ್ರಾಂಕಂ ಸ ರುದ್ರೋ ನಾತ್ರ ಸಂಶಯಃ' ಏತಾ ಏವ ಮಹಾವಿದ್ಯಾ ವಿಭೂತೇವಭಿಧಾರಣೇ । ಕಥಿತಾ ಪರಮೇಶಾನಿ ಸತಾಂ ಪೂರ್ವತರಾಘಹಾ ॥ ವಜ್ರಪಂಜರನಾಮ್ನೈವ ಯಃ ಕುರ್ಯಾದ್ಭಸ್ಮಧಾರಣಂ । ಸ ಸರ್ವಭಯ ನಿರ್ಮುಕ್ತಃ ಸಾಕ್ಷಾತ್ ಶಿವಮಯೋ ಭವೇತ್ ॥

—ವಜ್ರಪಂಜರೋಪನಿಷತ್. ಇದರಿಂದ ಲಲಾಟದಲ್ಲಿ ಲಿಖಿಸಿದ ದುರಕ್ಷರಗಳು ದುಷ್ಕರ್ಮಗಳು ದೂರಾಗುತ್ತವೆ. ಶಿವಧರ್ಮಿಯಾಗಿ ಶೋಭಿಸುತ್ತಾನೆ. ಅಂಗ–ಲಿಂಗ ಗಳೆರಡಕ್ಕೂ ಭಸಿತಧಾರಣ ವಿಹಿತವಾಗಿದೆ. "ಅನಾದಿ ಪರಶಿವನಲ್ಲಿ ಅಂತರ್ಗತವಾಗಿರ್ದ ಮಹಾಪ್ರಕಾಶವೇ ಚಿತ್ ಎನಿಸಿತ್ತು. ಆ ಚಿತ್ತೇ ಚಿದಂಗ, ಆ ಚಿದಂಗದಲ್ಲಿ ತೋರಿದ ಚಿದ್ವಿಭೂತಿಯನೊಲಿದು ಧರಿಸಿದ ಶರಣ ಜ್ಯೋತಿರ್ಲಿಂಗವಪ್ಪುದು ತಪ್ಪದು ಕಾಣಾ ಉರಿಲಿಂಗಪೆದ್ದಿಪ್ರಿಯ ಗುರುವಿಶ್ವೇಶ್ವರಾ" ಎಂದಿದೆ ಗುರು ಶರಣವಾಣಿ. ಚಿದ್ವಿಭೂತಿ ಧಾರಕನು ವಿಭೂತಿಪುರುಷನಾಗದಿರನು. ಶರಣಸತಿತ್ವಕ್ಕೆ ಒಳಗುಂದದ ಅರಿಪಿಣ ಚಿದ್ಭಸ್ಮ. ಅದುವೆ ಚಿದೈಶ್ವರ್ಯ.

ರುದ್ರಾಕ್ಷ ಅಥವಾ ರುದ್ರಾಕ್ಷಿಧಾರಣ ಸಾಂಕೇತಿಕವೂ ಅಹುದು, ಸಹಜವೂ ಅಹುದು. ಅಕ್ಷ–ಅಕ್ಷಿಗಳು ರುದ್ರ(ಪರಮ)ಪರವಾಗಿರಬೇಕೆಂಬುದೆ ಇದರ ಸಂಕೇತ. ಅಂಗದಲ್ಲಿ ಭಸಿತದ ಬೆಳಕು ರವಿಬೆಳಗಿನಂತೆ ಬೆಳಗುವಾಗ ಅಕ್ಷಿಗಳು ತೆರೆಯದಿದ್ದರೆ ಅಂದರೆ ಅರಿವು ಮೂಡದಿದ್ದರೆ ಸರ್ವೇಂದ್ರಿಯಗಳಲ್ಲಿ ಶಿವಭಾವ ಬಾರದಿದ್ದರೆ ಮುನ್ನೋಟ ಮೇಲ್ನೋಟಗಳುಂಟಾಗವು. ಶರಣ ಸತಿಗೆ ಗುರುಲಿಂಗಜಂಗಮರೂಪಿ ಶಿವನೊಲುಮೆ ಯಾಗಬೇಕಾದರೆ ಕಾಯ್ದೊಡವು ಇದ್ದಾಗಬೇಕು. ಇಲ್ಲದಿದ್ದರೆ ಶಿವದರ್ಶನವಾಗದು. ಮಂತ್ರೋಪಾಸನೆಗೆ ಅರ್ಹತೆಯೊದಗದು. ವಿಭೂತಿ–ರುದ್ರಾಕ್ಷಿ ಧಾರಣವಾದಲ್ಲಿ ಭಕ್ತತ್ವವುಂಟಾಗುತ್ತದೆ. ರುದ್ರತ್ವವುಂಟಾಗುತ್ತದೆ; ಉಂಟಾಗದೆ ಪೂಜೆ ಘಟಿಸದು. 'ನಾ ರುದ್ರೋ ರುದ್ರಮರ್ಚಯೇತ್' ಎಂದು ಶ್ರುತಿ ಸಾರಿದೆ. ರುದ್ರದೇವನೆಂದರೆ ನೋವನ್ನು ಹರಿಸಿ ನಲಿವನ್ನಿತ್ತು ಕಾಪಿಡುವ ಆನಂದ ಚೇತನವೆಂದರ್ಥ. (ರುದಂ ದ್ರಾವಯತೀತಿ ರುದ್ರಃ) ಸರ್ವಾತ್ಮಸ್ವರೂಪಿ ರುದ್ರನೆಂಬುದು 'ಶ್ರೀರುದ್ರ'ದ ಅಧ್ಯಯನದಿಂದ ಅಭಿವ್ಯಕ್ತ ವಾಗುತ್ತದೆ. ಆ ರುದ್ರನ ಅಕ್ಷ–ಅಕ್ಷಿಗಳು ರುದ್ರಾಕ್ಷಿಗಳು.

"ರುದ್ರಾಕ್ಷಮೂಲಮೋಂಕಾರಂ, ಮುಖಂ ಪಂಚಾಕ್ಷರಂ ವಿದುಃ ।
ತನ್ನಾಲಂ ಭಕ್ತಹೃನ್ನಾಲಂ, ತತ್‌ಸೂತ್ರಂ ಜ್ಞಾನಸೂತ್ರವತ್ ॥"

ರುದ್ರಾಕ್ಷದ ಸಾಂಕೇತಿಕಶ್ರೇಷ್ಠತೆ ಇಲ್ಲಿ ಸ್ಪಷ್ಟವಾಗಿದೆ. ಹಿಂದಿನ ನಿರೂಪಕರ ದೃಷ್ಟಿ ರುದ್ರಾಕ್ಷದ ಬಗೆಗೆ ಎಂತಹದೆಂಬುದು ಎಗ್ಗಳವಾಗುತ್ತದೆ. ಇದಿಷ್ಟೆ ಅಲ್ಲದೆ ರುದ್ರಾಕ್ಷವೆ ಗುರು, ಅದರ ಮುಖವೆ ಜಂಗಮ, ಅದರ ಮೂಲವೆ ಲಿಂಗ, ಅದರ ಪಂಚರೇಖೆಗಳೆ ಪಂಚಾಕ್ಷರಮಂತ್ರ, ರಂಧ್ರವೆ ಓಂಕಾರ–ಎಂದು ಇನ್ನೊಂದು ಬಗೆಯಲ್ಲಿ ಬಣ್ಣಿಸಲಾಗಿದೆ.

ತ್ರಿಪುರ ಸಂಹಾರ ಸಮಯದಲ್ಲಿ ಎವೆ ಹಳಚದೆ ನೆಟ್ಟನೆ ನಿಟ್ಟಿಸಿದ ರುದ್ರನ ನೇತ್ರ ದಿಂದ ಉದುರಿದ ಹನಿಗಳೆ ರುದ್ರಾಕ್ಷವಾದವೆಂದು ಹೇಳುವುದುಂಟು. ಇದು ಏನೇ ಇರಲಿ. ವನೌಷಧಗಳಲ್ಲಿ ರುದ್ರಾಕ್ಷಿಗಳಿಗೆ ವಿಶಿಷ್ಟ ಸ್ಥಾನವಿದೆ; ಗುಣವಿದೆ. ಇವು

ಮೈಯಲ್ಲಿರುವ ಜ್ವರವನ್ನು ಹೀರುತ್ತವೆ. ಮೈಯೊಳಗಿರುವ ದೋಷವನ್ನು ಕಳೆಯುತ್ತವೆ. ಮಾತು ನಿಂತಾಗ ರುದ್ರಾಕ್ಷವನ್ನು ತೆಯ್ದು ಗಂಧದಿಂದ ನಾಲಗೆಗೆ ತಿಕ್ಕಿದರೆ ಮಾತು ಬರುತ್ತವೆಯಂತೆ ! ಮತ್ತು ಕುಡಿಸಿದರೆ ರುದ್ರಲೋಕಪ್ರಾಪ್ತಿಯಂತೆ !! ಮರಣ ತಾರಣಶಕ್ತಿ ಸಂಪನ್ನತೆಯಿದೆಯಂತೆ ! ರುದ್ರನು ಹೇಗೆ ವಿಶ್ವಾಧಿಕನೋ ಹಾಗೆ ಆತನ ರುದ್ರಾಕ್ಷವು ವನೌಷಧಾಧಿಕ. ರುದ್ರನೊಬ್ಬನೇ ಅದ್ವಿತೀಯ; ಒಂದು ಮುಖದ ರುದ್ರಾಕ್ಷವೊಂದೆ ಅನುಪಮ. ಒಂದರಿಂದ ಇಪ್ಪತ್ತೊಂದು ಮುಖಗಳವರೆಗೆ ರುದ್ರಾಕ್ಷಗಳಿವೆ. ಇವನ್ನೆಲ್ಲ ಧರಿಸುವುದು ಉತ್ತಮ. ಇಲ್ಲವಾದಲ್ಲಿ ಅಯ್ದು ಮುಖದ್ದು ಅಧಿಕ. ಅದೊಂದನ್ನಾದರೂ ಧರಿಸಬೇಕು. ಇವನ್ನು ಎಲ್ಲೆಲ್ಲಿ ಎಷ್ಟೆಷ್ಟು ಧರಿಸಬೇಕೆಂಬುದನ್ನು 'ಸಿದ್ಧಾಂತ ಶಿಖಾಮಣಿ' ಗ್ರಂಥ ಓದಿ ಅರಿಯಬೇಕು.

ಅಂಗಕ್ಕೆ ಆರರಂತೆ ತ್ರಿವಿಧಾಂಗಕ್ಕೆ ಹದಿನೆಂಟು, ಮತ್ತು ತ್ರಿವಿಧಾಂಗಗಳು ಸೇರಿ ಇಪ್ಪತ್ತೊಂದು ಅಂಗೋಪಾಂಗಗಳಾಗುತ್ತವೆ. ಇವೆಲ್ಲವೂ ರುದ್ರಪ್ರಜ್ಞೆಯುಳ್ಳ ರುದ್ರಕ್ರಿಯೆಯುಳ್ಳ ಅಕ್ಷ(ಅಕ್ಷಿ)ಗಳಾಗಬೇಕು. ಇದು ರುದ್ರಾಕ್ಷಧಾರಣ ರಹಸ್ಯ. ಇದರಿಂದಾಗುವುದು ಸತ್ಯಸೌಂದರ್ಯ.

ಇನ್ನು ಅಂಗನಿಗೆ ಮುಖದಂತಿರುವ ಮಂತ್ರದ ಮಾತು : ಸರ್ವವಿದ್ಯಾಸ್ವರೂಪವಾದ ಆ ಶಿವಾದ್ವೈತದ ನಾಮವೆ ಮಂತ್ರ. ಅದರ ಮನನದಿಂದ ರಕ್ಷಣ ಅಂದರೆ ಬಾಳುವಿಕೆ ಉಂಟಾಗುವುದರಿಂದ ಅದು ಮಂತ್ರವೆನಿಸಿದೆ. ನಾದವೆ ಮಂತ್ರದ ಪ್ರಾಣ, ಬಿಂದುವೆ ಮಂತ್ರದ ಜೀವ; ಕಲೆಯೆ ಮಂತ್ರದ ಕಾಯ. ಮಂತ್ರ ಶಬ್ದವೆ ಕಲೆ, ಅರ್ಥವೆ ಬಿಂದು, ಭಾವವೆ ನಾದ. ಈ ತ್ರಿವಿಧಾತ್ಮಕ ಮಂತ್ರವು ಶಿವಾದ್ವೈತವನ್ನು ಧ್ಯಾನಿಸಲು ಧಾರಣೆಸಲು ದರ್ಶಿಸಲು ಮತ್ತು ಅವಿರಳಿಸಲು ಸಮೀಪದ ಸಂಬಂಧವುಳ್ಳುದು, ಸಾಧನವಾದುದು. ಭಕ್ತಿರಸಭರಿತವಾದ ಆ ಪರಶಿವನ ಆ ದಿವ್ಯ ನೆನಹೆ ಶಕ್ತಿಯಾದರೆ ಆ ನೆನಹಿನ ನಾದವೆ ಮಂತ್ರ. ಇದು ಕ್ರಿಯಾಮಂತ್ರ, ಜ್ಞಾನಮಂತ್ರ, ಕಾರಣಮಂತ್ರವೆಂದು ಮೂರು ಬಗೆಯಾಗಿದೆ. ಇವನ್ನೆ ಪರಿವಿಡಿದು ಸ್ಥೂಲ–ಸೂಕ್ಷ್ಮ–ಮಹಾಜ್ಞಾನವೆಂತಲೂ ಹೇಳಲಾಗುತ್ತದೆ. ಅವುಗಳಲ್ಲಿ 'ಹಂಸಃ' ಕ್ರಿಯಾರೂಪಸ್ಥೂಲ ಮಂತ್ರ. 'ಸೋಽಹಂ' ಜ್ಞಾನರೂಪ ಸೂಕ್ಷ್ಮಮಂತ್ರ. 'ಓಂ' ಎಂಬುದು ಮಹಾಜ್ಞಾನರೂಪ ಕಾರಣಮಂತ್ರ. ಒಂದು ಕಾಯದಲ್ಲಿ, ಇನ್ನೊಂದು ಮಾನಸದಲ್ಲಿ, ಮತ್ತೊಂದು ಭಾವದಲ್ಲಿ ಇರುತ್ತವೆ. ಹಂಸಃ ಇದರ ಸುಳಿದಾಟ ಕಂಠನಾಳದಲ್ಲಿ, ಸೋಹಂ–ಇದರ ಸುಳಿದಾಟ ಅಂತರಾಳದಲ್ಲಿ; ಓಂಕಾರದ ಸುಳಿದಾಟ ಬ್ರಹ್ಮನಾಳದಲ್ಲಿ. ಹಂಸಃ ಕ್ಷೇತ್ರ, ಸೋಽಹಂ ಕ್ಷೇತ್ರಜ್ಞ, ನಾನೆ ಅವನು, ಅವನೆ ನಾನು–ಈ ಎರಡು ಭಿನ್ನ ಭಾವಗಳಳಿದು 'ನಾನೇ ನಾನು' ಎಂಬ ಏಕೋಭಾವವು ಓಂಕಾರದಲ್ಲಿ ಉಳಿಯುತ್ತದೆ. ಸ್ಥೂಲಾಂಗವಾದ ಹಂಸ ಮಂತ್ರಕ್ಕೆ ಸೋಽಹಂ ಪ್ರಾಣಪ್ರಾಯವಾದರೆ ಓಂ ಆತ್ಮಸ್ವರೂಪ

ವಾಗಿದೆ. ಹಂಸಃ ಇದು ಸಕಲ, ಸೋಽಹಂ ಇದು ಸಕಲ–ನಿಷ್ಕಲ; ಓಂ ಇದು ಕೇವಲ ನಿಷ್ಕಲ. 'ಓಂ' ಇದರಲ್ಲಿ ಅ–ಉ–ಮ ಎಂಬ ಮೂರು ಬೀಜ ಮಂತ್ರಾಕ್ಷರಗಳಿವೆ. ಇವು ಸತ್ ಚಿತ್ ಸುಖ ಸ್ವರೂಪವಾಗಿವೆ; ನಾದ ಬಿಂದು ಕಲಾರೂಪಾಗಿವೆ. ಇವುಗಳಲ್ಲಿ ಮೊದಲಿನದಾದ 'ಅ' ಕಾರವು ಶಿವವಾಚಿ; 'ಉ–ಮಾ' ಕಾರಗಳೆರಡು ಶಕ್ತಿವಾಚಿಗಳು. ಹೀಗೆ ಶಿವ–ಶಕ್ತಿ ವಿಶಿಷ್ಟವೆ ವೀರಶೈವದ ಅದ್ವೈತ. ಇದರಿಂದಾಗಿ ಓಂಕಾರವು ಶಿವಾದ್ವೈತ ಅಂದರೆ ಶಕ್ತಿವಿಶಿಷ್ಟಾದ್ವೈತ ಪ್ರತಿಪಾದಕ ಮಂತ್ರ.

ಅಕ್ಷರಾತ್ಮಕವಾಗಿ ಶ್ರಾವ್ಯವೂ ದೃಶ್ಯವೂ ಆದ ಮಂತ್ರೋತ್ಪತ್ತಿಯ ಮೂಲ ಉಸಿರು. ಇದನ್ನು ಒಳಕ್ಕೆ ಎಳೆವಾಗ ಹಂ ಎಂದೂ ಹೊರಕ್ಕೆ ಬಿಡುವಾಗ ಸಃ ಎಂದೂ ಸಹಜವಾಗಿ ಧ್ವನಿಸುತ್ತದೆ. ಭಾಷೋತ್ಪತ್ತಿಗೆ ಈ ಹಂಸಧ್ವನಿಯೆ ಮೂಲವೆಂದು ಹೇಳಬಹುದಾಗಿದೆ. ಆದರೆ ಇವು ಅಕ್ಷರ ರೂಪವನ್ನು ತಳೆದ ಕಾಲ, ರೂಪಿಸಿದ ವ್ಯಕ್ತಿ ಯಾವುದು–ಯಾರು ಎಂಬುದು ತಿಳಿದುಬಂದಿಲ್ಲ. ಭಾಷಾಶಾಸ್ತ್ರದಲ್ಲಿ ಅಕ್ಷರೋತ್ಪತ್ತಿಯ ಐತಿಹ್ಯ ಕಾಲ ನಾಲ್ಕು ಸಾವಿರಕ್ಕೆ ಹಿಂದಿಲ್ಲವೆಂದು ಹೇಳಲಾಗಿದೆ. ಶಿವಾದ್ವೈತಮತದಂತೆ ವರ್ಣೋತ್ಪತ್ತಿ ಬಹುಪುರಾತನದ್ದು. ಲಿಪಿಗೆ ಯಾವಾಗ ಒಳಪಟ್ಟಿತೆಂಬುದನ್ನು ಹೇಳಲಾಗುವಂತಿಲ್ಲ.

ಅಕಾರವಿದು ಆದಿನಾದ–ಚಿನ್ನಾದ; ಇದರದು ಜಗದ ಲಯಕೃತ್ಯ; ಇದು ಓಂಕಾರ ತಾರಕ–ದಂಡ ಆಕೃತಿಗಳೆರಡು ಇದಕ್ಕೆ ಸಂಬಂಧ; ಇದರಿಂದ ಜಂಗಮೋತ್ಪತ್ತಿ. ಉಕಾರವಿದು ಆದಿಬಿಂದು–ಚಿದ್ಬಿಂದು; ಇದರದು ತಿರೋಧಾನಕಾರ್ಯ. ಇದು ಈಶ್ವರ ತತ್ವ. ಇದಕ್ಕೆ ಕುಂಡಲ–ಅರ್ಧಚಂದ್ರ ಆಕೃತಿಗಳೆರಡು: ಇದರಿಂದ ಲಿಂಗೋತ್ಪತ್ತಿ. ಮಕಾರ ವಿದು ಆದಿಕಲೆ–ಚಿತ್ಕಲೆ; ಇದರದು ಅನುಗ್ರಹಕೃತ್ಯ. ಇದು ಸದಾಶಿವತತ್ತ್ವ. ಇದಕ್ಕೆ ದರ್ಪಣ–ಜ್ಯೋತಿ ಆಕೃತಿಗಳೆರಡು; ಇದರಿಂದ ಗುರುವಿನುತ್ಪತ್ತಿ. ಈ ಮೂರರ ಸಮನ್ವಯವೆ ಓಂಕಾರ. ಅ–ಉ–ಮ ಈ ಕ್ರಮದಲ್ಲಿರುವಾಗ ಶಿವಸಂಬಂಧ, ಉ–ಮ–ಅ ಈ ಕ್ರಮದಲ್ಲಿರುವಾಗ ಶಕ್ತಿಸಂಬಂಧ, ಮ–ಅ–ಉ ಈ ಕ್ರಮದಲ್ಲಿರುವಾಗ ನಿರಾಳರೂಪ ಸಂಬಂಧ ಸಮನಿಸುತ್ತದೆ. ಇವು ಪರಿವಿಡಿದು ಸಹಸ್ರಾರ–ಶಿಖಾ–ಪಶ್ಚಿಮ ಚಕ್ರಗಳಲ್ಲಿರುತ್ತವೆ. ಹತ್ತನೆಯದಾದ ಶೂನ್ಯಚಕ್ರದಲ್ಲಿ ಅವಾಗ್ಜ ಪ್ರಣವವಿರುತ್ತದೆ.

ಓಂಕಾರವು ಸರ್ವವರ್ಣಗಳಿಗೆ ಶಿವಬೀಜವಾಗಿದೆ; ಸರ್ವಮಂತ್ರ–ಸರ್ವವೇದಾಗಮಾದಿಗಳಿಗೆ ಪ್ರಾಣವಾಗಿದೆ. ಪರಶಿವನಿಗೂ ಪ್ರಣವಕ್ಕೂ ಭೇದವಿಲ್ಲ. (ಶಿವೋದ್ವೈತ ಏವವೋಂಕಾರ; ಎಂದಿದೆ ಮಾಂಡುಕ್ಯೋಪನಿಷತ್ತು. 'ಓಂಕಾರಂ ಲಿಂಗಮಾಖ್ಯಾತಂ' ಪ್ರಣವೋಪಾಸನೆಯಿಂದ ಪರಶಿವಪ್ರಾಪ್ತಿ; ಅಂದರೆ ಶಿವಾದ್ವೈತಸಿದ್ಧಿ. ಓಂಕಾರೋಚ್ಚಾರದಿಂದ ಪ್ರಾಣಗಳು ಊರ್ಧ್ವಮುಖಿಗಳಾಗಿ ಉತ್ಕ್ರಮಿಸುತ್ತವೆ.

ಪ್ರಣವದಲ್ಲಿ ಪಂಚಾಕೃತಿಗಳಿವೆ. ತಾರಕ, ದಂಡಕ, ಕುಂಡಲ, ಅರ್ಧಚಂದ್ರ, ದರಣ ಇವು ಪಂಚಾಕೃತಿಗಳು. ಇವುಗಳಿಂದ ಕ್ರಮವಿಡಿದು ನ-ಮ-ಶಿ-ವಾ-ಯ ಎಂಬೀ ಪಂಚಾಕ್ಷರಗಳುದಿಸುವವು. ಇವುಗಳಲ್ಲಿ ನಮಃ-ಅಂಗ, ಶಿವಾಯ-ಲಿಂಗ, ಓಂ-ಸಮರಸ; ಅಂಗ-ಲಿಂಗ ಸಾಮರಸ್ಯರೂಪ 'ತ್ವಂ ತದಸಿ' ಯನ್ನು ಬೋಧಿಸಲು-ಸಾಧಿಸಲು ಪ್ರಣವಪಂಚಾಕ್ಷರಿಯಾಗಿದೆ. ಇದುವೆ ಮಹಾವಿದ್ಯೆ. ಸಕಲ ನಿಗಮಾಗಮಸಾರ. ಷಟ್‌ಸ್ಥಲ ಮಾತೃಭೂಮಿ. ಇದರಲ್ಲಿ ಎಲ್ಲ ವೇದಾಂತ-ಸಿದ್ಧಾಂತಗಳು, ಪಿಂಡಾಂಡ-ಬ್ರಹ್ಮಾಂಡಗಳು ಅಡಕಗೊಂಡಿವೆ. ಇದಕ್ಕೆ ಷಡಕ್ಷರಿ, ಶಿವಪಂಚಾಕ್ಷರಿ, ಮೂಲ ಪಂಚಾಕ್ಷರಿ ಎಂದು ಮುಂತಾದ ಹೆಸರುಗಳಿವೆ. ಇದನ್ನು ಜಪಿಸಿದರೆ ಮಂತ್ರಮೂರ್ತಿ ಯಾದ ಆ ಶಿವಾದ್ವೈತ ತತ್ತ್ವವನ್ನೆ ಸ್ಮರಿಸಿದಂತಾಗುತ್ತದೆ. ಇದರ ಸಿದ್ಧಿಯೆಂದರೆ ಅಂಗನು ಲಿಂಗವೇ ಆಗುವಿಕೆ. ಅಂಗ-ಲಿಂಗ ಶಿವ-ಶಕ್ತಿ ಸಂಪುಟ ಪ್ರಣವ ಪಂಚಾಕ್ಷರಿಮಂತ್ರ:

"ನಮಃ ಪೀಠಮಿತಿ ಪ್ರೋಕ್ತಂ, ಶಿಕಾರಂ ಮಧ್ಯಮೀರಿತಂ,
ವಾಕಾರಂ ಗೋಮುಖಂ ವೃತ್ತಂ, ಯಕಾರಂ ಗೋಲಕಂ ಸ್ಮೃತಂ,
ಓಂಕಾರಂ ಲಿಂಗಮಾಖ್ಯಾತಂ........."

ವೀರಶೈವನು ಉಳಿದವರಂತೆ ಉಸಿರ ಜಪದಲ್ಲಿ 'ಹಂಸಃ'ಮಂತ್ರವನ್ನು ಜಪಿಸದೆ'ಓಂ ನಮಃ ಶಿವಾಯ' ಎಂಬ ಷಡಕ್ಷರ ಮಂತ್ರವನ್ನು ಜಪಿಸಬೇಕು. ಶ್ವಾಸಪೂರಕದಲ್ಲಿ 'ಓಂ' ಎಂದೂ ನಿಃಶ್ವಾಸ ರೇಚಕದಲ್ಲಿ 'ನಮಃಶಿವಾಯ' ಎಂದೂ ಜಪಿಸಬೇಕು; ಭಾವಿಸಬೇಕು. ಈ ಜಪವು ದಿನವೊಂದಕ್ಕೆ ೨೧೬೦೦ ಆಗುತ್ತದೆ. ಶ್ವಾಸ-ನಿಃಶ್ವಾಸವೆರಡೂ ಸೇರಿ ಒಂದು ಪೂರ್ತಿ ಮಂತ್ರ ಜಪವಾಗುತ್ತದೆ. ಇದರಂತೆ ನಿಮಿಷವೊಂದಕ್ಕೆ ೧೫ ಜಪಗಳಾಗುತ್ತವೆ. ಗಂಟೆಯೊಂದಕ್ಕೆ ೯೦೦ ಜಪಗಳಾಗುತ್ತವೆ. ೨೪ ಗಂಟೆಯ ದಿನವೊಂದಕ್ಕೆ ೨೧೬೦೦ ಜಪವಾಗುತ್ತವೆ. ಇವುಗಳಲ್ಲಿ ಆಚಾರಲಿಂಗ ಗುರುಲಿಂಗಾಂತರ್ಗತ ಇಷ್ಟಲಿಂಗಕ್ಕೆ ೪೩೨೦; ಶಿವಲಿಂಗ-ಜಂಗಮಲಿಂಗಾಂತರ್ಗತ ಪ್ರಾಣಲಿಂಗಕ್ಕೆ ೯೫೦೪; ಪ್ರಸಾದಲಿಂಗ-ಮಹಾ ಲಿಂಗಾಂತರ್ಗತ ಭಾವಲಿಂಗಕ್ಕೆ ೭೭೭೬ ಸಲ್ಲುತ್ತವೆ. ದಳವೊಂದಕ್ಕೆ ೪೩೨ ರಂತೆ ಆರು ಆರುಲಿಂಗಚಕ್ರಗಳ ೫೦ ದಳಕ್ಕೆ ಹಂಚಿದರೆ ೨೧೬೦೦ ಆಗುತ್ತವೆ. ಇದರಿಂದ ದಿನವೆಲ್ಲ ಮಂತ್ರಜಪರೂಪ ಅರ್ಚನ, ಇವನ್ನು ಆ ಆ ಲಿಂಗಗಳಿಗೆ ಅರ್ಪಿಸುವುದರಿಂದ ಅರ್ಪಣ; ಮಂತ್ರ ಶಕ್ತಿ ಲಿಂಗಚೈತನ್ಯಗಳನ್ನು ಸಮರಸಗೊಳಿಸುವ ಸುಖಾನುಭೂತಿಯುಂಟಾ ಗುವದರಿಂದ ಅನುಭವ; ಈ ಮೂರು ಸಂಘಟಿಸಿದಂತಾಗಿ ವೀರಶೈವನು ಸತತ ಅರ್ಚನ-ಅರ್ಪಣ-ಅನುಭಾವ ನಿರತನಾಗಿಯೆ ಇರುತ್ತಾನೆ; ಶಿವಭಾವಭರಿತನಾಗಿಯೆ ಬಾಳುತ್ತಾನೆ. ಮಂತ್ರನಾದದಿಂದ ಅಂತರಂಗ ಅನುರಣಿತವಾಗಿರುತ್ತದೆ.

ಷಡಕ್ಷರ ಮಂತ್ರ ಷಟ್‌ಸ್ಥಲದಲ್ಲಿ ಮಿಗಿಲಾಗಿ ಉಪಯುಕ್ತವಾಗಿ ಷಡಂಗಗಳನ್ನು ಶುದ್ಧ ವಿಸುತ್ತದೆ. ಷಡ್ಭಕ್ತಿ, ಷಟ್‌ಶಕ್ತಿ, ಷಡ್ಲಿಂಗಗಳನ್ನು ಸಂಪಾದಿಸಿಕೊಂಡುತ್ತದೆ.

ಸಮರಸ ಸ್ವರೂಪಕ್ಕೆ ಅಂದರೆ ಶಿವಾದ್ವೈತ ಸಿದ್ಧಾಂತಕ್ಕೆ ಸಮನಿಸುವಂತೆಸಗುತ್ತದೆ. 'ಓಂ ನಮಃ ಶಿವಾಯ' ಇದು ಕ್ರಮವಾಗಿ ಒಂದೊಂದು ಪ್ರಣವವು ಪರಮಾತ್ಮನ ಸರ್ವಜ್ಞತ್ವ, ಸರ್ವೇಶ್ವರತ್ವ. ಸರ್ವನಿಯಂತೃತ್ವ. ಸರ್ವಾಂತರ್ಯಾಮಿತ್ವ. ಸರ್ವಾತ್ಮಕತ್ವ, ಸರ್ವಶಕ್ತಿತ್ವಗಳನ್ನು ಸೂಚಿಸುತ್ತದೆ. ಮಂತ್ರಸಿದ್ಧನಿಗೆ ಈ ಗುಣಗಳುಂಟಾಗುತ್ತವೆ.

ವೀರಶೈವನಿಗೆ ಏಕಾಕ್ಷರ, ದ್ವ್ಯಕ್ಷರ, ತ್ರ್ಯಕ್ಷರಪಂಚಾಕ್ಷರ, ಷಡಕ್ಷರ, ನವಾಕ್ಷರ ಮಂತ್ರಗಳು ಮುಖ್ಯವಾದವುಗಳು. ನಿತ್ಯಾಚರಣೆಯಲ್ಲಿ ಬರತಕ್ಕವುಗಳು. ಈ ಎಲ್ಲ ಮಂತ್ರಾಚರಣೆಯಿಂದ ಅಂತಃಶಕ್ತಿ ಹೆಚ್ಚುತ್ತದೆ. ಇದರಿಂದಾಗಿ ಸಗರ್ಭರೂಪತ್ರಿವಿಧಜಪದಲ್ಲಿ ಮಾನಸಿಕ ಜಪವೆ ವಿಹಿತ, ವಿಶಿಷ್ಟ. ಮಂತ್ರಶಬ್ದ ಹೊರಬಿದ್ದರೆ ವ್ಯರ್ಥವಾಗುತ್ತದೆ, ಮನ ಘನವಾಗುವುದೆ ಮಂತ್ರಜಪದ ಮುಖ್ಯಧ್ಯೇಯ. ಜೊತೆಗೆ ಒಳಗಿನ ಮಾಂಸ ಸ್ನಾಯುಗಳ ಶುದ್ಧಿ ಮುಖ್ಯ. ಇದು ಮಂತ್ರಸ್ಪರ್ಶ ಮಂತ್ರಸ್ಪಂದನದಿಂದುಂಟಾಗುತ್ತದೆ. ಇದಾಗಬೇಕಾದರೆ ಮಂತ್ರನಾದಚಲನ ಅಂತರ್ಮುಖವಾಗಬೇಕು, ಅಂತಃಸ್ಪಂದನವಾಗಬೇಕು. ಇದರಿಂದ ಮಾನಸಿಕ ಜಪವೆ ಮುಖ್ಯ; ಅದರಿಂದ ಶೈವೀಶಕ್ತಿಯು ಆಲೇಖ್ಯ.

ಸಾಧನತ್ರಯ ಸಮನ್ವಯ

ವಿಭೂತಿ ರುದ್ರಾಕ್ಷಿ ಮಂತ್ರ–ಇವು ಬೇರೆ ಬೇರೆಯಾಗಿ ಕಂಡರೂ ಬೇರೆಯಲ್ಲ. ಭಿನ್ನಾಭಿನ್ನರೂಪಾಗಿವೆ. ಒಂದು ಪರಮನ ಮೈವೆಳಗು, ಇನ್ನೊಂದು ಕಣ್ಣು ಅಥವಾ ಅಂಗಾಂಗ; ಮತ್ತೊಂದು ವಾಚ್ಯ. ಈ ಮೂರಕ್ಕೂ ಅಧಿಷ್ಠಾತವಸ್ತು ಒಂದೆ. ಅಲ್ಲದೆ ಒಂದೊಂದರಲ್ಲಿ ತತ್ತ್ವ ಸಮನ್ವಯವೂ ಇದೆ. ರುದ್ರಾಕ್ಷಿಯ ಪೃಥ್ವಿ ಅಪ್ಪು ತತ್ತ್ವಗಳೆರಡರ ಸಮನ್ವಯ. ಅಲ್ಲದೆ ಇದಕ್ಕೆ ಚಿದ್ವಿಭೂತಿಯೊಡನೆ ಸಮನ್ವಯವೂ ಇದೆ. ಅಂತೆಯೆ ರುದ್ರಾಕ್ಷಿಯು ಅಗ್ನಿ–ವಾಯು ತತ್ತ್ವಗಳೆರಡರ ಸಮನ್ವಯ. ಇದರಿಂದ ಕ್ರಿಯಾಂಕುರವಾಗಿ ಜ್ಞಾನಾಕ್ಷಿ ಅರಳುತ್ತದೆ. ಅಕ್ಷಿ ಚಿದಕ್ಷಿಗಳೊಡನೆ ಸಂಬಂಧವಿದೆ. ಇನ್ನು ಮಂತ್ರ ಆಕಾಶ–ಆತ್ಮಗಳೆರಡರ ಸಮನ್ವಯ. ಇದರಿಂದಾಗಿ ಇದು ಶಬ್ದಮಯಿಯಾಗಿ ಆತ್ಮರೂಪ ಪರಮಾತ್ಮ ಬೋಧಕವಾಗಿದೆ; ಸ್ವರೂಪವು ಆಗಿದೆ. ಅಂದರೆ ವಾಚ್ಯವಾಚಕ ಸಂಬಂಧವುಳ್ಳದಾಗಿದೆ. ಈ ತ್ರಿವಿಧವು ಆ ಭಗವಂತನ ಭಾಗಗಳಾದ ಗುರು–ಲಿಂಗ–ಜಂಗಮರ ಕಾರುಣ್ಯರೂಪ ಚಿದ್ರೂಪ ಪಾದೋದಕವನ್ನು ಆನಂದರೂಪ ಸದ್ರೂಪ ಪ್ರಸಾದವನ್ನು ಸಂಪಾದಿಸಿಕೊಡುತ್ತವೆ. ಹೀಗೆ ಸಾಧನ ಸಾಧ್ಯ ಸಿದ್ಧಿಗಳ ಈ ಸಮನ್ವಯವೆ ಅಷ್ಟಾವರಣಗಳ ಶ್ರೇಷ್ಠಧ್ಯೇಯ. ಈ ಸಮನ್ವಯ ಸಂಹಿತಸಿದ್ಧಿಯಿಂದಲೆ ಇವೆಂಟೂ ಸೇರಿ ಒಂದಂಗವಾಗುತ್ತದೆ. ಒಂದಂಗವಾಗಿ ಮುಂದೆ ಪಂಚಾಚಾರರೂಪ ಪಂಚಪ್ರಾಣಗಳನ್ನು ತನ್ನೊಳಗೆ ತುಂಬಿಕೊಳ್ಳುತ್ತದೆ. ಇದರಂತೆ ಸೂಕ್ಷ್ಮ ಕಾರಣ ಅಷ್ಟಾವರಣಗಳೇ ಅಷ್ಟಾಂಗವಾಗಿರುವ ಶಿವಾದ್ವೈತಿಯು ಪಂಚಭೂತ-ರವಿ-ಶಶಿ-ಆತ್ಮಗಳೆಂಬ ಅಷ್ಟಸ್ಥೂಲಾಂಗಗಳುಳ್ಳ ಶಿವನಿಗಿಂತ ಶ್ರೇಷ್ಠನೆಂದು ಶಿವಾನು

ಭಾವಿಗಳ ಗ್ರಹಿಕೆ ! ಏಕೆಂದರೆ ವೀರಶೈವನ ಅಷ್ಟಾಂಗಗಳು ಗುರುಸಂಸ್ಕಾರದಿಂದ ತಂತಮ್ಮ ಪ್ರಾಕೃತಿಕತೆಯನ್ನು ಪರಿಹರಿಸಿಕೊಂಡು ಪರಿಶುದ್ಧವಾಗಿರುತ್ತವೆ; ಪರಮಾರ್ಥ ಸ್ವರೂಪವಾಗಿರುತ್ತವೆ.

ಪಾದೋದಕ ಇದು ಜಲವಿಲ್ಲದ ಪಾದೋದ, ಜಲವುಳ್ಳ ಪಾದೋದ ಎಂದು ಎರಡು ಬಗೆ. ಮೊದಲಿನದು ಆಂತರಂಗಿಕ. ಎರಡನೆಯದು ಉಭಯಾತ್ಮಕ. ಆಂತರಂಗಿಕ ಪಾದೋದಕವ ಪಡೆವಾಗ ತನ್ನೊಳಗಿರುವ ಆತ್ಮ–ಪರಮಾತ್ಮರೆ ಶಿಷ್ಯ-ಗುರುಸ್ವರೂಪರಾಗಿ ಅವರಿಬ್ಬರ ಆ ಅಚ್ಚಳಿಯದ ಆನಂದ ಸಂಬಂಧದಿಂದ ಆ ಸಾಸಿರ ತಾವರೆಯ ನಟ್ಟನಡುವಿನಿಂದ ಹೊಮ್ಮಿ ಕಂಗಳೆರಡೆಂಬ ತಳಿರಡಿಗಳ ನಡುವೆ ಅಂದರೆ ತಾರಕದಲ್ಲಿ .ನಿಂದ ಚಿದ್ರಸವೆ ಜಲವಿಲ್ಲದ–ಬಾಹ್ಯಪಾದವಿಲ್ಲದ ಪಾದೋದಕವು. ಪ್ರಣವಸ್ವರೂಪ ಆ ಪರಬ್ರಹ್ಮವೆ ಪದ. ಅದರಿಂದ ಉದಯಿಸಿದ ಕಾರಣ ಪಾದ. ಅದು ಚಿದ್ರಸವಾದುದರಿಂದ ಪಾದೋದಕವೆಂಬ ಹೆಸರು ಅದಕ್ಕೂ ಅನ್ವಯವಾಗುತ್ತದೆ. ಇದನ್ನು ಶಿವಯೋಗಿ ಶಿವಾಚಾರ್ಯನು ಹೀಗೆ ಹೇಳಿದ್ದಾನೆ :

"ಪರಮಾನಂದ ಏವೋಕ್ತಃ ಪಾದಶಬ್ದೇನ ನಿರ್ಮಲಃ
ಜ್ಞಾನಂ ಚೋದಕಶಬ್ದೇನ ಪಾದೋದಕಮಿತಿ ಸ್ಮೃತಂ ।
ಅಥವಾ ಪಾದಶಬ್ದೇನ ಗುರುದೇವ ನಿಗದ್ಯತೇ
ಶಿಷ್ಯಶ್ಚೋದಕಶಬ್ದೇನ ತಯೋರೈಕ್ಯಂತು ದೀಕ್ಷಯಾ
ಪರಸಂವಿತ್ ಪ್ರಕಾಶಾತ್ಮಾ ಪರಮಾನಂದ ಭಾವನಾಂ
ಅಧಿಗಮ್ಯ ಮಹಾಯೋಗೀ ನ ಭೇದಂ ಕ್ವಾಪಿ ಪಶ್ಯತಿ ॥
ದೇಶಕಾಲಾದ್ಯವಚ್ಛೇದ ವಿಹೀನಂ ನಿತ್ಯನಿರ್ಮಲಂ
ಆನಂದಂ ಪ್ರಾಪ್ಯ ಬೋಧೇನ ನಾನ್ಯತ್ ಕಾಂಕ್ಷತಿ ಸಂಯಮೀ ॥"

"ನಿತ್ಯವೆಂಬ ಭಕ್ತನ ಮನೆಗೆ ಘನಚೈತನ್ಯವೆಂಬ ಜಂಗಮ ಬಂದರೆ
ಜಲವಿಲ್ಲದ ಜಲದಲ್ಲಿ ಪಾದಾರ್ಚನೆಯ ಮಾಡಿ.
ಆ ಪಾದೋದಕವೆ ಮಹಾಪಾದೋದಕವಯ್ಯ.
ಆ ಪಾದೋದಕದಲ್ಲಿ ಪರಮಪರಿಣಾಮಿ
ಕೂಡಲಚನ್ನಸಂಗಮದೇವಾ ನಿಮ್ಮ ಶರಣ."   –ಚನ್ನಬಸವಣ್ಣ

'ಪರಮಾನಂದ ಪ್ರಜ್ಞೆಯೆ ಪಾದೋದಕ. ಗುರು-ಶಿಷ್ಯರ ಸಾಂಸ್ಕಾರಿಕ ಐಕ್ಯಭಾವವೆ ಪಾದೋದಕ. ಅದರಿಂದ ಅಂಗನು ಪರಸಂವಿತ್ಪ್ರಕಾಶಾತ್ಮನಾಗಿ ಪರಮಾನಂದ ಭಾವಿಯಾಗಿ ಎಲ್ಲಿಯೂ ಭೇದವೆಣಿಸದೆ ಸಮಭಾವದಿಂದ ಮಹಾಯೋಗಿಯೆನಿಸುತ್ತಾನೆ; ದೇಶಕಾಲಾತೀತವಾದ ನಿತ್ಯ ನಿರ್ಮಲವಾದ ಚಿದಾನಂದಾಮೃತರಸವನ್ನು ಪಡೆದು, ಬೇರೊಂದನ್ನು ಬಯಸದ ಸಂಯಮಿಯಾಗುತ್ತಾನೆ.'

'ಚಿನ್ಮಯಾತ್ಮನಾದ ಚನ್ನಬಸವಣ್ಣನು ಜಲವಿಲ್ಲದ ಜಲದಲ್ಲಿ ಪಾದಾರ್ಚನೆಯ ಮಾಡುವುದನ್ನು ಸೂತ್ರಪ್ರಾಯವಾಗಿ ಸೂಚಿಸಿದ್ದಾನೆ. ಅದನ್ನು ಮಾಡುವ ಭಕ್ತಿ ನಿತ್ಯ, ಮಾಡಿಸಿಕೊಂಬ ಜಂಗಮ ಘನ ಚೈತನ್ಯ. ಅವರಿಂದುಂಟಾದುದು ಮಹಾ ಪಾದೋದಕ. ಅದರದು ಪರಮ ಪರಿಣಾಮ. ಅದನ್ನು ಪರಿಣಮಿಸಿದವನು ಚನ್ನ ಸಂಗನ ಶರಣ.'

ಈ ಉಭಯ ವಾಣಿಯಲ್ಲಿ ಆ ದಿವ್ಯರಸಾಮೃತವಿದೆ; ಆ ದಿವ್ಯ ಸಂವಿತ್ ದೀಪ್ತಿಯಿದೆ. ಆ ಅಪರೋಕ್ಷಾನುಭವ–ಆನಂದಗಳೆರಡರ ಸಂಗಮವಿದೆ. ಅಲ್ಲಿ ಮಿಂದವರು ಅಲ್ಲಿಗೆ ಸಂದಿದವರು ಮಹಾಯೋಗಿ–ಸಂಯಮಿ–ಪರಮ ಪರಿಣಾಮಿ ಆಗುವರು; ಸಂವಿತ್ ಸಂಜೀವಿನಿ ಆಗುವರು. ಅಖಂಡಾನಂದ ತುಂದಿಲರಾಗಿ ಬೇರೊಂದನ್ನು ಬಯಸರು, ಭೇದವನ್ನೆಣಿಸರು.

ಇದೆಲ್ಲ ನಿರುಪಾಧಿಕ ಪಾದೋದಕದ ಮಾತು. ಇನ್ನು ಸೋಪಾಧಿಕ ಪಾದೋದಕ ವನ್ನು ಪರಿಕಿಸೋಣ : ಇಲ್ಲಿ ಗುರು–ಶಿಷ್ಯ ಸಂಬಂಧ, ಪಾದ–ಹಸ್ತ ಸಂಬಂಧ, ಜಲ-ಮಂತ್ರಾದಿಗಳ ಸಂಬಂಧ ಇರುತ್ತವೆ. ಇದರಿಂದಾಗಿ ಇದು ಸೋಪಾಧಿಕವೆನಿಸುತ್ತದೆ ಈ ಪಾದೋದಕದಲ್ಲಿ ಗುರು–ಕ್ರಿಯಾ–ಜ್ಞಾನ ಪಾದೋದಕಗಳೆಂದು ತ್ರಿವಿಧ. ಇವನ್ನೆ ದೀಕ್ಷಾ-ಶಿಕ್ಷಾ-ಮೋಕ್ಷ ಪಾದೋದಕಗಳೆಂದೂ ಹೇಳುತ್ತಾರೆ. ಇವುಗಳಿಂದ ಕ್ರಮವಾಗಿ ತ್ರಿವಿಧಾಂಗಶುದ್ಧ, ತ್ರಿಲಿಂಗ ಸಂಬಂಧ, ತ್ರಿವಿಧ ಕರ್ಮನಾಶಗಳುಂಟಾಗುತ್ತವೆ. ಪಾದೋದ ಕವು ಆಚಾರಲಿಂಗದ ಪ್ರತ್ಯಕ್ಷ ಪರಬ್ರಹ್ಮ: ಪರಮಾಮೃತ ಫಲ.

ಈ ತ್ರಿವಿಧ ಪಾದೋದಕ ಭಿನ್ನವಲ್ಲ, ಏಕವಿಧ. ಗುರುಪಾದೋದಕವೆ ಕ್ರಿಯಾ ಮತ್ತು ಜ್ಞಾನ ಪಾದೋದಕಗಳಾಗುತ್ತವೆ. ಈ ಕ್ರಿಯಾ ಮತ್ತು ಜ್ಞಾನ ಪಾದೋದ ಕಗಳಿಗೆ ಲಿಂಗ-ಜಂಗಮ ಪಾದೋದಕಗಳೆಂದು ಹೇಳಲಾಗುತ್ತದೆ. ಇವು ಸ್ವೀಕಾರ ವಿಧಾನಕ್ರಮದಿಂದ ಮತ್ತೆ ಸ್ಪರ್ಶನ, ಅವಧಾನ, ಆಪ್ಯಾಯನ, ಹಸ್ತ, ಪಂಣಾಮ, ನಿರ್ನಾಮ, ಸತ್ಯೋದಕ ಎಂದು ಏಳುಬಗೆಯಾಗಿ ಒಟ್ಟಾಗಿ ದಶವಿಧಗಳಾಗುತ್ತವೆ.

ಶ್ರೀಗುರುವೆ ಪರಾಕಾಶದ ಪರಮ ಚಿನ್ಮೇಘ. ಆ ಮೇಘದ ಆ ಚಿದ್ರಸವೆ ಚಿದ್ಗಂಗೋದಕ. ಸಚ್ಛಿಷ್ಯನ ಹೃದಯವೆ ಚಿದ್ಭೂಮಿ. ಈ ಸ್ಥಲದಲ್ಲಿ ಆ ವೃಷ್ಟಿ ಗರೆಯಲು ಅಷ್ಟಾವರಣ ರೂಪ ವೃಕ್ಷ ಬೆಳೆದು ಹೆಮ್ಮರವಾಗಿ ಪ್ರಸಾದರೂಪ ಫಲಭರಿತ ವಾಗುತ್ತದೆ. ಆ ಫಲವನುಂಡು ಶಿಷ್ಯನು ಪರಮ ಪರಿಣಾಮಿಯಾಗುತ್ತಾನೆ.

"ತಾನು ಗುರುಲಿಂಗಜಂಗಮದ ಪಾದಕ್ಕೆರಗಿ ಲೀಯವಾದ ಬಳಿಕ ಇದು ಚಿಹ್ನ ನೋಡಯ್ಯಾ : ಗುರು ಲಿಂಗ ಜಂಗಮದ ಪಾದವೆ ತನ್ನ ಸರ್ವಾಂಗದಲಿ ಅಜ್ಯೋತಿ

ದಂತಾಯಿತ್ತಾಗಿ ಅಲ್ಲಿಯೆ ಪಾದಾರ್ಚನೆ, ಅಲ್ಲಿಯೆ ಪಾದೋದಕ ಸೇವನೆ, ಬೇರೆ ಇಲ್ಲವಯ್ಯಾ! ಅದೆಂತೆಂದೊಡೆ ಪರಮಜ್ಞಾನ ಗುರುಲಿಂಗ ಜಂಗಮ ಸಂಬಂಧ ಸಮರತಿಯ ಸೋಂಕಿನಲ್ಲಿ ಪರಮಾನಂದಜಲವೆ ಪ್ರವಾಹವಾಗಿ ಸರ್ವಾಂಗದಲ್ಲಿ ಪುಳಕಿತವಾಗಿ ಹರಿಯುತ್ತಿರಲು ಆ ಪರಮಸುಖಸೇವನೆಯ ಮಾಡುವಲ್ಲಿ ಪಾದೋದಕ ಸೇವನೆಯೆ ಪರಮಾಮೃತ ತೃಪ್ತಿಯಾಯಿತ್ತು ......" ಎಂದು ಮಡಿವಾಳ ಮಾಚಿತಂದೆಗಳು ನಿರೂಪಿಸಿದ್ದಾರೆ.

ಪಾದಾರ್ಚನೆ ಅದೊಂದು ಭಾವಕ್ರಿಯೆ. ಭಾವ ಪ್ರಪತ್ತಿಯಿಂದ ಪಾದಾರ್ಚನೆಯ ಮಾಡಿದಲ್ಲಿ ಭವಪ್ರಳಯ.

"ಸಮಯ ವಿರೋಧವಾದುದೆಂದು ಪಾದಾರ್ಚನೆಯ ಮಾಡುವರಯ್ಯ
ಗುರುಲಿಂಗಜಂಗಮಕ್ಕೆ ಪಾದವಾವುದು, ಅರ್ಚನೆಯಾವುದು—
ಎಂಬ ತುದಿ ಮೊದಲನರಿಯರು.
ಉದಾಶೀನದಿಂದ ಪಾದಾರ್ಚನೆಯ ಮಾಡಿ, ಪಾದೋದಕವ ಧರಿಸಿದಡೆ ಅದೆ ಪ್ರಳಯ;
ಕಾಲಜಲ ಮರ್ಮವನರಿದು ಕೊಂಡೊಡೆ ಅದೇ ತನ್ನ ಭವಕ್ಕೆ ಪ್ರಳಯಕಾಲಜಲ.
ಈ ಉಭಯವ ಭೇದಿಸಿ, ಸಂಸಾರಮಲಿನವ ತೊಳೆದೊಡೆ
ಕೂಡಲ ಚನ್ನಸಂಗಾ ನಿಮ್ಮ ಶರಣ ಬಲ್ಲ."

'ಪಾದೋದಕ'ವನ್ನು 'ಕಾಲಜಲ'ವೆಂದು ರೂಪಕಾಲಂಕಾರದಲ್ಲಿ ಬಳಸಿ ರಹಸ್ಯವನ್ನು ರಮ್ಯವಾಗಿ ಚಿತ್ರಿಸಿದ್ದಾನೆ ಚೆನ್ನಬಸವಣ್ಣ! ಉದಾಶೀನದಲ್ಲಿಯೂ ಉದಾತ್ತ ಭಾವನೆಯಲ್ಲಿಯೂ ಆ ಕಾಲಜಲವು ಪ್ರಳಯ ಜಲವಾಗುತ್ತದೆ. ಆದರೆ ಫಲ ಬೇರೆಬೇರೆ. ಉದಾಶೀನಕಾಲದಲ್ಲಿ ತನ್ನನ್ನೇ ಪ್ರಳಯಿಸುತ್ತದೆ. ಅದೇ ಉದಾತ್ತ ಭಾವನೆಯಲ್ಲಿ ತನ್ನ ಭವವನ್ನು ಪ್ರಳಯಿಸುತ್ತದೆ. ಎಂತಹ ಸುಂದರ ರೂಪಕ! ಎಂತಹ ದಿವ್ಯಕಾವ್ಯ! ಅರ್ಥಪೂರ್ಣ ರೂಪಕ! ಶ್ಲೇಷ! ಚಿನ್ಮಯಾತ್ಮ ಚನ್ನಬಸವಣ್ಣನನ್ನು ಚಿತ್ತಸೂರೆಗೊಂಡು ನಮಿಸುವೆವು.

ಪ್ರಸಾದ ಇದು ಅಷ್ಟಮಾವರಣ. ಅನುಗ್ರಹ, ನಿರ್ಮಳತೆ, ಕಾವ್ಯಗುಣ ಎಂದು ಸಾಮಾನ್ಯವಾಗಿ ಪ್ರಸಾದ ಪದಕ್ಕೆ ಅರ್ಥಗಳಿದ್ದರೂ ಗುರು-ಲಿಂಗ-ಜಂಗಮಾರ್ಪಿತ ಪದಾರ್ಥವು ಪ್ರಸಾದವೆನಿಸುತ್ತದೆ ಅಸಾಮಾನ್ಯವಾಗಿ! ಪ್ರಾಕೃತಿಕ ಪದಾರ್ಥತ್ವ ಪರಿಹರಿಸುವುದೆ ಪ್ರಸಾದ. ಪ್ರಸಾದವಾದ ಬಳಿಕ ಪದಾರ್ಥತ್ವವಿಲ್ಲ, ಪದಾರ್ಥತ್ವವಿಲ್ಲದಲ್ಲಿ ಪ್ರಕೃತಿತ್ವವಿಲ್ಲ. ಪ್ರಕೃತಿತ್ವವಿಲ್ಲದಲ್ಲಿ ಪ್ರವೃತ್ತಿಯಿಲ್ಲ. ಪ್ರವೃತ್ತಿಯಿಲ್ಲದಲ್ಲಿ ಚಿತ್ತವೃತ್ತಿಯಿಲ್ಲ. ಇದಿಲ್ಲದಲ್ಲಿ ಪ್ರಾಪಂಚಿಕ ದುಃಖವಿಲ್ಲ. ದುಃಖರಾಹಿತ್ಯವೆ ದೇವಾನುಗ್ರಹ. ಅದೇ ಪ್ರಸಾದ ಪರಿಣಾಮ. ಅದೇ ಮನೋನೈರ್ಮಲ್ಯ.

ತ್ರಿವಿಧಾಂಗದಲ್ಲಿ ಪ್ರಸನ್ನತೆಯನ್ನು ಹುಟ್ಟಿಸುವುದೆ ಪ್ರಸಾದ. ತನುವಿಕಾರ. ಮನವಿಕಾರ, ಭಾವವಿಕಾರಗಳನ್ನು ಕಳೆವುದೆ ಪ್ರಸಾದ. ಪಾದೋದಕ್ಕಿಂತಲೂ ಪ್ರಸಾದವು ಪರಿಣಾಮಕಾರಿಯಾದುದು, ಪರಮವಾದುದು, ಪೂರ್ಣವಾದುದು. ಪ್ರಸಾದ ಪ್ರಾಪ್ತಿಯೆ ಪರಮ ಸಂಪತ್ತಿ, ಪರಮ ಸಂವಿತ್ತಿ. ಪ್ರಸಾದಸಿದ್ಧಿಯೆ ಪರಮ ಮುಕ್ತಿ-ಎಂಬುದು ಶಿವಾದ್ವೈತ ಸಿದ್ಧಾಂತ. ಜೀವ ಶಿವನಾಗಲು ಅಂದರೆ ಅಂಗ ಲಿಂಗವಾಗಲು ಪ್ರಸಾದವೆ ಪ್ರಾಮುಖ್ಯ. ಒಟ್ಟಿನಲ್ಲಿ ಪ್ರಸಾದವೆಂದರೆ ಪರಿಶುದ್ಧ ಓಗರ, ಮತ್ತು ಪೂಜ್ಯರ ಪರಮನ ಅನುಗ್ರಹ ಹಾಗೂ ತನ್ನ ತ್ರಿಕರಣ ಪ್ರಸನ್ನತೆ! "ನೈರ್ಮಲ್ಯಂ ಮಾನಸೋಲಿಂಗಂ ಪ್ರಸಾದ ಇತಿ ಕಥ್ಯತೆ" ಎಂದಿದೆ ಸಿದ್ಧಾಂತ ಶಿಖಾಮಣಿ.

ಪದಾರ್ಥ ಪ್ರಸಾದ, ಪ್ರಕೃತಿ ಪ್ರಸಾದ ಎಂದು ಎರಡು ಮುಖ್ಯಭಾಗಗಳಿವೆ. ಇವೆರಡು ಮುಂದೆ ತ್ರಿವಿಧ, ಷಡ್ವಿಧ, ಮೂವತ್ತಾರು, ನೂರೆಂಟು, ಇನ್ನೂರಹದಿನಾರು ಬಗೆಗಳಾಗುತ್ತವೆ:

೧. ಪದಾರ್ಥದಿಂದಾದ ಪ್ರಸಾದದೊಳಗಿನ ಪಡಿ ಪದಾರ್ಥವು ರೂಪು ರುಚಿ ತೃಪ್ತಿ ಭೇದದಿಂದ ತ್ರಿವಿಧವಾಗಿಯೂ ಗಂಧ ರುಚಿ ರೂಪು ಸ್ಪರ್ಶ ಶಬ್ದ ತೃಪ್ತಿ ಎಂದು ಆರು ವಿಧವಾಗಿಯೂ ಇರುತ್ತದೆ. ಈ ಆರು ಮತ್ತೆ ಒಂದೊಂದರೊಳಗೆ ಆರಾರು ಹಸುಗೆಯಾಗಿ ಮೂವತ್ತಾರು ಪ್ರಸಾದಗಳಾಗುತ್ತವೆ. ಇವು ಶುದ್ಧ ಸಿದ್ಧ ಪ್ರಸಿದ್ಧ ಭೇದದಿಂದ ನೂರೆಂಟು ಬಗೆಯ ಭಾವಪ್ರಸಾದಗಳಾಗುತ್ತವೆ. ಮರಳಿ ಬಾಹ್ಯಾಭ್ಯಂತರ ಭೇದದಿಂದ ೨೧೬ ಬಗೆಗಳಾಗುತ್ತವೆ.

೨. ಪ್ರಕೃತಿ ಪ್ರಸಾದವು ಸಹ ಶುದ್ಧ ಸಿದ್ಧ ಪ್ರಸಿದ್ಧವೆಂದು ಮೂಬಗೆಯಾಗಿ ಇವನ್ನು ಪರಿವಿಡಿದು ಕಾಯ-ಕರಣ-ಭಾವವೆಂದು, ಸ್ಥೂಲ-ಸೂಕ್ಷ್ಮ-ಕಾರಣವೆಂದು, ತ್ಯಾಗಾಂಗ-ಭೋಗಾಂಗ-ಯೋಗಾಂಗವೆಂದು ಹೇಳಲಾಗುತ್ತದೆ. ಇವೇ ಒಂದೊಂದು ಎರಡೆರಡಾಗಿ ಭಕ್ತ ಮಾಹೇಶಾದಿಯಾಗಿ ಷಡ್ವಿಧವಾಗುತ್ತದೆ. ಈ ಷಡ್ವಿದ ಪ್ರಸಾದದಲ್ಲಿ ಒಂದೊಂದು ಮತ್ತೆ ಆರಾರಾಗಿ ಮೂವತ್ತಾರಾಗುತ್ತವೆ. ಇವು ಸ್ಥೂಲ ಸೂಕ್ಷ್ಮ ಕಾರಣ ಭೇದದಿಂದ ನೂರೆಂಟಾಗುತ್ತವೆ. ಬಾಹ್ಯಾಭ್ಯಂತರ ಭೇದದಿಂದ ಮರಳಿ ೨೧೬ ಪ್ರಸಾದ ಗಳಾಗುತ್ತವೆ.

ಇನ್ನೊಂದು ಬಗೆಯಲ್ಲಿ ಕ್ರಿಯಾಚರಣೆಯಲ್ಲಿ ಪ್ರಸಾದ ಸ್ವೀಕಾರ ಸಮಯದಲ್ಲಿ ಮೇಲೆ ಹೇಳಿದ ಪ್ರತಿಯೊಂದು ಪ್ರಸಾದ ಶುದ್ಧ, ಸಿದ್ಧ, ಪ್ರಸಿದ್ಧ. ಅಪ್ಯಾಯನ. ಸಮಯ, ಪಂಚೇಂದ್ರಿಯ ವಿರಹಿತ. ಅಂತಃಕರಣ ಚತುಷ್ಟಯ ವಿರಹಿತ. ಪ್ರಸಾದಿಯ ಪ್ರಸಾದ, ಸದ್ಭಾವ, ಸಮತಾ, ಜ್ಞಾನಪ್ರಸಾದವೆಂಬುದಾಗಿ ಹನ್ನೊಂದು ಬಗೆಯಾಗಿ ಸಮರ್ಪಿತವಾಗುತ್ತದೆ. ಇವು ಆದಿಕುಳ ಸಮ್ಮತವಾದವೆಂದು ಚನ್ನಬಸವಣ್ಣನ ಅಭಿಪ್ರಾಯ.

ಈ ಹನ್ನೊಂದು ಪ್ರಸಾದಗಳು ಗಂಧಾದಿ ಪದಾರ್ಥವಾರು, ಮತ್ತು ಭಕ್ತಾದಿ ಅಂಗವಾರು ಇವುಗಳಲ್ಲಿ ಒಂದೊಂದು ಆರಾರಾಗಿ ಎರಡೂ ೬೬-೬೬ ಪ್ರಸಾದಗಳಾಗುತ್ತವೆ.

ಗುರು-ಲಿಂಗ-ಜಂಗಮರ ಕರುಣವೂ ಪ್ರಸಾದವೆನಿಸುತ್ತದೆ. ಇವಕ್ಕೆ ಅನುಗ್ರಹ ವೆಂದು ಹೆಸರು. ಇವನ್ನು ಪಡೆಯಲೆಂದೆ ಪದಾರ್ಥ ಮತ್ತು ಪ್ರಕೃತಿ (ಅಂಗ)ಗಳನ್ನು ಪ್ರಸಾದಗಳನ್ನಾಗಿ ಮಾಡಿಕೊಳ್ಳಲಾಗುವುದು. ಆ ಚಿದಾನಂದಾಮೃತವೆ ಪರಮ ಪ್ರಸಾದ. ಅದನ್ನು ಪಡೆವುದೆ ಅಂಗನ ಧ್ಯೇಯ. ಅಂಗಕ್ಕೆ ಬಾಹ್ಯಪ್ರಸಾದ ಬೇಕಾದರೆ ಅಂತರಂಗಕ್ಕೆ ಗುರುಕರುಣರೂಪ ಪ್ರಸಾದಬೇಕು. ಪ್ರಸಾದದಿಂದ ಭಕ್ತಿಭಾವ; ಭಕ್ತಿಭಾವದಿಂದ ಪ್ರಸಾದಪ್ರಾಪ್ತಿ; ಭವದುಃಖ ನಿವೃತ್ತಿ. ಪಾದೋದಕದಿಂದ ಷಡಿಂದ್ರಿಯ ಷಟ್‌ಚಕ್ರಗಳು ಶುದ್ಧಿಯಾದರೆ, ಪ್ರಸಾದದಿಂದ ಷಡ್ಭಾವ ಷಟ್‌ಶಕ್ತಿಗಳು ಏಕಾದಶೇಂದ್ರಿಯಗಳು ಶುದ್ಧವಾಗುತ್ತವೆ, ಪ್ರಬುದ್ಧವಾಗುತ್ತವೆ, ಪರಿತೃಪ್ತವಾಗುತ್ತವೆ.

"ಗುರು ಪ್ರಸಾದ ಚಂದ್ರೇಣ ನಿಷ್ಕಲಂಕೇನ ಚಾರುಣಾ ।
ಯನ್ಮನಃ ಕುಮುದಂ ನಿತ್ಯಂ ಬೋಧಿತಂ ತಸ್ಯ ಕೋ ಭ್ರಮಃ ॥

ಪಾದೋದವನ್ನು ಕಾಲಜಲಕ್ಕೆ ಹೋಲಿಸಿ ಚನ್ನಬಸವಣ್ಣನು ಕಾವ್ಯಮಯವಾಗಿ ಬಣ್ಣಿಸಿ ದಂತೆ, ಶಿವಯೋಗಿ ಶಿವಾಚಾರ್ಯನು ಇಲ್ಲಿ ಪ್ರಸಾದವನ್ನು ಚಂದ್ರನಿಗೂ ಮನವನ್ನು ನೈದಿಲೆಗೂ ಹೋಲಿಸಿ ಹೃದಯಂಗಮವಾಗಿ ಕಾವ್ಯಮಯಕಲೆಯಿಂದ ಬಿತ್ತರಿಸಿದ್ದಾನೆ. ಆಕಾಶ ಚಂದ್ರನಂತೆ ಪ್ರಾಸಾದಿಕ. ಚಂದ್ರನು ಕಲಂಕಿತನಲ್ಲ, ಕ್ಷಯವೃದ್ಧಿಯುಳ್ಳವನಲ್ಲ. ಪ್ರಸಾದಶಶಿಯು ನಿತ್ಯ ನಿಷ್ಕಳಂಕ; ಚಿದ್ರೂಪ-ಚಾರುರೂಪ. ಇದರಿಂದ ಅರಳಿದ ಮನಃಕುಮುದವು ಕಂದುವುದಿಲ್ಲ; ಕುಂದುವುದಿಲ್ಲ. ಭ್ರಮಕೀಟವು ಬೀಳುವುದಿಲ್ಲ. ಆಕಾಶಚಂದ್ರ ಭಾನುವಿನಿಂದ ಪ್ರಕಾಶಿತ; ಈ ಪ್ರಸಾದಚಂದ್ರ ಗುರುಭಾನುವಿನಿಂದ ಪ್ರಕಾಶಿತ. ಇದರಿಂದ ಗುರುಪ್ರಸಾದ ಪಡೆದವನಿಗೆ ಭವರೂಪಕಾಳರಾತ್ರಿಯ ಭಯವಿಲ್ಲ. ಮನವೇ ಘನವಾಗುವಾಗ ಭಯದ ಮಾತೆಲ್ಲಿ?

"ತನುವೇ ಭಾಂಡವಾಗಿ, ಮನವೇ ಸುಯಿಧಾನವಾಗಿ
ಜ್ಞಾನಾಗ್ನಿಯಲ್ಲಿ ಪದಾರ್ಥವ ಮಾಡಿ,
ಶ್ರೋತ್ರ ನೇತ್ರ ಘ್ರಾಣ ಜಿಹ್ವೆ ಸ್ಪರ್ಶನ ಮೂರ್ತಿ ನೀನೇ!
ನಿನ್ನ ಪ್ರಸಾದಕ್ಕೆ ನಮೋನಮೋ ಎಂಬೆ
ಕೂಡಲ ಚನ್ನಸಂಗಮದೇವಾ!"

ಪದಾರ್ಥಪ್ರಸಾದ ಭಾಂಡಪ್ರಸಾದ; ಪ್ರಕೃತಿ(ಅಂಗ)ಪ್ರಸಾದ, ಭಾಜನಪ್ರಸಾದ. ಭಾಜನ ಪ್ರಸಾದಾರ್ಪಣವಿಧಾನ ಈ ವಚನದಲ್ಲಿ ನಿರೂಪಿತವಾಗಿದೆ.

ಆ ಪರಶಿವನ ಪರಮಾನುಗ್ರಹವೆ ಪ್ರಸಾದ. ಆತನ ಆ ಅನುಗ್ರಹದಿಂದ ಪ್ರಸನ್ನನಾದ ಜೀವನೂ ಸಹ ಪ್ರಸಾದಸ್ವರೂಪನಾಗುತ್ತಾನೆ; ಜಗತ್ತೂ ಪ್ರಸಾದವಾಗಿ ಪರಿಣಮಿಸುತ್ತದೆ. ಹೀಗೆ ಈ ಪಿಂಡಾಂಡ-ಬ್ರಹ್ಮಾಂಡಗಳೆರಡನ್ನೂ ಪ್ರಸಾದವನ್ನಾಗಿಸುವುದೇ ಪ್ರಸಾದಿಯ ಮುಖ್ಯ ಗುರಿ. ಅಂತೆಯೆ ಪ್ರಸಾದದ ಚರಮ ಪರಿ. ತಾನು, ತನ್ನ ತನು ಕರಣಗಳು, ತನಗೆ ಬೇಕಾದ ಪಡಿಪದಾರ್ಥಗಳು, ಪ್ರತಿವಿಷಯಗಳು ಮತ್ತು ಮನದ ಸಂಕಲ್ಪಗಳು ಸಹ ಪ್ರಸಾದವಾಗಿ ಪರಿಣಮಿಸುತ್ತವೆ. ಶ್ರೀಗುರುಲಿಂಗಜಂಗಮ ಸ್ವರೂಪ ಪರಮಾನುಗ್ರಹದಿಂದ! ಆದ ಇವನ್ನೆಲ್ಲ ಆ ಪರಶಿವನಿಗೆ ಸಮರ್ಪಿಸಿ ಸತ್ಯ ಸುಖಿಯಾಗಿರುವುದೆ ಪ್ರಸಾದದ ಪ್ರಮುಖಗುಣ. ಅಷ್ಟಾವರಣಾಂಗನ ವಿಶಿಷ್ಟ ವಿಧಾನ. ಅದುವೇ ಪರಿಶುದ್ಧ ಪ್ರಸಾದಾರ್ಪಣ.

ಫಲದ್ವಯ ಸಮಾನ ಧ್ಯೇಯ

ವೀರಶೈವರ ಸಿದ್ಧಿ ಅಥವಾ ಫಲಗಳೆಂದರೆ ಪಾದೋದಕ-ಪ್ರಸಾದ. ಇವೆರಡೂ ಯಾರಿಗೆ ಬೇಡ? ಎಲ್ಲರಿಗೂ ಎಲ್ಲ ಕಾಲಕ್ಕೂ ಬೇಕು; ಸಮವಾಗಿ ಬೇಕು. ಇಲ್ಲಿ ಸಮ ಶಬ್ದಾರ್ಥ ಗಾತ್ರದ್ದಲ್ಲ, ಪಾತ್ರದ್ದು. ಗಾತ್ರದ ಸಾಮ್ಯವನ್ನು ಸಾಧಿಸಲು ಸಾಧ್ಯವಿಲ್ಲ. ಸಾಧುವಲ್ಲ. ಸಾಲದ್ದಕ್ಕೆ ಅದು ಪ್ರಕೃತಿ ವಿರೋಧ. ಒಬ್ಬರು ಉಂಡಷ್ಟನ್ನು ಇನ್ನೊಬ್ಬರು ಉಂಡಾಗಬೇಕೆಂದಲ್ಲ. ಪಂಕ್ತಿಯಲ್ಲಿ ಎಲ್ಲರಿಗೂ ಒಂದೆ ಬಗೆಯ ಪ್ರಸಾದದ ವಿರ್ಪಾಟಿರ ಬೇಕೆಂದರ್ಥ. ಬಲ್ಲಿದರಿಗೆ ಬೇರೆ, ಬಡವರಿಗೆ ಬೇರೆ ಇರಬಾರದು.

ಎಲ್ಲರ ಜೀವನವಾದ ನೀರು ಅನ್ನಗಳು ಶುದ್ಧವಾದವುಗಳಿರಬೇಕು. ಸಂಸ್ಕಾರ ಪಡೆದವುಗಳಿರಬೇಕು. ಹೀಗಾದರೆ ಒಮ್ಮತ-ಒಳಿತು ಮತಗಳು ಮೂಡಿಬರಲು ಅನುವಾಗುತ್ತದೆ—ಎಂಬುದನ್ನು ಕಂಡುಹಿಡಿದು ನೀರನ್ನು ಪಾದೋದಕವನ್ನಾಗಿ, ಓಗರವನ್ನು ಪ್ರಸಾದವನ್ನಾಗಿ ಮಾಡಿಕೊಡುವ-ಕೊಂಬುವ ಸಂಸ್ಕಾರವನ್ನು ಆಧ್ಯಾತ್ಮ ಸಾಧಕರಿಗೆ ಅಳವಡಿಸಿದರು ವೀರಶೈವರು. 'ಆಹಾರಶುದ್ಧೌ ಸತ್ವಶುದ್ಧಿಃ' ಎಂಬುದನ್ನು ಯಾರು ಒಪ್ಪುವುದಿಲ್ಲ? ಅಂತೆಯೆ ಜಲಶುದ್ಧಿಯೂ ಸತ್ವಶುದ್ಧಿಗೆ ವೃದ್ಧಿಗೆ ಸಾಧನ. ಸಮ ಶುದ್ಧಿಯುಳ್ಳ ಇವೆರಡನ್ನು ಒಂದುಗೂಡಿ ಒಮ್ಮನದಿಂದ ನಿರ್ಮಲಮನದಿಂದ ಸ್ವೀಕರಿಸುವವರೆಲ್ಲರೂ ಒಂದು ಧರ್ಮಿಗಳಾಗಿ ಬಾಳಬಲ್ಲರೆಂಬುದನ್ನು. ಬಾಳಿದರೆ ಬಲ ಫಲಗಳನ್ನು ಪಡೆಯಬಲ್ಲರೆಂಬುದನ್ನು ವೀರಶೈವರು ಸಮೀಚೀನವಾಗಿ ಆಲೋಚಿಸಿದ್ದಾರೆ; ಆಚರಣೆಗೆ ತಂದಿದ್ದಾರೆ. ನಮ್ಮೀ ಅಭಿಪ್ರಾಯಕ್ಕೆ ಈ ಅಥರ್ವಣ ಶ್ರುತಿಯು ಪೋಷಕವಾಗಿದೆ:

"ಓಂ ಸಮಾನೀ ಪ್ರಪಾ, ಸಹವೋಽನ್ನಭಾಗಃ
ಸಮಾನೇ ಯೋಕ್ತ್ರೇ ಸಹ ವೋ ಯುನಜ್ಮಿ
ಸಮ್ಯಂಚೋಽಗ್ನಿಂ ಸಪರ್ಯತ—ಅರಾ ನಾಭಿಮಿವಾಭಿತಃ ॥"

'ನಿಮ್ಮೆಲ್ಲರ ಅರವಟ್ಟಿಗೆಗಳು ಅಂದರೆ ಪಾನೀಯಗಳು ಸಮಾನವಾಗಿರಲಿ. ನಿಮ್ಮೆಲ್ಲರ ಆಹಾರಗಳು ಸಮಾನವಾಗಿರಲಿ; ಸಮ್ಮಿಲಿತವಾಗಿರಲಿ. ನಿಮ್ಮನ್ನು ಒಟ್ಟುಗೂಡಿಸಿ ಧರ್ಮಕಾರ್ಯನಿರತರನ್ನಾಗಿ ಮಾಡುತ್ತೇನೆ. ಅರಗಳು ಚಕ್ರದ (ಗಾಲಿಯ) ನಾಭಿಯ ಸುತ್ತಮುತ್ತ ಇರುವಂತೆ, ನೀವೆಲ್ಲ ಒಂದೇ ಮನಸ್ಸಿನಿಂದ ಒಂದೆಡೆಗೆ ಸೇರಿ ಜ್ಞಾನಮಯನಾದ ಶ್ರೀರುದ್ರ(ಲಿಂಗ)ದೇವನನ್ನು ಆರಾಧಿಸಿರಿ' –ಎಂದು ಹೇಳಿದೆ. ಈ ವಿಚಾರವು ನಮ್ಮ ಪಾದೋದಕ ಪ್ರಸಾದರೂಪ ಫಲದ್ವಯದ ಸಮಾನ ತತ್ತ್ವವನ್ನೆ ಅನುಸರಿಸಿದೆಯಾದರೂ ಸಾಂಸ್ಕಾರಿಕವಾಗಿ ಅನುಸರಿಸಿಲ್ಲ. ವೀರಶೈವ ಮತದಲ್ಲಿ ಪಾದೋದ ಪ್ರಸಾದ ಶುದ್ಧಿಯ ಭಾವಪೂರ್ಣ ಪ್ರಕ್ರಿಯೆ ಇನ್ನೂ ಮುಂದುವರಿದಿದೆ. ವಿಶಿಷ್ಟ ಸಂಸ್ಕಾರದಿಂದ ಕೂಡಿದೆ. ಅಲ್ಲದೆ ಪಾದೋದ-ಪ್ರಸಾದಗಳು ಪರಬ್ರಹ್ಮಸ್ವರೂಪವೆಂದು ಸಾರಿದೆ. ಸಚ್ಚಿದ್ರಸವೆ ಪಾದೋದಕ, ಸಮರಸಾನಂದವೆ ಪ್ರಸಾದ ಎಂದು ಹೇಳುವುದರಿಂದ ವೀರಶೈವದ ಭಾವ ಔನ್ನತ್ಯ ಅಭಿವ್ಯಕ್ತವಾಗುತ್ತದೆ. ಬಾಹ್ಯದಲ್ಲಿ ಸಮಾನ ರೂಪದಲ್ಲಿದ್ದ ಫಲದ್ವಯ ಅಂತರಂಗದಲ್ಲಿ ರಸ ಸಮನ್ವಯಗೊಂಡು ಸಮರಸಕ್ಕೇರುತ್ತದೆ.

ಪಾದೋದಕ ಪ್ರಸಾದಗಳ ವಿನಿಯೋಗ ನಡೆವಲ್ಲಿ ಒಟ್ಟಾಗಿ ಸೇರಿ, ಒಳಿತಾದ ಭಾವನೆಯಿಂದ ಕೂಡಿರೋಣವಾಗಿರುತ್ತದೆ. ಪ್ರತ್ಯಕ್ಷ ಶಿವಸ್ವರೂಪರಾದ ಶ್ರೀಗುರುಲಿಂಗ ಜಂಗಮರ ಆರಾಧನೆಯಲ್ಲಿ ಆಸಕ್ತರಾಗಿ ಅನುಗ್ರಹಕ್ಕೆ ಅರ್ಹರಾಗಿರುವುದಲ್ಲದೆ, ಪರಿಶುದ್ಧವೂ ಪರಬ್ರಹ್ಮಸ್ವರೂಪವೂ ಆದ ಅವರ ಪಾದೋದಕ-ಪ್ರಸಾದಗಳು ಎಲ್ಲರಿಗೂ ಸಮವಾಗಿಯೆ ಸಂಪ್ರಾಪ್ತವಾಗುತ್ತವೆ; ಸಂತೃಪ್ತಿಯನೆಸಗುತ್ತವೆ. ಸಂತೃಪ್ತಿಯೆ ಜೀವನ್ಮುಕ್ತಿ; ಸದ್ಯೋನ್ಮುಕ್ತಿ. ಇದಕ್ಕಿಂತ ಉತ್ಕೃಷ್ಟ ಉನ್ನತ ಧ್ಯೇಯವಿದೆಯೆ? ಧರ್ಮವಿದೆಯೆ?

ಹೀಗೆ ಶಿಷ್ಟವಾದ ಅಷ್ಟಾವರಣಗಳಿಂದ ಒಗ್ಗೂಡಿ ಒಂದು ಅಂಗವಾಗುತ್ತದೆ. 'ಅಂ-ಗಚ್ಛತೀತಿ ಅಂಗಃ' ಅಂದರೆ ಆ ಪರಶಿವಸ್ವರೂಪ ಲಿಂಗವನ್ನು ಕುರಿತು ಗಮಿಸಲು ಸಮರ್ಥವಾದ ಸನ್ನದ್ಧವಾದ ಶುದ್ಧ ಪಿಂಡವೆ ಅಂಗ. ವೀರಶೈವ ದಾರ್ಶನಿಕರು 'ಅಂಗ' ನಿರೂಪಣೆಯನ್ನು ಪರಿಣತತೆಯಲ್ಲಿ ಪರಿಭಾಷೆಯಲ್ಲಿ ಮಾಡಿ ತೋರಿದ್ದಾರೆ. ಇದು ವ್ಯಕ್ತಿ ನಿಷ್ಠವೂ ಅಹುದು; ವೀರಶೈವಮತನಿಷ್ಠವೂ ಅಹುದು. ವ್ಯಕ್ತಿಗಳ ಸಮೂಹ ನಿಷ್ಠವ್ಯಕ್ತಿತ್ವ ವೀರಶೈವಮತಕ್ಕಿದೆ. ಇದು ಸಮಷ್ಟಿನಿಷ್ಠ ವ್ಯಕ್ತಿತ್ವ. ವ್ಯಕ್ತಿಗಳ ಅಂಗತ್ವವೆ ಮತದ್ದು. ಸಮರಸದತ್ತ ಸಾಗುವುದೆ ಅಂಗತ್ವದ ಅಚ್ಚ ಗುರಿ; ನಿಚ್ಚ ಗುರಿ. ಇದು ವ್ಯಕ್ತಿಗಳಿಂದ ಸಾಧಿತವಾಗುತ್ತದೆ. ವಿಶಿಷ್ಟ ಗುಣಕ್ರಿಯೆಗಳಿಂದ ಸಾಧಿತವಾಗುತ್ತದೆ. ಸಾಧಿಸಲು ಬೇಕು ಚೇತನ. ಆ ಚೇತನವೆ ಪ್ರಾಣ. ಆ ಪ್ರಾಣವೇ ಆಚಾರ.

ಅಂಗವಿಕಾಸಕ್ಕೆ ಅಂಗಪ್ರಕಾಶಕ್ಕೆ ಅಂಗಲಿಂಗ ಸಮರಸಕ್ಕೆ ಆಚಾರ ಆಕರ ಮತ್ತು ಚೇತನ. ಅಷ್ಟಾವರಣಾಂಗರೂಪ ಮಾಮರದ ಬೇರಿಗೆ ಬೇಕಾದ ನೀರು ಕಸುವು ಆಚಾರ. ಸರ್ವಾಂಗ ಸಲ್ಲಕ್ಷಣ ಸಂಯೋಜನೆಗೆ ಸಂಸ್ಕರಣ ಸಂವರ್ಧನೆಗೆ ಅವಶ್ಯ ಆಚಾರ.

ಪಂಚಾಚಾರವೇ ಪಂಚಪ್ರಾಣ; ಸಂಹಿತ ಸಂವಿಧಾನ

ಸದಾಚಾರ, ಶಿವಾಚಾರ, ಲಿಂಗಾಚಾರ, ಗಣಾಚಾರ, ಭೃತ್ಯಾಚಾರ ಇವು ಪಂಚಾಚಾರಗಳು. ಇವು ವೀರಶೈವಮತದ ಸಂಹಿತ ಸಂವಿಧಾನ. ಅಷ್ಟಾವರಣಾಂಗ ನಿಗೆ ಇವ ಪ್ರಾಣ. ಸಾಮಾಜಿಕರ ಶಿಷ್ಟಾಚಾರಕ್ಕಾಗಿ ಶಿಷ್ಟ ಸುಖಕ್ಕಾಗಿ ಆಯ್ದುಕೊಂಡ ಐದು ಆಚಾರ ಅತ್ಯುತ್ತಮ ಕ್ರಮ, ಅತ್ಯುತ್ತಮ ನಿಯಮ, ಒಳ್ಳೆಯ ಕಟ್ಟು, ವಿಶಿಷ್ಟ ವ್ಯವಸ್ಥೆ: ಮತ್ತು ಪವಿತ್ರ ಪದ್ಧತಿ ರೀತಿ. ಯುಕ್ತ ಯೋಜನೆ, ಸೂಕ್ತ ನಿಬಂಧನೆ. 'ಸಂವಿಧಾನ' ಪದದ ಅರ್ಥಗಳೆ ಇವು. ಪಂಚಾಚಾರಗಳು ಪರಿಶೀಲಿಸಿ ದಲ್ಲಿ ರಾಜಕೀಯ (ರಾಷ್ಟ್ರೀಯ) ಸಂವಿಧಾನಗಳಿರುವಂತೆ ಸಾಮೂಹಿಕವಾಗಿಯೂ ಇವೆ. ಇವು ಸಾಮಾಜಿಕರೆಲ್ಲರಿಗೂ ಸಂಬಂಧಿಸಿದವು; ರೀತಿ ನೀತಿಗಳಿಗೆ ಸಂಬಂಧಿಸಿದವು. ಒಂದು ಸುವ್ಯವಸ್ಥೆಯನ್ನು ಸಾಮಾಜಿಕರಲ್ಲಿ ರೂಪಿಸುವಂತಹವು. ಪ್ರತಿಯೊಬ್ಬರ ಜೀವನಕ್ರಮ ನಿಯಮಬದ್ಧವಾಗಿ ನಿರ್ಮಲವಾಗಿ ಸಾಗಲು ಸಹಾಯಕಗಳು. ಪಂಚಾ ಚಾರಗಳು ವಿಚಾರ ವಿರಹಿತಗಳಲ್ಲ. ವೈಚಾರಿಕ ಯೋಜನೆಯುಳ್ಳವುಗಳು. ವೈಚಾರಿಕ ಶೀಲಗಳು. ಇವುಗಳ ವಿಂಗಡಣ-ಸಂಗಡಣಗಳಲ್ಲಿ ವಿವೇಚನೆಯಿದೆ-ನಿರೀಕ್ಷಣೆಯಿದೆ ಇವು ವ್ಯಕ್ತಿ-ಸಮಾಜಗಳೆರಡಕ್ಕೂ ಪರಸ್ಪರ ಪೂರಕಗಳು; ಸಮ್ಮಿಳನಸಂವರ್ಧನ ಕಾರಣ ಗಳು. ಸ್ವಯ ಜೀವನದೊಡನೆ ಸಾಮಾಜಿಕ ಜೀವನವನ್ನು ಸಕ್ರಮಗೊಳಿಸಿ ಸತ್‌ಸಾಧನ ವನ್ನು ರೂಪಿಸುವಂತಹುಗಳು; ಸತ್‌ಸಂಸ್ಕೃತಿಯನ್ನು ಏರ್ಪಡಿಸುವಂತಹುಗಳು. ಆತ್ಮದ ಒಳಿತಿಗೂ ಪ್ರಗತಿಗೂ ಸಾಮಾಜಿಕರ ಒಗ್ಗಟ್ಟಿಗೂ ಸಹಾಯಕಗಳು. ಗಣಾಚಾರ ಸಮಾಜ ದಿಂದ ಒಡೆದು ಹೋಗುವವರನ್ನು ಹೋಗದಂತೆಸಗಿ ಒಂದುಗೂಡಿಸಿ ಬಾಳಿಸುವ ಒಳಿತಾದ ದೃಷ್ಟಿಯುಳ್ಳದು. ಆರ್ಥಿಕವಾಗಿ ಆಧ್ಯಾತ್ಮಿಕವಾಗಿ ಅನುಕೂಲ ಕಲ್ಪಿಸುವ ಆಚಾರವದು. ಗಣತ್ವವನ್ನು ಉಳಿಸುವ ಗಣನೀಯ ಆಚಾರ ಗಣ್ಯಾಚಾರ. ಭೃತ್ಯಾಚಾರ ವಿನಯ ನಿರಹಂ ಕಾರಗಳ ಪಾವನ ಪ್ರೇಮದ ಪ್ರತೀಕ. ಪಂಚಾಚಾರಗಳು ಪವಿತ್ರ ಜೀವನ ಪ್ರೇರಣ ಮೌಲ್ಯಗಳು. ಶೈವೀ ತಾಂತ್ರಿಕ ವಿಧಾನಗಳು. ನಿಯಮ ನಿಬಂಧನ ರೀತಿಗಳು. ಸದ್ವೃತ್ತಿ ಸಂವರ್ಧನ ಪದ್ಧತಿಗಳು.

ಪಂಚಾಚಾರಗಳು ವೈಯಕ್ತಿಕದೊಡನೆ ಸಾಮಾಜಿಕ ಸಚ್ಚಾರಿತ್ರವನ್ನು ರೂಪಿಸಿ, ಅಚ್ಚ ಆಗುಹೋಗುಗಳನ್ನು, ಅಚ್ಚ ಆಶೋತ್ತರಗಳನ್ನು ಬಿಂಬಿಸುತ್ತವೆ. ಸ್ವಯತಂತ್ರ ಸಮಾಜ ತಂತ್ರಗಳೆರಡರಿಂದ ನಿಯೋಜಿತವಾಗಿವೆ. ವೈಯಕ್ತಿಕ ಸ್ವಾತಂತ್ರ್ಯವನ್ನು ಅಪಹರಿಸದೆ ಸಾಮೂಹಿಕತೆಯನ್ನು ರೂಪಿಸುತ್ತವೆ. ಮಾನವೀಯ ಮೂಲಭೂತ ಪ್ರಕೃತಿತ್ವವನ್ನು ಪದ್ಧತಿಯನ್ನು ಮೀರದೆ ಪ್ರಕೃಷ್ಟರನ್ನಾಗಿಸುತ್ತವೆ. ಸದಾ ಸತ್ ಭಾವವುಳಿವಂತೆ, ಸದಾ–ಶಿವತ್ವವುಳಿವಂತೆ, ವಿಶುದ್ಧ ವಿಶಾಲಭಾವದ ಚೈತನ್ಯವುಂಟಾ- ಗುವಂತೆ ಮಾಡುತ್ತವೆ. ಸತ್ ಸಂಸ್ಕಾರಕ್ಕೆ ಸದಾಚಾರ, ಶಿವಾಚಾರ, ಸದ್ವಿಚಾರ, ಸತ್ವಾಹಾರ ಆವಶ್ಯಕಗಳು. ಆಚಾರಗಳಿಲ್ಲದೆ ಅಷ್ಟಾವರಣಗಳಾಗವು.

"ಆಚಾರವಿಲ್ಲದ ಗುರು ಭೂತಪ್ರಾಣಿ. ಆಚಾರವಿಲ್ಲದ ಲಿಂಗ ಶಿಲೆ
ಆಚಾರವಿಲ್ಲದ ಜಂಗಮ ಮನುಜ. ಆಚಾರವಿಲ್ಲದ ಪಾದೋದಕ ನೀರು.
ಆಚಾರವಿಲ್ಲದ ಪ್ರಸಾದ ಎಂಜಲು. ಆಚಾರವಿಲ್ಲದ ಭಕ್ತ ದುಷ್ಕರ್ಮಿ.
ಶಿವಪದವನೇರುವೊಡೆ ಗುರು ತೋರಿದಾಚಾರವೇ ಸೋಪಾನವಯ್ಯಾ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ !"

"ತನುವೆಂಬ ಏರಿಗೆ, ಮನವೆಂಬ ಕಟ್ಟೆ;
ಆಚಾರವೆಂಬ ಸೋಪಾನದಿಂದ, ಪರಮಾನಂದವೆಂಬ ಜಲವ ತುಂಬಿ,
ಕೆರೆಯ ಕಟ್ಟಬಲ್ಲವರಾರನೂ ಕಾಣೆ;
ನಾನು ಕಟ್ಟಿದ ಕೆರೆ ಸ್ಥಿರವಾಯಿತ್ತು ಗುಹೇಶ್ವರಾ, ನಿಮ್ಮಾಣೆ"

"ಆಚಾರವನರಿಯದೆ, ವಿಭವವಳಿಯದೆ,
ಕೋಪವಡಗದೆ, ತಾಪ ಮುರಿಯದೆ;
ಬರಿದೆ ನೆಯ್ದ ಹೊರಸಿನಂತೆ ಬೆಬ್ಬಳಿಸಿ,
ಬೆಚ್ಚನೆ ಬೆರೆವರ ಕೇಡಿಂಗೆ ನಾನು ಬೆರಗಾದೆನು ಕಾಣಾ ಗುಹೇಶ್ವರಾ!"

"......ಅಂತರಂಗದ ಅರಿವಿಂಗೆ ಆಚಾರವೇ ಕಾಯ;
ಆಚಾರಕಾಯವಿಲ್ಲದಡೆ ಅರಿವಿಂಗೆ ಆಶ್ರಯವಿಲ್ಲ
ಅರಿವು ಆಚಾರದಲ್ಲಿ ಸಮವೇಧಿಸಿದ ಲಿಂಗೈಕ್ಯನ
ಕ್ರಿಯಾಬದ್ಧನೆಂದು ನುಡಿದರೆ ಪಂಚಮಹಾಪಾತಕ......"

ಶಿವತ್ವಕ್ಕೇರಲು ಅಂದರೆ ಶಿವತ್ವವನ್ನು ಮೈಗೂಡಿಸಿಕೊಳ್ಳಲು, ಪರಮ ಶಿವಾನಂದ ತನ್ನೊಳಗೆ ನೆಲೆ ನಿಲ್ಲಲು, ದುರ್ಗುಣ ದುರಾಚಾರಗಳು ದೂರಾಗಲು, ಕೇಡುಕಡೆಗಾಣಲು, ಅರಿವು ಅಳವಡಲು, ಲಿಂಗದಲ್ಲಿ ಅವಿರಳ ಭಾವವುಂಟಾಗಲು ಆಚಾರ ಅವಶ್ಯವೆಂಬಾಶಯವು ಈ ವಚನಗಳಲ್ಲಿ ಅಭಿವ್ಯಕ್ತವಾಗಿದೆ. ಆಚಾರವಿಲ್ಲದಲ್ಲಿ ಅರಿವಿರದು.

ವೀರಶೈವಮತದಲ್ಲಿ ಪಂಚಾಚಾರ ಪ್ರಣಾಳಿಕೆ ಅದೊಂದು ಸಾರ್ವಭೌಮವ್ರತ. ವೈಯಕ್ತಿಕ ಮತ್ತು ಸಾಮಾಜಿಕ ಸರ್ವಾಂಗಗಳಿಗೆ ಸಂಸ್ಕಾರವೀವ ಸಂವಿತ್ಕಳೆಯನೀವ ಸಲ್‌ಸೋಂಪಿ. ಮಾಂಗಳಿಕ ಮೌಲ್ಯಗಳನ್ನು ಸಾರ್ವಕಾಲಿಕ ಸತ್ಯಗಳನ್ನು ಮೈಗೂಡಿಸುವ ಸಂಹಿತ ಸಂವಿಧಾನ. ಮೈ ಮಡಿಯೊಡನೆ ಮಾನಸಿಕ ಮಡಿಯನ್ನೂ ಜೈವಿಕ ಮಡಿಯನ್ನೂ ಕೈಗೂಡಿಸುವ ಸಂವಿತ್‌ಸಂಸ್ಕಾರ. ಲಿಂಗಾಚಾರ ಜೈವಿಕ ಸಂಸ್ಕಾರಕ್ಕೆ ಮೀಸಲಾದ ಆಚಾರ. ಶ್ರದ್ಧೆ ನಿಷ್ಠೆ ಅವಧಾನಗಳನ್ನು ಸ್ಥಾಯಿಗೊಳಿಸುವ ಸದ್‌ಭೂಮಿಕೆ. ಸಾಮಾಜಿಕರ ಸಚ್ಚಾರಿತ್ರಕ್ಕೆ ಸಕ್ರಮತೆಗೆ ಸುಖಪ್ರಯಾಣಕ್ಕೆ ಹೆದ್ದಾರಿ. ಶೀಲಸಂವರ್ಧನೆಗೆ ಸತ್ವದಾಯಕ ದ್ರವ್ಯ. ಸಮಾಜ ಧರ್ಮಕ್ಕೆ ಅಂದರೆ ಕರ್ತವ್ಯಗಳಿಗೆ ಆಗರ. ಅಧ್ಯಾತ್ಮಿ-

ಕಾಚರಣೆಗೆ ಆಕರ. ನೈತಿಕ ನಿಲಯ; ನೈಜ ಸ್ವಾತಂತ್ರ್ಯೋದಯ. ಜೀವನವಾಹಿನಿ ನೇರವಾಗಿ ಪರಿದು ಗುರಿ ಸೇರಲು ತಕ್ಕ ತೀರಗಳು ಆಚಾರಗಳು. ನೈತಿಕ ತತ್ತ್ವದ ಮೇಲೆ ನೇರವಾಗಿ ನಡೆಸುವ ಜೀವನ ವಿಧಾನಗಳು. ಜೀವನದಲ್ಲಿ ಪವಿತ್ರ ಪ್ರಾಮಾಣಿಕ-ತೆಯನ್ನು ಪುರೋಹಿಸುವ ಸಂವಿಧಾನಗಳು. ನಿರಾಡಂಬರ ದಯಾಮಯ ನಿಸ್ವಾರ್ಥ ಜೀವನ ಸಾಧನಗಳು. ಭಕ್ತರಾದಿಯಾಗಿ ಗುರು ಜಂಗಮರೆಲ್ಲರೂ ಆಚರಿಸತಕ್ಕವುಗಳು. ಸದಾಚಾರ ಸಾರ್ವಜನಿಕ.

ಸಾಮಾಜಿಕರ ಜೀವನವನ್ನು ಪ್ರಕೃಷ್ಟವಾದ ಪ್ರಗತಿಯತ್ತ ಸಾಗಿಸಲು ಸಮರ್ಥವಾದ ಸಮ್ಯಕ್ ವಿಧಾನವುಳ್ಳ (ಸಂ-ವಿಧಾನವುಳ್ಳ) ಪಂಚಶೀಲಗಳ ಸಂಹಿತೆಯನ್ನು ಪೂರ್ವದ ವೀರಶೈವಾಚಾರ್ಯರು ಸೃಜಿಸಿರುವರು. ಇವುಗಳಿಂದ ವ್ಯಕ್ತಿ ಸಮಾಜಗಳೆರಡರ ಶುದ್ಧಿ ಅಭಿವೃದ್ಧಿ ಅಳವಡುತ್ತವೆ. ವ್ಯಕ್ತಿನಿಷ್ಠ ನೀತಿರೀತಿಗಳು ಸಾಮಾಜಿಕ ನೀತಿ ರೀತಿಗಳು ವ್ಯಕ್ತಿ ಜೀವನ ವ್ಯಕ್ತಿನಿಷ್ಠ ಮಾತ್ರವಲ್ಲ. ಅದು ತನ್ನ ಕೌಟುಂಬಿಕ ಮತ್ತು ಸಾಮಾಜಿಕ ಜೀವನಾನುಸಂಗಿಯೂ ಅಹುದು. ಸಮಾಜ ಜೀವನ ಸಾಮಾಜಿಕರ ಜೀವನ ಪೋಷಿತ; ಪ್ರಕಾಶಿತ.

ಸಾಮಾಜಿಕರು ದುರಾಚಾರಗಳನ್ನು ದುಶ್ಚಟಗಳನ್ನು ದುರ್ಬುದ್ಧಿಯನ್ನು ದರ್ಪ ದೌರ್ಜನ್ಯಗಳನ್ನು ಬಿಡಲು ಈ ವೀರಶೈವ ಆಚಾರಸಂಹಿತೆ ಸಹಕಾರಿಯಾಗಿದೆ. ಭಾವ ಜೀವನಕ್ಕೆ ಭವ್ಯವಾದ ವ್ಯಕ್ತಿತ್ವ ವಿಕಾಸಕ್ಕೆ ಸಾರ್ವತ್ರಿಕವಾದ ಸಾಮಾಜಿಕ ಸಂಘಟನೆಗೆ ಬೇಕಾದ ಆಚಾರ ವಿಚಾರಗಳಸ ಂವಿಧಾನಗಳು ಸಾಕಷ್ಟಿವೆ. ಅರುವತ್ತುಮೂರು ಶೀಲಗಳು ಈ ದಿಸೆಯಲ್ಲಿ ಗಮನಾರ್ಹವಾದವುಗಳು. ಅವು ರಾಷ್ಟ್ರಜೀವನಕ್ಕೂ ಉಪಕಾರಕಗಳು. ಸದಾಚಾರ, ಶಿವಾಚಾರ,...ಗಣಾಚಾರ, ಭೃತ್ಯಾಚಾರಗಳು ಕೇವಲ ಸಾಮಾಜಿಕ ಪರಿಸರಕ್ಕೆ ಬೇಕಾದವುಗಳಲ್ಲ; ಜೊತೆಗೆ ರಾಷ್ಟ್ರೀಯ ಜೀವನಕ್ಕೂ ವಿಶ್ವಜೀವನಕ್ಕೂ ಬೇಕಾದವುಗಳು. ಇವಿದ್ದರೆ ರಾಷ್ಟ್ರ ಭಕ್ತರಲ್ಲಿ ಭ್ರಷ್ಟಾಚಾರಗಳು ತಲೆಯೆತ್ತಲಾರವು; ಕಸದಂತೆ ಮುಳ್ಳು ಪೊದೆಗಳಂತೆ ಬೆಳೆದು ನಿಲ್ಲಲಾರವು. ವಿಶ್ವಕುಟುಂಬಿಗಳಾಗುವವರಿಗಂತೂ ಇವು ಬೇಕೇ ಬೇಕು. ಬ್ರಹ್ಮಾಂಡವನ್ನು ಬೆಳಗಲು ಹೇಗೆ ರವಿ ಶಶಿಗಳೋ ಹಾಗೆ ಮಾನವನ ಪಿಂಡಾಂಡವನ್ನು ಬೆಳಗಲು ಸದಾಚಾರ–ಭೃತ್ಯಾಚಾರಗಳು; ಶಿವಾಚಾರ-ಗಣಾಚಾರಗಳು. ಸದಾಚಾರದಿಂದ ಸದಾಕಾಲ ಆಚಾರವಂತನ ಅಂಗಾಂಗಗಳು ಸತ್ ಕ್ರಿಯಾಕಿರಣಗಳಿಂದ ಕಂಗೊಳಿಸುತ್ತವೆ; ಜೀವಂತತೆಯಿಂದ ಜ್ವಲಂತವಾಗಿರುತ್ತವೆ. ಭೃತ್ಯಾಚಾರದಿಂದ ಮದ ಮತ್ಸರಗಳು ಗರ್ವಾಹಂಕಾರಗಳು ತೊಲಗುತ್ತವೆ. ಶಿವಾಚಾರದಿಂದ ಸರ್ವಾಂಗವು ಶಿಖಿಕಳೆಯಿಂದ ಶೋಭಿಸುತ್ತದೆ. ಗಣಾಚಾರದಿಂದ ಪ್ರಜಾಹಿತದಲ್ಲಿ ಸದಾ ನಿರತ ನಾಗಿರುತ್ತಾನೆ. ಪ್ರಜಾಸತ್ತೆ ಜೀವಂತವಾಗಿರುತ್ತದೆ. ಸದಾಚಾರ–ಶಿವಾಚಾರಶೀಲನು ಸೂರ್ಯಚಂದ್ರರೊಂದಾಗಿ ಇರುವಂತಿರುತ್ತಾನೆ. ಅಶುದ್ಧಿ ಅಜ್ಞಾನಗಳಿಗೆ ಅವಕಾಶವಿರದು.

ಗಣಾಚಾರ-ಭೃತ್ಯಾಚಾರಶೀಲನು ಹಾಲುಜೇನು ಬೆರೆತಂತಿರುತ್ತಾನೆ. ಆತನಿಂದ ಸಮಾಜ ದೇಶ ಪುಷ್ಟಿಗೊಳ್ಳುತ್ತವೆ; ಸಂತುಷ್ಟಗೊಳ್ಳುತ್ತವೆ, ಸ್ವಾರ್ಥ ಸಂಕುಚಿತತೆಗಳಿಗೆ ಇಂಬಿರದು. ಕುತ್ಸಿತ ಗುಣಕರ್ಮಾಂಧಕಾರಕ್ಕೆ ಆತನಲ್ಲಿ ಸಂದಿರದು. ಆಚಾರಶೀಲತೆ ಅವಿಭಾಜ್ಯ ಅಂಗವಾಗಿ, ಅವಿರಳ ಸಂಗವಾಗಿ ಸಂಗಡಿಸಿರುತ್ತದೆ. ಸದಾಕಾಲ ಶುದ್ಧತೆ ಸ್ಪಂದಿಸುತ್ತಿರುತ್ತದೆ. ಆಚಾರವಂತನ ಅಂಗ ಪರುಷಮಣಿ ಗುಣಕ್ರಿಯಾನ್ವಿತವಾಗಿರುತ್ತದೆ. ಶಿವೇತರ ಕ್ಷತಿಯುಂಟಾಗಿ ಸಿದ್ಧ ಶೀಲವಂತನೊಂದು ಜೀವಂತ ಶಿವಕಾವ್ಯವಾಗಿರುತ್ತಾನೆ. ಲಿಂಗಾಚಾರದಾವಿಷ್ಕಾರದಿಂದ ತ್ಯಾಗ-ಭೋಗ-ಯೋಗಗಳಿಗೆ ನಿಃಶ್ರೇಯ ಸೇತುವೆ ನಿರ್ಮಾಣವಾಗಿರುತ್ತದೆ. ಅಂದರೆ ಕಾಮ ಮೋಹ ಆಶೆಗಳನ್ನು ತ್ಯಾಗ ಮಾಡಲು, ಲಿಂಗಭೋಗೋಪಭೋಗವನ್ನು ಪಡೆಯಲು, ಸಮರಸಯೋಗವನ್ನು ಸಂಪಾದಿಸಲು ಲಿಂಗಾಚಾರ ಆಧಾರವಾಗಿರುತ್ತದೆ. ಇದರಿಂದ ಮನೋಭಿಲಾಷೆ ಮರೆಯಾಗಿ ಇಲ್ಲವೆ ಮಂಗಲಮಯವಾಗಿ, ಮನ ನಿರ್ಮಲವೂ ನಿಶ್ಚಲವೂ ಆಗಿ ವಿಕಾಸವಾಗುತ್ತದೆ. ಲಿಂಗದಲ್ಲಿ ಮನ ಇಚ್ಛೆಗಳು ತಲ್ಲೀನವಾಗಿ, ಲಿಂಗಮುಖದಿಂದ ಲಿಂಗಪ್ರಾಣವಾಗಿ ಬಾಳಿಗೆ ನೆರವಾಗುತ್ತವೆ; ಬೆನ್ನಾಸರವಾಗುತ್ತವೆ. ಲಿಂಗಾಚಾರದಲ್ಲಿ ಕ್ರಿಯಾಚಾರ ಜ್ಞಾನಾಚಾರ ಭಾವಾಚಾರಗಳಿರುತ್ತವೆ. ಇವುಗಳಿಂದ ಮೂರಂಗಗಳ ಮಲಗಳು ತೊಲಗಿ ಮೂರೂ ಮಡಿಯಾಗಿರುತ್ತವೆ; ಮಂಗಳಾಂಗಗಳಾಗಿರುತ್ತವೆ. ಲಿಂಗಕಳೆಗಳಿಂದ ಹೊಸ ಹೊಳಪು ಹೊಂಪುಳಿಗೊಳ್ಳುತ್ತದೆ. ಬೆಳಗಿನ ವೇದಿಕೆಗಳು ಸಿದ್ಧವಾಗುತ್ತವೆ. ಕ್ರಿಯಾಚೇತನ, ಚಿಚ್ಚೇತನ, ಸುಖಚೇತನಗಳು ಪ್ರತಿಷ್ಠಿತವಾಗುತ್ತವೆ, ಪ್ರಕಾಶಮಯವಾಗುತ್ತವೆ. ಮನೋಭಾವಪುಷ್ಪಗಳು ಪರಿಮಳಿಸುತ್ತವೆ..

ಹೀಗಿದ್ದರೂ ಸಾಂಪ್ರದಾಯಕ ಶೀಲವಂತರ--ಜಡ ಜಲಾಚಾರಶೀಲರ ಹಿಡಿತಕ್ಕೆ ಸಿಕ್ಕು ಆಚಾರ ಸಂಹಿತೆ ಮೂಢಾಚಾರದ ಚೌಕಟ್ಟಿಗೆ ಒಳಗಾಗಿ ತನ್ನ ಒಳ ವಿಶುದ್ಧತೆಯನ್ನು ವಿಶಾಲತೆಯನ್ನು ಕಳಕೊಂಡು ದುರ್ಬಲತೆಗೆ ಒಳಗಾಗಿದೆ. ವೈಚಾರಿಕ ಪ್ರಕಾಶ ವೈಭವದಿಂದ ದೂರ ಸರಿದು ನಿಂತಂತಾಗಿದೆ. ಶುಷ್ಕಾಚಾರಗಳೆಂಬ ನಿಂದೆಗೆ ನಿರಸನಕ್ಕೆ ಒಳಗಾಗಿವೆ. ಪರಕೀಯ ಆಚಾರ ವಿಚಾರಗಳ ದಾಸ್ಯಕ್ಕೆ ಶೃಂಖಲೆಗೆ ಒಳಗಾಗುವಂತಾಗಿದೆ. ಅವು ಪೂರಕವಾಗಿ ಬಾರದೆ ಮಾರಕವಾಗಿ ಬಂದು ಬೀಡು ಬಿಟ್ಟಿವೆ. ಸ್ವಸಂಸ್ಕೃತಿ ಸಂಹಾರಕಾರಣವಾಗಿವೆ. ಜೀವನದ ಎಲ್ಲ ಭಾಗಗಳನ್ನು ಪರಿಶುದ್ಧಗೊಳಿಸಬಲ್ಲ-ಪ್ರಬುದ್ಧಗೊಳಿಸಬಲ್ಲ ಸಾಮಾಜಿಕ ಸರ್ವಾಂಗೀಣ ಐಕ್ಯತೆಯನ್ನು ಕಾಪಾಡಬಲ್ಲ ನಮ್ಮ ಆಚಾರ ಸಂಹಿತೆಯ ಮೇಲೆ ಆಳವಾದ ಅಂತರಂಗಕ್ಕೆ ಆಪ್ಯಾಯನಕರವಾದ ವಿಚಾರಧಾರೆ ಹರಿದು ಬಂದಿಲ್ಲ. ಉಪದೇಶದ ಪ್ರಕಾಶ ಹರಡಿ ನಿಂದಿಲ್ಲ. ಆಚರಣ ವಿಧಾನ ಸಾಮಾಜಿಕರ ಅನುಷ್ಠಾನವಿಧಾನವಾಗಿ ಉಳಿದಿಲ್ಲ. ಜೀವನದ ಅಂತರಾಳದ ಮತ್ತು ಬ್ರಹ್ಮನಾಳದ ಗರ್ಭವನ್ನು ಹೊಕ್ಕು ಮೇಲಕ್ಕೆ ಹತ್ತಿ ಮಹತ್ತನ್ನು ಮುತ್ತಿ ಮನದಣಿ ಅನುಭವಿಸಿ ಆ ಪರಾವಾಣಿಯ ಒಲಿಸಿ, ಆಚಾರಸಂಹಿತೆಗೆ-ಆಚಾರಸಂವಿಧಾನಕ್ಕೆ

ಹೊಸ ಆಯಾಮ ಬರುವಂತೆ, ಹೊಸ ತಿರುವು ತಲೆದೋರುವಂತೆ ಬರೆಯಬೇಕಾಗಿದ್ದ ಸಾಹಿತ್ಯ ತನ್ನ ಸತ್ವವನ್ನು ಕಳೆದುಕೊಂಡು, ಕೇವಲ ಬಾಹ್ಯವಲಯದ ಪರಕೀಯ ಪ್ರಭಾವ ಗಳಿಗೆ ಒಳಗಾಗಿ ಒಣಗಿ ಒಣಹೆಮ್ಮೆಗೀಡಾಗಿ ತನ್ನ ಚನ್ನತನವನ್ನು ತತ್ತ್ವಸತ್ವವನ್ನು ಕಳೆದು ಕೊಳ್ಳುವಂತಾಗಿದೆ, ಕಳಾಹೀನವಾಗುವಂತಾಗಿದೆ; ಸ್ವಯಾನುಭಾವ ಸಂವಹನವಿಲ್ಲ ದಂತಾಗಿದೆ. ಇದು ಚಿಂತನೀಯ; ಅಂತೆಯೆ ಗಮನೀಯ. ಬಾಳಿನ ಬೇರಿಗೆ ಹುಳ ಗಳಂತೆ ಬೀಳುವ, ಬಿದ್ದು ಕೊರೆವ ಕೀಟಗಳನ್ನೆಲ್ಲ ಕಳೆದು, ಕಸುವನ್ನು ತೇವವನ್ನು ಕೊಟ್ಟು ಪರಿಪುಷ್ಟಿಗೊಳಿಸಿ ಯಾವಾಗಲೂ ಭ್ರಷ್ಟಾಚಾರಗಳಿಂದ ಕಾಪಿಡುವ ಸದಾಚಾರ–ಶಿವಾ ಚಾರಗಳು ಯಾರಿಗೆ ಬೇಡ? ಸಾಮಾಜಿಕರನ್ನು ಒಡೆಯದಂತೆ ಒಗ್ಗಟ್ಟಿನಲ್ಲಿರಿಸುವ ಗಣಾಚಾರ ಬೇಡವೆ? ಆರ್ಥಿಕ ದೈಹಿಕ ಮಾನಸಿಕ ದೌರ್ಬಲ್ಯದಿಂದ ಹೊರಹೋಗುವ ವರಿಗೆ ಈ ಎಲ್ಲ ಬಲಗಳ ನೆರವನ್ನಿತ್ತು ನಮ್ಮಲ್ಲಿಯೆ ನಿಲ್ಲುವಂತೆ, ನಿಂತು ನಿಷ್ಕಂಟಕವಾಗಿ ಜೀವಿಸುವಂತೆ–ಮಾಡುವ ಗಣಾಚಾರದ ನಿಲವು ಸಣ್ಣದೇನಲ್ಲ. ಗಣಾಚಾರಕ್ಕೆ ಸಾರ್ವ ಜನಿಕತೆಯೂ ಇದೆ; ಸಾಮಾಜಿಕತೆಯೂ ಇದೆ. ಇದರಿಂದಾಗಿ ಇದು ಎಂದಿಗೂ ಹಳೆಯ ದೆನಿಸುವಂತಿಲ್ಲ; ಎನಿಸುವುದಿಲ್ಲ. ಅಂತೆಯೇ ಭೃತ್ಯಾಚಾರವೂ ಸಾರ್ವಕಾಲಿಕವಾಗಿ ಅಂಗೀಕಾರಾರ್ಹವಾದುದು. ಯೌವನದ ಆರ್ಥಿಕದ ಅಧಿಕಾರದ ವಿದ್ಯೆಯ ಮದ ಗಳಿಂದ ದೂರಿರಿಸಲು ಸಮರ್ಥವಾದ ಭೃತ್ಯಾಚಾರ ಯಾರಿಗೆ ಬೇಡ? ಯಾವ ಕಾಲಕ್ಕೆ ಬೇಡ? ಭೃತ್ಯಾಚಾರದಿಂದ ಭ್ರಾತೃತ್ವಭಾವ ಬೆಳೆದು ಬರುತ್ತದೆ. ಈ ಬಗೆಯಲ್ಲಿ ಆಚಾರಗಳ ಬಗೆಗೆ ವಿಚಾರ ಸಂವಹನವನ್ನು ಸಮೃದ್ಧವಾಗಿ ಬೆಳೆವ ಸಾಹಿತ್ಯ ಮಾಧ್ಯಮದ ಅಭಾವ ನಮ್ಮಲ್ಲಿ ಸಾಕಷ್ಟಿದೆ. ಇದು ತೊಲಗುವಂತಾದರೆ ಆಗ ಬೌದ್ಧಿಕ ಜೀವಿಗಳು ನಮ್ಮ ಅರ್ಥಪೂರ್ಣವಾದ ಆಚಾರಸಂಹಿತೆಯ ಮೇಲೆ ಮನಸ್ಸನ್ನು ಹಾಕಿ, ಆಚಾರ ಸಂವಿಧಾನಕ್ಕೆ ತಮ್ಮ ಬಾಳಿನಲ್ಲಿ ಸಂಬಂಧವನ್ನು ಕಲ್ಪಿಸಿಕೊಳ್ಳಬಲ್ಲರು. ಆಚಾರಗಳ ಬಗೆಗೆ ನಿಜಕ್ಕೂ ವಿಶಾಲವಾದ ವಿರುದ್ಧವಾದ ವೈಚಾರಿಕ ಸಂವಹನ ಸಾಹಿತ್ಯ ಅಗತ್ಯ.

ಆಚಾರ ಕೆಲವರು ಭಾವಿಸುವಂತೆ ಕೇವಲ ಜಲನಿಷ್ಠವಲ್ಲ. ನೀರಿನಿಂದ ಹೊರಮೈ ತೊಳೆವುದೆ ಪೂರ್ಣ ಆಚಾರವಲ್ಲ. ಇದೂ ಒಂದಂಗ ಮಾತ್ರ. ಆಚಾರ ಮುಖ್ಯವಾಗಿ ಒಳ್ನಡತೆಯಿಂದ ಕೂಡಿದುದು. ಅದಕ್ಕಿಂತ ಅಧಿಕವಾದ ಧರ್ಮ ಬೇರೊಂದಿಲ್ಲ. 'ಆಚಾರಃ ಪ್ರಥಮೋ ಧರ್ಮಃ' 'ಆಚಾರವೆ ಸ್ವರ್ಗ, ಅನಾಚಾರವೆ ನರಕ.' ಆಚಾರವಿರು ವಲ್ಲಿ ಧೈರ್ಯ ಸ್ಥೈರ್ಯಗಳಿರುತ್ತವೆ. ಮನಕ್ಕೆ ನೆಮ್ಮದಿಯಿರುತ್ತದೆ. ಆಶೋತ್ತರಗಳಿಗೆ ಅವಕಾಶವಿರದು. ಸಕ್ರಿಯಾಶೀಲತೆಯಿರುತ್ತದೆ. ನುಡಿಗಿಂತ ನಡೆಗೆ ಹೆಚ್ಚು ಪ್ರಾಮು ಖ್ಯತೆಯಿರುತ್ತದೆ; ಪ್ರಾಮಾಣಿಕತೆಯಿರುತ್ತದೆ. ಸತ್ಯಶುದ್ಧಕಾಯಕಜೀವನಕ್ಕೆ ಪ್ರೇರಕ ಶಕ್ತಿಯಾಗಿರುತ್ತದೆ. ಅಂಗಾಂಗಗಳಲ್ಲಿ ಶುದ್ಧ ಮತ್ತು ಪ್ರಬುದ್ಧವಾದ ಎಲ್ಲ ಬಗೆಯ ಉನ್ನತಿ ಉದಿಸಿ, ಆದರ್ಶ ಜೀವನ ರೂಪಿತವಾಗುತ್ತದೆ. ಸುಪ್ರಭಾತ ಶಾಶ್ವತವಾಗಿರು ತ್ತದೆ. ಆ ಬೆಳ್ಳಂ ಬೆಳಗಿನಲ್ಲಿ ಬಾಳಿ ಬೆಳಗುವ ಭಾಗ್ಯವುಂಟಾಗುತ್ತದೆ. ಬಹು ಜನರನ್ನು

ಆ ಬೆಳಗಿನಲ್ಲಿ ಬಾಳಿಸುವ ಬಲವೊದಗುತ್ತದೆ. ಅಂತಹ ಆಚಾರಶೀಲನವೆ ದಿಟಕ್ಕೂ ಸತ್ಯ ಶಿವ ಸೌಂದರ್ಯ. ಜೀವನದ ನೈಜ ಕಲೆ–ಕಳೆಗಳು ಆತನಲ್ಲಿ ಕೂಡಿಕೊಂಡಿರುತ್ತವೆ. ಎಲ್ಲ ಬಗೆಯ ದುಷ್ಟ ದೂಷಿತ ಶಕ್ತಿ ಆಸಕ್ತಿಗಳು ದೂರವಾಗಿರುತ್ತವೆ. ಒಟ್ಟಾರೆ ಒಂದು ಮಾತಿನಲ್ಲಿ ಹೇಳುವುದಾದರೆ, ಸದಾಚಾರದಿಂದ ಅಸತ್ತಿನಿಂದ ಸತ್ತಿಗೆ ಸಾಗುತ್ತದೆ ಮಾನವ ಜೀವನ. ತಮಸ್ಸಿನಿಂದ ತತ್ತ್ವದತ್ತ ಸಾಗಲು ಅನುವಾಗುತ್ತದೆ. ಇದನರಿದು ವಿಚಾರಶೀಲರು ತಂತಮ್ಮ ಹೃದಯಬಾಗಿಲ ತೆರೆದು ಆಚಾರ ಸಂಹಿತೆಗೆ ಪ್ರವೇಶವನ್ನು ಕಲ್ಪಿಸಿಕೊಡಬೇಕು. ಆಚಾರ ಸಂವಿಧಾನ ಪಾದ ವಿನ್ಯಾಸವಾಗಬೇಕು. ಆಚರಣೆಗಳನ್ನು ನವೀಕರಿಸಿಕೊಂಡು ಅಂದರೆ ಹಲವು ಸಾಂಪ್ರದಾಯಿಕ ಮೌಢ್ಯಯುಕ್ತ ಯಾಂತ್ರಿಕಾಚಾರಗಳನ್ನು ಬಿಟ್ಟು ನಡೆಗಲಿಯಬೇಕು. ಸನ್ಮಾರ್ಗದತ್ತ ಸಾಗುವುದೇ ಸದಾಚಾರ ಶಿವಾಚಾರಾದಿಗಳ ಧ್ಯೇಯ. ಮೈಮನ ಭಾವಗಳ ಮೈಲಿಗೆ ಮಾಯವಾಗುವುದೆ ಆಚಾರಕಾರ್ಯ. ಪಂಚಾಚಾರಗಳು ಅಂಗಾಂಗಗಳಲ್ಲಿ ಪಂಚಪ್ರಾಣಗಳಂತೆ ಸಂಚರಿಸುವಂತಾದಲ್ಲಿ ಪರಿಶುಭ್ರವಾಗಿ ಜೀವಿಸಲು ಸಾಧ್ಯ; ಅಪಮೃತ್ಯುಗಳಿಲ್ಲದೆ ಜೀವಿಸಲು ಸಾಧ್ಯ.

ಅಂಗ–ಪ್ರಾಣ–ಆತ್ಮಗಳ ಸಂಕೀರ್ಣ ಈ ಜೀವನ, ಈ ಮೂರರಲ್ಲಿ ಯಾವುದೊಂದಿಲ್ಲದಿದ್ದರೂ ಜೀವನವಿಲ್ಲ. ಅಷ್ಟಾವರಣಗಳು ಅಂಗವನ್ನು ರೂಪಿಸಿದರೆ ಪಂಚಾಚಾರಗಳು ಪ್ರಾಣಪಂಚಕ ಯೋಗವನ್ನುಂಟುಮಾಡುತ್ತವೆ, ಅಂದರೆ ಪ್ರಾಣಗಳಾಗಿ ಪರಿಣಾಮುಗೊಳ್ಳುತ್ತವೆ. ಪ್ರಾಣಗಳಂತೆ ಅಂಗಾಂಗಗಳಲ್ಲಿ ಸಂಚರಿಸುತ್ತವೆ. 'ಆಸಮಂತಾತ್ ಚರತೀತಿ ಆಚಾರಃ' ಮನಸ್ಸು ಅಂಗಾಂಗಗಳಲ್ಲಿ ಶುದ್ಧವಾಗಿ ಚರಿಸುವುದೆ ಆಚಾರ; ಸಕ್ರಿಯಾಶೀಲವಾಗಿ ಸಂಚರಿಸುವುದೆ ಆಚಾರ. ಸತ್ಕ್ರಿಯೆಗಳ ಸುವ್ಯವಸ್ಥೆ ಪಂಚಾಚಾರಗಳಿಂದ ಉಂಟಾಗುತ್ತದೆ. ಆಚಾರಯೋಗವಿಲ್ಲದಿದ್ದರೆ ವಾಸ್ತವವಾಗಿ ಪ್ರಾಣಯೋಗವಿಲ್ಲ. ಆಚಾರಕ್ಕೂ ಪ್ರಾಣಕ್ಕೂ ನಿಕಟ ಬಾಂಧವ್ಯ. ದೇಹಕ್ಕೆ ಚರಣ ಹೇಗೋ ಅಂಗಕ್ಕೆ ಆಚರಣ ಹಾಗೆ ! ಚರಣ–ಆಚರಣಗಳು ನಿಂತರೆ ಜೀವನ್ಮರಣ ಅನಿವಾರ್ಯ. ಚರಣ ಚರಿಸಿದರೆ ದೇಹಾರೋಗ್ಯ; ಆಚರಣ ಅಳವಟ್ಟರೆ ದೇಹಾತ್ಮಗಳೆರಡರ ಮತ್ತು ಪಂಚ ಪ್ರಾಣಗಳ ಆರೋಗ್ಯ. ಐದು ಆಚಾರಗಳ ಸಂಹಿತತ್ವ ಅಗತ್ಯ. ಇದನರಿದೆ ಇವುಗಳ ಸಂ–ವಿಧಾನ ಪ್ರಸಂಗ. ಈ ಪ್ರಸಂಗದಿಂದ ವಿಶಿಷ್ಟ ಜೀವನ ನಿರ್ಮಾಣ. ಚಾರುಚೇತನ ಚಿಮ್ಮುತ್ತದೆ ಅಂಗಾಂಗಗಳಲ್ಲಿ. ಚದರುತ್ತವೆ ಜೀವನ ಜಡತೆ ಜಾಡ್ಯಗಳು. ಆಚಾರ ಸಂವಿಧಾನ(ವಿನ್ಯಾಸ)ದಿಂದ ಜೀವಂತ ಜೀವನ, ಪರಿಶುದ್ಧ ವರ್ತನ; ಪರಿವರ್ತನ, ವಿಕೃತ ಜೀವನದಿಂದ ಸುಕೃತ ಜೀವನಕ್ಕೆ ಪ್ರವರ್ತನ. ದುರ್ವರ್ತನ ದುರ್ಗುಣಗಳಿಂದ ನಿವರ್ತನ. ದ್ವೇಷಾಸೂಯೆಗಳ ನಿವರ್ತನ. ಶುದ್ಧ ಪ್ರಬುದ್ಧ ಜೀವನ ಸೃಜನ. ನಿರ್ಮಲಾಚರಣ. ಪರಿಶುಭ್ರ ಜೀವನಕಲೆ ರೂಪುಗೊಳುತ್ತದೆ. ಆಚಾರವಂತ ಅವನೊಂದು ಜೀವಂತಕಲಾಕೃತಿ. ಶಿಷ್ಟಾಚಾರ ಸಂಹಿತೆಯಿಲ್ಲದೆ

ಸಂವಿಧಾನವಿಲ್ಲದೆ ವ್ಯಕ್ತಿ ಸಮಾಜ ರಾಷ್ಟ್ರ ವಿಶ್ವಗಳು ವಿಶುದ್ಧವಾಗಿ ಬಾಳವು, ಬೆಳಗವು. ಯಾವ ಮೌಲ್ಯವೂ ರೂಪಿತವಾಗದು.

ಮಾನವ ಜೀವನದ ಮೌಲ್ಯವನ್ನರಿಯದೆ ಅನಾಚಾರಕ್ಕೆ ಅವಕಾಶವನ್ನೀಯುವ ಅನುಚಿತ ಅಭ್ಯಾಸ ಅತಿಯಾಗಿದೆ. ಜೊತೆಗೆ ಸರ್ವೋನ್ನತವಾದ ಸಾಮಾಜಿಕ ಪ್ರಜ್ಞೆಯಿಲ್ಲದೆ ಶುಭ್ರವಲ್ಲದ ಕ್ಷುದ್ರ ಜೀವನದಿಂದ ಬೀಳಾಗುತ್ತಿರಲಾಗಿದೆ. ಒಣ ಆಡಂಬರ, ಅರ್ಥವಿಲ್ಲದ ಜಂಭ, ದುರಭಿಮಾನ, ದುರಹಂಕಾರ, ದುರ್ವರ್ತನಗಳಿಂದ ದುರ್ಗತಿಗಿಳಿದು ದುಃಖ ದುಮ್ಮಾನಗಳಿಗೀಡಾಗಿ ನಿಜದ ನಿಲವಿನಿಂದ ವಂಚಿತರಾಗುವುದು ತಪ್ಪದಂತಿದೆ. ತನು ಮನೋರೋಗಗಳಿಂದ ಕಾಯಯೋಗ ಕರಣಯೋಗ ಲಭಿಸದಂತಾಗುತ್ತದೆ. ವಿಷಯ ವಾಸನೆ, ವಿಷಮ ವಾತಾವರಣ, ಕಲುಷಿತ ವಾತಾಶನಗಳಿಂದ ಮಾನವೀಯ ಮಹಾರೋಗ್ಯ ಮಣ್ಣುಗೂಡುತ್ತಿದೆ.

'ಶಿವಾಸ್ತೇ ಪಂಥಾನಃ ಸಂತು' ಎಂದು ಹಿರಿಯರು ಹರಸಿದುದನ್ನು ನೆನೆಯಬೇಕು. ಶಿವಮತಗಳಿಂದ ಕೂಡಿದುದು ವೀರಶೈವಮತ. ಲೋಕ ಕಲ್ಯಾಣಪಥ (ಆಚಾರ) ಗಳಿಂದ ಕೂಡಿದೆ. ಅಂತೆಯೆ ಇದಕ್ಕೆ ಶಿವಾಚಾರ'ವೆಂದು ಹೆಸರು ಬಂದಿದೆ. ಪ್ರಗತಿಶೀಲ ಪಥದಲ್ಲಿ ಸಾಗುವುದೆ ವೀರಶೈವಾಚಾರದ ಮತ. ಅದೇ ಮಾನವರಿಗೆಲ್ಲ ಹಿತ. ಅದರಿಂದ ಸತ್ ಸಂಸ್ಕೃತಿ ರೂಪುಗೊಳ್ಳುತ್ತದೆ; ಅದರ ಸೌರಭ ಹರಡಿ ವಾತಾವರಣ ಪರಿಶುದ್ಧವಾಗಿ ಆರೋಗ್ಯ ಅಭಿವೃದ್ಧಿಯಾಗುತ್ತದೆ. ಸಂಸ್ಕೃತಿಯ ಆಧಾರ ಸದಾಚಾರ. ಸದಾಚಾರಾದಿ ಸಂಹಿತತ್ವ ವೀರಶೈವ ವಿಧಾನ–ಸಂವಿಧಾನ. ಅದುವೆ ಶಿವಪಂಥಾನ.

ಆಚಾರ ಪರಿಮಳವನ್ನು ಪರಿಸರದಲ್ಲಿ ಹರಡುವ ಪುಷ್ಪಗಳು ಅಂಗಗಳು. ಅವು ಸುವಿಚಾರ ಕಿರಣಗಳಿಂದ ಅರಳಿ ನಿಂತರೆ ಮಾತ್ರ ಸಾಧ್ಯ. ಅಂಗಾಂಗಗಳಲ್ಲಿ ಆಚಾರ· ಆ ಆ ಆಚಾರ ಅಳವಟ್ಟರೆ ಅಂತರಂಗದಲ್ಲಿ ಪರಿಶುದ್ಧ ಉಸಿರು ಹರಡುತ್ತದೆ. ಆತ್ಮ ಪುಷ್ಟಿ ತುಷ್ಟಿಗಳುಂಟಾಗುತ್ತವೆ. ಅವುಗಳಿಂದ ಸತ್ಯನಿಷ್ಠ ಸತ್ವನಿಷ್ಠ ಸ್ಫುಟವ್ಯಕ್ತಿತ್ವ ಎಲ್ಲ ಸ್ತರಗಳಲ್ಲಿ ಉಂಟಾಗುತ್ತದೆ. ತತ್ತ್ವದತ್ತಸಾಗಲು ಸತ್ಪಥದ ಸಹಾಯವೊದಗುತ್ತದೆ. ತತ್ತ್ವವೇ ತಿಳಿಬಾಳಿನ ಸತ್ವ.

ವಿಶುದ್ಧ ಸತ್ವವುಳ್ಳ ವ್ಯಕ್ತಿತ್ವ ವಿಶ್ವಭಾವದ ವಿಶ್ವಕಲ್ಯಾಣದ ಅಡಿಗಲ್ಲು. ಹಸನಾದ ಹೊಸ ಚೈತನ್ಯೋದಯದ ಸಮಯ. ಅಲ್ಲದೆ ಸಭ್ಯತೆಯ ಸಮಗ್ರ ಅಭಿವೃದ್ಧಿಗೆ ಆಧಾರ.

ಆಚಾರ ಪ್ರಾಣವೆಂದು ಭಾವಿಸುವಲ್ಲಿ ಅದಕ್ಕಿರುವ ಆಧಿಕ್ಯ ಅಭಿವ್ಯಕ್ತವಾಗಿದೆ. ಆಚಾರವಿಲ್ಲದೆ ವೀರಶೈವ ಜೀವಿಸುವಂತಿಲ್ಲ, ಜೀವನ ಬೇರಿಲ್ಲ. ಅಂತೆಯೆ ಆಚಾರ

ಲಿಂಗವೆಂದೆನಿಸಿದೆ. ಆರು ಲಿಂಗಗಳಲ್ಲಿ ಆಚಾರಲಿಂಗವೆ ಆದಿ. ಕಾರ್ಯ್ಯಾಂಗದಲ್ಲಿ ಮಾತ್ರ ಅಭಿವ್ಯಕ್ತಿಯಾಗುವ ಸಂಸ್ಕೃತಿಗಿಂತ ಕಾರಣಾಂಗದಲ್ಲಿಯೂ ಅಳವಡುವ ಅಳವುಳ್ಳ ಆಚಾರ ಸಂಸ್ಕೃತಿಗಿಂತ ಶ್ರೇಷ್ಠವೆಂಬುದು ಸುಸ್ಪಷ್ಟ. ಆಚಾರಕ್ಕೆ ಎಲ್ಲೆಲ್ಲಿಯೂ ಅವಕಾಶ; ಎಲ್ಲೆಲ್ಲಿಯೂ ಅದರ ಪ್ರಕಾಶ. ಅದರಿಂದ ಎಲ್ಲವೂ ವಿಕಾಸ.

"ಕುಳಿತು ಲಿಂಗವ ಪೂಜಿಸುವರು; ಒಳಗೆ ಅಲ್ಲದಾಟವನಾಡುವರು." ಎಂಬೀ ವಚನ ವಾಣಿಯಿಂದ ಹೊರಗಿನ ಸತ್ಕೃತಿರೂಪ ಸಂಸ್ಕೃತಿ ಬಹಿರಂಗ ನಿಷ್ಠವೆಂಬುದು ವ್ಯಕ್ತವಾಗುತ್ತದೆ. ಸಮ್ಯಕ್ ಕೃತಿಯಾಗಿರಬಹುದು ಪೂಜಾಕ್ರಿಯೆ. ಆದರೆ ಅದೇ ಮನಸ್ಸು ವಿಷಯ ಚಿಂತನೆಗೆ ಒಳಗಾಗಿದ್ದರೆ ಏನು ಪ್ರಯೋಜನ? ಒಳ ಹೊರಗೂ ಒಳ್ಳೆಯ ಸಂಸ್ಕಾರವಿರಬೇಕು; ಇದ್ದರೆ ಲೇಸು. ಸತ್ಕೃತಿಗಿಂತ ಸದಾಚಾರ ಸರ್ವಕಾಲಿಕ. ಬರೀ ಕೃತಿ ಸಮ್ಯಕ್ ಆದರೆ ಅದು ಆಚಾರವಲ್ಲ; ಜೊತೆಗೆ ಮತಿಮನ ಭಾವಗಳೆಲ್ಲ ಸಮ್ಯಕ್ ಆಗಿರಬೇಕು. ಆಗಿರುವಂತೆ ಅವುಗಳಲ್ಲೆಲ್ಲ ಚರಿಸುತ್ತದೆ ಆಚಾರ. ಆಚಾರ ಅಂಗದಲ್ಲಿ ಮಾತ್ರವಲ್ಲ, ಲಿಂಗದಲ್ಲಿಯೂ ಅಳವಡುವುದರಿಂದ 'ಲಿಂಗಾಚಾರ' ನಿರೂಪಿತ ವಾಗಿದೆ.

ಅಷ್ಟಾವರಣರೂಪ ಅಂಗ ಅಳವಟ್ಟಬಳಿಕ ಪಂಚಾಚಾರರೂಪ ಪಂಚ ಪ್ರಾಣಗಳು ಆ ಅಷ್ಟಾಂಗಗಳಲ್ಲಿ ಸುಳಿದಾಡಬೇಕು. ಇಲ್ಲವಾದರೆ ಅಷ್ಟಾವರಣಗಳಿಗೆ ಯಾವುದಕ್ಕೂ ಅಂಗತ್ವ ಅಳವಡದು. ಲಿಂಗತ್ವ ಜಂಗಮತ್ವಗಳು ಅಳವಡವು

ಆಚಾರಕ್ಕೆ ಕ್ರಿಯೆ ಆಧಾರ; ವಿಚಾರಕ್ಕೆ ಜ್ಞಾನ ಆಧಾರ, ಜ್ಞಾನಕ್ಕೆ ಆಚಾರ ಫಲ. ಧರ್ಮಾಚಾರಗಳಂತೆ ಜ್ಞಾನಾಚಾರ ಭಾವಾಚಾರಗಳೂ ವೀರಶೈವಮತ ಪ್ರಕ್ರಿಯೆಗಳು. ಪಂಚಾಚಾರಗಳು ಅಷ್ಟಾವರಣಾಂಗಕ್ಕೂ ಷಟ್‌ಸ್ಥಲಾತ್ಮನಿಗೂ ಆಧಾರಗಳು.

ಸದಾಚಾರ : ಸತ್ ಆಚಾರ ಅಥವಾ ಸದಾ–ಆಚಾರ ಎಂದು ಬಿಡಿಸಿ ನೋಡಿದರೆ ಸದಾಚಾರ ಸ್ವರೂಪ ಸಂಪೂರ್ಣ ಮನವರಿಕೆಯಾಗುತ್ತದೆ. ಯಥಾರ್ಥವಾದ ನಡತೆ ಯಾವಾಗಲೂ ತನ್ನೊಳಗಿರಬೇಕು; ವ್ಯಾಪಕವಾಗಿರಬೇಕು. ಅಂದರೆ ಸರ್ವಾಂಗನಿಷ್ಠ ವಾಗಿರಬೇಕು. "ಸದಾಚಾರ ಸದ್ಭಕ್ತಿ ಇಲ್ಲದವರನೊಲ್ಲನಯ್ಯ. ಅವರಾರಾಧನೆ ದಂಡ. ನಿಚ್ಚ ನಿಚ್ಚ ಪ್ರಾಯಶ್ಚಿತ್ತರನೊಲ್ಲ, ಕೂಡಲಸಂಗಮದೇವ ಭೂಭಾರಕರ." ಯಾವಾ ಗಲೂ ಒಳ್ಳೆಯ ರೀತಿಯಿರಬೇಕು; ಒಳ್ಳೆಯ ಪ್ರೀತಿಯಿರಬೇಕು. ಒಳ್ಳೆಯ ಸಂಸ್ಕಾರ ವಿರಬೇಕು. ಇಲ್ಲದಿದರೆ ಆರಾಧನೆ ಫಲಿಸದು. ಒಳ್ನಡತೆಯೆ ಒಪ್ಪಾದ ಆರಾಧನ. ಒಂದು ಚಣವಾದರೂ ಒಳ್ನಡತೆಯಿಂದ ತಪ್ಪಬಾರದು. ತಪ್ಪಿ ಪ್ರಾಯಶ್ಚಿತ್ತಗಳನ್ನು ಮಾಡಿ ತೃಪ್ತರಾಗಬಾರದು. ಪದೇಪದೇ ಪ್ರಾಯಶ್ಚಿತ್ತಕ್ಕೆ ಒಳಗಾಗುವುದು ಸರಿಯಲ್ಲ. ನಿಚ್ಚ ನಿಚ್ಚ ರೋಗಿಯಾಗಿ, ನಿಚ್ಚ ನಿಚ್ಚ ಔಷಧಿ ಸೇವಿಸಿದರೆ ಆರೋಗ್ಯ ಆನಂದಗಳು ಲಭಿಸವು.

"ಅಯ್ಯಾ ಸತ್ಕ್ರಿಯೆ ಸಮ್ಯಗ್ಜ್ಞಾನ ಉಂಟಾದರೆ
ಸದಾಚಾರ ಸದ್ಭಕ್ತಿ ಉಂಟೆಂಬೆ,
ಸದಾಚಾರ ಸದ್ಭಕ್ತಿ ಸತ್ಕ್ರಿಯೆ ಸಮ್ಯಗ್ಜ್ಞಾನ ನಡೆ ನುಡಿ ಒಂದಾದರೆ,
ಆದಿ ಅನಾದಿಯಿಂದತ್ತತ್ತ ಮೀರಿ ತೋರುವ
ಪರಿಪೂರ್ಣ ಪರಮಾನಂದ ಪರಬ್ರಹ್ಮ ಗುರುಲಿಂಗಜಂಗಮವೆಂಬೆ,
ಇಂತು ಸದಾಚಾರ ಸದ್ಭಕ್ತಿ ಸತ್ಕ್ರಿಯೆ ಸಮ್ಯಗ್ಜ್ಞಾನ ಸತ್ಯ ನಡೆನುಡಿ
ಇಲ್ಲವಾದರೆ ಗುಹೇಶ್ವರಲಿಂಗಕ್ಕೆ ದೂರ ಕಾಣಾ !"

ಸದಾಚಾರ ವ್ಯಾಪ್ತಿ, ಸದಾಚಾರ ನಿಲವು ಇದರಲ್ಲಿ ನಿರ್ದಿಷ್ಟವಾಗಿವೆ. ಸದಾಚಾರಕ್ಕೆ ಸದ್ಭಕ್ತಿ ಸತ್ಕ್ರಿಯೆ ಸಮ್ಯಗ್ಜ್ಞಾನಗಳು ಸತ್ಯ ನಡೆ ನುಡಿಗಳು ಬೇಕೆಂಬುದನ್ನು ಗಮನಿಸಬೇಕು. ಸತ್ಕ್ರಿಯೆಯಲ್ಲಿ ಸತ್ಕಾಯಕವು ಸಮಾವೇಶಗೊಳ್ಳುತ್ತದೆ. 'ಸಜ್ಜನ ಕಾಯಕದಲ್ಲಿ ತಂದು, ಗುರು–ಲಿಂಗ–ಜಂಗಮಕ್ಕೆ ಮಾಡಿ ನೀಡಿ ನಿತ್ಯನಾಗಿಹುದೇ ಸದಾಚಾರ'ವೆಂದು ಶರಣರು ನಿರೂಪಿಸಿದ್ದಾರೆ. ಸದಾಚಾರವನ್ನು ಸಾಮಾಜಿಕ ಸೇವೆಗೆ ತ್ಯಾಗಕ್ಕೆ ಹೊಂದಿಸಿರುವುದನ್ನು ಅರಿಯಬೇಕು. ಈ ಸದಾಚಾರದಲ್ಲಿ ಉತ್ಪನ್ನಶೀಲ, ಆಚಾರಶೀಲ, ಉದ್ಯೋಗಶೀಲ, ಸಂಬಂಧಶೀಲ, ಉತ್ಕಲಶೀಲ, ಪ್ರಸನ್ನಶೀಲ, ಉತ್ತಮಶೀಲ, ಜ್ಞಾನಶೀಲ–ಎಂದು ಎಂಟು ಬಗೆಗಳಿರುವುವು. ಇವುಗಳಿರುವುದರಿಂದ ಸದಾಚಾರಿಯು ಸೋಮಾರಿಯಾಗಲು ಸಾಧ್ಯವಿಲ್ಲ. ಅನಾಚಾರಿಯಾಗಲು ಅನುವಿಲ್ಲ. ಸರ್ವಸಂಬಂಧದಿಂದ ದೂರಿರಲಾಗುವುದಿಲ್ಲ. ಯಾಂತ್ರಿಕ ಕ್ರಿಯೆಯನಾಚರಿಸಲು ಅವಕಾಶವಿಲ್ಲ. ಅರಿಯದೆ ಆಚರಿಸಲಾಗುವುದಿಲ್ಲ. ಪ್ರಾಚೀನ ಶೀಲವನ್ನು ಬಿಡುವಂತಿಲ್ಲ. ಅಪ್ರಸನ್ನತೆಗೆ ಅವಕಾಶವಿಲ್ಲ.

ಶಿವಾಚಾರ : ಎಲ್ಲೆಲ್ಲಿಯೂ ಎಲ್ಲರಲ್ಲಿಯೂ ಶಿವಭಾವವನ್ನು ಇರಿಸುವುದೇ ಶಿವಾಚಾರ. 'ಸರ್ವಂ ಶಿವಮಯಂ ಜಗತ್' ಎಂಬೀ ವಿಶಾಲತೆಗೆ ವಿಶುದ್ಧತೆಗೆ ಹೊಂದಿಕೊಂಡಿರಬೇಕು. 'ಶಿವಭಕ್ತರಲ್ಲಿ ಜಾತಿವರ್ಣ ಆಶ್ರಮವನರಸದೆ ಅವರೊಕ್ಕುದ ಕೊಂಬುದೇ ಶಿವಾಚಾರ.' '......ಶಿವಾಚಾರವೆಂದು ಬಲ್ಲಾತನೆ ಗುರು. ಶಿವ--ಗುರುವೆಂದು, ಶಿವ–ಲಿಂಗವೆಂದು ಬಲ್ಲಾತನೆ ಗುರು......' ಎಂದು ಪ್ರಭುದೇವನ ಹೇಳಿಕೆ. ಗುರುವನ್ನು ಲಿಂಗವನ್ನು ಜಂಗಮವನ್ನು ಶಿವನೆಂದು ಭಾವಿಸುವುದು ಶಿವವ್ರತ. ಶಿವಲಿಂಗಾರಾಧನ ನಿಯಮಬದ್ಧನಾಗಿರುವುದೂ ಶಿವಾಚಾರ. ಶಿವಲಿಂಗದಲ್ಲಿ ನಿಷ್ಠೆ ಕರಿಗೊಂಡಿರುವುದೂ ಶಿವಾಚಾರ. ಇದು ಸಮಯಾಚಾರ, ಮತಾಚಾರ. ಆದರೂ ಇದರಲ್ಲಿ ವಿಶಾಲಮನೋಭಾವದ ಜೊತೆಗೆ ವಿಶುದ್ಧಿಯೂ ಕ್ರಿಯಾವೈಶಾಲ್ಯವೂ ಬೆರೆದಡೆ. ಸಾಮಾಜಿಕ ತತ್ತ್ವಗಳಲ್ಲಿ ಬೆಳೆದ ಈ ಭಾವವೈಶಾಲ್ಯತೆ ಸಾರ್ವತ್ರಿಕವಾಗಿಯೂ ಬೆಳೆದು ಬರಬೇಕು. ಬಾಹ್ಯದಲ್ಲಿ ಬಳಸದಿದ್ದರೂ ಭಾವದಲ್ಲಿ ಶಿವಭಾವ ಸನ್ನಿಹಿತವಾಗಿರಬೇಕು. ಶಿವದ ನಿಲುವಿಂಗೆ ಹೆಣಗುವುದೆ ಶಿವಾಚಾರ.

"ಎಂತೋ ಶಿವಭಕ್ತಿಯ ನಾನುಪಮಿಸುವೆನಯ್ಯಾ ?
ಎಂತೋ ಶಿವಾಚಾರವೆನಗೆ ವೇದ್ಯವಪ್ಪುದಯ್ಯ ?
ಕಾಮ ಕ್ರೋಧ ಲೋಭ ಮೋಹದಿಂದೆ ಕಟ್ಟುವಡೆದಿಹೆನು,
ಹಸಿವು ತೃಷೆ ವ್ಯಸನದಿಂದೆ ಕುದಿಯುತ್ತಿದ್ದೇನೆ.
ಪಂಚೇಂದ್ರಿಯ ಸಪ್ತಧಾತು ಹಂಚುಹರಿಮಾಡಿ ಕಾಡಿಹವಯ್ಯಾ,
ಅಯ್ಯಾ ಅಯ್ಯಾ, ಎನ್ನ ಹುಯ್ಯಲ ಕೇಳಯ್ಯ,
ಕೂಡಲ ಸಂಗಮದೇವಾ, ನಾನೇವೆನೇವೆನಯ್ಯಾ ? "

ವೀರಶೈವನಿಗೆ ಶಿವಾಚಾರದ ಮೇಲೆ ಈ ಆಸಕ್ತಿಯಿರಬೇಕು; ಈ ತೀವ್ರತೆಯಿರಬೇಕು. ಕಾಮ ಕ್ರೋಧಾದಿಗಳಿಗೆ, ಹಸಿವು ನೀರಡಿಕೆಗಳಿಗೆ, ವಿಷಯ ವ್ಯಸನಕ್ಕೆ, ಪಂಚೇಂದ್ರಿಯ ಸಪ್ತಧಾತುಗಳಿಗೆ ಒಳಗಾದರೆ ಶಿವಾಚಾರ ಸಮನಿಸದು. 'ಶಿವಾಚಾರ ವೀರಶೈವ ಮತದ ಒಂದು ಆಚಾರಾಂಗವೆ ಹೊರತು ಮತವಲ್ಲ. ಅಂತೆಯೇ 'ಲಿಂಗವಂತ' ಎಂಬುದು 'ಧನವಂತ' ಎಂಬಂತೆ ಲಿಂಗವುಳ್ಳ ವ್ಯಕ್ತಿಬೋಧಕವಲ್ಲದೆ ಮತ ಬೋಧಕವಲ್ಲ.

ಲಿಂಗಾಚಾರ: ಮುಮ್ಮೊದಲು ಅಂಗವು ಲಿಂಗವಾಗಬೇಕು; ಲಿಂಗಕಳೆ ವೇಧಿಸಬೇಕು. ಇದಾಗಬೇಕಾದರೆ ಲಿಂಗಾಚಾರ ಬೇಕು. ಇದಿಲ್ಲದೆ ಲಿಂಗಸಿದ್ಧಿಯಾಗದು; ಲಿಂಗವಂತನೆನಿಸನು. ಲಿಂಗಾಚಾರವೆಂದರೆ ಲಿಂಗದೊಲುಮೆಗಾಗಿ ಲಿಂಗಕ್ಕೆ ಸೂರೆಹೋಗಬೇಕು. ತ್ಯಾಗಾಂಗದಲ್ಲಿ ಲಿಂಗ ಆಯತವಾಗಬೇಕು, ಭೋಗಾಂಗದಲ್ಲಿ ಲಿಂಗ ಸ್ವಾಯತವಾಗಬೇಕು; ಯೋಗಾಂಗದಲ್ಲಿ ಲಿಂಗ ಸನ್ನಿಹಿತವಾಗಬೇಕು. ಮುಖದಲ್ಲಿ ಲಿಂಗನುಡಿ, ನಡೆಯಲ್ಲಿ ಲಿಂಗನಡೆ, ಕಣ್ಣಲ್ಲಿ ಲಿಂಗನೋಟ–ಲಿಂಗಕಳೆಗಳು, ತ್ವಕ್ಕಿನಲ್ಲಿ ಲಿಂಗಸ್ಪರ್ಶ, ಶ್ರೋತ್ರದಲ್ಲಿ ಲಿಂಗಕೀರ್ತಿ, ಮನದಲ್ಲಿ ಲಿಂಗನೆನಹು, ಭಾವದಲ್ಲಿ ಲಿಂಗಭಾವ–ಲಿಂಗ ಸುಖಗಳು ಕರಿಗೊಂಡಿರಬೇಕು. ಲಿಂಗಾರ್ಚನ–ಲಿಂಗಾರ್ಪಣ–ಲಿಂಗಾನುಭವದಿಂದ ಲಿಂಗಪತಿಯಲ್ಲಿಯೆ ರತಿಗೂಡಿರಬೇಕು. ಲಿಂಗವನ್ನಲ್ಲದೆ ಬೇರೆ ಸ್ಥಾವರ ದೇವರನ್ನು ಪೂಜಿಸಬಾರದು; ಎರಗಬಾರದು. "ಅಂಗೈಯೊಳಗಣ ಲಿಂಗವ ನೋಡುತ್ತ, ಕಂಗಳು ಕಡೆಗೋಡಿವರಿವುತ್ತ ಸುರಿವುತ್ತ ಎಂದಿಪ್ಪೆನೋ? ನೋಟವೇ ಪ್ರಾಣವಾಗಿ, ಕೂಟವೆ ಪ್ರಾಣವಾಗಿ ಎಂದಿಪ್ಪೆನೋ? ಎನ್ನ ಅಂಗವಿಕಾರದ ಸಂಗವಳಿದು, ಕೂಡಲಸಂಗಯ್ಯಾ, ಲಿಂಗ–ಲಿಂಗ ಎನ್ನುತ್ತ ಎಂದಿಪ್ಪೆನೋ." ಈರೀತಿ ಲಿಂಗಾಚಾರಿಯು ಲಿಂಗಧಾರಿಯು ಲಿಂಗವನ್ನೆ ನಂಬಿ ಲಿಂಗದಲ್ಲಿಯೆ ಇಂಬುಗೊಂಡಿರಬೇಕು.

"ಎದೆ ಬಿರಿವನ್ನಕ್ಕ, ಮನ ದಣಿವನ್ನಕ್ಕ, ನಾಲಗೆ ನಲಿನಲಿದಾಡುವನ್ನಕ್ಕ
ನಿಮ್ಮ ನಾಮಾಮೃತವ ತಂದಿರಿಸು ಕಂಡಯ್ಯ ಎನಗೆನ್ನ ತಂದೆ !
ಬಿರಿ ಮುಗುಳಂತೆ ಎನ್ನ ಹೃದಯ ನಿಮ್ಮ ಶ್ರೀಚರಣದಲ್ಲಿ ಬಿದ್ದುರುಳುಗೆ !
ಅಡಿಗಡಿಗೆ ಲಿಂಗವನಡರಿಯಡರಿ ನೋಡಿ ನೋಡಿ

ಕಂಗಳು ಕಡೆಗೋಡಿವರಿದವೆನಗಯ್ಯ.
ಎನ್ನ ಅಶ್ರುಜಲಂಗಳು ಆಲಿಕಲ್ಲ ರೂಪಿನಂತೆ, ಅರಗಿನ ಪುತ್ಥಳಿಯಂತೆ
ತನು ಪುಳಕಿತವಾದ ಬೆಮರು ಬಿಂದುಗಳೆಲ್ಲ
ಕೂಡಲಸಂಗನ ದರ್ಶನ ಸ್ಪರ್ಶನದಿಂದ ಮನವೊಲಿದು
ನೆರೆವ ಭರವನೇನ ಹೇಳುವೆನಯ್ಯಾ ? "

ಇವು ಲಿಂಗಾಚಾರದಲ್ಲಿರಬೇಕಾದ ಬರಮಾಡಿಕೊಳ್ಳಬೇಕಾದ ಭಾವಾವೇಗಗಳು. ಅಲ್ಲದೆ ಅಂಗೈಯೊಳಗೆ ಲಿಂಗವಿಡಿದ ಬಳಿಕ ಭಂಗಭವಿಗಳಲ್ಲಿ ಅಂಗೈ ಒಡ್ಡಿ ಬೇಡಬಾರದು. ಎದೆಯಲ್ಲಿ ಗುರುಕರುಣೆಯ ಲಿಂಗವನ್ನು ಧರಿಸಿದ ಬಳಿಕ ಆ ಎದೆಯಿಂದ ಬೇರೆ ವ್ಯಕ್ತಿಗಳನ್ನು ಬೇರೆ ಸುಖಗಳನ್ನು ಅಪ್ಪಬಾರದು. ಲಿಂಗಾಧಾರಿಗಳಾಗದವರಿಗೆ ತನ್ನ ಶಿರವನ್ನು ಬಾಗಿಸಬಾರದು. ಲಿಂಗ ಮೆಚ್ಚುವಂತೆ ಆಚರಿಸುವುದೆ ಲಿಂಗಾಚಾರ. ಅಲ್ಲದೆ ಅಂಗದಲ್ಲಿ ಕುಲವ ಅರಸಬಾರದು; ಕೀಳು ಕಾಣಬಾರದು. 'ಲಿಂಗವಲ್ಲದೆ ಅನ್ಯವನರಿಯದಿಹುದೇ ಲಿಂಗಾಚಾರ.' ಲಿಂಗವೆಂದರೆ ಸಚ್ಚಿದಾನಂದ ಸ್ವರೂಪ. ಅದರಂತೆ ಆಚಾರವಂತನು ಸತ್ ಆದ ನಡೆ ನುಡಿಯುಳ್ಳವನಾಗಬೇಕು. ಚಿತ್‌ಕಳೆಯಿಂದ ಚಿತ್ತವು ಕೂಡಿರಬೇಕು. ಯಾವಾಗಲು ಆನಂದದಿಂದಿರಬೇಕು. ಇಂತಾದ ಬಳಿಕ ಆತನೇ ನಿತ್ಯ ಪರಿಪೂರ್ಣನಾಗಬಲ್ಲನು.

ಗಣಾಚಾರ: ಇದೊಂದು ಗಣ್ಯವಾದ ಆಚಾರ. ಇದು ಗಣಸಮೂಹಕ್ಕೆ ಬೇಕಾದ ಆಚಾರವೆಂದು ಅರ್ಥವಿಸಿದ್ದಾದರೆ ಇದರ ಹಿರಿಮೆ ತೋರುತ್ತದೆ. ಹರವು ಅರಿಕೆಯಾಗುತ್ತದೆ. ಸಾಮೂಹಿಕಾಚಾರವೆ ಗಣಾಚಾರದ ಗುರಿ. ಇದಕ್ಕಿಂತ ವ್ಯಕ್ತಿಗೆ ವಿಶಿಷ್ಟ ಕರ್ತವ್ಯವಿಲ್ಲ; ವ್ಯಕ್ತಿತ್ವವಿಲ್ಲ. ಗಣರು ಗಣ್ಯರು ಮನೆಗೆ ಬಂದರೆ ಗುಡಿಗಟ್ಟಿ ಸಂಭ್ರಮಿಸಿ ವೈಭವದ ವಿರುದ್ಧ ಆದರಾತಿಥ್ಯವನ್ನಾಚರಿಸುವುದೂ ಗಣಾಚಾರ. "ಒಡೆಯರು ಮನೆಗೆ ಬಂದರೆ ಗುಡಿತೋರಣವ ಕಟ್ಟಿ; ನೆಂಟರು ಬಂದರೆ ಸಮಯವಿಲ್ಲೆನ್ನಿ ..." ಗಣಾಚಾರಕ್ಕೆ ಗುರಿಯಾದವರು ಅಂದರೆ ಗಣಾಚಾರನಿರತರು ರಕ್ತಸಂಬಂಧದ ಸಂಕುಚಿತ ಎಲ್ಲೆಯನ್ನು ಮೀರಿ ಮುನ್ನಡೆಯುತ್ತಾರೆ. ಪೂರ್ವಾಶ್ರಯ ನಿರಸನ ತತ್ತ್ವವನ್ನಾಚರಿಸುತ್ತಾರೆ. ಮಮಕಾರಕ್ಕೆ ತಿಲಾಂಜಲಿಯನ್ನು ತೆತ್ತುತ್ತಾರೆ. ಎಲ್ಲರನ್ನು ಸಮಾನವಾಗಿ ಕಾಣುತ್ತಾರೆ. ತನ್ನವರು ಅನ್ಯರು ಎಂಬ ಭೇದವಿಲ್ಲದಂತಿರುತ್ತಾರೆ.

"ಸಹನಾವವತು, ಸಹನೌ ಭುನಕ್ತು, ಸಹ ವೀರ್ಯಂಕರವಾವಹೈ ।
ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ ॥"

ಈ ಎಲ್ಲ ಔಪನಿಷದ್ಗುಣ ಧರ್ಮಗಳು ಗಣಾಚಾರದಲ್ಲಿ ಗುಂಫಿತವಾಗಿವೆ. ರಾಗ–ದ್ವೇಷಗಳನ್ನು ನಿರ್ಮೂಲನ ಮಾಡಿ ಸಹಕಾರ–ಸಾಂಘಿಕ ಸಮನ್ವಯ ಜೀವನ ಪದ್ಧತಿಯನ್ನು

ತರುವುದೇ ಗಣಾಚಾರದ ಗುರಿ. ಇದು ಇಂದಿನ ಪ್ರಜಾಸತ್ತೆಯುಳ್ಳ ರಾಜಕೀಯ ತಂತ್ರ ಮೂಲವೂ ಆಗಿದೆ. ಅಲ್ಲದೆ ಇತರರಲ್ಲಿ ದುರ್ಗುಣ ದುರಾಚಾರ ದುರ್ಬುದ್ಧಿ ಗಳಿದ್ದರೆ ಅವನ್ನು ಬಿಡಿಸುವುದೂ ಗಣಾಚಾರದ ಧ್ಯೇಯವಾಗಿದೆ. ಎಲ್ಲರ ಧ್ಯೇಯ ಎಲ್ಲರ ಹೃದಯ, ಎಲ್ಲರ ಮನ, ಎಲ್ಲರ ಧರ್ಮವಿಧಾನ ಒಂದಾಗಿರಬೇಕು; ಮಂಗಳ ಮಯವಾಗಿರಬೇಕು. ಬಾಳು ಬದುಕು ಹಸನಾಗಿರಬೇಕು–ಎಂಬುದೇ ಗಣಾಚಾರ ಹೃದಯ. ಎಲ್ಲರೂ ಒಂದುಗೂಡಿ, ಒಂದನ್ನೇ ಆಡಿ, ಕಡೆಗೆ ಒಂದರಲ್ಲಿ ಒಡಗೂಡಿ ಅಚ್ಚಳಿಯದಿರಬೇಕು ಎಂಬುದೆ ಗಣಾಚಾರದ ಗಣನೀಯ ಗುರಿ. ಇದು ಬರೀ ಸಮತ್ವಯೋಗವಲ್ಲ ಸರ್ವಸಮರಸಯೋಗ; ಸಹಯೋಗ. ಎರಡನೆಯದಾಗಿ ಶಿವದ್ವೇಷಿ ಗಳನ್ನು ನಿಗ್ರಹಿಸುವುದೂ ಇದರ ಒಂದು ನಿರಿ. ಇದು ಹೇಯವಲ್ಲ. ಇದು ಸಹ ಉಪಾದೇಯ. ಶಿವದ್ವೇಷ ಯಾರಿಗೂ ಸರಿಯಲ್ಲ. ಶಿವತ್ವ ಯಾರಿಗೆ ಬೇಡ ?

ಸಮಾಜದಲ್ಲಿ ಈ ಆಚಾರಕ್ಕೆ ಮೀಸಲಾದವರದೇ ಒಂದು ಗುಂಪಿದೆ. ಅವರ ಕರ್ತವ್ಯವೆಂದರೆ ಸಮಾಜದಿಂದ ಸಿಡಿದು ಹೊರಕ್ಕೆ ಯಾರು ಹೋಗದಂತೆ ಎಚ್ಚರಿಕೆ ವಹಿಸುವುದು. ಯಾವ ಬಗೆಯಲ್ಲಿಯೂ ಒಡಕು ಮೈದೋರಬಾರದು. 'ಗಂಡ ಬಿಟ್ಟರೂ ಗಣಾಚಾರಿ ಬಿಡ' ಎಂಬ ಒಂದು ನಾಣ್ಣುಡಿಯಿದೆ. ಇದಕ್ಕೆ ಅಪಾರ್ಥ ಕಲ್ಪಿಸಿದ್ದಾರೆ ಕೆಲವರು. ವಾಸ್ತವವಾಗಿ ಅದರ ಅರ್ಥ ಅವರು ಭಾವಿಸಿದಂತಲ್ಲ, ಗಣಾ ಚಾರಿ ವೈಷಯಿಕ ಜೀವಿಯಲ್ಲ. ಅದಕ್ಕೆ ಅದರದೇ ಆದ ಗಂಭೀರವಾದ ಅರ್ಥವಿದೆ. ಒಬ್ಬ ಹೆಣ್ಣುಮಗಳು ಬೇರೆ ಭವಿಯೊಡನೆ ಸಂಪರ್ಕ ಬೆಳಸಿ, ಅದನ್ನು ಅರಿತು ಅವಳ ಗಂಡನು ಅವಳನ್ನು ಬಿಡಬಯಸಿದರೂ ಬಿಟ್ಟರೂ ಗಣಾಚಾರಿ ಅವಳನ್ನು ಸಮಾಜದಿಂದ ಸಿಡಿದು ಹೊರಕ್ಕೆ ಹೋಗದಂತೆ ತಡೆದು ಅವಳಿಗೆ ತಕ್ಕ ವ್ಯವಸ್ಥೆಮಾಡಿ ಸಮಾಜದಲ್ಲಿಯೆ ಉಳಿವಂತೆ ಮಾಡುತ್ತಾನೆ. ಈ ವಾಸ್ತವಾರ್ಥದಲ್ಲಿ ಆ ಗಾದೆ ಮೈದಾಳಿದೆ. ಇದನರಿಯದೆ ಇಲ್ಲದ ಸಲ್ಲದ ಅರ್ಥಗಳನ್ನು ಕಲ್ಪಿಸುವುದು ಎಷ್ಟು ಮಾತ್ರಕ್ಕೂ ಸರಿಯಲ್ಲ. ಅದು ಆಚಾರಕ್ಕೆ ಒಗ್ಗದ ಅರ್ಥ; ಅನರ್ಥ. ಆಚಾರದ ಉದ್ದೇಶಕ್ಕೆ ಹೊರಗು. ಅಂತವನಿಗೆ 'ಗಣಾಚಾರಿ' ಎನ್ನಲು ಸಾಧ್ಯವೆ? ಅಂತವರನ್ನು ಏರ್ಪಡಿಸಲು ಸಾಧ್ಯವೆ ?

ಗಂಡ ಗುರುಪುತ್ರನಾಗಿ ಹೆಂಡತಿ ಆಗಿರದಿದ್ದರೆ, ಆಗದೆ ಇರಲು ಗಂಡ ಅನುಮತಿಸಿ ಹಾಗೆಯೆ ಇರಲು ಕೈಬಿಟ್ಟಿದ್ದರೆ, ಗಣಾಚಾರಿಯಾದವನು ಬಿಡುವುದಿಲ್ಲ. ಅವಳಿಗೆ "ಸತಿ ಪತಿಯೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ. ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರಸಿದಂತೆ ಕಾಣಾ ರಾಮನಾಥಾ!" ಎಂಬಿವೇ ಮೊದಲಾದ ವೀರಶೈವಾಚಾರವನ್ನು ಮನಮುಟ್ಟುವಂತೆ ಹೇಳಿ ಗುರುಪುತ್ರಿಯನ್ನಾಗಿಸುವುದು ಗಣಾಚಾರಿಯ ಕರ್ತವ್ಯವಾಗಿತ್ತು. 'ಗಂಡನುಳ್ಳಮ್ಮನ ಗೌರಿ ಎಂದು ಕಾಣುವುದೆ' ಗಣಾಚಾರಿಯ ಆಚಾರ. ಸಮಾಜದ ಒಡಕನ್ನು ಸರಿಪಡಿಸಿ ಒಂದುಗೂಡಿಸುವಿಕೆ, ಶೋಷಣೆಯನ್ನು ಸಹಿಸದೆ ಸುಧಾರಿಸುವಿಕೆ, ಗಣರನ್ನು ಆದರಿಸುವಿಕೆ, ಸರ್ವರನ್ನು ಸಮವಾಗಿ ಕಾಣುವಿಕೆ ಗಣಾಚಾರಿಯ ಹೊಣೆ.

ಭೃತ್ಯಾಚಾರ : ಇದರಲ್ಲಿ ಗುರು–ಶಿಷ್ಯಭಾವದ, ಜಂಗಮ ಭಕ್ತ ಭಾವದ, ಲಿಂಗಾಂಗದ ಸಂದೇಶವಿದೆ. ಬುದ್ಧಿಯಿಲ್ಲದೆ ಹೊಟ್ಟೆ ಹೊರೆಯಲು ಊಳಿಗದಾಳಿನಂತೆ ಭೃತ್ಯಾಚಾರ ಮಾಡೆಂದು ಹೇಳುವುದಲ್ಲ. ಸರ್ವ ಸಮರ್ಥನಾಗಿ ಸ್ವಾರ್ಥಭಾವವನ್ನು ಹಮ್ಮು ಬಿಮ್ಮುಗಳನ್ನು ಬಿಟ್ಟು ಸ್ವಾನುಭಾವಿಗಳಲ್ಲಿ ಭೃತ್ಯರಾಗಿ ವರ್ತಿಸುವುದರಲ್ಲಿದೆ ಜೀವನ ಸೌಂದರ್ಯ, ಶೀಲ ಸೌಂದರ್ಯ; ವಿನಯ ಭಾವ ಸೌಂದರ್ಯ. ತಾನು ಎಷ್ಟೇ ಬಲ್ಲಿದನಾಗಿದ್ದರೂ ತನ್ನ ಏಳ್ಗೆಗೆ ಒಳಿತನ್ನು ಹೇಳುವವರಲ್ಲಿ ಭೃತ್ಯಭಾವವಿರಲೇಬೇಕು. ಈ ಭಾವದಿಂದ ಅಧಿಕಾರದ ದಾಹ ಅಡಗುತ್ತದೆ. ಸ್ವೇಚ್ಛಾವರ್ತನ ಅಣಗುತ್ತದೆ. ತನಗೆ ಶಕ್ತಿಯಿದ್ದರೂ ಅಧಿಕಾರ ಆಶೆಗೆ ಬೀಳದಿರುವ ಭೃತ್ಯಾಚಾರದ ಭಾವ ಭವ್ಯವಾದುದು. ಈ ಭೃತ್ಯಾಚಾರ ದಾಸಭಾವದ್ದಲ್ಲ; ಹೀನಭಾವದ್ದಲ್ಲ. ಇದರಿಂದ ಇನ್ನೂ ಹೆಚ್ಚಿನ ವ್ಯಕ್ತಿತ್ವವುಂಟಾಗುತ್ತದೆ. ಪ್ರಭಾವಶಾಲಿತ್ವವುಂಟಾಗುತ್ತದೆ. ಬಾಪು, ಜೇಪಿ ಅವರು ಭಾರತದ ರಾಷ್ಟ್ರಾಧ್ಯಕ್ಷರಾಗಬಹುದಾಗಿದ್ದರೂ ಬೇಡೆಂದು ಬಿಟ್ಟುದೇ ಜನಸೇವಕರೆಂದು ಹೇಳಿಕೊಂಡುದೇ ಅವರವರ ಭೃತ್ಯಾಚಾರ. ಇದರಿಂದ ಅವರ ನಿಲವು ಎತ್ತರಕ್ಕೇರಿತಲ್ಲದೆ ತಗ್ಗಲಿಲ್ಲ. ಸಂಯಮಸ ಜೀವಿಯಾಗಿ, ಕಡೆಗೂ ಸತ್ಯಸಾಧನ ಜೀವಿಯಾಗಿ ಬಲ್ಲಿದರಿಗೆ ಭೃತ್ಯನಾಗಿ ಇರುವುದೆ ಭೃತ್ಯಾಚಾರಸಾರ. ಇದಕ್ಕಿಂತ ಬೇರಿಲ್ಲ ಬಾಳಹಿರಿಮೆ. ಜನತಾ ಜಗದೀಶನಿಗೆ ಭೃತ್ಯನಾಗಿದ್ದರೆ ಆ ಭೃತ್ಯತ್ವದಲ್ಲಿರುವ ಕರ್ತೃತ್ವಕ್ಕೆ ಕಳೆಯೇರುತ್ತದೆ. 'ಕಿಂಕರತ್ವೇ ಶಂಕರತ್ವಂ' ಎಂಬುದು ಸಿದ್ಧವಾಗುತ್ತದೆ. ಅವರಲ್ಲಿ ಸುಸಂಸ್ಕೃತಿ ಪರಿಣತಿಗೇರುತ್ತದೆ. ನಿರಹಂಕಾರಕ್ಕೆ ನಿದರ್ಶನ ಈ ಭೃತ್ಯಾಚಾರ. ಇದರಲ್ಲಿ ದಾಸತ್ವ, ವೀರದಾಸತ್ವ, ಭೃತ್ಯತ್ವ ವೀರಭೃತ್ಯತ್ವ ಎಂಬ ಉಪಭಾಗಗಳು ನಾಲ್ಕುಂಟು. ಇವೆಲ್ಲ ಕಿಂಕರತ್ವದಿಂದ ಶಂಕರತ್ವವನ್ನು ಸಂಪಾದಿಸುವ ಸತ್ಯಸಾಧನಗಳು; ಸದಾಚಾರಗಳು.

"ಬ್ರಹ್ಮಪದವಿಯನೊಲ್ಲೆ, ವಿಷ್ಣುಪದವಿಯನೊಲ್ಲೆ
ರುದ್ರಪದವಿಯನೊಲ್ಲೆ, ಮತ್ತಾವ ಪದವಿಯನೊಲ್ಲೆನಯ್ಯಾ !
ಕೂಡಲಸಂಗಮದೇವಾ, ನಿಮ್ಮ ಸದ್ಭಕ್ತರ
ಪಾದವನರಿದಿಪ್ಪ ಮಹಾಪದವಿಯನೆ ಕರುಣಿಸಯ್ಯಾ !"

"ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ."

"ಮೇಲಾಗಲೊಲ್ಲೆನು ಕೀಳಾಗಲೊಲ್ಲದೆ;
ಕೀಳಿಂಗಲ್ಲದೆ ಹಯನ ಕರೆವುದೆ?
ಮೇಲಾಗಿ ನರಕದೊಳಗೋಲಾಡಲಾರೆನು.
ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು,
ಮಹಾದಾನಿ ಕೂಡಲಸಂಗಮದೇವಾ !

"ಕಾಗೆ ವೃಷ್ಟಿಸುವ ಹೊನ್ನ ಕಳಶವಹುದರಿಂದ,
ಒಡೆಯರು ಜೋಗಯಿಸುವ ಚಮ್ಮಾವುಗೆಯ ಮಾಡಯ್ಯ.
'ಕರ್ಮಾವಲಂಬನಂ ಕೇಚಿತ್, ಕೇಚಿತ್ ಜ್ಞಾನಾವಲಂಬನಂ ।
ವಯಂತು ಶಿವಭಕ್ತಾನಾಂ ಪಾದುಕಸ್ಯಾವಲಂಬನಂ ॥'
ಎಂದುದಾಗಿ ಕೂಡಸಂಗಮದೇವಾ,
ನಿಮ್ಮ ಸೆರಗೊಡ್ಡಿ ಬೇಡುವೆನು, ಇದೊಂದೆ ವರವ ಕರುಣಿಸಯ್ಯಾ !"

"ಎತ್ತಪ್ಪೆ ಶರಣಂಗೆ, ತೊತ್ತಪ್ಪೆ ಶರಣಂಗೆ,
ಭೃತ್ಯನಾಗಿ ಸದ್ಭಕ್ತರ ಮನೆಯ ಬಾಗಿಲಕಾಯ್ದಿಪ್ಪ ಸೊಣಗನಪ್ಪೆ.
ಕರ್ತಾರ, ನಿನಗೆ ಕರವೆತ್ತಿ ಪೊಡೆವಡುವ ಭಕ್ತರ ಮನೆಯ
ಹಿತ್ತಲ ಬೇಲಿಯಾಗಿಪ್ಪೆನೈ ರಾಮನಾಥಾ !"

ಈ ವಚನವಾಣಿಗಳು ಭೃತ್ಯಾಚಾರದ ನಿಲವನ್ನು ಬಿತ್ತರಿಸಿವೆ. ಭಕ್ತನೆಂಬ ಬಿಂಕು, ಹಿರಿಯನೆಂಬ ಹೆಮ್ಮೆ, ಬಲ್ಲಿದನೆಂಬ ಬಿಮ್ಮುಗಳಿರಬಾರದು. ಡಂಬುಡಳ್ಳುಗಳಿರಬಾರದು. ಸಚ್ಚಿದಾನಂದ ಸ್ವರೂಪರಾದ ಗುರುಲಿಂಗಜಂಗಮರ ಮುಂದೆ ತಾನೇತರವನೂ ಅಲ್ಲೆಂಬ ಭಾವವಿರುವುದೇ ಲೇಸು. ಏರಿ ಇಳಿಯುವುದಕ್ಕಿಂತ ಇದ್ದಲ್ಲಿ ಇರುವುದೆ ಲೇಸು. ಕರುಣೆಯ ಕಂದನಾಗಿ ಬೆಳೆದ ಬಳಿಕ ಕರುಣಿಸಿದವರನ್ನು ಮರೆಯಬಾರದು.

"ಮರದ ನೆಳಲಲ್ಲಿದ್ದು, ತನ್ನ ನೆಳಲನರಸಬಹುದೆ ?
ನಿಮ್ಮ ಶರಣರ ಮುಂದೆ ನಾನೇತರ ಯುಕ್ತನಯ್ಯಾ ?
ಆನು ಭಕ್ತನೆಂಬ ನುಡಿ ಸುಡದೆ ಕೂಡಲಸಂಗಮದೇವಾ ?

"ಮಾವಿನ ಕಾಯೊಳಗೊಂದು ಎಕ್ಕೆಯ ಕಾಯಿ ನಾನಯ್ಯ
ಆನು ಭಕ್ತನೆಂತೆಂಬೆನೆ,–
ನಿಮ್ಮ ಶರಣರ ಮುಂದೆ ನಾಚಿಕೆ ಇಲ್ಲದೆ ?
ಕೂಡಲ ಸಂಗನ ಶರಣರ ಮುಂದೆ ನಾನೆಂತು ಭಕ್ತನಯ್ಯಾ ?

"ತತ್ತ್ವವನರಿದಿಹೆನೆಂದು, ಮೃತ್ಯುವ ಕರಕೊಂಡೆನಯ್ಯಾ
ನಾನೆಂತು ಬಲ್ಲೆನು, ನಿಮ್ಮ ಶರಣರಂತುವನು ?
ಸರ್ವಾಪರಾಧಿ ನಾನು, ಮನದ ಸೂತಕ ಹಿಂಗದಾಗಿ,
ಕೂಡಲಸಂಗಮದೇವಾ ".

ಮರದ ನೆರಳ ಮುಂದೆ ತನ್ನ ನೆರಳು ಎನಿತೋ ಮಹಾನುಭಾವಿಗಳ ಮುಂದೆ ತನ್ನ ವ್ಯಕ್ತಿತ್ವವೂ ಅನಿತೆ ! ಒಂದು ವೇಳೆ ಅವರಿಗೆ ಸರಿಬರಿಯಾಗಿದ್ದರೂ ಅದನ್ನುಸಲ್ಲದ ಬಗೆಯಲ್ಲಿ ಅವಿನಯದಲ್ಲಿ ಅಭಿವ್ಯಕ್ತಗೊಳಿಸಬಾರದು. ಅನುಚಿತ ರೀತಿಯಲ್ಲಿ ತೋರಿದಲ್ಲಿ

ಅದೇ ಒಂದು ಮನದ ಸೂತಕ. ತತ್ತ್ವಜ್ಞಾನಕ್ಕೆ ತುದಿಮೊದಲಿಲ್ಲ. ಭಕ್ತತ್ವ ಸಾಧನೆಗೆ ಸೀಮೆಯಿಲ್ಲ. ತಾನೇ ಕರ್ತೃವೆಂದು ಭಾವಿಸುವುದು ಆಚಾರಮಾರ್ಗಕ್ಕೆ ಅನುಚಿತ. ಆರ್ಜಿಸಿದ ವಿಚಾರಾನುಭವಗಳನ್ನು ವಿನಯಾನ್ವಿತವಾದ ಆಚಾರಪಥದಲ್ಲಿ ತೋರಬೇಕು. ಸೇವಾ ಭಾವನೆಯಲ್ಲಿದ್ದು ಭಕ್ತಿಯನ್ನು ಬಲ್ಲತನವನ್ನು ತೋರಬೇಕು. ಆಗ ಆಚಾರದ ಉದ್ದೇಶ ಸಾರ್ಥಕವಾಗುತ್ತದೆ; ಉದ್ದೀಪಿತವಾಗುತ್ತದೆ. ಆಚಾರ ಸಂಹಿತೆಯ ಉದ್ದೇಶ ವಿನಯ, ನಿರಹಂಭಾವ, ಮಿದು ಮಾತು, ಸದ್ಗುಣಸಾಧನ, ಶುಚಿತನ, ಮೆಲ್ಲಮೆಲ್ಲನೆ ನಡೆವಿಕೆ, ಕಣ್ಣಿಟ್ಟು ಮತ್ತು ಕಣ್ಣರಿಕೆಯಿಂದ ನಡೆವಿಕೆ–ಇವೆ ಮೊದಲಾದವುಗಳು. "ಬಲ್ಲವರು ಬೆಸಗೊಂಡರೆ ಮೆಲ್ಲನಾರೈದು ಮೆಲ್ಲನೆ ನುಡಿಯಬೇಕು. ಕಲ್ಲು ಕಲ್ಲು ತಾಗಿದಂತೆ ಸೊಲ್ಲು ಬಿರಿಯಾದಡೆ, ಅಲ್ಲಿ ನಿಲ್ಲನಯ್ಯ ಅಖಂಡೇಶ್ವರ." "ಕಂಡ ಭಕ್ತಂಗೆ ಕೈ ಮುಗಿವಾತನೆ ಭಕ್ತ. ಮೃದು ವಚನಂಗಳೇ ಸಕಲ ಜಪಂಗಳಯ್ಯ. ಮೃದು ವಚನಂಗಳೇ ಸಕಲ ತಪಂಗಳಯ್ಯ. ಸದುವಿನಯವೆ ಸದಾಶಿವನ ಒಲುಮೆಯಯ್ಯ. ಕೂಡಲಸಂಗಮದೇವಯ್ಯನಂತಲ್ಲದೊಲ್ಲನಯ್ಯ." "ಇತ್ತ ಬಾರಯ್ಯ, ಇತ್ತ ಬಾರಯ್ಯ ಎಂದು ಭಕ್ತರೆಲ್ಲರೂ ಕೂರ್ತು ಹತ್ತೆ ಕರೆವುತ್ತಿರಲು, ಮತ್ತೆ ಕೆಲಕ್ಕೆ ಹೋಗಿ, ಶರಣೆಂದು ಹಸ್ತ ಬಾಯನೇ ಮುಚ್ಚಿ, ಕಿರಿದಾಗಿ ಭೃತ್ಯಾಚಾರವ ನುಡಿದು, ವಿನಯಧ್ಯಾನ ಉಳ್ಳರೆ, ಎತ್ತಿಕೊಂಬನಯ್ಯ ಕೂಡಲಸಂಗಮದೇವ ಪ್ರಮಥರ ಮುಂದೆ." ಇವೆ ಮೊದಲಾದ ವಚನಗಳಲ್ಲಿ ಭೃತ್ಯಾಚಾರದ ಹೃದಯವನ್ನೂ ಹಿರಿಮೆಯನ್ನೂ ಹೊರಸೂಸಿದ್ದಾರೆ ಬಸವಣ್ಣನವರು. ಅವರಿಗೆ ಭೃತ್ಯಾಚಾರವೇ ಪಂಚಪ್ರಾಣ.

ನಡೆಚನ್ನ ನುಡಿಚನ್ನ ಆಗುವುದೆ, ಆಗಿ ತನ್ನನ್ನು ತಾನು ಉದ್ಧರಿಸಿಕೊಳ್ಳುವುದೆ ಆಚಾರಗಳ ಆಶಯ. ಅರಿದು ಅರಿಯದಂತಿರುವುದೂ ವೀರಶೈವಮತದ ಒಂದು ಆಚಾರ. "ಎನಗೆ ನಾನೇ ಹಗೆಯಯ್ಯ ! ಎನಗೆ ನಾನೇ ಕೆಳೆನೋಡಯ್ಯ ! ನಿಮ್ಮ ಸದ್ಭಕ್ತರೊಡನೆ ವಿರೋಧವ ಮಾಡಿದಡೆ, ಎನ್ನ ಕೊಲುವದಾಗಿ, ನಿಮ್ಮ ಪುರಾತನರಿಗಂಜಿ ಬೆಸಗೊಂಡಡೆ, ಎನ್ನ ಕಾಯ್ವುದಾಗಿ, ಅನ್ಯರು ಹಗೆಯಲ್ಲ, ಕೆಳೆಯಲ್ಲ: ಬಾಗಿದ ತಲೆಯು, ಮುಗಿದ ಕಯ್ಯಾಗಿರಿಸು ಕೂಡಲಸಂಗಮದೇವಾ." ಅನ್ಯರ ಗುಣದೋಷಗಳನ್ನು ಎಣಿಸುವುದು, ಎಣಿಸಿ ನೊಂದು ನಲಿವುದು ಆಚಾರವಲ್ಲ. ಹಗೆತನ ಕೆಳೆತನಗಳನ್ನು ಅನ್ಯರಲ್ಲಿ ಆರೋಪಿಸುವುದು ಅಳಿಸುವುದು ಆಚಾರವಲ್ಲ. ಎರಡನ್ನೂ ಮಾಡದೆ ಸಹಜವಾಗಿ ನಡೆವ ಮಾಧ್ಯಮ ಮಾರ್ಗವನ್ನು ಹಿಡಿವುದು ಆಚಾರ. ತಲೆಬಾಗಿ ಕೈ ಮುಗಿಯುತ್ತಿರುವುದು ಆಚಾರ. ಇದು ತನ್ನ ಏಳ್ಗೆಯ ಹೊಲಬು. "ಕುರುಡ ಕಾಣನೆಂದು, ಕಿವುಡ ಕೇಳನೆಂದು, ಹೆಳವ ಇರಿಯನೆಂದು, ಮರುಳ ಬೈದನೆಂದು, ಪಿಶಾಚಿ ಹೋದನೆಂದು ಮನ ಕದನ ಬಡುವನೆ? ತಾನರಿವುಳ್ಳಾತ ತತ್ತ್ವವನರಿಯದವರಲ್ಲಿ ಗುಣ–ದೋಷವನರಸುವನೆ ಹೇಳಾ ಸಿಮ್ಮಲಿಗೆಯ ಚನ್ನರಾಮಾ ?" "ಮಾಡುವ ಭಕ್ತಂಗೆ ಮನವೇ ಸಾಕ್ಷಿ. ಹೊರಹೊಮ್ಮಿ ಬಯಲ ಹೊರಲೇಕೆ? ಹಮ್ಮಿಲ್ಲದೆ ಮಾಡಿ,

ಮನದಲ್ಲಿ ಮರುಗದಿರ್ದಡೆ ಅಲ್ಲಿ ತಾ ಹೆರೆ ಹಿಂಗದಿರ್ಪನಂಬಿಗಚೌಡಯ್ಯ." "ನಾನೆಂಬ ಅಹಂಕಾರದಲ್ಲಿ ನಾನುಂಡೆನಾದರೆ, ಎನಗದೇ ಭಂಗ. ಸ್ತುತಿ ನಿಂದೆಗೆ ನೊಂದೆನಾದೊಡೆ, ಅಂಗೈಯಲ್ಲಿದ್ದ ಗುಹೇಶ್ವರ ಲಿಂಗಕ್ಕೆ ದೂರ." ಇನ್ನೊಬ್ಬರ ಗುಣದೋಷಗಳನ್ನು ತಾನೆಣಿಸಬಾರದು. ತಾನು ಅನ್ಯರಿಂದ ಬರುವ ಸ್ತುತಿ ನಿಂದೆಗಳಿಗೆ ಒಳಗಾಗಬಾರದು. ತನ್ನ ತಾನರಿತವರ ಆಚಾರವಿದಲ್ಲ. ಹೀಗೆ ಮಾಡುವುದರಿಂದ ಮನ ಸ್ವಚ್ಛವಿರದು. ಹಮ್ಮು ಹೊಮ್ಮದಿರದು. ನೋವು ನಲಿವು ಕಾಡದಿರವು. ಇದೊಂದು ಬಯಲ ಹೊರುವ ಬುದ್ಧಿಗೇಡಿಯ ಬದುಕು. ಅಂಗೈಯೊಳಗಿರುವ ಲಿಂಗಯ್ಯನಿಗೆ ದೂರಾಗುವ ದೂಸರ ಬಾಳು. ಇದರಿಂದ ತನ್ನ ದೇಹಾಭಿಮಾನ, ಮನದ ಸಂಕಲ್ಪ ವಿಕಲ್ಪಗುಣ, ಚಿತ್ತ ಮಾಲಿನ್ಯ, ಭಾವ ಭ್ರಾಂತಿಗಳು ತೊಲಗವು.

"ದೇಹ ನಿರ್ದೇಹವೆನುತಿಪ್ಪರಯ್ಯ. ದೇಹ ನಿರ್ದೇಹವಪ್ಪ ವರ್ಮವನರಿಯರು
ಅಹಂ ಎಂಬುದೇ ದೇಹ, ದಾಸೋಽಹಂ ಎಂಬುದೇ ನಿರ್ದೇಹ-ನೋಡಾ !
'ಅಕಾಯೋ ಭಕ್ತಕಾಯಂ ವಾ' ಎಂದುದಾಗಿ,
ಅಹಂಭಾವವಳಿದವರ ಕೂಡಲಚನ್ನಸಂಗಯ್ಯನಲ್ಲಿ ನಿರ್ದೇಹಿಗಳೆಂಬೆ"

"ವೇದಾದಿ ನಾಮ ನಿರ್ನಾಮ ಮಹತ್ತತ್ತ್ವಂ ಮದೀಶ್ವರಃ !
ಗುರೂಕ್ತಮಂತ್ರಮಾರ್ಗೇಣ ಇಷ್ಟಲಿಂಗಂತು ಶಾಂಕರೀ ॥' ಎಂದುದಾಗಿ,
ವಚನ ಪಾತಕವೆನ್ನ, ವಚನದೋಷಗಳೆನ್ನ ಕಾಡಿ ಕಾಡಿ ಕೆಡಿಸಿಹವೆನ್ನ
ಕೂಡಲಸಂಗಮದೇವಾ, ಅಹಮೆಂಬ ಅಹಂಕಾರವೆನ್ನ."

ಈ ಎರಡು ವಚನಗಳಲ್ಲಿ ಚನ್ನಬಸವಣ್ಣ - ಬಸವಣ್ಣ ವೀರಶಿವಾಗಮೋಕ್ತಿಗಳನ್ನು ಒಪ್ಪಿ ಉದ್ಧರಿಸಿರುವದನ್ನು ಉಪೇಕ್ಷಿಸದೆ ಉಪಲಕ್ಷಿಸಬೇಕು. ವೀರಶಿವಾಗಮಗಳ ವೀರಶೈವ ಮತವನ್ನು ಮನನಿಸಬೇಕು.

"ನಾ–ನೀನೆಂಬ ಅಹಂಕಾರ ತಲೆದೋರಿದಲ್ಲಿ
ಅಟಮಟ ಕುಟಿಲ ಕುಹಕವೆಂಬ ಬಿರುಗಾಳಿ ಹುಟ್ಟಿತ್ತು.
ಬಿರುಗಾಳಿ ಹುಟ್ಟಲೊಡನೆ ಜ್ಞಾನಜ್ಯೋತಿ ಕೆಟ್ಟಿತ್ತು.
ಜ್ಞಾನ ಜ್ಯೋತಿ ಕೆಡಲೊಡನೆ ನಾ ಬಲ್ಲೆ ಬಲ್ಲಿದರೆಂಬ,
ಅರುಹಿರಿಯರೆಲ್ಲರೂ ತಾಮಸಕ್ಕೊಳಗಾಗಿ,
ಸೀಮೆದಪ್ಪಿ ಕೆಟ್ಟರು ಕಾಣಾ ಗುಹೇಶ್ವರಾ."

ಅಹಂ ಬಗೆಗೆ ಈ ಮೂವರ ಈ ಮೂರು ಮಾತುಗಳು ಮುತ್ತಿನಂತವುಗಳು. ಮಾತು ಮಾತಿನಲ್ಲಿಯೂ ಭಾವಪೂರ್ಣವಾದ ಮಿಂಚಿದೆ. ಕಾಯ ವಾಕ್ ಮನಜ್ಞಾನಗಳ

ಸಾಧನೆಯ ಬಗೆಗೆ ಪರಿವಿಡಿದು ಪರಿಣಾಮಕಾರಿಯಾಗಿ ಚೆನ್ನಬಸವಣ್ಣ–ಬಸವಣ್ಣ–ಅಲ್ಲಮಪ್ರಭುಗಳು ಪ್ರತಿಪಾದಿಸಿದ್ದಾರೆ. ತ್ರಿಕರಣದೋಷಕ್ಕೆ ಅಹಂಭಾವವೆ ಕಾರಣ. ಅಹಂಭಾವವುಳ್ಳವನೆ ದೇಹಿ, ವಚನ ಪಾತಕಿ, ಕುಹಕಿ ಮತ್ತು ಅಜ್ಞಾನಿ ತಾಮಸಿ. ಆತ ಭೃತ್ಯಾಚಾರಕ್ಕೆ ಸಲ್ಲ. ಸದಾಚಾರ ಶಿವಾಚಾರಗಳಿಗೆ ಸಲ್ಲ. ಕಾಯಾಹಂಕಾರ ವಚನಾಹಂಕಾರ ಮನಾಹಂಕಾರಗಳು ಮಾನವನಿಗೆ ತರವಲ್ಲ. ಇವಿದ್ದರೆ ಕಾಯ ಭಕ್ತಕಾಯವಾಗದು–ದೇಹಭಾವವಳಿಯದು; ವಾಗ್ದೋಷ ದೂರಾಗದು, ಮನದ ಕುಟಿಲ ಕುಹಕಗಳು ಕೆಡವು. ಅಚ್ಚ ಅರಿವಿನ ಹಿರಿಬೆಳಗು ಹಿಂಗಿ ಮರವೆಯ ಕತ್ತಲು ಮುತ್ತದೆ ಬಿಡದು. ತಾಮಸಕ್ಕೊಳಗಾದವರು ಔಚಿತ್ಯದ ಮೇರೆ ಮೀರಿ, ಮನ್ನಣೆಯ ಎಲ್ಲೆ ಮೀರಿ ವರ್ತಿಸುವರು. ಭೃತ್ಯಾಚಾರವನ್ನು ಬಿಟ್ಟು ಭ್ರಷ್ಟಾಚಾರಕ್ಕಿಳಿವರು; ಭ್ರಮಿಷ್ಟರಾಗುವರು. ಗರ್ವದ ಪರ್ವತವನ್ನೇರಿದವರ ಗತಿಯೇ ಇದು. "ತಮ್ಮ ತಾವರಿಯರು; ಹೇಳಿದರೆ ಕೇಳರು. ಆರರ ಹೊಲಬನೇನೆಂದರಿಯರು. ಎಂಟರ ಕಂಟಕವ ಮುನ್ನರಿಯರು. ಏರಿದ ಬೆಟ್ಟವ ಇಳಿಯಲರಿಯದವರನೇನೆಂಬೆ ಗುಹೇಶ್ವರಾ?" ಅಂತವರನ್ನು ಅರಿಷಡ್ವರ್ಗ-ಅಷ್ಟಮದಗಳು ಬೆನ್ನು ಬಿದ್ದು ಬಿಡದೆ ಕಾಡುವುವು, ಕಾಡಿಗೆ ಬಿದ್ದು ಕಣ್ಣುಕಾಣದೆ ಹೊಲಬುದೋರದೆ ಕಂಗಾಲಾಗುವರು. ಕಗ್ಗಾಡನ್ನು ಏರಿಕುಳಿತರೆ ಅಲ್ಲಿ ಸಿಕ್ಕುವುದೇನು? ಭವದ ಭಾಗ್ಯವನ್ನೇರಿ ಆತ್ಮಜ್ಞಾನಕ್ಕೆ ವಂಚಿತರಾಗಿ ಆಚಾರ ಬಾಹಿರರಾಗಿ ಬಾಳುವುದೊಂದು ಬಾಳಲ್ಲ. ಇಲ್ಲಿ ಆತ್ಮಸುಖದ ಹೊಲಬಿಲ್ಲ; ಎಂಟರ ಕಂಟಕ ತಪ್ಪುವಂತಿಲ್ಲ. ಈ ಭವದ ಭಾಗ್ಯ ಕೇಡಿನದು; ಕೆಡಕಿಗೆಳೆದೊಯ್ಯುವಂತಹದು. ಅಹಂಕಾರ ಮಮಕಾರಕ್ಕೊಳಗಾಗಿಸಿ ಅನಾಚಾರಕ್ಕೆ ಅನಿಷ್ಟಕ್ಕೆ ಗುರಿ ಮಾಡುವುದು. ಅಜ್ಞಾನಾಂಧಕಾರದಲ್ಲಿ ಕೆಡುಹುವುದು.

"ನಿನ್ನ ಹರೆಯದ ರೂಹಿನ, ಚೆಲುವಿನ ನುಡಿಯ, ಜಾಣಿನ,
ಸಿರಿಯ ಸಂತೋಷದ, ಕರಿ ತುರಗ ರಥ ಪದಾತಿಯ ನೆರವಿಯ,
ಸತಿಸುತರ ಬಂಧು ಬಳಗದ, ನಿನ್ನ ಕುಲದಭಿಮಾನದ ಗರ್ವವ ಬಿಡು;
ಮರುಳಾಗದಿರು. ಅಕಟಕಟಾ, ರೋಮಜನಿಂದ ಹಿರಿಯನೆ?
ಮಾರನಿಂದ ಚಲುವನೆ? ಸುರಪತಿಯಿಂದ ಸಂಪನ್ನನೆ?
ವಾಮದೇವ ವಸಿಷ್ಠರಿಂದ ಕುಲಜನೆ?
ಅಂತಕನ ದೂತರು ಬಂದು ಕೈವಿಡಿದೆಳೆದೊಯ್ಯುವಾಗ ನುಡಿ ತಡವಿಲ್ಲ,
ಕೇಳೋ ನರನೆ, ಎನ್ನ ಮಹಾಲಿಂಗ ತ್ರಿಪುರಾಂತಕದೇವರ ಪೂಜಿಸಿದೆಯಾದಡೆ
ಕೇಡಿಲ್ಲದ ಪದವು ದೊರಕೊಂಬುವುದು ಮರುಳೆ!"*

---

* ಈ ವಚನ ಮುದ್ರಿಕೆಯು ತ್ರಿಪುರಾಂಕದೇವ ರೂಪು; ಆತ ಅನಾದಿ ವೀರಶೈವ ಸಂಸ್ಥಾಪಕ; ಮಹಾಲಿಂಗ ಸ್ವರೂಪ.

ಭೌತಿಕ ಭಾಗ್ಯವಿಲ್ಲದೆ ಬಡವನಾಗಿ ಬೇರೊಂದು ಬಟ್ಟೆಯಿಲ್ಲದೆ ಭೃತ್ಯಾಚಾರ ಮಾಡಿದರಲ್ಲ, ಬೇಕಾದಷ್ಟು ಭೌತಿಕ ಭಾಗ್ಯವಿದ್ದರೂ ಇದರ ಅಭಿಮಾನ ಅಹಂಕಾರ ಗಳಿಗೆ ಒಳಗಾಗದೆ ಇಳಿದು ತಿಳಿದು ಭೃತ್ಯಾಚಾರ ಮಾಡುವುದರಲ್ಲಿದೆ ಹೆಚ್ಚುಳಿಕೆ ! ಎಂತವರೇ ತನ್ನಲ್ಲಿಗೆ ಬರಲಿ, ಅವರು ಭಕ್ತರಾಗಿದ್ದರೆ ಅವರನ್ನು ಆದರಿಸಬೇಕು; ಆರಾಧಿಸಬೇಕು.

> "ಭಕ್ತನ ಮಠವೆಂದು ಭಕ್ತ ಹೋದಡೆ,
> ಆ ಭಕ್ತ, ಭಕ್ತಂಗೆ ಅಡಿಯಿಟ್ಟು ಇದಿರೆದ್ದು ನಡೆದು ಹೊಡೆಗೆಡೆದು,
> ಒಡಗೊಂಡು ಬಂದು ವಿಭೂತಿ ವೀಳೆಯವನ್ನಿಕ್ಕಿ,
> ಪಾದಾರ್ಚನೆಯ ಮಾಡಿ, ಸಮಯವನರಿತು ಲಿಂಗಾರ್ಚನೆಯಂ ಮಾಡಿಸಿ,
> ಓಲಾಡುತಿರ್ಪುದೇ ಭಕ್ತಿ. ಹೀಗಲ್ಲದೆ,
> ಬೆಬ್ಬನೇ ಬೆರೆತು, ಬೆಬ್ಬನೇ ಬೀಗಿ ಅಹಂಕಾರಭರಿತನಾಗಿಪ್ಪನ ಮನೆಯ
> ಲಿಂಗಸನುಮತರು ಹೊಗರು ಕಾಣಾ ರಾಮನಾಥಾ !"

> "ಗಣಂಗಳ ಬರವ ಕಂಡು ಕೆಯ್ಮುಗಿದು ಅಂಜಲೇಬೇಕು,
> ಶರಣೆನ್ನಲೊಲ್ಲದೀ ಮನವು,
> ಆಗಿನ ಭಕ್ತಿಯನರಿಯದಾಗಿ, ಶರಣೆನ್ನಲೊಲ್ಲದೀ ಮನವು,
> ಆಳ್ದನೆಂದು ನಂಬಿ ನಂಬಲೊಲ್ಲದಾಗಿ,
> ಸಿಮ್ಮಲಿಗೆಯ ಚನ್ನರಾಮನೆನ್ನ ಕಡೆನೋಡಿ ನಗುತಲಿದ್ದಾನೆ"

ಭಕ್ತರಾಗಲಿ ಗಣಂಗಳಾಗಲಿ ಬಂದರೆ ಅವರನ್ನು ಆದರಿಸದಿದ್ದರೆ ಅದು ಭೃತ್ಯಾ ಚಾರಕ್ಕೆ ಹೊರಗು. ತನ್ನಲ್ಲಿ ತಾನೇ ಹಮ್ಮಿನಿಂದ ಬಿಮ್ಮನೆ ಬಿರಿದು ಕುಳಿತುಕೊಳ್ಳುವುದು ಯಾರಿಗೂ ತರವಲ್ಲ. ಲಿಂಗವಂತ ಬಂದರೆ ಲಿಂಗವೇ ನಡೆತಂದಂತೆ ! ಆತನಿಗಾದ ಅವಮಾನ ಆತನದಲ್ಲ,–ಲಿಂಗದ್ದು. ಇದನರಿದು ಭೃತ್ಯಾಚಾರವನ್ನು ಯಾ ಊ ಬಿಡ ಬಾರದು.

ಭೃತ್ಯಾಚಾರದಲ್ಲಿ ನಯದ ನಡೆಗೆ ಇರುವಂತೆ ನಯದ ನುಡಿಗೂ ಹಿರಿಮೆಯಿದೆ; ಹಿರಿದಾದ ಹರುಷವಿದೆ, ವೀರಶೈವನು ಮನಸಾರೆ ನಡೆಯಬೇಕು; ಮನಸಾರೆ ನುಡಿಯ ಬೇಕು.

> "ಸಂಸಾರದಲ್ಲಿ ಹುಟ್ಟಿ, ಮತ್ತೊಂದ ಬಯಸಲೇಕಯ್ಯಾ?
> ನಗುವುದು ನುಡಿವುದು ಶಿವಭಕ್ತರೊಡನೆ,
> ಸುಮ್ಮನೆ ಹಮ್ಮು ಬಿಮ್ಮಾಗಿರಲೇಕಯ್ಯಾ?

'ಅಭ್ಯಾಸಸ್ಯ ವಿಹೀನಸ್ಯ ತಸ್ಯ ಜನ್ಮ ನಿರರ್ಥಕಂ ।
ಗುರಾವಪಿ ಸಮಂ ಹಾಸ್ಯಂ ಕರ್ತವ್ಯಂ ಕುಟಿಲಂ ವಿನಾ ॥' ಎಂದುದಾಗಿ,
ನಮ್ಮ ಕೂಡಲಸಂಗನ ಶರಣರೊಡನೆ ಮನದೆರೆದು ಮಾತಾಡುವುದಯ್ಯ"

ಮಾತಾಡಬೇಕು. ಮಾತಾಡುವುದೂ ಒಂದು ಕಲೆ. ಆದರೆ ಮಾತಾಡಿದ್ದೆಲ್ಲ ಕಲೆಯಲ್ಲ. ಹಮ್ಮುಬಿಮ್ಮಿಲ್ಲದೆ ಆಡಬೇಕು. ಕುಹಕ ಕುಟಿಲಗಳಿಲ್ಲದೆ ನುಡಿಯಬೇಕು. ಮಾತಿನ ಮರ್ಮವರಿದು ಮಾತಾಡಬೇಕು. ಸ-ರಸದಿಂದ ಸಲ್ಲಾಪಿಸಬೇಕು. ಸ್ವಂತಿಕೆಯ ಸೊಲ್ಲಾಗಿರಬೇಕು; ಸ್ವಾಂತದಿಂದ ಸಂಭವಿಸಿರಬೇಕು.

"ಎಂಜಲ ಮಾತ ನುಡಿವ ರಂಜಕರೆಲ್ಲರೂ
ಮಿಗೆ ಮಿಗೆ ಮೀಸಲ ತಾವೆತ್ತ ಬಲ್ಲರೋ?
ಮೀಸಲು ಎಂಜಲಹುದೆ? ಎಂಜಲು ಮೀಸಲಹುದೆ?
ಮಾತಿನ ಬಣಬೆಯ ಮೇದ ಪಶು–ಪ್ರಾಣಿಯಂತೆ
ಎಂಜಲ ಮಾತ ನುಡಿವುತ್ತಿಹರು.
ಲಿಂಗ ಸಕೀಲ ಸಂಗ, ಸಕೀಲ ಸಂಯೋಗ ಮರ್ಮಸ್ಥಲವನವರೆತ್ತಬಲ್ಲರು?
ಕೂಡಲ ಚನ್ನಸಂಗಯ್ಯನಲ್ಲಿ ಶಬ್ದಸೂತಕರೆಲ್ಲರೂ ರೌರವ ನರಕಿಗಳು"

ಎಲ್ಲಿಂದಲೋ ಎರವಲು ತಂದ, ಲಿಂಗ ಸಕೀಲ ಸಂಯೋಗಗಳನರಿಯದ ಮಾತು ಮಾತಲ್ಲ; ಮೀಸಲಲ್ಲ. ಅಲ್ಲದೆ ಅರ್ಥವಿಲ್ಲದ ವ್ಯರ್ಥವಾದ ಮಾತುಗಳನ್ನು ಹೆಚ್ಚೆಚ್ಚಾಗಿ ಹುಚ್ಚುಚ್ಚಾಗಿ ನುಡಿದರೆ ಬಣಬೆಯ ಒಣ ಹುಲ್ಲನ್ನು ಪಶುಪ್ರಾಣಿಗಳು ಮೇದಂತೆ! ಮೀಸಲಳಿದ ಎಂಜಲ ತಿಂದಂತೆ! ಎಂಜಲ ಮಾತಿನಿಂದ ರಂಜನೆಯಾಗುವುದಲ್ಲದೆ ಭವಸೂತಕದ ಭಂಜನವಾಗದು. ಲಿಂಗ ಸಕೀಲನ್ನು ಸಕೀಲ ಸಂಯೋಗವನ್ನು ಅರಿದಾಚರಿಸಿದ ಅನುಭವದ ಮಾತು ಎಂದೆಂದಿಗೂ ಎಂಜಲಲ್ಲ; ಅದು ಲಿಂಗಮೀಸಲು. ಅದು ಮಂತ್ರಸದೃಶ. ಅದಕ್ಕೆ ಶಬ್ದ ಸೂತಕವಿಲ್ಲ. ಲಿಂಗನಡೆ, ಲಿಂಗನುಡಿ, ಲಿಂಗ ನೆನಹು, ಲಿಂಗ ಪ್ರಜ್ಞೆ, ಲಿಂಗಾನುಭೂತಿ-ಇವು ಪಂಚಾಚಾರಗಳ ಪಂಚಮುಖಗಳು; ಪಂಚ ಪ್ರಾಣಗಳು.

ಹೀಗೆ ಆಚಾರದ ಈ ಪ್ರಕಾರರೂಪ ಪ್ರಾಕಾರದಲ್ಲಿ ಶಿವಾಚಾರ್ಯರು–ಶಿವಶರಣರು ಸುಸಂಸ್ಕೃತಿಯ ತಿರುಳನ್ನೆಲ್ಲ ತುಂಬಿದ್ದಾರೆ. ವ್ಯಕ್ತಿ ಶುದ್ಧಿಯಿಂದ ವಿಶ್ವಶಾಂತಿ, ಸಾಮ್ಯ ಸಂವೃದ್ಧಿಯವರೆಗೂ ಗುರಿಯಿಟ್ಟುಕೊಂಡು ಗರಿಗಟ್ಟಿದ ವೀರಶೈವಾಚಾರ ಮತ್ತು ಆ ಆಚಾರ ಪ್ರಭೇದಗಳ ನಿಲವು ನಿಜಕ್ಕೂ ನಿರ್ಮಲವಾದುದು. ನೀಳಾದುದು. ವೀರಶೈವವು ತನ್ನದೇ ಆದ ಉಚ್ಚ ಉದಾತ್ತ ಸಂಸ್ಕೃತಿಯನ್ನು ಅನಾದಿಕಾಲದಿಂದಲೂ ಸಾಮಾಜಿಕರಲ್ಲಿ ತುಂಬಿ ತಂದಿದೆ; ತರುತ್ತಿದೆ. ವಿಶುದ್ಧ ಜೀವನ, ವಿಶ್ವಜೀವನ, ವಿಶ್ವಾತ್ಮಭಾವನೆಗಳನ್ನು ತುಂಬುವುದೆ ಆಚಾರಕಾರ್ಯ. 'ಸರ್ವಾಚಾರ ಸಂಪತ್ತಿ'ಯು ಸರ್ವೋದಯ ಹೃದಯ.

ಆಚಾರವು ಧರ್ಮದ ಜೀವಾಳ. ಧಾರ್ಮಿಕರ ಬಂಡವಾಳ. ಅಲ್ಲದೆ ಅಷ್ಟಾವರಣ ಷಟ್‌ಸ್ಥಲಗಳೆಲ್ಲವನ್ನು ಪವಣಿಸುವ ತಂತು; ಪವಣಿಸಿ ಸಮರಸಗೊಳಿಸುವ ಉತ್ತಮ ತಂತು, ನಾನಾಬಗೆಯ ಬಟ್ಟೆಬರೆಗಳಲ್ಲಿ ಇರುವ ಎಳೆಗಳು ಹೇಗೆ ಬೇರಲ್ಲವೊ ಹಾಗೆ ಅಷ್ಟಾವರಣ ಷಟ್‌ಸ್ಥಲಗಳಲ್ಲಿರುವ ಆಚಾರ ಒಂದೆ! ಅಲ್ಲದೆ ವ್ಯಕ್ತಿಯ ಅಂತರಂಗ ಬಹಿರಂಗಗಳೆರಡನ್ನೂ ಒಳಿತಿನಲ್ಲಿ ಒಂದುಗೂಡಿಸುವ ಸತ್ಸೂತ್ರ ಆಚಾರ. ವ್ಯಕ್ತಿಯ ಚಾರಿತ್ರಶುದ್ಧಿಗೆ ಹಿರಿದಾದ ಮದ್ದು; ವೃದ್ಧಿಗೆ ಹೃದಯಂಗಮವಾದ ಮುದ್ದು. ಆಚಾರವು ತನುಮನಗಳ ಮೇಲೆ ಬುದ್ಧಿಭಾವಗಳ ಮೇಲೆ ಸತ್ಪರಿಣಾಮವನ್ನುಂಟು ಮಾಡುತ್ತದೆ. ವ್ಯಕ್ತಿ ವಿಕಾಸವನ್ನು ಪ್ರಕಾಶವನ್ನು ಹೆಚ್ಚಿಸುತ್ತದೆ. ಬಳಿಕ ಸಾಮಾಜಿಕರಲ್ಲಿಯೂ ಸತ್ಪರಿಣಾಮವನ್ನು ಪ್ರಾಮಾಣಿಕತೆಯನ್ನು ತರುತ್ತದೆ. ಸಚ್ಚಾರಿತ್ರವುಳ್ಳ ವ್ಯಕ್ತಿಯ ಆಕರ್ಷಣೆ ಸಾಮಾಜಿಕರ ಮೇಲೆ ಆಗಬಲ್ಲುದು; ಆಗುತ್ತದೆ. ಆಚಾರವೇ ಉದಾತ್ತ ಜೀವನದ ಸಂಪತ್ತು. ಆಚಾರಕ್ಕೆ ಹಳತು–ಹೊಸತು ಎಂಬ ಬಿರುಕಿಲ್ಲ. ಜೀವನ ನಿರ್ಮಳವಾಗಿರುವುದೇ ಆಚಾರದ ಗುರಿ. ಹೊಲಸಾಗಿರಲು ಯಾರು ಬಯಸುವರು? ಆದರೆ ಕೊಳೆ ಎರಡುಂಟು. ಮೈಕೊಳೆ–ಮನದ ಕೊಳೆ ಎಂದು. ಮೈಕೊಳೆಯು ಕಳೆಯಬಹುದು; ಕಳೆಯಲಾಗುತ್ತದೆ. ಅದೂ ಮಣ್ಣಿನ ಕೊಳೆಯನ್ನು ಮಾತ್ರ. ಕಾರ್ಮಿಕ ಮಲದ ಕೊಳೆಯನ್ನು ಮತ್ತು ಮನದ ಕೊಳೆಯನ್ನು ಕಳೆವುದು ಕಷ್ಟದ ಕೆಲಸ. ಆ ಕಷ್ಟದ ಕೆಲಸವನ್ನು ಮಾಡಬಲ್ಲುದು ಆಚಾರ ಸಂಹಿತೆ, ಆಚಾರ ವಿಧಾನ ಬೀರಬಲ್ಲುದು ತನ್ನ ನಿಚ್ಚಳ ಪ್ರಭಾವವನ್ನು !

ಕೇವಲ ಶರೀರ ಶುಚಿಗಾಗಿ ಮಾಡುವ ಸ್ನಾನಾದಿಕ್ರಿಯೆಗಳೆ ಆಚಾರವಲ್ಲ. ಉದರ ನಿರ್ವಹಣೆಗೆ ಉದ್ಯೋಗಿಸುವುದೂ ಆಚಾರವಲ್ಲ. ಇವುಗಳೊಡನೆ ಮನ ಆತ್ಮಗಳ ಮಾಲಿನ್ಯವನ್ನು ಕಳೆಯಲೆತ್ನಿಸುವುದೆ ಆಚಾರ. ಆ ಆಚಾರದಿಂದಲೇ ಆತ್ಮೋದ್ಧಾರ. ಮನದ ಕಾಳಿಕೆಯ ಕಳೆಯದೆ ಕಾಯದ ಕಾಳಿಕೆಯ ಕಳೆದು ಫಲವಿಲ್ಲ. ಮನೋವಾಕ್ಕಾಯಗಳ ಕಾಳಿಕೆಯನ್ನು ಕಳೆವುದೆ ಪರಮಾರ್ಥಪ್ರದ ಪರಿಪೂರ್ಣವಾದ ಪಾವನಾಚಾರ, ಸರ್ವತೋಮುಯ ಜೀವನ ಪ್ರಗತಿಯ ಭಾಂಡಾರ. ಜೀವನ ಪರಿಪುಷ್ಟಿಯ ಸಮ್ಯಕ್ ಸಾರ.

ಧರ್ಮವು ವ್ಯಕ್ತಿಯಲ್ಲಿ ಸಮಾಜದಲ್ಲಿ ಘನೀಭವಿಸಿ ಸುಂದರಮೂರ್ತಿಯಾಗಿ ಸರ್ವ ಜನಾಕರ್ಷಣಕ್ಕೆ ಆದರಕ್ಕೆ ಪಾತ್ರವಾಗಬೇಕಾದರೆ ಆಚಾರವೇ ಆದಿಕಾರಣ, ಅನಿವಾರ್ಯ ಕಾರಣ. ಮಾನವೀಯತೆಯಿಂದ ಮಾನ ಮನ್ನಣೆಗಳಿಂದ ಬಾಳಬೇಕಾದರೆ ಆಚಾರವೆ ಅನಿವಾರ್ಯಧರ್ಮ. ತ್ರಿವಿಧ ತನುಗಳ ಕ್ಷುದ್ರತೆಗಳನ್ನು ಕಳೆಯುತ್ತದೆ ಆಚಾರ. ತನು ಕಾಯಕದಲ್ಲಿ, ಮನ ಧಾರ್ಮಿಕದಲ್ಲಿ, ಭಾವ ದೈವಿಕದಲ್ಲಿ ವಿಹರಿಸುವುದಕ್ಕಿಂತ ವಿಶಿಷ್ಟತೆ ವಿಶುದ್ಧತೆ ಇನ್ನಾವುದಿದೆ? ಈ ಮೂರನ್ನು ಮಾಡಬಲ್ಲುದು ಈ ಪಂಚಮುಖವುಳ್ಳ

ಆಚಾರ. ಎಲ್ಲ ನೀತಿಗಳು, ಎಲ್ಲ ಸಂಸ್ಕೃತಿಗಳು ಎಲ್ಲ ರೀತಿಗಳು ಆಚಾರದಲ್ಲಿ ಅಡಕವಾಗಿವೆ. ನಡೆನುಡಿಗಳ ಸಂಯಮನವೆ ಆಚಾರ. ಬೇಕು ಬೇಡೆಂಬುದನ್ನು ಬಿಡುವುದೆ ಆಚಾರ. ಸ್ವಾರ್ಥ ಅಹಂಕಾರಗಳನ್ನು ತ್ಯಜಿಸಿ, ಸರ್ವರ ಕ್ಷೇಮಕ್ಕಾಗಿ ವಿನಯ ಪ್ರೇಮಗಳನ್ನು ತೋರುವುದು, ಕಷ್ಟಕೊರತೆಗಳನ್ನು ಕಳೆವುದು ಆಚಾರ. ಸ್ವಾಧ್ಯಾಯನಿರತನಾಗಿರುವುದೂ ಆಚಾರ. ಆಚಾರಗಳ ಆಚರಣೆಗೆ ಆಧಾರ ಅಂಗ.

ಇಲ್ಲಿಯವರೆಗೆ ವಿವರಿಸಿದ ಗುಣ ಕ್ರಿಯೆಗಳುಳ್ಳ ಅಷ್ಟಾವರಣವೆ ಅಂಗವಾಗಿ, ಪಂಚಾಚಾರಗಳೆ ಪ್ರಾಣವಾಗಿ, ಪರಮಾರ್ಥ ಪ್ರಾಮಾಣಿಕ ಪರಾಕ್ರಮಿಯಾಗಿ ಇರುವಾತನೆ ವೀರಶೈವ. ಆತನ ಆಶಯವೆ ವೀರಶೈವಮತ. ಇದು ಸರ್ವಸಮನ್ವಿತ ಮತ. ಅಂದರೆ ಏನೆಲ್ಲವನ್ನೂ ಒಳಗೊಂಡ ಮತ. ಇದೊಂದು ಸಮನ್ವಯ ಸಿದ್ಧಾಂತ, ಸರ್ವ ಸಾಪೇಕ್ಷ ಸಿದ್ಧಾಂತ. ಇದರಲ್ಲಿ ಸರ್ವಶ್ರುತಿ ಸಮನ್ವಯವಿದೆ. ದೇವ–ಜೀವ–ಜಗತ್ತುಗಳ ಸಮನ್ವಯವಿದೆ. ಜ್ಞಾನ ಕ್ರಿಯೆ ಅನುಭವಗಳ ಸಮನ್ವಯವಿದೆ, ಸಕಲ–ನಿಷ್ಕಲ–ನಿಷ್ಕಲತ್ರಯ ಸಮನ್ವಯವಿದೆ. ಭಕ್ತಿ, ಯೋಗ, ಜ್ಞಾನ, ಕ್ರಿಯೆ, ಅನುಭೂತಿ ವಿರತಿಗಳಿಂದ ಸಮನ್ವಿತವಾಗಿದೆ. ಎಲ್ಲ ತತ್ತ್ವ, ಎಲ್ಲ ದರ್ಶನ ಸಮನ್ವಯ ಇದರಲ್ಲಿದೆ. ಎಲ್ಲ ಮಂತ್ರ ತಂತ್ರಗಳ, ಬುದ್ಧಿ ಭಾವಗಳ, ಶಿವ ಶಕ್ತಿಗಳ, ಜ್ಞಾನ ವಿಜ್ಞಾನ, ಸುಜ್ಞಾನ ಮಹಾಜ್ಞಾನಗಳ, ಲೌಕಿಕ ಅಲೌಕಿಕಗಳ, ಅರ್ಥ ಪರಮಾರ್ಥಗಳ, ಸಂಸಾರ ಸಂನ್ಯಾಸಗಳ, ಭೋಗ ಮೋಕ್ಷಗಳ, ಶಕ್ತಿ ಭಕ್ತಿಗಳ, ಅಂಗಲಿಂಗಗಳ, ಹಸ್ತ ಮುಖಗಳ, ಪದಾರ್ಥ–ಪ್ರಸಾದಗಳ ಸಮನ್ವಯವಿದೆ. ಇದರ 'ದಾ–ಸೋಽ ಹಂ' ಭಾವದಲ್ಲಿ ಸೋಽ ಹಂ–ಶಿವೋಽ ಹಂ ಭಾವಗಳ ಸಮನ್ವಯವಿದೆ. ಇದರಲ್ಲಿ ನೇತಿಭಾವಕ್ಕೆ ಮಿಥ್ಯಾಭಾವಕ್ಕೆ ಇಂಬಿಲ್ಲ. ನಿರಸನಭಾವಕ್ಕೆ ಅಂದರೆ ಪ್ರಪಂಚದ ಪಡಿಪದಾರ್ಥಗಳಲ್ಲಿಯೂ ಇರುವ ದೋಷಗಳನ್ನು ಮಾತ್ರ ಕಳೆದು ಗುಣಗಳನ್ನು ಗ್ರಹಿಸುವಿಕೆಗೆ ಇಂಬಿದೆ. ಇದೊಂದು ವೀರಶೈವಮತದ ಸಂಶೋಧನೆಯ ವಿಶ್ಲೇಷಣೆಯ ಸಮಗ್ರದೃಷ್ಟಿ; ಸಮರ್ಪಕದೃಷ್ಟಿ. ಪ್ರತಿಪದಾರ್ಥವನ್ನು ತಾತ್ತ್ವಿಕವಾಗಿ ಸಂಶೋಧಿಸಿ ಸಂಸ್ಕರಿಸಿ ಸಂಪಾದಿಸುತ್ತದೆ. ಅಂತೆಯೇ ಪ್ರತಿ ವ್ಯಕ್ತಿಯನ್ನು ಸಂಸ್ಕರಿಸಿ ಸಂಯೋಜಿಸಿ ಸಹಕರಿಸುತ್ತದೆ; ಸಮನ್ವಯಗೊಳಿಸಿಕೊಳ್ಳುತ್ತದೆ. ಶುದ್ಧಿಯಿಲ್ಲದೆ ಸಿದ್ಧಿಯಿಲ್ಲ, ಸಿದ್ಧಿಯಿಲ್ಲದೆ ಪ್ರಸಿದ್ಧಿಯಿಲ್ಲ–ಎಂಬುದು ಇದರ ಸಂಲಕ್ಷ್ಯ. ಸರ್ವ ಸಮದರ್ಶಿತ್ವವೆ ಇದರ ಸಮನ್ವಯ ಯೋಗ. 'ಇವನೆನ್ನವ ಇವನೆನ್ನವ ಇವನೆನ್ನವ ಎಂದೆನಿಸಯ್ಯ' ಎಂಬುದೆ ಇದರ ಸರ್ವಸಾಪೇಕ್ಷವಾದ. ಕಸ–ರಸಗಳೆರಡರ ಸಾಪೇಕ್ಷತೆ ಇದರಲ್ಲಿದೆ. ಸರ್ವೋದಯವೆ ಇದರ ಧ್ಯೇಯ. ಲಿಂಗ ವಯಗಳ ಭೇದವಿಲ್ಲದೆ ಎಲ್ಲರನ್ನೂ ಸಂಸ್ಕರಿಸಿ ಎಲ್ಲರಿಗೆ ಸಮಾನ ಧರ್ಮಾಧಿಕಾರವನ್ನಿತ್ತಿದೆ. 'ಸಕಲ ಜೀವಾತ್ಮರಿಗೆ ಲೇಸನೆ ಬಯಸುವಿಕೆಯೆ' ಉತ್ತಮ ಕುಲಜತ್ವಕ್ಕೆ ಕುರುಹೆಂದು ನಿರೂಪಿಸಿದೆ.

"ವೀರಶೈವಮತಂ ಸದ್ಯೋ ಭೋಗಮೋಕ್ಷೈಕ ಸಾಧನಂ ।
ಸರ್ವೋತ್ತಮಂ ಮಮ ಮತಂ ಯತಃ ಸರ್ವೋತ್ತಮೋಽ ಸ್ಮ್ಯಹಂ ॥
ನ ವೀರಶೈವ ಸದೃಶಂ ಮತಮಸ್ತಿ ಜಗತ್ರಯೇ ।
ಸರ್ವಭೋಗಪ್ರದಂ ಪುಣ್ಯಂ ಶಿವಸಾಯುಜ್ಯದಾಯಕಂ ॥"

ವಿಶ್ವದಲ್ಲಿ ವೀರಶೈವ ಮತಕ್ಕೆ ಸಮವಾದ ಬೇರೊಂದು ಮತವಿಲ್ಲೆಂದು, ಸರ್ವೋತ್ತಮವೆಂದು ಪಾರಮೇಶ್ವರಾಗಮ ಪರಿಸ್ಫುಟವಾಗಿ ಪ್ರತಿಪಾದಿಸಿದೆ. ಇದಕ್ಕೆ ಕಾರಣವೇನೆಂದರೆ, ಇದು ಬೇಗನೆ ಭೋಗಮೋಕ್ಷೈಕ ಸಾಧನವಾಗಿದೆ. ಈ ಧರ್ಮಕ್ಕೆ 'ವೀರಶೈವ ಮತ'ವೆಂದು ನಿರೂಪಿಸಿದೆ. ಅಲ್ಲದೆ ಈ ಎರಡು ಶ್ಲೋಕಗಳಲ್ಲಿ 'ಮತ' ಪದ ಒಮ್ಮೆಯಲ್ಲ, ಇಮ್ಮೆಯಲ್ಲ, ಮೂರು ಸಲ ಪ್ರಯುಕ್ತವಾಗಿದೆ. ಈ ಮತಕ್ಕೆ ಇದಲ್ಲದೆ ಶಿವಾದ್ವೈತ, ಶಕ್ತಿವಿಶಿಷ್ಟಾದ್ವೈತ, ಭೇದಾಭೇದ, ದ್ವೈತಾದ್ವೈತ, ಶೈವ ಸಿದ್ಧಾಂತ ಎಂದು ಹೆಸರುಗಳಿವೆ. ಇವೆಲ್ಲ ದಾರ್ಶನಿಕ ನಾಮಗಳು. ದರ್ಶನ ಬೆಳೆದು ಬಂದ ಬಳಿಕಿನವೆಂದು ಬೇರೆ ಹೇಳಬೇಕಾಗಿಲ್ಲ. ಇವೆಲ್ಲ ದಾರ್ಶನಿಕ ವಿಮರ್ಶೆಯಿಂದ ವಿಶ್ಲೇಷಿತಗಳು. ದರ್ಶನ ಆರಂಭಕ್ಕೆ ಇರದು; ಇರಲಿಲ್ಲ. ಶಿವಾಗಮಗಳ ಕಾಲದಲ್ಲಿ ದರ್ಶನದ ಉಗಮ.

ಲಿಂಗವಂತ ಲಿಂಗಾಯತ ಶಿವಾಚಾರ ಎಂದೂ ಈಚೆಗೆ ಕರೆಯುತ್ತಾರೆ. ಇವು ಏಕದೇಶೀಯ ಬೋಧಕ ಪದಗಳು. ಇವನ್ನು ಮತಕ್ಕೆ ಅನ್ವಯಿಸುವುದು ಸರಿಯಲ್ಲ. 'ಧನವಂತ' ಎಂಬುದು ಹೇಗೆ ಒಂದು ಮತವಲ್ಲವೋ ಹಾಗೆ 'ಲಿಂಗವಂತ' ಎಂಬುದು ಒಂದು ಮತಬೋಧಕವಲ್ಲ; ವ್ಯಕ್ತಿಬೋಧಕ. ಇನ್ನು 'ಲಿಂಗಾಯತ' ಎಂಬುದೊಂದು ಸಂಸ್ಕಾರ. 'ಶಿವಾಚಾರ' ಎಂಬುದು ಪಂಚಾಚಾರದೊಳಗಿನ ಒಂದು ಆಚಾರ. ಇದರಿಂದಾಗಿ ಇವು ಸಮಷ್ಟಿ ಸಮಾಜ ಬೋಧಕಗಳಾಗವು; ಆಗುವುದಿಲ್ಲ. 'ವೀರಶೈವ' ಎಂಬುದು ಯೌಗಿಕವಾಗಿ ಅನ್ವರ್ಥಕವಾಗಿ ಸಮಷ್ಟಿಬೋಧಕವಾಗಿ ಮತವೆನಿಸಿಕೊಳ್ಳಲು ಉಚಿತವಾಗಿದೆ. ಬುದ್ಧನಿಂದ ಬಂದುದು ಬೌದ್ಧಮತ. ಜಿನನಿಂದ ಬಂದುದು ಜೈನ ಮತ. ಕ್ರಿಸ್ತನಿಂದ ಬಂದುದು ಕ್ರೈಸ್ತಮತ. ಅಂತೆಯೇ ವೀರಶಿವ(ಭದ್ರ)ನಿಂದ ಬಂದುದು ವೀರಶೈವಮತ.

ಮತಗಳಲ್ಲಿ ವೀರಶೈವಮತ ಅತ್ಯಂತ ಪುರಾತನ ಮತ್ತು ಅನಾದಿ. ಶೈವಮತಕ್ಕಿಂತಲೂ ಪೂರ್ವದಲ್ಲಿದ್ದಿತು.

"ಶೈವಂ ಸಪ್ತವಿಧಂ ಪುಣ್ಯಂ ವೀರಶೈವಾದಿ ಭೇದತಃ
ವೀರಶೈವಂ ತಥಾಽನಾದಿ, ಶೈವಮಾದಿ ಪದಂ ತತಃ ।
ಅನುಶೈವಂ ಮಹಾಶೈವಂ ಯೋಗಶೈವಂ ತು ಷಷ್ಠಕಂ

ಸಪ್ತಮಂ ಜ್ಞಾನಶೈವಾಖ್ಯಂ, ತತ್ರ ಸರ್ವೋತ್ತಮೋತ್ತಮಂ–
ವೀರಶೈವಮಿತೀಶಾನಿ ತದಂಗಾನೀತರಾಣಿ ತು ॥"

ವೀರಶೈವ, ಅನಾದಿಶೈವ, ಆದಿಶೈವ, ಅನುಶೈವ, ಮಹಾಶೈವ, ಯೋಗಶೈವ, ಜ್ಞಾನಶೈವ ಎಂದು ಶೈವ ಸಪ್ತವಿಧ. ಇವುಗಳಲ್ಲಿ ವೀರಶೈವವೆ ಮೊತ್ತಮೊದಲಿನದು; ಅನಾದಿ ಶೈವಕ್ಕಿಂತ ಪೂರ್ವದ್ದು; ಸರ್ವೋತ್ತಮವಾದದ್ದು. ಉಳಿದ ಆರು ವೀರಶೈವದ ಅಂಗಗಳು; ಎಂದು ಪಾರಮೇಶ್ವರಾಗಮ ನಿರೂಪಿಸಿದೆ.

"ತಂತ್ರಂ ತು ಷಡ್ವಿಧಂ ಪ್ರೋಕ್ತಂ ಷಡ್ದರ್ಶನವಿಭೇದತಃ
ವೀರಶೈವಂ ವೈಷ್ಣವಂ ಚ ಶಾಕ್ತಂ ಸೌರಂ ವಿನಾಯಕಂ ।
ಕಾಪಾಲಮಿತಿ ವಿಜ್ಞೇಯಂ ದರ್ಶನಾನಿ ಷಡೇವಹಿ
ತತ್ತತ್ತಂತ್ರೋಕ್ತಮಾರ್ಗೇಣ ತತ್ತತ್ಕರ್ಮ ಸಮಾಚರೇತ್ ॥ "

ಆರು ತಂತ್ರಗಳಲ್ಲಿ ವೀರಶೈವತಂತ್ರ, ಆರು ದರ್ಶನಗಳಲ್ಲಿ ವೀರಶೈವ ದರ್ಶನ ಪ್ರಥಮವೂ ಪ್ರಮುಖವೂ ಆಗಿವೆಯೆಂದು ಅದೇ ಪಾರಮೇಶ್ವರಾಗಮ ನಿರೂಪಿಸಿದೆ.

ಭಾರತೀಯ ಮತಧರ್ಮಗಳಿಗೆ ದರ್ಶನಗಳಿಗೆ ನಿಗಮಾಗಮಗಳು ಪ್ರಮಾಣ ಗ್ರಂಥಗಳಾಗಿವೆ. ನಿಗಮಗಳನ್ನುಳಿದರೆ ಆಗಮಗಳೆ ಆಧಾರಗ್ರಂಥಗಳು. ಆಗಮಗಳು ಕಾಮಿಕಾದಿಯಾಗಿ ವಾತುಲಾಂತವಾಗಿ ಇಪ್ಪತ್ತೆಂಟಿವೆ. ಇವುಗಳಲ್ಲಿ ಪಾರಮೇಶ್ವರ ತಂತ್ರವೂ ಒಂದು. ಇದರಲ್ಲಿ ವೀರಶೈವವು ವಿಶಿಷ್ಟರೀತಿಯಲ್ಲಿ ಪ್ರತಿಪಾದಿತವಾಗಿದೆ. ವೀರಶೈವವನ್ನು ಅಧಿಕರಿಸಿ ಇರುವ ಆಧುನಿಕ ಪ್ರಚಲಿತ ಪ್ರಚುರ ಸಮಸ್ಯೆಗಳಿಗೆ ಪರಿಹಾರವನ್ನು ನೀಡುತ್ತದೆ ಪಾರಮೇಶ್ವರ ತಂತ್ರ. ಇದು ವೀರಶೈವತಂತ್ರಗಳಲ್ಲಿ ಒಂದು, ಈ ತಂತ್ರವನ್ನು ೧೯೭೭ರಲ್ಲಿ ನಾವೇ ಕನ್ನಡಿಸಿ ಪ್ರಕಟಿಸಲಾಗಿದೆ. ಹೆಚ್ಚಾಗಿ ಅರಿಯಬೇಕೆನ್ನುವವರು ಅದನ್ನು ಅಭ್ಯಸಿಸುವುದು.

'ಪಶುಪತಿಮತ'ವೆಂದು ವೀರಶೈವಕ್ಕೆ ಇನ್ನೊಂದು ಹೆಸರು. ಇದು ವೀರಶೈವ ತಂತ್ರಗಳಲ್ಲಿ ಉಲ್ಲಿಖಿತವಾಗಿದೆ. ಸಿದ್ಧಾಂತಶಿಖಾಮಣಿಯಲ್ಲಿಯೂ ಹೀಗಿದೆ :

"ಅನುಗತಸಕಲಾರ್ಥೇ ಶೈವತಂತ್ರೈಃ ಸಮಸ್ತೈಃ
ಪ್ರಕಟಿತ ಶಿವಬೋಧಾದ್ವೈತಭಾವಪ್ರಸಾದೇ ।
ವಿದಧತು ಮತಿಮಸ್ಮಿನ್ ವೀರಶೈವಾ ವಿಶಿಷ್ಟಾಃ
ಪಶುಪತಿಮತಸಾರೇ ಪಂಡಿತ ಶ್ಲಾಘನೀಯೇ ॥"

ಆರ್ಯ ಸಂಸ್ಕೃತಿಯ ಮೂಲಾಧಾರ ವೇದಸಾಹಿತ್ಯ. ವೇದಕಾಲ ಸು. ಕ್ರಿ. ಶಕ ಪೂರ್ವ ಆರು ಸಾವಿರ ವರುಷ. ವೇದದಲ್ಲಿ ಬರುವ ದೇವತೆಗಳಲ್ಲಿ ಇಂದ್ರನು ಪ್ರಧಾನನು.

ಇವನು ಭಾರತಕ್ಕೆ ಬರುವಾಗ ತನ್ನೊಡನೆ ಯದು, ತುರ್ವಶ, ಪರ್ಶಿಯನ್‌ರನ್ನು ಕರೆ ತರುವನು. ಪರ್ಶಿಯನ್‌ರಿಗೆ ಪಶು ಎಂಬ ಹೆಸರಿತ್ತು. ಇವರಿಗೆ ಒಡೆಯರಾಗುವರು ಶಿವ ಮತ್ತು ವೀರಭದ್ರರು. ಇದರಿಂದಾಗಿ ಇವರ ಮತಕ್ಕೆ ಪಶುಪತಿಮತವೆಂದು ಇವರಿಗೆ ಪಶುಪತರೆಂದು ಹೆಸರಾಗುವುವು. ಅಲ್ಲದೆ ಶಿವನು ಹಸು ಎತ್ತುಗಳಿಗೆ ಒಡೆಯನೂ ಆಗಿದ್ದನು. ಇದರಿಂದಲೂ ಪಶುಪತಿಯೆಂದು ಹೆಸರು ಶಿವನಿಗೆ! ಜೀವರಿಗೂ ಪಶುಗಳೆಂದು ಹೇಳುವುದುಂಟು. ಇದರಿಂದಲೂ ಪಶುಪತಿಯೆನಿಸುತ್ತಾನೆ ಶಿವನು. ಇವನಿಂದಾದ ಮತಕ್ಕೆ ಪಶುಪತಿಮತವೆನ್ನಲಾಗುತ್ತಿದೆ. ಇದು ಶಿವನ ಮತ; ವೀರಶೈವ ವೀರಭದ್ರನ ಮತ. ಮೇಲಿನ ಶ್ಲೋಕದಿಂದ ಇದು ಸ್ಪಷ್ಟವಾಗುತ್ತದೆ. ವೀರಶೈವರು ಪಶುಪತಿ ಮತಸಾರದಲ್ಲಿ ಆಸಕ್ತಿಯನ್ನಿರಿಸಬೇಕೆಂದು ಹೇಳಲಾಗಿದೆ. ಏಕೆಂದರೆ ಅದು ಪಂಡಿತರಿಂದ ಮಾನ್ಯವಾಗಿದೆ; ಶಿವಭೋದ್ಯಾದ್ವೈತ ಭಾವಪ್ರಸಾದ ವುಳ್ಳದೂ ಸಮಸ್ತ ಶೈವತಂತ್ರಗಳಿಂದ ಪ್ರತಿಪಾದಿತ ಸಕಲಾರ್ಥವುಳ್ಳದೂ ಆಗಿದೆ ಎಂದು ಹೇಳುವುದರಿಂದ ಪಶುಪತಿಮತ ಶಿವಮತವೆಂಬುದು ಸ್ಪಷ್ಟವಾಗುತ್ತದೆ. ವೀರಶೈವರು ಮನ್ನಿಸಿದ ಬಳಿಕ ಅದು ಇದರಲ್ಲಿ ಸಮರಸಗೊಂಡಿರಬೇಕು. ಪಶುಪತಿಮತ ಅಸ್ತಿತ್ವ ದಲ್ಲಿಲ್ಲದ ಕಾರಣ ಈ ತೀರ್ಮಾನಕ್ಕೆ ಬರಬೇಕಾಗಿದೆ. "ಶೈವಂ ಪಾಶುಪತಂ ಚೇತಿ ಯದೇಕಂ" ಎಂಬೀ ಪಾರಮೇಶ್ವರಾಗಮೋಕ್ತಿಯಿಂದ ಮೇಲಿನ ನಮ್ಮ ಅಭಿಪ್ರಾಯ ಗಟ್ಟಿಗೊಳ್ಳುತ್ತದೆ. 'ಪಾಶುಪತಕ್ಕೂ ವೀರಶೈವಕ್ಕೂ ತಾತ್ತ್ವಿಕವಾಗಿ ಭೇದವಿಲ್ಲೆಂದು ಆಗಮೋಕ್ತಿಯ ಅರ್ಥ. ಪಶುಪತಿಗೆ ಸಂಬಂಧಪಟ್ಟ ಮತ ಪಾಶುಪತ ಮತ. ವೀರಶೈವರು ಅಂದೇ ಕೊರಳಲ್ಲಿ ಲಿಂಗಧಾರಣ ಮಾಡುತ್ತಿದ್ದರು.

> "ಯಸ್ಯ ಭಸ್ಮ ಲಲಾಟೇಽಸ್ತಿ ಕಂಠೇ ಲಿಂಗಂ ಮದಾತ್ಮಕಂ ।
> ರುದ್ರಾಕ್ಷಧಾರಣಂ ದೇಹೇ ಸೋಽಹಂ ದೇವಿ ನ ಸಂಶಯಃ॥"

ಎಂದಿದೆ ಪಾರಮೇಶ್ವರತಂತ್ರ. ಲಿಂಗವನ್ನು ಅಂದೆ ಸೆಜ್ಜೆಯಲ್ಲಿ ಅಂದರೆ ಚತುರಸ್ರ ದಲ್ಲಿ ಧರಿಸುತ್ತಿದ್ದರೆಂದು ಅದೇ ಆಗಮ ಅಭಿಪ್ರಾಯ ಪಟ್ಟಿದೆ.

> "ಚತುರಸ್ರಂ ಪಂಕಜಾಭಂ ವರ್ತುಲಂ ಬಿಂಬಕೋಪಮಂ
> ಯಥಾ ಸಂದರ್ಶಿತಂ ದೇವಿ ಗುರುಣಾ ತತ್ತಥಾಚರೇತ್ ।
> ಏಕದ್ವಾರಕ ಪಾಟಾಢ್ಯಾ ಪಾದತ್ರಯ ಶೋಭಿನೀ
> ಸನ್ನದ್ಧ ಗುಣಸಂಬದ್ಧಾ ದೃಢಾ ಸಂತಾನ ಶೋಭಿನೀ ॥"

ಚತುರಸ್ರಕ್ಕೆ ಚೌಕವೆಂದು, ಬಿಂಬದಂತೆ ವರ್ತುಲವಾಗಿರುವುದಕ್ಕೆ ಗುಂಡಗಡಿಗೆ ಎಂದು, ಎಕ್ಕೆಕಾಯಿ, ಮಾವಿನಕಾಯಿ, ಬಿಲ್ವಕಾಯಿ ಮೊದಲಾದವುಗಳಂತೆ ಇರುವ ಕರಡಿಗೆಗೆ ಲಿಂಗದ ಕಾಯಿಯೆಂದು ಕನ್ನಡದಲ್ಲಿ ಹೆಸರುಗಳಿವೆ. ಭರಣಿ–ಪೆಟ್ಟಿಗೆಗಳಂತಿದ್ದರೆ

ಕರಡಿಗೆ(ಕರಂಡಕ)ಎಂದು ಹೆಸರು. ಬೆಳ್ಳಿ, ಬಂಗಾರ,ತಾಮ್ರ, ಹಿತ್ತಾಳಿ, ಕಂಚು, ತವರ, ಸೀಸ, ಕಬ್ಬಿಣ, ಗಂಧದ ಕಟ್ಟಿಗೆ, ಬಟ್ಟೆ, ಎಳೆ ಇವುಗಳಲ್ಲಿ ಯಾವುದರಿಂದಲಾದರೂ ಸೆಜ್ಜೆಯನ್ನು ಮಾಡಬಹುದು. ಇವುಗಳ ಫಲಪ್ರಯೋಜನಗಳು ಬೇರೆ ಬೇರೆ. ಇವುಗಳಲ್ಲಿ ಮೊದಲಿನವೆರಡು ಕೊನೆಯವು ಮೂರು ಮುಖ್ಯವಾದವುಗಳು. ಹೀಗೆ ಕರಡಿಗೆಯ ಕಥನ ವೀರಶಿವಾಗಮಗಳಲ್ಲಿ ವಿಸ್ತಾರವಾಗಿದೆ.

ಸೆಜ್ಜೆ ಶಕ್ತಿ, ಶಿವದಾರ ಶಿವಸ್ವರೂಪ–ಎಂದಿದೆ. ಶಿವದಾರದ ಬಣ್ಣ, ಎಳೆಗಳ ಗುಣಗಳನ್ನು ಹೇಳಿರುವುದಲ್ಲದೆ ಗಂಟು ಗಂಟಾಗಿರದೆ ಋಜುವಾಗಿರಬೇಕೆಂದು, ಗಟ್ಟಿಯಾಗಿರಬೇಕೆಂದು, ಹೊಕ್ಕುಳದ ಮೇಲಕ್ಕೆ ಧರಿಸಬೇಕೆಂದು, ಸೆಜ್ಜೆ–ಶಿವದಾರಗಳ ಸಂಬಂಧವು ಶಕ್ತಿವಿಶಿಷ್ಟಾದ್ವೈತ ಸಂಬಂಧವೆಂದು ನಿಚ್ಚಳವಾಗಿ ನಿರೂಪಿಸಲಾಗಿದೆ. ಲಿಂಗದಂತೆ ಸೆಜ್ಜೆ ಶಿವದಾರಗಳಿಗೂ ಸಂಸ್ಕಾರ–ಪ್ರಾಣಪ್ರತಿಷ್ಠೆಗಳಾಗಬೇಕೆಂದು ವಿಧಿಸಲಾಗಿದೆ. ಸೆಜ್ಜೆ ಶಿವದಾರ ಕಂಥೆಗಳು ಸಿಥಿಲವಾದರೆ ಬೇರೆ ಹೊಸವನ್ನು ಸಂಸ್ಕರಿಸಿ ಮರಳಿ ಧರಿಸಿಕೊಳ್ಳಲು ಅನುಮತಿಯನ್ನಿತ್ತಿದೆ. ಲಿಂಗವನ್ನು ಯಾವಾಗಲೂ ಬಿಡದೆ ಧರಿಸಿ ಅವಧಾನದಿಂದ ಅರ್ಚಿಸಬೇಕು. ವಿಶೇಷದಿನಗಳಲ್ಲಿ ವಿಶೇಷವಾಗಿ ಅರ್ಚಿಸಲು ತಿಳಿಸಿದೆ. ಪೂಜೆಯಲ್ಲಿ ನೃತ್ಯ ವಾದ್ಯ ಗೀತಗಳಿಗೆ ಸ್ಥಾನವನ್ನು ಕಲ್ಪಿಸಿದೆ. ಹೆಚ್ಚಾಗಿ ಗಂಟಾನಾದಕ್ಕೆ ಪ್ರಾಶಸ್ತ್ಯವನ್ನಿತ್ತಿದೆ. ನಾದ ಶ್ರವಣದಿಂದ ಪಾಪಗಳು ಪರಿಹಾರವಾಗುತ್ತವೆಯಂತೆ ! ರೋಗ ಪರಿಹಾರ ಶಕ್ತಿ ನಾದಕ್ಕಿದೆಯೆಂದು ವಿಜ್ಞಾನದ ಅಭಿಪ್ರಾಯವಾಗಿದೆ. ನಾದ ಶ್ರವಣದ ಪರಿಣಾಮವನ್ನು ಅಂದೆ ಕಂಡು ಕೊಂಡಿದ್ದರು . ಅದರಲ್ಲಿಯೂ ಪೂಜಾಕಾಲದ ಗಂಟಾನಾದಕ್ಕೆ ಹೆಚ್ಚಿನ ಶುದ್ಧತೆಯಿದೆ, ಶಕ್ತಿಯಿದೆ. ಪ್ರಣವಾನುಸಂಧಾನವುಳ್ಳ ಗಂಟಾನಾದ ತರಂಗಗಳು ಶ್ರವಣ ಮುಖಾಂತರ ಅಂತರಂಗಕ್ಕೆ ಹರಿದು ಸ್ನಾಯುಗಳನ್ನು ಸ್ಪಂದಿಸಿದಾಗ ಆಗುವ ಪರಿಣಾಮ ಅಷ್ಟಿಷ್ಟಲ್ಲ; ಅಂತಿಂತಹದಲ್ಲ. ಆದರೆ ಅದಕ್ಕೆ ಶುದ್ಧ ಸಂಯೋಜಕ ಕ್ರಮ ಅಗತ್ಯ. ಅದುಂಟಾದರೆ ಮನೋರೋಗ ಹೋಗುತ್ತದೆ. ಮಳೆ ಬೆಳೆಗಳು ಮಿಗಿಲಾಗಿ ಆಗುತ್ತವೆ. ಶ್ರವಣಾತೀತ ಮನನಾತೀತ ನಾದಾನುಸಂಧಾನದಿಂದ ಸಮಾಧಿಸ್ಥಿತಿ ಸಂಪ್ರಾಪ್ತವಾಗುತ್ತದೆ. ಪಾರಮೇಶ್ವರ ತಂತ್ರದಲ್ಲಿ ಶಂಖನಾದಕ್ಕೆ ಶ್ರೇಷ್ಠತೆ ಮೀಸಲಾಗಿದೆ.

"ಲಿಂಗಧಾರೀ ವಿಶೇಷೇಣ ಶಂಖನಾದೇನ ಪೂಜಯೇತ್ ।
ಸರ್ವಾಭಾವೇऽಪಿ ಯತ್ನೇನ ಯತಃ ಶಂಖೋ ಮಮ ಪ್ರಿಯಃ ॥"

ಎಂದಿದೆ. ಈ ನಾದದಲ್ಲಿರುವ ಮೇಲ್ಮೆ ಏನೆಂಬುದನ್ನು ನಾದವಿಜ್ಞಾನಿಗಳು ಕಂಡು ಹಿಡಿಯ ಬೇಕಾಗಿದೆ.

ವೀರಶೈವ ಮತದಲ್ಲಿ ಗುರುದೇವನ ಕಾರುಣ್ಯ ಅದೊಂದು ವಿಶಿಷ್ಟ ಸಂಸ್ಕಾರ; ಯಥಾರ್ಥಯಜ್ಞ. ಶಿಷ್ಯಾಂಗವೆ ಹೋಮಕುಂಡ. ಮಲತ್ರಯಗಳೆ ದಾಹ್ಯಕಾಷ್ಠಗಳು.

ದೃಕ್ಕ್ರಿಯಾರೂಪ ಲಿಂಗಜ್ಯೋತಿ. ಸದ್ಗುಣಗಳೆ ಧೂಪ. ಭಾವಪೂರ್ಣವಾದ ಶಿಷ್ಯ ವಿಶ್ವಾಸವೆ ಆಜ್ಯಹವನ. ಜೀವನದ ಪರಮ ಪ್ರಗತಿಗೆ, ಶಾಶ್ವತವಾದ ಸತ್ಯ ಸಾಧನೆಗೆ, ಸಚ್ಚಿತ್ತುಸುಖಕ್ಕೆ ಗುರು ಕರುಣಿಸುವ ಶಿವದೀಕ್ಷಾಸಂಸ್ಕಾರವೊಂದೇ ಶ್ರೇಷ್ಠ ಸಾಧನ; ಸರಿಮಿಗಿಲಿಲ್ಲದ ಆರಾಧನ. ಅಂತರಂಗದಲ್ಲಿರುವ ಆತ್ಮನನ್ನು ಅವಲೋಕಿಸಲು ಅನುಸಂಧಾನಿಸಲು ಈ ಹೊರಗಿನ ಹೋಮದ ಹಗರಣ ಬೇಕಿಲ್ಲ. ಇದರಿಂದ ಒಳಗಣ್ಣು ತೆರೆಯದು. ಮಂತ್ರದೀಕ್ಷೆಯಿಂದ ಮಾತ್ರ ಅದು ಸಾಧ್ಯ. ವೇಧಾದೀಕ್ಷೆಯಿಂದ ಅಂತಶ್ಚೈತನ್ಯ ಶಕ್ತಿಯು ಸಂವೇದನವುಂಟಾಗುವುದು. ಕ್ರಿಯಾದೀಕ್ಷೆಯಿಂದ ಆ ಚಿತ್ಕಳೆಯು ಸತ್ಕಳೆಯಾಗಿ ಕರಸ್ಥಲಕ್ಕೆ ಬರುವುದು. ಆ ಅಗಮ್ಯ ಅಪ್ರಮಾಣ ಲಿಂಗವನ್ನು ಗಮ್ಯವನ್ನಾಗಿ ಮಾಡಿ ಪ್ರಮಾಣಕ್ಕೆ ತಂದು 'ಪ್ರತೀಕ' ಸ್ವರೂಪದಲ್ಲಿ ಕರಸ್ಥಲದಲ್ಲಿ ಕರುಣಿಸುವನು ಗುರುದೇವನು. ಶಿವದೀಕ್ಷಾ ಸಂಸ್ಕಾರ ಸಹೇತುಕವಲ್ಲ; ಸಕಾಮುವಲ್ಲ. ಇದೊಂದು ಸಹಜ ಸಂಸ್ಕಾರ. ಶ್ರೀಗುರು ಶಿಷ್ಯನ ಅಂತರಂಗದಲ್ಲಿರುವ ಚಿದಗ್ನಿಯನ್ನು ಉಜ್ವಲಗೊಳಿಸುತ್ತಾನೆ. ಅಂಗಸೌಂದರ್ಯದೊಳಗಿರುವ ಆತ್ಮ (ಲಿಂಗ) ಸೌಂದರ್ಯವೆ ಸತ್ಯ ಶಿವ ಸೌಂದರ್ಯ. ಅದನ್ನು ಸಾಕ್ಷಾತ್ಕರಿಸಿ ಶಿವಲಿಂಗವನ್ನಾಗಿಸಿ ಅವಲೋಕಿಸುವಂತೆಸಗುತ್ತಾನೆ ಶ್ರೀಗುರು. ಶಿವದೀಕ್ಷಾ ಸಂಸ್ಕಾರದ ಗುರಿ ಶುಷ್ಕವಾದ ಬಾಹ್ಯ ಹೋಮದ ವಿನ್ಯಾಸವಲ್ಲ; ಬಾಹ್ಯ ಪಡಿಪದಾರ್ಥಗಳ ವಿನಾಶವಲ್ಲ. ಸ್ವಾಹಾಕಾರದ ವಿಲಾಸವಲ್ಲ. ಸ್ವರ್ಗೀಯ ದೇವತೆಗಳನ್ನು ತೃಪ್ತಿಪಡಿಸುವ ತತ್ವಾತೀತ ಲಘುಸಾಧನವಲ್ಲ; ಭ್ರಾಂತ ಸಾಹಸವಲ್ಲ. ಮೊರೆಹೊಕ್ಕ ಶಿಷ್ಯನ ಅಂತರಂಗಕ್ಕೆ ಅರಿವಿನ ಅಚ್ಚ ಹೊಂಬೆಳಗನ್ನು ಚೆಲ್ಲಿ ಹೃದಯವನ್ನು ಅರಳಿಸಿ, ಚಿತ್ತವನ್ನು ಉದ್ದೀಪನಗೊಳಿಸಿ, ಭಾವವನ್ನು ಭಕ್ತಿರಸದಲ್ಲಿ ಮೀಯಿಸಿ ಆತ್ಮವಿಕಾಸವನ್ನು ಅನುಗ್ರಹಿಸುವುದು. ಭವಭಂಗ ತಾರಣವಾಗಿ ಶಿವಲಿಂಗ ಧಾರಣವಾಗುವುದು. ಅದರ ಅರ್ಚನ, ಅದಕ್ಕೆ ಅರ್ಪಣ, ಅನುಭವಗಳು ಅಳವಡುವುವು. ಅಕ್ರಿಯೆ, ಅಜ್ಞಾನ, ಅನನುಭವಗಳ ಹೋಮವಾಗುವುದು. ಅನೀತಿ ಅನಾಚಾರಗಳ ಹವನ, ಪಾಪ ತಾಪಗಳ ಆಹುತಿ ಜರಗುವುದು. ಶೈವೀ ದೀಕ್ಷಾಸಂಸ್ಕಾರದಲ್ಲಿ ಕಾಯೇಂದ್ರಿಯಗಳು, ನಾಮರೂಪಗಳು, ಕಾಮಕ್ರೋಧಗಳು, ಲೋಭ ಮೋಹಗಳು, ಮದ ಮತ್ಸರಗಳು ಸುಟ್ಟು ಪರಿಶುದ್ಧವಾಗುವುವು. ಆ ಪರಮ ಅರ್ಥ ಸಂಪಾದನೆಯಲ್ಲಿ ಪರಿಣತತೆ ಪ್ರಾಪ್ತಿಸುವುದು.

ಬಾಹ್ಯ ಹೋಮ ಶೈವನದಾದರೆ ಆಂತರಿಕ ಹೋಮ ವೀರಶೈವನದು. ಶೈವನದು ಅಧಿದೈವಿಕ ಸಂತೃಪ್ತಿ ಗುರಿಯಾಗಿದ್ದರೆ, ವೀರಶೈವನದು ಆಧ್ಯಾತ್ಮಿಕ ದೈವೀ ಸಂತೃಪ್ತಿ, ಗುರು–ಲಿಂಗ–ಜಂಗಮ ಸಂತೃಪ್ತಿ, ಭಕ್ತಜನ ಸಂತೃಪ್ತಿ ಗುರಿಯಾಗಿರುತ್ತದೆ; ಆಗಿರಬೇಕು. ಮೊದಲು ಭಕ್ತಸ್ಥಲದಲ್ಲಿ ಮೂರುಲಿಂಗ, ಮೂವರು ಗುರು, ಮೂವರು ಜಂಗಮರ ಆರಾಧನೆ, ಬಳಿಕ ಮಾಹೇಶ್ವರಸ್ಥಲ ಸಂಪನ್ನನಾಗಿ ಆರುಲಿಂಗ, ಆರುಗುರು, ಆರುಜಂಗಮಾರಾಧನೆ, ಆಮೇಲೆ ಪ್ರಸಾದಿಯಾಗಿ ನವಲಿಂಗ, ನವಗುರು, ನವಜಂಗಮಾರಾಧನೆ

ಗಳು ಗುರುದೇವನ ಅನುಗ್ರಹ ಪಡೆದು ನಡೆಯುತ್ತವೆ. ಇದಿಷ್ಟು ಮಾರ್ಗಕ್ರಿಯೆ. ಪ್ರಾಣಲಿಂಗಿಸ್ಥಲದಿಂದ ಮೀರಿದ ಕ್ರಿಯೆ.

ವೀರಶೈವ ಮತದಲ್ಲಿ ಮುಖ್ಯವಾಗಿ ಶಿವಯೋಗ. ಇದು ಪೂರ್ಣಯೋಗ. ಇದರಲ್ಲಿ ಹಠ. ಮಂತ್ರ, ಲಯ ರಾಜಯೋಗಗಳು ಅಡಕವಾಗಿರುತ್ತವೆ. ಇದರಲ್ಲಿ ಕ್ರಿಯೆ ಜ್ಞಾನ ಧ್ಯಾನ ಧಾರಣ ಅನುಭವ ಆನಂದಗಳು ಅಡಕವಾಗಿರುತ್ತವೆ. ಸಮತ್ವದೊಡನೆ ಇದು ನಿಲ್ಲುವುದಿಲ್ಲ. ಮುಂದುವರಿದು ಸಮರಸದಲ್ಲಿ ತಾನೆ ತಾನಾಗಿರುತ್ತದೆ. ಚಿತ್ತವೃತ್ತಿ ನಿರೋಧವೊಂದೇ ಗುರಿಯಲ್ಲ; ಭಾವ ನಿರ್ಭಾವವಾಗುವುದೆ ಚರಮಗುರಿ. ಜೀವನ ಅಶಿವವೆಲ್ಲ ಶಿವವಾಗುತ್ತದೆ. ಚಿತ್ತವೃತ್ತಿ ನಿರೋಧ ಅಥವಾ ನಿವೃತ್ತಿ ಮಾತ್ರವಲ್ಲ, ಅಂತಃಕರಣಗಳೆಲ್ಲದರ ವೃತ್ತಿ ನಿವೃತ್ತಿಯೊಡನೆ ನಿಷ್ಪತ್ತಿಯನ್ನುಂಟು ಮಾಡುವುದೆ ಶಿವಯೋಗ. ಹಠಯೋಗದಿಂದ ಶರೀರ ಶುದ್ಧಿಯಾಗುವುದಲ್ಲದೆ ಅಂಗವಾಗದು. ಲಯಯೋಗದಿಂದ ಪ್ರಾಣಶುದ್ಧಿಯಲ್ಲದೆ, ಪ್ರಾಣ ಲಿಂಗವಾಗದು. ಮಂತ್ರಯೋಗ ದಿಂದ ಮನ ಶುದ್ಧಿಯಾಗುವುದಲ್ಲದೆ, ಮನ ಘನವಾಗದು. ರಾಜ ಯೋಗದಿಂದ ಜೀವ ಶುದ್ಧಿಯಲ್ಲದೆ, ಸಮರಸ ಸಿದ್ಧಿಯಾಗದು; ಶಿವತ್ವಸಿದ್ಧಿಸದು. ಶಿವಯೋಗದಿಂದ ಇವೆಲ್ಲವೂ ಸಿದ್ಧಿಸುತ್ತವೆ. ಕೈವಲ್ಯ ಕೈಗೂಡುತ್ತದೆ.

"ಪ್ರತಿಪಾದ್ಯಸ್ತಯೋರ್ಭೇದಸ್ತಥಾ ಶಿವರತಾತ್ಮನಾಂ ।
ತಸ್ಮಾನ್ಮನೀಷಿಭಿರ್ ಗ್ರಾಹ್ಯಃ ಶಿವಯೋಗಸ್ತು ಕೇವಲಃ ॥"

ಎಲ್ಲ ಯೋಗಗಳಲ್ಲಿ ರಾಜಯೋಗ ಶ್ರೇಷ್ಠ. ರಾಜಯೋಗಕ್ಕಿಂತ ಶಿವಯೋಗ ಶ್ರೇಷ್ಠ. ಇವೆರಡರ ನಾಮಗಳಲ್ಲಿಯೆ ತರತಮ ಭಾವವಿದೆ. ರಾಜ ಅಂದರೆ ಚಂದ್ರ ಮತ್ತು ರಂಜನ. ಶಿವ ಅಂದರೆ ಮಂಗಲ ಮತ್ತು ವಿಭು; ಚಂದ್ರಧರನೆಂತಲೂ ಅರ್ಥ. ಅದು ಚಂದ್ರಯೋಗ; ಈ ಶಿವಯೋಗ ಚಂದ್ರಧರಯೋಗ. ಅದರಿಂದ ರಂಜನೆ; ಇದರಿಂದ ಮಂಗಲ. ರಂಜನೆಗಿಂತ ಮಂಗಲವು ಮನಶ್ಶಾಂತಿಗೆ ವಿಶ್ರಾಂತಿಗೆ ಕಾರಣ. ಅಲ್ಲದೆ ಇದು ವಿಭುಯೋಗ. 'ಶೇತೇ ಸರ್ವಂ ಅಸ್ಮಿನ್ ಇತಿ ಶಿವಃ' ಶಿವಯೋಗವು ಎಲ್ಲವನ್ನೂ ಒಳಗೊಂಡಿರುತ್ತದೆ. ಅದು ಬರೀ ರಾಜಯೋಗ; ಇದು ರಾಜಶೇಖರ ಯೋಗ. ಆದುದರಿಂದ ಜಾನಿಗಳಾದವರು, ಸರ್ವಜ್ಞನೂ ಸರ್ವಶಕ್ತನೂ ಸದಾ ಸಂತೃಪ್ತನೂ ಆದ ಶಿವನನ್ನೆ ಶಿವತ್ವವನ್ನೆ ಬಯಸುವವರು ಶಿವಯೋಗವನ್ನೇ ಗ್ರಹಿಸಬೇಕು; ಗೌರವಿಸ ಬೇಕು.

ಶಿವಯೋಗವು ಮಂಚವಾದರೆ ಹಠ ಲಯ ಮಂತ್ರ ರಾಜಯೋಗಗಳು ಆ ಮಂಚದ ನಾಲ್ಕು ಕಾಲುಗಳೆಂದು ಸರ್ಪಭೂಷಣ ಶಿವಯೋಗಿಗಳು ನಿರೂಪಿಸಿದ್ದಾರೆ. ಇದರಿಂದ ಆ ನಾಲ್ಕು ಯೋಗಗಳು ಶಿವಯೋಗದಲ್ಲಿದ್ದು ಉಪಾಂಗಗಳಾಗಿರುತ್ತವೆ ಎಂಬುದು ವೆಗ್ಗಳವಾಗುತ್ತದೆ.

"ಈ ವಾಯು ಪ್ರಾಣಿಯಂ ಕಳೆದು ಲಿಂಗಪ್ರಾಣಿಯಂ ಮಾಡಿದಬಳಿಕ
ಅದೇ ಲಿಂಗಾಂಗ ಸಮರಸೈಕ್ಯವಾದ ಶಿವಯೋಗ ನಿದ್ರಾಮುದ್ರೆ
ಎನಿಸುವುದಯ್ಯಾ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ."

ಎಂದಿದೆ ಚನ್ನಬಸವಣ್ಣ ಶರಣನ ಚನ್ನ ವಾಣಿ. ನಿಸರ್ಗವಾಗಿ ವಾಯುಪ್ರಾಣಿಯಾದಾತನು ಶಿವಯೋಗ ನಿಷ್ಪತ್ತಿಯಲ್ಲಿ ಲಿಂಗಪ್ರಾಣಿಯಾಗುತ್ತಾನೆ. ವಾಯುವಿನ ಪೂರ್ವಾಶ್ರಯವನ್ನು ನೀಗುತ್ತಾನೆ. ವಾಯುಗುಣಧರ್ಮಗಳನ್ನು ನಿಲ್ಲಿಸಿ, ಲಿಂಗ ಗುಣಧರ್ಮಗಳನ್ನು ಪ್ರಾಣದಲ್ಲಿ ಪ್ರತಿಷ್ಠಿಸಿ ಚೈತನ್ಯಮಯವನ್ನಾಗಿಸುತ್ತಾನೆ. ಲಿಂಗಪ್ರಾಣಿಯಾಗದೆ ಲಿಂಗಾಂಗ ಸಾಮರಸ್ಯರೂಪ ಶಿವಯೋಗಸಮಾಧಿ ಸಮನಿಸದು. ಸಮರಸತ್ವ ಸಮನಿಸದೆ ಸರ್ವಾಂತಃಕರಣಗಳ ವೃತ್ತಿ ಪ್ರವೃತ್ತಿಗಳು ನಿಷ್ಪತ್ತಿಗೊಳಗಾಗವು.

ತನು ಮನ ಪ್ರಾಣ ಭಾವ ಜೀವಗಳನ್ನು ಗೆಲಿದು ಆಚೆ ಸಾಗಿ ಶಿವಜ್ಞಾನದ ನಿಲುಮೆಗೆ ನಿಲುಕುವುದೆ ಶಿವಯೋಗದ ಆರಂಭ. ನಾಲ್ಕು ಯೋಗಗಳು ಮುಗಿದಲ್ಲಿಂದ ಮುಂದೆ ಶಿವಯೋಗ ಮೊದಲಾಗುತ್ತದೆ.

"ಜ್ಞಾನಂ ಶಿವಮಯಂ , ಭಕ್ತಿಃಶೈವೀ, ಧ್ಯಾನಂ ಶಿವಾತ್ಮಕಂ,
ಶಿವವ್ರತಂ, ಶಿವಾರ್ಚೇತಿ ಶಿವಯೋಗೋ ಹಿ ಪಂಚಧಾ ।"

ಶಿವಯೋಗದಲ್ಲಿ ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವವ್ರತ, ಶಿವಾರ್ಚನ ಎಂಬುದಾಗಿ ಪಂಚಪ್ರಕಾರಗಳಿವೆ. ಇವನ್ನು ಪಂಚಯಜ್ಞವೆಂದು, ಜ್ಞಾನಯಜ್ಞವೆಂದು ಶ್ರೀ ಜಗದ್ಗುರು ಭಗವತ್ಪಾದರು ಅಪ್ಪಣೆಕೊಡಿಸಿದ್ದಾರೆ. ದ್ರವ್ಯಯೋಗ, ಧರ್ಮಯೋಗಗಳಿಗಿಂತ ಈ ಶಿವಯೋಗ ದಿವ್ಯವೆಂದು ಅವರ ಅನುಭೂತಿ . ಸಾಮರಸ್ಯ ಸಂಪಾದನೆಗೆ ಶಿವಯೋಗವೆ ಶ್ರೇಷ್ಠಗತಿ.

೧) ಶಿವಜ್ಞಾನದಿಂದ ಶಿವಯೋಗ ಮೊದಲಾಗುತ್ತದೆ. ಇಲ್ಲಿ ಶಿವಜ್ಞಾನವೆಂದರೆ ಶಿವನ ಚಿತ್‌ಶಕ್ತಿ. ಆ ಶಿವನ ಚಿತ್ಕಳೆಯನ್ನು ಹಿಂದಿನ ನಾಲ್ಕುಯೋಗಗಳಿಂದ ಸಜ್ಜಾದ ದೇಹ ದೇವಾಲಯದಲ್ಲಿ ತೊಳಗಿ ಬೆಳಗಿಸಬೇಕು. ತೊಳಗಿ ಬೆಳಗಿಸದೆ ತನ್ನೊಳಗಿದ್ದ ಶಿವನು ತನಗೆ ಕಾಣನು. ಅದಕ್ಕೆ ತಕ್ಕ ಕಣ್ಣು ಬೇಕು. ಅದೇ ಶಿವಜ್ಞಾನ. ಅಷ್ಟೇ ಸಾಲದು. ಅದರ ನೆರವಿಗೆ ರವಿಬೆಳಗು ಬೇಕು. ಆ ರವಿಬೆಳಗೇ ಶ್ರೀಗುರು. ಶ್ರೀಗುರು ಚಿದ್ಭಾನು. ಇವೆರಡರ ಒಬ್ಬುಳಿಯಲ್ಲಿ ಸತ್ಯಸುಂದರವಾದ ಶಿವಸ್ವರೂಪದ ಸಾಕ್ಷಾತ್ಕಾರವಾಗುತ್ತದೆ. ಇದು ಶಿವಯೋಗದ ಪ್ರಥಮ ಸೋಪಾನ. ಇದಕ್ಕೆ ಪ್ರಮಾಣ :

"ಇನ್ನು ವೀರಮಾಹೇಶ್ವರರ ಲಿಂಗಸಂಧಾನ(ಶಿವಯೋಗ)ಎಂತೆಂದರೆ : ಬ್ರಹ್ಮರಂಧ್ರದಲ್ಲಿ ಇಪ್ಪ ಚೈತನ್ಯವಪ್ಪ ಪರಮ ಚಿತ್ಕಳೆಯನೆ ಭಾವ–ಮನ–ಕರದಲ್ಲಿ ಶ್ರೀಗುರು ತಂದು ಸಾಹಿತ್ಯವ ಮಾಡಿದನಾಗಿ, ಭಾವದಲ್ಲಿ ಸತ್‌ಸ್ವರೂಪವಪ್ಪ ಭಾವಲಿಂಗವೆನಿಸಿ, ಪ್ರಾಣದಲ್ಲಿ ಚಿತ್‌ಸ್ವರೂಪವಪ್ಪ ಪ್ರಾಣಲಿಂಗವೆನಿಸಿ, ಕರಸ್ಥಲದಲ್ಲಿ ಆನಂದಸ್ವರೂಪವಪ್ಪ ಇಷ್ಟಲಿಂಗವೆನಿಸಿ, ಒಂದೇ ವಸ್ತು–ತನು–ಮನ ಭಾವಂಗಳಲ್ಲಿ ಇಷ್ಟ–ಪ್ರಾಣ–ಭಾವವಾದ ಭೇದವನರಿದು, ಇಷ್ಟಲಿಂಗವ ದೃಷ್ಟಿಯಿಂದ ಗ್ರಹಿಸಿ, ಪ್ರಾಣಲಿಂಗವ ಮನಜ್ಞಾನದಿಂದ ಗ್ರಹಿಸಿ, ತೃಪ್ತಿಲಿಂಗವ ಭಾವಜ್ಞಾನದಿಂದ ಗ್ರಹಿಸಿ, ಆ ಲಿಂಗತ್ರಯವಿಡಿದು ಆಚರಿಸಿ ಲಿಂಗದೊಡನೆ ಕೂಡಿ, ಆ ಲಿಂಗವೇ ತಾನು, ತಾನಾಗಿ ವಿರಾಜಿಸುತಿಪ್ಪುದೀಗ ಶಿವಯೋಗ ನೋಡಾ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ!"

ಈ ವಚನದಿಂದ ಶಿವ (ಲಿಂಗ) ಜ್ಞಾನ ತ್ರಿವಿಧವೆಂದು ತಿಳಿಯುತ್ತದೆ. ನಯನ ಜ್ಞಾನ, ಮನಜ್ಞಾನ ಭಾವಜ್ಞಾನ ಈ ತ್ರಿವಿಧ ಜ್ಞಾನಗಳಿಂದ ತ್ರಿವಿಧ ಲಿಂಗಗಳನ್ನು ತನ್ನೊಳಗೆ ಕಾಣುವುದೆ ಶಿವಯೋಗದ ಶಿವಜ್ಞಾನ. ಶಿವಯೋಗದ ಚಿತ್ಕಳೋಪಾಸನ.

೨) ಶಿವಜ್ಞಾನದಿಂದ ಶಿವನನ್ನು ಕಂಡ ಬಳಿಕ ಶಿವನಲ್ಲಿ ಭಕ್ತಿಭಾವವಿರಬೇಕು. ಇದು ಸಹಜ, ಸೂಕ್ತ. ಕಾಣದ ವಸ್ತುವಿನಲ್ಲಿ ಕಣ್ಮನಗಳನ್ನಿಡಲು ಸಾಧ್ಯವಾಗದು. ಕಂಡ ವಸ್ತುವನ್ನು ಬರೀ ಕಾಣುವುದೇ ಬಾಳಿನ ಗುರಿಯಲ್ಲ; ಪ್ರಗತಿಯ ಚಿಹ್ನೆಯಲ್ಲ. ಬಳಿಸಾರುವ ಯೋಗವಲ್ಲ. ಕಂಡುದರಲ್ಲಿ ಕರುಳನ್ನಿರಿಸಬೇಕು. ಆಗ ಅದರ ಹತ್ತಿರಕ್ಕೆ ಹೋಗಲನುವಾಗುತ್ತದೆ. ಅದರಲ್ಲಿ ಆಸಕ್ತಿ ಆವಿರ್ಭವಿಸುತ್ತದೆ; ಭಕ್ತಿಯನ್ನಿಡದೆ ಆಸಕ್ತಿಬಾರದು.

ಭವದಲ್ಲಿ ರಕ್ತಿ ಹುಟ್ಟುವುದು ಪ್ರಕೃತಿನಿಯತಿ. ಇದಲ್ಲ ಶಿವಜ್ಞಾನಿಯ ರೀತಿ. ಭವಜ್ಞಾನವನಳಿದು ಶಿವಜ್ಞಾನವನ್ನು ಸಂಪಾದಿಸಿದ ಬಳಿಕ ಶಿವಭಕ್ತಿಯನ್ನು ತಳೆವುದು ತಾತ್ತ್ವಿಕನೀತಿ. ಭಕ್ತಿಯ ಬಗೆಗೆ–

"ಸತ್ಯ ಸನ್ಮಾರ್ಗದ ನಡೆವಳಿಯ ತನ್ನ ಸ್ವಾತ್ಮಜ್ಞಾನದಿಂದರಿದು, ಪಾಪವನುಳಿದು, ಪುಣ್ಯವನೆ ಮಾಡುವಂತಹ ಸದ್ಗುಣಿಗಳ ಅಂತರಂಗದಿ ಪುಷ್ಪದೊಳಗೆ ಪರಿಮಳವಿರಿಸಿ ದಂತೆ ಸರ್ವಾಂಗವೆಲ್ಲವಂ ಪಾವನವೆನಿಸಿ, ದೀಕ್ಷಾಗುರು ಶಿಕ್ಷಾಗುರು ಮೋಕ್ಷಾಗುರುವಿನ ಚರಣಕಮಲಕ್ಕೆ ಯೋಗ್ಯವೆಂದೆನಿಸುವ ಪ್ರೇಮವೆ ಭಕ್ತಿ."

ಬರೀ ಅರಿತರೆ ಶಿವನೊಲುಮೆ ಆಗದು. ಅರಿದಂತೆ ಅನುರಾಗವುಳ್ಳವರಾದರೆ ಆತನ ಅನುಗ್ರಹಕ್ಕೆ ಅನುವಾಗುತ್ತದೆ. ಏಕೆಂದರೆ ಶಿವನು ಭಕ್ತಿಪ್ರಿಯನು. 'ಭಕ್ತಿಗಮ್ಯಂ ಪರಂ ತತ್ತ್ವಂ' ಎಂಬುದನ್ನಿಲ್ಲಿ ನೆನೆಯಬೇಕು. ಜ್ಞಾನಯೋಗದಿಂದ ಕಣ್ಣಿನ್ನು

ನಿಗ್ರಹಿಸಿದರೆ, ಭಕ್ತಿಯೋಗದಿಂದ ಮನವನ್ನು ನಿಗ್ರಹಿಸಬೇಕು. ನಯನವಿದ್ದು ಮನ ವಿಲ್ಲದಿದ್ದರೆ ಆತನನ್ನು ಶಿವನೊಲ್ಲ. ಆತನ ಬಾಳು ಹಸನಾಗದು; ಮನ ಹಸನಾಗದು. ಕಣ್ಣು ಶಿವನನ್ನು ಶಿವವನ್ನು ಕಾಣುತ್ತ ಮನ ಅಶಿವವನ್ನು ನೆನೆಯುತ್ತಿದ್ದರೆ ಶಿವಕೃಪೆ ಯಾಗುವುದೆಂತು ? ಕಾಮನ ಕೈವಿಡಿದು ಸೋಮಧರನ ಪ್ರೇಮ ಸಂಪಾದಿಸಲು ಸಾಧ್ಯವಿಲ್ಲ. ಭಕ್ತಿಯಲ್ಲಿ ಬರುವ ತ್ಯಾಗ–ಯೋಗಗಳು ಮತ್ತಾವುದರಲ್ಲಿ ಬರುವುದಿಲ್ಲ. ಮನವೊಲಿದಲ್ಲಿ ತನ್ನದನ್ನೆಲ್ಲ ಸೂರೆಗೊಳ್ಳುವ ಸಮರ್ಪಿಸುವ ಆಸಕ್ತಿ ಅಳವಡುತ್ತದೆ; ಬೆರೆವ ಭಾಗ್ಯ ಬರುತ್ತದೆ. ಅದೇ ಭಕ್ತಿಯಿಲ್ಲದೆ ಏನು ಮಾಡಿದರೂ ಏನೂ ಪ್ರಯೋ ಜನವಿಲ್ಲ.

> "ಆಡಿದರೇನು ಹಾಡಿದರೇನು ಓದಿದರೇನು ತ್ರಿವಿಧದಾಸೋಹವಿಲ್ಲದನ್ನಕ್ಕ ?
> ಆಡದೇ ನವಿಲು ? ಹಾಡದೇ ತಂತಿ ? ಓದದೇ ಗಿಣಿ ?
> ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮದೇವ."

ಭಕ್ತಿಯಿಲ್ಲದ ಬೇಹಾರ ಬರಿದು . ಭಕ್ತಿಯಿಲ್ಲದ ದೇಹಾರ ಬರಿದು. ಭಕ್ತಿಯಿಲ್ಲದ ಯೋಗ ಅದೊಂದು ವಿಯೋಗ. 'ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ'– ವ್ಯರ್ಥ. ಭಕ್ತಿರಹಿತನಿಗೆ ಆ ಶಿವನು ತನ್ನ ಕರುಣಾಮೃತವನ್ನು ಊಡನು. ಇವನು ಉಣ್ಣನು. ಕಾರಣ ಭಕ್ತಿ ಬೇಕೇ ಬೇಕು. ಅಂತೆಯೆ ಇದು ಶಿವಯೋಗದ ದ್ವಿತೀಯಾಂ ಗವಾಗಿದೆ. ಶಿವನ ಕೃಪಾರಸಪಾನಕ್ಕೆ ಸಾಧನವಾಗಿದೆ.

೩) ಶಿವಯೋಗದ ಮೂರನೆಯ ಸಾಧನ ಧ್ಯಾನ. ಧ್ಯಾನವೆಂದರೆ ಅಂತರ್ಲಕ್ಷ್ಯ ಸಂಯಮನ ಮತ್ತು ಶಿವಚಿಂತನ. ತಾನು ತಿಳಿದ, ತಾನು ಒಲಿದ, ತಾನು ನಂಬಿದ ವಸ್ತು ಶಿವ. ಅದೇ ಶಿವಯೋಗಿಯ ಧ್ಯೇಯವಸ್ತು. ಆ ತನ್ನ ಧ್ಯೇಯ ವಸ್ತುವನ್ನೇ ತಾನು ಧ್ಯಾನಿಸಬೇಕು; ಅಂದರೆ ತನ್ನ ಲಕ್ಷ್ಯವನ್ನು ಹೊರಗೆ ಹರಿಬಿಡದೆ ಶಿವನಲ್ಲಿಯೆ ನಿಲ್ಲಿಸಬೇಕು, ನೆನೆಯಬೇಕು, ಧ್ಯೇಯಾಕಾರವಾಗಬೇಕು.

ಆಧಾರದಲ್ಲಿ ಮನ ಸ್ಥಿರವಾದಾಗ ಅಲ್ಲಿರುವ ಆಚಾರಲಿಂಗವನ್ನು ಧ್ಯಾನಿಸಬೇಕು. ಸ್ವಾಧಿಷ್ಠಾನದಲ್ಲಿ ಮನವಿಟ್ಟಾಗ ಅಲ್ಲಿರುವ ಗುರುಲಿಂಗವನ್ನು ನೆನೆಯಬೇಕು. ಮಣಿಪೂರಕದಲ್ಲಿ ಮನ ನಟ್ಟಾಗ ಅಲ್ಲಿರುವ ಶಿವಲಿಂಗವನ್ನು ಸ್ಮರಿಸಬೇಕು. ಅನಾಹ ತದಲ್ಲಿ ಮನ ಅಳವಟ್ಟಾಗ ಅಲ್ಲಿರುವ ಜಂಗಮಲಿಂಗವನ್ನು ಜಾನಿಸಬೇಕು. ಆಜ್ಞಾ ಚಕ್ರದಲ್ಲಿ ಮನ ಏಕಾಗ್ರವಾದಾಗ ಅಲ್ಲಿರುವ ಮಹಾಲಿಂಗವನ್ನು ಮನನಿಸಬೇಕು. ಅಲ್ಲಿಂದಾಚೆ ಮನ ಉನ್ಮನವಾಗಿ ಸಹಸ್ರಾರ ಸೇರುತ್ತದೆ. ಅಲ್ಲಿ ಧ್ಯಾನವಿಲ್ಲ. ಸಮಾಧಿ ಸ್ಥಿತಿ ಸಂಪ್ರಾಪ್ತವಾಗುತ್ತದೆ. ಸಮಾನ ಪ್ರತಿಪತ್ತಿ ಸಮನಿಸುತ್ತದೆ. ಆ ಶಿವಧ್ಯಾನದಲ್ಲಿ ಮನ ತಲ್ಲೀನವಾಗಿ ಮೈಮರೆವಿಕೆಯುಂಟಾಗುತ್ತದೆ.

ಶಿವಧ್ಯಾನದಿಂದ ಅಂದರೆ ಮತ್ತೆ ಮತ್ತೆ ನೆನೆಯುವದರಿಂದ ಶಿವಸಂಸ್ಕಾರವೆ ಸಂಭವಿಸುತ್ತದೆ. ಶಿವನಲ್ಲಿ ಏಕಾಗ್ರತೆ ಏರಕಗೊಳ್ಳುತ್ತದೆ.

"ತತ್ರ ಪ್ರತ್ಯಯೈಕತಾನತಾ ಧ್ಯಾನಂ" –ಯೋಗಸೂತ್ರ

"ಪ್ರಣವೋ ಧನುಃ, ಶರೋ ಹ್ಯಾತ್ಮಾ, ಬ್ರಹ್ಮ ತಲ್ಲಕ್ಷ್ಯಮುಚ್ಯತೇ ।
ಅಪ್ರಮತ್ತೇನ ವೇದ್ಧವ್ಯಂ ಶರವತ್ ತನ್ಮಯೋ ಭವೇತ್ ॥"
–ಮುಂಡಕೋಪನಿಷತ್

ಈ ಪ್ರಮಾಣಗಳು ಧ್ಯಾನಲಕ್ಷಣವನ್ನು ಧ್ಯಾನಸಂಧಾನವನ್ನು ಕ್ರಮವಾಗಿ ಕಂಡು ಉಗ್ಗಡಿಸಿವೆ. ಶಿವಸಂಧಾನಕ್ಕೆ ಶಿವಧ್ಯಾನ ಅತ್ಯಗತ್ಯ.

೪) ಶಿವವ್ರತವು ಶಿವಯೋಗದ ನಾಲ್ಕನೆಯ ನೋಂಪಿ. ವ್ರತ ಶಬ್ದಕ್ಕೆ ನೇಮ ನಿಯಮ ಕಟ್ಟಳೆ ನಿಷ್ಠೆ ಎಂದು ಅರ್ಥಗಳಿವೆ. ಶಿವನ ಕಟ್ಟಳೆಯ ಕೈಕೊಂಡಾಗ ಬೇರೆ ಕಟ್ಟಳೆಗಳಿಗೆ ಕೈಹಾಕಬಾರದು. ಬೇರೆ ನಿಷ್ಠೆ ನೇಮಗಳಿಗೆ ಮನಸ್ಸು ಮಾಡಬಾರದು. ಬೇರೆ ಪೂಜೆ ಪುನಸ್ಕಾರಗಳನ್ನು ಮಾಡಬಾರದು.

ಕಾರಣತನುವಾದ ಯೋಗಾಂಗವು ಜ್ಞಾನತನುವಾದ ಕಾರಣ ಅದಕ್ಕೆ ಶಿವಜ್ಞಾನದ ಯೋಗ ಬೇಕು. ಸೂಕ್ಷ್ಮತನುವಾದ ಭೋಗಾಂಗವು ಇಚ್ಛಾತನುವಾದ ಕಾರಣ ಅದಕ್ಕೆ ಸದಿಚ್ಛಾರೂಪ ಭಕ್ತಿ–ಧ್ಯಾನಗಳು ಬೇಕು. ಸ್ಥೂಲತನುವಾದ ತ್ಯಾಗಾಂಗಕ್ಕೆ ಕ್ರಿಯಾಶಕ್ತಿ ಕಾರಣವಾದುದರಿಂದ ಇದಕ್ಕೆ ವ್ರತ–ಪೂಜೆಗಳು ಬೇಕು. ಈ ಸುಂದರ ಸಮನ್ವಯ ಶಿವಯೋಗದಲ್ಲಿದೆ. ಈ ಐಯ್ದು ಸೇರಿ ಶಿವಯೋಗವಾಗುತ್ತದೆ. ತ್ರಿವಿಧಾಂಗ ಶಿವಯೋಗಕ್ಕೆ ಸಮನಿಸಿದಂತಾಗುತ್ತದೆ.

ಕೃಚ್ಛ್ರ ಚಾಂದ್ರಾಯಣಾದಿ ಕಾಯಕೃಶಕಾರಕ ವ್ರತಗಳಿವೆ; ಕೃತ್ರಿಮ ವ್ರತಗಳಿವೆ. ಕೃಪಣವ್ರತಗಳಿವೆ. ಇವೆಲ್ಲ ನಿಂದ್ಯವಾದವುಗಳು; ನಿರಸನ ಯೋಗ್ಯಗಳು. ಶಿವಯೋಗದ ಶಿವವ್ರತ ಉಪಾದೇಯ ವ್ರತ. ಇದು ಏಕಾಂಗನಿಷ್ಠವಲ್ಲ; ಸರ್ವಾಂಗನಿಷ್ಠ. ಅಕರ್ಮಗಳಿಗೆ ಹರಿದಾಡದೆ ಸತ್ಯಕಾಯಕಕ್ಕೆ ಶಿವಪೂಜಾ ಸಾಹಿತ್ಯಕ್ಕೆ ಹರಿದಾಡುವುದೆ ಚರಣವ್ರತ. ಸಲ್ಲದುದನ್ನು ಬಿಟ್ಟು ಸಲ್ಲುವುದನ್ನು ಮಾಡುವುದೆ ಕರವ್ರತ. ಸುತ್ತು ಸುಳಿದು ಅಮಂಗಳವ ನೋಡದೆ ಮಂಗಳರೂಪಂಗಳ ನೋಡುವುದೆ ಕಂಗಳವ್ರತ. ಒಳಿತನು ನುಡಿವುದೆ ಮುಖವ್ರತ. ಒಳ್ನುಡತೆಯೆ ಶಿವವ್ರತ. ಮಂಗಳ ಶಬ್ದವ ಕೇಳುವುದೆ ಶ್ರೋತ್ರವ್ರತ. ಸತ್‌ಸ್ಪರ್ಶವೆ ತ್ವಗ್‌ವ್ರತ, ಲೋಕಹಿತವೇ ಜೀವನವ್ರತ. ಅಂಗವೆಲ್ಲವೂ ಲಿಂಗಮಯವಾಗುವಂತೆ ಆಚರಿಸುವುದೆ ಶಿವವ್ರತ. ಈ ಬಗೆಯ ಶಿವವ್ರತವುಳ್ಳ ಶರಣಸತಿಯು ಈ ನೋಂಪಿಯನ್ನು ನೆರವೇರಿಸಬೇಕು :

"ಬಿಳಿಯ ಕರಿಕೆಯ ಕಣಿಗಿಲೆಲೆಯ ತೊರೆಯ ತೊಡೆಯ
ಮಳಲ ತಂದು ಗೌರಿಯ ನೋನುವ ಬನ್ನಿರೇ !
ಚಿಕ್ಕ ಚಿಕ್ಕ ಮಕ್ಕಳೆಲ್ಲರು ನೆರೆದು,
ಅನುಪಮದಾನಿ ಕೂಡಲಸಂಗಮದೇವ ಗಂಡನಾಗಬೇಕೆಂದು !"

ಶಿವವ್ರತದ ಉದಾತ್ತವೂ ಪವಿತ್ರವೂ ಆದ ಚರಮ ಉದ್ದೇಶವಿದು; ಪರಮಾಚರಣವಿದು. ಶಿವನು ಅನುಪಮದಾನಿ, ಮಹಾದಾನಿ. ಆ ದಾನ ಪಡೆಯಲು ವ್ರತನಿಷ್ಠನಾಗಬೇಕು. ಶರಣಸತಿಯಾದವಳು ಶಿವನನ್ನೆ ಪತಿಯನ್ನಾಗಿ ವರಿಸುವ, ವರಿಸಿ ಸಮರಸವಾಗುವ ವ್ರತಸಂಪನ್ನಳಾಗಬೇಕು. ಆ ವ್ರತಕ್ಕೆ ಒಲಿದು ಶಿವನು ಗುರುದೇವನಾಗಿ ಬಂದು ಲಿಂಗದೇವನಾಗಿ ನಿಂದು ವ್ರತ ಫಲಿಸುವಂತೆಸಗುತ್ತಾನೆ.

ಶರಣನಿಗೆ ಶಿವೇತರ ದೇವತೆಗಳ ವ್ರತ ಸಲ್ಲದು. ಶಿವೇತರವ್ರತದಿಂದ ಶಿವನಿಷ್ಠೆ ಶಿವೈಕಾವಧಾನ ಶಿವಾನುಭವ ಶಿವಾನಂದಗಳು ಸಮನಿಸವು. ಶಿವೈಕ್ಯಭಾವವುಂಟಾಗದು. ಅಶಿವ ವ್ರತಗಳಿಗಿಂತ ಶಿವವ್ರತ ಶ್ರೇಷ್ಠ.

ಶಿವವ್ರತಾಚರಣೆಯ ವಿಧಾನ ಈ ವಚನದಲ್ಲಿ ಹೃದಯುಂಗಮವಾಗಿ ವರ್ಣಿತವಾಗಿದೆ. ಬಿಳಿಯ ಕರಿಕೆಯೆ ಶಿವನ ದೃಕ್ಕ್ರಿಯೆಗಳು. ಕಣಿಗಿಲೆಲೆಯೆ ಶಿವಭಕ್ತಿ. ಆ ಭಕ್ತಿ ತೊರೆಯ ತೊಡೆಯ ಮಳಲೇ ಶಿವಧ್ಯಾನಾದಿಗಳು. ಚಿತ್‌ಶಕ್ತಿಯೆ ಗೌರಿ. ಪರಾ ಆದಿ ಇಚ್ಛಾ ಮುಂತಾದ ಶಕ್ತಿಯರೆ ಚಿಕ್ಕ ಚಿಕ್ಕ ಮಕ್ಕಳು. ಇವರೊಡಗೂಡಿ ಮಾಡುವ ನೋಂಪಿ ಶಿವವ್ರತ. ಆ ಶಿವವ್ರತವೆ ಶಿವಾರಾಧನೆಯಲ್ಲಿ ಮುನ್ನಡೆಯುತ್ತದೆ. ಇದರಿಂದ ಈ ವಚನವು ಶಿವಯೋಗದ ಸಂಪೂರ್ಣ ಸುಂದರ ಚಿತ್ರವನ್ನು ಚಿತ್ರಿಸಿದೆ; ಶಿವಲಿಂಗನಿಷ್ಠೆಯನ್ನು ಉಗ್ಗಡಿಸಿದೆ.

ಶಿವಜೀವನವೆ ಶಿವಯೋಗದ ಹೃದಯ. ಒಳಬಾಳು ಒಳ್ಬಾಳು, ಒಳ ಬೆಳಗು ಒಳ್ಬೆಳಗು, ಒಳನೇಹ ಒಳ್ನೇಹ, ಒಳ ನೆನಹು ಒಳ್ನೆನಹು, ಒಳಿತಾದ ಬಳಗ ಒಳ ಬಳಗ– ಒಗ್ಗಟ್ಟುಳ್ಳ ಬಳಗ, ಒಳ್ನಡೆ ಒಳ್ನುಡಿ ಇವೆಲ್ಲ ಶಿವವ್ರತದ ಸಂಪತ್ತು; ಸತ್‌ಸಾಹಿತ್ಯ. ಇಲ್ಲಿಯೂ ಅಲ್ಲಿಯೂ ಸಲ್ಲುವ ಶಿವವ್ರತ; ಶಿವಾಚಾರಗಳೆ ಶಿವವ್ರತ. ಇದುವೆ ಶಿವಾಚಾರ; ಲಿಂಗಾಚಾರ.

೫) ಶಿವಯೋಗದ ಐದನೆಯ ಸಾಧನ ಶಿವಾರ್ಚನ. ಇದು ಬಾಹ್ಯ, ಆಂತರ ಎಂದು ಎರಡು ಬಗೆ. ಇಷ್ಟಲಿಂಗಾರ್ಚನೆ ಅಂದರೆ ಕ್ರಿಯಾಲಿಂಗಾರ್ಚನೆ ಬಾಹ್ಯಪೂಜೆ; ಪ್ರಾಣಲಿಂಗ ಅಂದರೆ ಜ್ಞಾನಲಿಂಗದ ಅರ್ಚನೆ, ಆಂತರಿಕ ಪೂಜೆ. ಆಂತರಿಕ ಅರ್ಚನೆಯೆ ಮುಖ್ಯವಾಗಿದ್ದರೂ ಬಾಹ್ಯಪೂಜೆಯೂ ಅನಿವಾರ್ಯ. ಕ್ರಿಯಾಪೂಜೆಯಿಲ್ಲದೆ ಜ್ಞಾನ

ಪೂಜೆ ಸಂಭವಿಸದು. ತನುಶುಚಿಯಿಲ್ಲದೆ ಮನ ಶುಚಿಯಾಗದು. ಕ್ರಿಯಾಲಿಂಗಾರ್ಚನೆಯಿಂದ ತನುಸೂತಕ–ಪಾತಕಗಳು ತೊಲಗುತ್ತವೆ. ಅಂಗಗುಣಗಳನ್ನು ಬಿಡುವುದೆ ಲಿಂಗಪೂಜೆಯ ಗುರಿ. ಲಿಂಗಪೂಜಾಭ್ಯಾಸದಿಂದ ಲಿಂಗಗುಣಗಳು ಮೈಗೂಡುತ್ತವೆ: ಮಂತ್ರದೇಹಿಯಾಗುತ್ತಾನೆ. ಲಿಂಗನಡೆ, ಲಿಂಗನುಡಿ, ಲಿಂಗನೋಟ, ಲಿಂಗಮಾಟ, ಲಿಂಗಸ್ಪರ್ಶ, ಲಿಂಗಮಂತ್ರ, ಶ್ರವಣ, ಲಿಂಗಾದರ್ಶಗುಣಗಳು ಗುಂಫಿತವಾಗುತ್ತವೆ. ಕೊನೆಗೆ ಅಂಗವೆಂಬ ಭಾವ ಹಿಂಗಿ ಅಂಗವೇ ಲಿಂಗವಾಗಿ ಪರಿಣಮಿಸುತ್ತದೆ. 'ಲಿಂಗವ ಪೂಜಿಸಿ ಲಿಂಗವೆ ಆಗುವ' ಅಳವು ಅಳವಡುತ್ತದೆ.

> "ಎಲ್ಲವ ಕಳೆದುಳಿದ ಹೂವ ತಂದು,
> ಗೆಲ್ಲ ಸೋಲಕ್ಕೊಳಗಾಗದ ನೀರನೆ ತುಂಬಿ,
> ಕರಣಂಗಳೆಲ್ಲವು ಕಂಗಳ ತುಂಬಿ, ನಿಂದು ನೋಡಿ,
> ತನ್ನಂಗದಿಚ್ಛೆಯ ಮರೆದು,
> ಲಿಂಗವ ಪೂಜಿಸಬೇಕೆಂದ ಅಂಬಿಗರ ಚೌಡಯ್ಯ"

"ರುದ್ರೋ ಭೂತ್ವಾ ರುದ್ರಮರ್ಚಯೇತ್" ಲಿಂಗವಾಗಿ ಲಿಂಗವ ಪೂಜಿಸುವ ವಿಧಾನ ಶಿವಾಚಾರದ್ದು. ಆದಕಾರಣ ಲಿಂಗಪೂಜೆಯಲ್ಲಿ ಅಂಗದಿಚ್ಛೆ ಅರತು ಹೋಗಬೇಕು; ಹೋಗಿರಬೇಕು. ಅದು ದಿಟದ ಅರ್ಚನ. ಅಲ್ಲಿ ಒದಗುವುದು ಶಿವದ ಯೋಗ; ಶಿವಚೇತನದ ಯೋಗ.

ಅಷ್ಟವಿಧ ಅಥವಾ ಷೋಡಶವಿಧ ಉಪಚಾರಗಳಿಂದ ಇಷ್ಟಲಿಂಗವನ್ನು ಪೂಜಿಸಿ ಇಷ್ಟ ಸ್ವರೂಪವನ್ನು ಪಡೆಯಬೇಕು. ಈ ಕ್ರಿಯಾಪೂಜೆಗೆ ಶುದ್ಧೋದಕ, ವಿಭೂತಿ, ರುದ್ರಾಕ್ಷಿ, ಪತ್ರ, ಪುಷ್ಪ, ಧೂಪ, ದೀಪ, ಸತ್ತಿಗೆ, ಸೀಗುರಿ, ದರ್ಪಣ, ಗಂಟೆಗಳು ಬೇಕು. ನಿವೇದಿಸಲು ಪದಾರ್ಥ ಬೇಕು. ಒಳಗಿನ ಪ್ರಾಣಲಿಂಗಪೂಜೆಗೆ ಶಾಂತಿ, ಸಮಾಧಾನ, ವಿನಯ, ನಿರ್ಮಮತೆ, ನಿರಹಂಭಾವ, ಸ್ಥಿರಬುದ್ಧಿ, ಸುಜ್ಞಾನಾದಿಗಳು ಬೇಕು. ತೋಂಟದ ಸಿದ್ಧಲಿಂಗೇಶ್ವರರು ಪ್ರಾಣಲಿಂಗದ ಬಗೆಗೆ ಹೀಗೆ ಹೇಳಿದ್ದಾರೆ:

> "ದೇಹವೆ ದೇಗುಲ, ಕಾಲೇ ಕಂಬ, ಶಿರಸ್ಸೆ ಶಿಖರ ಸೋಪಾ!
> ಹೃದಯ ಕಮಲ ಕರ್ಣಿಕಾವಾಸವೆ ಸಿಂಹಾಸನ.
> ಮಹಾಘನ ಪರತತ್ತ್ವವೆಂಬ ಪ್ರಾಣಲಿಂಗ ಮೂರ್ತಿಗೊಳಿಸಿ
> ಪರಮಾನಂದಾಮೃತ ಜಲದಿಂದ ಮಜ್ಜನಕ್ಕೆರೆದು
> ಮಹಾದಳ ಪದ್ಮದಲ್ಲಿ ಪೂಜಿಸಿ
> ಪರಮ ಪರಿಣಾಮವೆಂಬ ನೈವೇದ್ಯವ ಗಡಣಿಸಿ
> ಪ್ರಾಣಲಿಂಗಕ್ಕೆ ಪ್ರಾಣಸಂಬಂಧವಾದ ಪೂಜೆಯ ಮಾಡುತಿರ್ಪನು ಕಾಣಾ
> ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ!"

ಇನ್ನು ಭಾವಲಿಂಗಾರ್ಚನ :

"ಉಪ್ಪು ಉದಕವ ಬೆರಸಿದಂತೆ,
ವಾರಿಕಲ್ಲು ವಾರಿಯ ಬೆರಸಿದಂತೆ,
ಕಪ್ಪುರ ಅಗ್ನಿಯ ಬೆರಸಿದಂತೆ
ಮನ ಲಿಂಗದಲ್ಲಿ ಲೀಯವಾಗಿಹುದು,
ಭಾವಲಿಂಗ ಪೂಜೆ ನೋಡಾ,
ಅಪ್ರಮಾಣ ಕೂಡಲಸಂಗಮದೇವಾ !"

ಕಾರ್ಮಿಕ ಮನನಿವೃತ್ತಿ ಕರದಿಷ್ಟಪೂಜೆಯಿಂದ. ಮಾಯಾಮಲನಿವೃತ್ತಿ ಉರದ ಪ್ರಾಣಲಿಂಗಪೂಜೆಯಿಂದ. ಆಣವೀಯ ಮಲನಿವೃತ್ತಿ ಭಾವಲಿಂಗಾರ್ಚನೆಯಿಂದ. ತ್ರಿಮಲ ನಿವೃತ್ತಿಯೆ ಕ್ರಿಯಾಜ್ಞಾನಾನುಭವ ನಿಷ್ಪತ್ತಿ; ಇದುವೆ ಶಿವಯೋಗ ಸಂಪತ್ತಿ.

"ಇಷ್ಟಲಿಂಗಪೂಜೆಯದು ಅಷ್ಟೈಶ್ವರ್ಯಪ್ರದವಾಯಿತ್ತು
ಪ್ರಾಣಲಿಂಗಪೂಜೆಯದು ಅಖಂಡ ಚಿದೈಶ್ವರ್ಯಪ್ರದವಾಯಿತ್ತು
ಭಾವಲಿಂಗಪೂಜೆಯದು ನಿರ್ಭಾವ ನಿಜಾನಂದ ವಸ್ತು ಸ್ವರೂಪವಾಯಿತ್ತು
ಕೇಳಾ ಕಪಿಲಸಿದ್ಧಮಲ್ಲಿಕಾರ್ಜುನಾ !"

ಈ ತ್ರಿವಿಧಲಿಂಗಪೂಜೆಯಲ್ಲಿ ಅಷ್ಟಾಂಗಯೋಗಗಳು ಅಳವಡುತ್ತವೆ. ಇಷ್ಟಲಿಂಗಪೂಜೆಯಲ್ಲಿ ಯಮ–ನಿಯಮ–ಆಸನಗಳು. ಪ್ರಾಣಲಿಂಗಪೂಜೆಯಲ್ಲಿ ಪ್ರಾಣಾಯಾಮ–ಪ್ರತ್ಯಾಹಾರಗಳು. ಭಾವಲಿಂಗ ಪೂಜೆಯಲ್ಲಿ ಧ್ಯಾನ–ಧಾರಣ–ಸಮಾಧಿಗಳು ಸೇರ್ಪಡೆಯಾಗುತ್ತವೆ.

ಜೀವನು ಶಿವನಾಗುವುದೆಂದರೆ ಬೀಜ ಮರವಾದಂತೆ ! 'ಬೀಜಾಂಕುರ ನ್ಯಾಯವು' ಹೇಗೋ 'ಜೀವ–ಶಿವನ್ಯಾಯ'ವೂ ಹಾಗೆ ! ಬೀಜ ಯಾವುದು, ಅಂಕುರ ಯಾವುದು? ಎಂಬುದನ್ನು ಬಿಚ್ಚಿ ಹೇಳಲಾಗದು. ಬೀಜವೇ ಅಂಕುರ, ಅಂಕುರವೇ ಬೀಜ; ಪರಸ್ಪರ ಆಶ್ರಯವಾಗಿವೆ; ಅಪೇಕ್ಷಿತಗಳಾಗಿವೆ. ಶಿವಯೋಗವೂ ಅಂತಹದು. ಆ ಶಿವನಯೋಗ ಹೊರಗಿನಿಂದ ಬರುವುದಲ್ಲ. ಅದು ಆತ್ಮನಲ್ಲಿಯೆ ಅವ್ಯಕ್ತವಾಗಿರುತ್ತದೆ–ಬೀಜದಲ್ಲಿ ಅಂಕುರವಿರುವಂತೆ ! ಅದನ್ನು ವ್ಯಕ್ತಗೊಳಿಸುವುದೆ ಶಿವಯೋಗ ! "ಬೀಜೇ ಯಥಾಂ–ಕುರಃ ಸಿದ್ಧಃ ತಥಾऽತ್ಮನಿ ಶಿವಃ ಸ್ಥಿತಃ ।" ಎಂದು ಜಗದ್ಗುರು ರೇಣುಕರು ಅಪ್ಪಣೆ ಕೊಡಿಸಿದ್ದಾರೆ. ಶಿವನ ಯೋಗವು ಅದೆಷ್ಟು ಆತ್ಮೀಯವಾದುದು, ಅದೆಷ್ಟು ಆಂತರಂಗಿಕವಾದುದು-ಎಂಬುದು ಇದರಿಂದ ಎಗ್ಗಳವಾಗುತ್ತದೆ. 'ಕರಿಯು ಕನ್ನಡಿಯೊಳಡಗಿದಂತೆ

ನೀನು ಎನ್ನೊಳಗೆ ಅಡಗಿರುವೆಯಯ್ಯ' ಎಂಬ ಬಸವಣ್ಣನವರ ವಚನಾಭಿಪ್ರಾಯವು ಜೀವಾತ್ಮನಲ್ಲಿ ಪರಮಾತ್ಮನು ಇರುವ ಬಗೆಯನ್ನೆ ಬಿತ್ತರಿಸಿದೆ. ತನ್ನೊಳಗಿರುವ ಆ ಶಿವಸ್ವರೂಪವನ್ನು ತಾನು ಪಡೆವುದೆ ಶಿವಯೋಗ.

'ಯತ್ರಜೀವಸ್ತತ್ರ ಶಿವಃ' ಜೀವರು ಇರುವಲ್ಲೆಲ್ಲಾ ಶಿವನಿರುವನು. ಆದರೆ ಜೀವರೆಲ್ಲ ಶಿವರಲ್ಲ. ಬಿತ್ತಿನಲ್ಲಿ ಹಣ್ಣಿದೆ; ಆದರೆ ಬಿತ್ತೇ ಹಣ್ಣಲ್ಲ. ಮಣ್ಣಿರುವಲ್ಲೆಲ್ಲ ಮಡಕೆಯಿದೆ; ಮಣ್ಣೇ ಮಡಕೆಯಲ್ಲ. ಮಾಡಿದ ಮಣ್ಣು ಮಡಕೆಯಾಗುವುದು. ಪಡೆದ ಜೀವ ಶಿವನಾಗುವನು. ಹಾಲಿನಲ್ಲೆಲ್ಲಾ ತುಪ್ಪವಿದೆ; ಆದರೆ ಹಾಲೇ ತುಪ್ಪವಲ್ಲ. ತುಪ್ಪ ಮಾಡುವ ಕ್ರಮವನ್ನು ಅರಿತು ಮಾಡಿದರೆ ತುಪ್ಪವಾಗುವುದು. ಇದರಂತೆ ದೃಕ್ಕ್ರಿಯಾ ಅಂದರೆ ಅರಿವು–ಆಚಾರಗಳನ್ನು ಅಳವಡಿಸಿಕೊಂಡ ಜೀವನು ಶಿವನಾಗುವನು.

ವಿವಿಧ ವೃತ್ತಿರೂಪ ತೆರೆಗಳನ್ನು ವಾಸನಾವಾಯುವಿನಿಂದ ಎಬ್ಬಿಸುವುದೆ ಸಂಸಾರ ಸಾಗರ. ಆ ತೆರೆಗಳ ತೆಕ್ಕೆಗೆ ಒಳಗಾಗುವುದೆ ಭವರೋಗ; ಆ ಎಲ್ಲ ವೃತ್ತಿಗಳನ್ನು ನಿವೃತ್ತಿಗೊಳಿಸಿ ನಿಷ್ಪತ್ತಿಯನ್ನುಂಟು ಮಾಡುವುದೆ ಶಿವಯೋಗ. ಶಿವಾದ್ವೈತ ಶ್ರೀಗುರು ಸಂಸ್ಕಾರದಿಂದ ಪರಿಶುದ್ಧನಾದ ಜೀವನು ಪ್ರಾಕೃತಿಕ ದೇಹಾಭಿಮಾನವನ್ನು ತ್ಯಾಗಮಾಡಿ ತ್ಯಾಗಾಂಗನಾಗುವನು. ಭೋಜ್ಯರೂಪ ಪ್ರಸಾದವನ್ನು ಶಿವನೊಡನೆ ಭೋಗಿಸಿ ಭೋಗಾಂಗನಾಗುವನು. ತ್ಯಾಗವಾಗಿ ಭೋಗವಾಗಿ ತನು–ತಿರೆಗಳು ತೀರಿದ ಬಳಿಕ ಶಿವನೊಡನೆ ಯೋಗವಾಗುವುದೆ ಯೋಗಾಂಗ. ಅದುವೆ ಆ ಶಿವಯೋಗ.

ಶಿವಯೋಗದಲ್ಲಿ ತನು ಮನ ಪ್ರಾಣ ಭಾವ ಜೀವ ಇವೆಲ್ಲವೂ ಶಿವತ್ವಕ್ಕೇರುತ್ತವೆ. ಶಿವತ್ವ ಪ್ರಾಪ್ತಿಯ ಪಡೆದಿರುತ್ತವೆ; ತೃಪ್ತಿಯ ತಳೆದಿರುತ್ತವೆ. ಶಿವಪ್ರಾಪ್ತಿ–ಶಿವ ತೃಪ್ತಿಗಳೇ ಸರ್ವಸ್ವವಾಗಿ ಆಚೆ ಈಚೆ ಅವು ತುಳುಕವು. ಇದು ಶಿವಯೋಗ ಸಮಾಧಿ, ಶಿವತ್ವನಿಧಿ. ಯೋಗದಲ್ಲಿ ಯಾವುದಾದರೂ ಪ್ರಾಪ್ತಿಯಾಗಬಹುದು; ಶಿವಯೋಗದಲ್ಲಿ ಹಾಗಲ್ಲ; ಶಿವತ್ವ ಪ್ರಾಪ್ತಿಯೇ ಶಿವಯೋಗದ ಮುಖ್ಯ[illegible]: ಸತ್ಯ ಸೌಖ್ಯ ಪರಿ. ಯೋಗಕ್ಕೂ–ಶಿವಯೋಗಕ್ಕೂವ ಇರು ತರತಮವಿದು.

ಶಿವಯೋಗವೆಂದರೆ ದೃಕ್ಕ್ರಿಯಾ ಕೌಶಲ್ಯ ಮತ್ತು ಸಾಫಲ್ಯ. ಜ್ಞಾನವೆ ಕಣ್ಣು. ಕ್ರಿಯೆಯೆ ಕೈ. ಕಣ್ಣು ಕಾಣುತ್ತದೆ; ಕೈ ಕೂಡುತ್ತದೆ. ಆ ಕಣ್ಣು ಬೇರೆ; ಆ ಕೈ ಬೇರೆ. ಅದು ಚಿನ್ನೇತ್ರ; ಅದು ನಿರ್ಭಾವಹಸ್ತ. ಅವು ಪರಿಶುದ್ಧವಾಗಿ ಪರಿಣತಿಗೊಂಡಿರುತ್ತವೆ; ಸರ್ವತೋಮುಖವಾದ ವಿಕಾಸ ಸಿದ್ಧಿಯ ಪಡೆದಿರುತ್ತವೆ. ಸತ್ಯವಾದ ಶಿವಸುಖವನ್ನು ನಿತ್ಯ ಅನುಭವಿಸುತ್ತವೆ.

ಶಿವತ್ವ ಸಂಪ್ರಾಪ್ತಿಯಿಂದ ತನು ಮನ ಪ್ರಾಣ ಭಾವ ಜೀವಗಳಲ್ಲಿ ಇರುವ ದೌರ್ಬಲ್ಯ ದೂರಾಗುತ್ತದೆ; ಸದ್ಬಲ ಸಮನಿಸುತ್ತದೆ. ಸದ್ಬಲ ಸಮನಿಸದೆ ಆ ಪರಶಿವ-ಪ್ರಾಪ್ತಿಯಾಗದು; ಪರಿತೃಪ್ತಿಯಾಗದು. 'ನಾಯಮಾತ್ಮಾ ಬಲಹೀನೇನ ಲಭ್ಯಃ' ಎಂಬೀ ಕೈವಲ್ಯಶ್ರುತಿಯು ಇದನ್ನೇ ಹೇಳಿದೆ. ಆ ಶಿವಬಲವನ್ನು ಸಂಪಾದಿಸುವುದೆ. ಶಿವಯೋಗ ಸಂಪಾದಿಸಿದಾತನೆ ವೀರಶೈವ; ಆತನೇ ಶಿವಯೋಗಿ.

ಬಲಗಳು ಬಹುವಾಗಿವೆ. ಬಾಹ್ಯಬಲಗಳಲ್ಲಿ ರಾಜಬಲ ಮಿಗಿಲು. ಈ ರಾಜ ಬಲಕ್ಕಿಂತ ಅಂತರಂಗಿಕವಾದ ಶಿವಾತ್ಮತೇಜಬಲವೇ ಎಲ್ಲ ಬಗೆಯಲ್ಲಿ ಮಿಗಿಲು. ರಾಜಯೋಗದಲ್ಲಿ ರಾಜಬಲ ಪ್ರಾಪ್ತಿ; ಶಿವಯೋಗದಲ್ಲಿ ಶಿವಬಲ ಸಂಪ್ರಾಪ್ತಿ. ಶಿವಬಲ ನಿರುಪದ್ರವಿ; ನಿರಾಮಯಿ. ಶಿವಬಲವುಳ್ಳವನು ಸ್ಥಿತಪ್ರಜ್ಞನಾಗುವನು; ಸ್ಥಿರಚಿತ್ತ ನಾಗುವನು.

ಶಿವಾತ್ಮತೇಜ ಸಮನಿಸಿದ ಬಳಿಕ ಅಶಿವನಿಶೆ ಆವರಿಸದು; ಅಶಿವದ ಗಮನವೂ ಬಾರದು. ಅಶಿವಾಚಾರವಾಗಲಿ, ಅಶಿವ ವಿಚಾರವಾಗಲಿ ಶಿವಯೋಗಿಯ ಸನಿಹಕ್ಕೆ ಸುಳಿಯವು. ಶಿವತನು, ಶಿವಮನ, ಶಿವಪ್ರಾಣ, ಶಿವಭಾವ, ಶಿವಜೀವನಾಗಿ ಜೀವನ್ಮುಕ್ತ ನಾಗಿ ಬಾಳುತ್ತಾನೆ, ಬದುಕುತ್ತಾನೆ. ಶಿವತನುವಿಗೆ ಸಾವಿಲ್ಲ; ಶಿವಮನಕ್ಕೆ ಸಾವಿನ ಸಂಶಯವಿಲ್ಲ, ಭಯವಿಲ್ಲ. ಶಿವಯೋಗಿಯು ಮರಣವನ್ನು ಮರಣವೆಂದು, ಮಹಾ ದುಃಖಕಾರಕವೆಂದು, ಮಹಾನಷ್ಟವೆಂದು ಭಾವಿಸುವುದಿಲ್ಲ. ಪ್ರತಿಯಾಗಿ ಮಹಾ ನವಮಿಯೆಂದು, ಮಹಾಪ್ರಾಪ್ತಿಯೆಂದು ಭಾವಿಸುತ್ತಾನೆ; ಬರಮಾಡಿಕೊಳ್ಳುತ್ತಾನೆ. ಶಿವಮನವು ಸಂಕಲ್ಪ–ವಿಕಲ್ಪಗಳ ಕಲ್ಪ(ಪ್ರಳಯ)ಕ್ಕೆ ಬೀಳುವುದಿಲ್ಲ. ಅದು ಬೇಕೆನ್ನದು' ಬೇಡೆನ್ನದು. ಈ ರಾಗ–ವಿರಾಗಗಳೆರಡೂ ತನಗೆ ಹಾನಿ. ಭವದಲ್ಲಿ ಬೇಕೆಂಬ ರಾಗ ವಿರಬಾರದು. ಶಿವಪ್ರಾಪ್ತಿ(ಯೋಗ)ಯಲ್ಲಿ ಬೇಡೆಂಬ ವಿರಾಗವಿರಬಾರದು. ಇವೆರಡೂ ಅಲ್ಪತನಗಳು. ಇವನ್ನು ಬಿಟ್ಟು ಗಂಭೀರ ಸಹಜದಲ್ಲಿದ್ದು ಘನಮನ ವಾಗುತ್ತದೆ. ಇದೇ ಮನದ ಸದ್ಬಲ, ಶಿವತ್ವ. ಶಿವಪ್ರಾಣವು ಪ್ರಾಕೃತಿಕ ವಾಯು ದೋಷಕ್ಕೆ ಧುಮುಕದು. ಪ್ರಾಕೃತಿಕವಾಗಿ ಜೀವಿಸುವ ಹಂಬಲವನ್ನು ಹರಿದು ಹಾಕಿ ರುತ್ತದೆ. ದಶವಾಯುಗಳ ದಶದೋಷಗಳ ಕಳೆದು ಲಿಂಗಪ್ರಾಣವಾಗಿರುತ್ತದೆ. ಅಪೇಯ ಪಾನಗಳಿಗೆಳಸುವುದೆ ಅಪಾನವಾಯುದೋಷ. ಪ್ರಾಕೃತಿಕವಾಗಿ ಹರಿದು ಪರಮಾರ್ಥವ ಮರೆದಿರುವುದೆ ವ್ಯಾನವಾಯುದೋಷ. ಭವದೊಳಗೆ ಭೋಗದಿಂದ ಭೋಗಕ್ಕೆ ಹಾರುವುದೆ ಉದಾನವಾಯುದೋಷ. ಅನಾಚಾರಗಳನ್ನೆಲ್ಲ ಅಸುವರಿಯದೆ ಸಮವಾಗಿ ಸ್ವೀಕರಿಸುವುದೆ ಸಮಾನವಾಯು ದೋಷ. ಕುಹಕ ಕುಭಾಷೆಗಳ ಕೇಳಲೆಳ ಸುವುದೆ ಮತ್ತು ದ್ವೇಷಿಸುವುದೆ ನಾಗವಾಯುದೋಷ. ಮಂದವಾಗಿ ಸಂಕುಚಿತವಾಗಿ ಇರುವುದೆ ಕೂರ್ಮವಾಯುದೋಷ. ದುರ್ಗುಣಗಳಿಂದ ಕರಗಸದಂತೆ ಕೊರೆವುದೆ ಕ್ರಕರ

ವಾಯುದೋಷ. ದೇವನ ಮರಸಿ, ದಿವ್ಯತನವ ದೂರೀಕರಿಸಿ, ಇಳಿಮೊಗವಾಗಿರಿಸು ವುದೆ ದೇವದತ್ತ ವಾಯುದೋಷ. ಪ್ರಾಣಧನವನ್ನು ಉಳಿಸಲು ಹೆಣಗುವುದೆ ಧನಂಜಯವಾಯುದೋಷ. ಇವೆಲ್ಲ ದೋಷಗಳನ್ನು ಪರಿಹರಿಸಿ ಪ್ರಾಣವು ಲಿಂಗ ಪ್ರಾಣವಾಗಿರುತ್ತದೆ. ಜೀವವು ನಿರುಪಾಧಿಕತ್ವದ ನಿಲವಿಗೆ ನಿಲುಕಿ ಜೀವಭಾವವ ಕಳೆದುಕೊಂಡು ಶಿವಭಾವದಲ್ಲಿ ಸಮರಸವಾಗಿರುತ್ತದೆ. ಕೊನೆಗೆ ಲಿಂಗವ ಪೂಜಿಸಿ ಲಿಂಗವೆ ತಾನಾಗುವ ಪರಾಕಾಷ್ಠ ಸ್ಥಿತಿಯಲ್ಲಿ ಶಿವಯೋಗವು ಸಂಪೂರ್ಣಗೊಳ್ಳುತ್ತದೆ.

"ಲಿಂಗದೊಳಿರ್ದು ಲಿಂಗಮನೆ ತಾಳ್ದು ನಿರಂತರ ಲಿಂಗಪೂಜೆಯಿಂ
ಲಿಂಗಮನೊಲ್ದು ವಿಸ್ತರಿಸಿ ಲಿಂಗಕೆ ಲಿಂಗಮನರ್ಪಿಸುತ್ತಮಾ–
ಲಿಂಗಪದಾರ್ಥಮಂ ಸವಿದು ಲಿಂಗಸುಖಾಸ್ಪದನಾಗಿ ರಾಜಿಪಂ
ಲಿಂಗನಿಜೈಕ್ಯನಯ್ಯ ಪರಮ ಪ್ರಭುವೇ ಮಹದೈಪುರೀಶ್ವರ"

ಇದು ಶಿವಯೋಗವನ್ನು ಪಡೆದ ಶಿವಯೋಗಿಯ ಸತ್ಯಸ್ವರೂಪು. ಶಿವಯೋಗ ಇರುವವನಿಗೆ ಶಿವೈಕ್ಯಸುಖ ಸಂಪ್ರಾಪ್ತವಾಗಿ ಬೇರಾವ ಸಾಂಸಾರಿಕ ದುಃಖಗಳು ಸಂಭವಿ ಸವು. ಸಂಭವಿಸಿದರೂ ದುಃಖವುಂಟಾಗುವುದಿಲ್ಲ; ಚಿಂತೆಯುಂಟಾಗುವುದಿಲ್ಲ. ಶಿವ ಯೋಗ ಸಂಪನ್ನನದು ನಿರ್ಭೀತತೆ; ಮತ್ತು ನಿರತಿಶಯ ಶಾಂತಿ, ವಿಶ್ರಾಂತಿ.

"ಅಯ್ಯಾ, ಸ್ಥೂಲ ಸೂಕ್ಷ್ಮ ಕಾರಣತನುಗಳಲ್ಲಿ ಇಷ್ಟ ಪ್ರಾಣಭಾವಂಗಳ
ಉಚಿತವನರಿದು ಮಾಡುವುದೇ ಶಿವಯೋಗ.
ಆ ಯೋಗವ ಪ್ರಯೋಗಿಸಿ ನಿಂದಲ್ಲಿ
ಕಾಲಾಂತಕ ಭೀಮೇಶ್ವರ ಲಿಂಗದಲ್ಲಿ ಉಭಯವನಳಿದ ಭಾವವು"

ಶಿವಯೋಗ ಸಂಪನ್ನನಿಗೆ ಭಿನ್ನಭಾವವಿಲ್ಲ; ಭಯಭಾವವಿಲ್ಲ. ಬೇರೆ ಇನ್ನಾವ ಯೋಗೇಚ್ಛೆಯಿರುವುದಿಲ್ಲ. ಎಲ್ಲವೂ ಈ ಶಿವಯೋಗದಲ್ಲಿಯೆ ಸಂಪ್ರಾಪ್ತವಾಗುತ್ತದೆ. ಶಿವಯೋಗಕ್ಕೆ ಹೊರತಾದುದು ಏನೂ ಇಲ್ಲ. ಇಹದ ಈ ಜೀವನದಲ್ಲಿಯೆ ಭೋಗ ಮೋಕ್ಷಗಳನ್ನು ಒದಗಿಸುವ ಸದುಪಾಯ ಶಿವಯೋಗ.

"ಶಿವಯೋಗೀ ಶಿವಜ್ಞಾನೀ ಶಿವಜಾಪೀ ತಪೋಧಿಕಃ ।
ಕ್ರಮಶಃ ಕರ್ಮಯೋಗಿ ಚ ಪಂಚೈತೇ ಮುಕ್ತಿಭಾಜನಾಃ ॥"

—ಶಿವೋಪನಿಷತ್

ಶಿವಯೋಗ ಸಂಪನ್ನನು ಈ ಐದು ಆಗಿರುತ್ತಾನೆ; ಆಗಿ ಒಂದೇ ಜನ್ಮದಲ್ಲಿ ಮುಕ್ತಿಯನ್ನು ಪಡೆವ ಪರಮ ವೀರಶೈವನಾಗಿರುತ್ತಾನೆ. ಯೋಗಿಗಳಲ್ಲಿ ಶಿವಯೋಗಿ,

ಜ್ಞಾನಿಗಳಲ್ಲಿ ಶಿವಜ್ಞಾನಿ, ಜಾಪಿಗಳಲ್ಲಿ ಶಿವಜಾಪಿ, ತಪಸ್ವಿಗಳಲ್ಲಿ ಶಿವತಪಸ್ವಿ, ಕ್ರಿಯಾವಂತರಲ್ಲಿ ಕರ್ಮಯೋಗಿ ಜೀವನದಲ್ಲಿ ಸ್ವತಂತ್ರಭಾಜನರು; ಭವದ ಎಲ್ಲ ಬಂಧಗಳಿಂದ ರಹಿತರು, ಸತ್ಯವಂತರು. ಅದರಿಂದ ವೀರಶೈವಮತದಲ್ಲಿ ಪ್ರತಿಯೊಬ್ಬರು ಶಿವಯೋಗಿಯಾಗಿ ಶಿವಜ್ಞಾನಿಯಾಗಿ ಶಿವಜಾಪಿಯಾಗಿ ಶಿವೋನುಷ್ಠಾನಿಯಾಗಿ, ಶಿವಕ್ರಿಯಾನಿರತನಾಗಿ ಇರುತ್ತಾನೆ. ಶಿವಲಿಂಗಯೋಗವುಳ್ಳವನು ಶಿವಯೋಗಿ. "ಪರತರ ಶಿವಲಿಂಗ ವೆಳಸಿ ನಿನಗಾಗಿ, ಕರಕಂಜದೊಳು ಕಾಣಿಸಿತು ಯೋಗಿ ಯಜಿಸೋ" ಎಂದು ನಿಜವರಿತ ನಿಜಗುಣರು ನಿರೂಪಿಸಿದ್ದಾರೆ. ಇಲ್ಲಿ ಉಪಯೋಗಿಸಿದ 'ಯೋಗಿ' ಪದ ಗಮನಾರ್ಹ ಪದ; ಅನ್ವರ್ಥಕ ಪದ. ಶಿವ ಯಾವುದೆಂಬುದನ್ನು ಅರಿತವನೆ ಅರಿತು ಅಶಿವವನ್ನು ಅಲ್ಲಗಳೆದವನೆ ಶಿವಜ್ಞಾನಿ. ಸದಾ ವಾಣಿಯಲ್ಲಿ ಶಿವಶಬ್ದವನ್ನೆ ಶಿವಮಂತ್ರವನ್ನೆ ಜಪಿಸುವಾತನು ಶಿವಜಾಪಿ. ಸದಾ ಶಿವಾರ್ಚನ ಶಿವಾರ್ಪಣ ಶಿವಾನುಭವಗಳಲ್ಲಿ ನಿರತನಾದವನೆ ಶಿವತಪಸ್ವಿ, ಶಿವಾನುಷ್ಠಾನಿ. ಸದಾ ಸತ್ಯ ಶುದ್ಧ ಕಾಯಕದಲ್ಲಿ ನಿರತನಾದವನೆ ವೀರಶೈವ ಕರ್ಮಯೋಗಿ. ಇವಿಯ್ದು ವೀರಶೈವ ಮತದ ವಿಶಿಷ್ಟವಾದ ಆಚಾರಗಳು; ಲಕ್ಷಣಗಳು. ಅಂಗ ಲಿಂಗ ಯೋಗವನ್ನು ಸರಸವಾಗಿ ಸಂಗಡಿಸುವಂತಹವು.

ಶಿವಾದ್ವೈತ ಸ್ತಂಭಕ್ಕೆ ಶಿವಯೋಗವೆ ಕಟ್ಟಿದ ನಿಜದ ಉಯ್ಯಾಲೆ. ಅದರಲ್ಲಿ ನಿಜ ವೀರಶೈವನು ಲಿಂಗಾಂಗರೊಂದಾಗಿ ಲೀಲೆಯಲ್ಲಿ ಶಾಂತ್ಯತೀತೋತ್ತರ ಕಲೆಯಲ್ಲಿ ಆ ಮಹಂತಕಳೆಯಲ್ಲಿ ತೂಗುತ್ತಾನೆ; ತೊನೆದಾಡುತ್ತಾನೆ.

ತೂಗುತಿದೆ ನಿಜದುಯ್ಯಾಲೆ,
ಲಿಂಗಾಂಗಯೋಗ ಸಂಭ್ರಮದ ನೆಲೆಗೆ;
ನಿರವಯಲ ಕಂಬ ಮಾಡಿ
ಪರತತ್ತ್ವವೆಂಬ ಸರಪಳಿಯ ಹೂಡಿ
ಸುರುಚಿರದ ಮಣಿಯ ಮೇಲೆ
ಪರಬ್ರಹ್ಮ ಇರದೆ ಆಡಿದನುಯ್ಯಾಲೆ !
ತನುರಹಿತ ಘನರೂಪನ
ವನಿತೆಯರು ವಿನಯದಿಂದಲಿ ಪಾಡುತಂ
ಅನುನಯದಿ ಜ್ಞಾನ ತುಂಬಿ
ಚಿನುಮಯನು ಕೊನೆಯೊಳಾಡಿದನುಯ್ಯಾಲೆ ! !
ಅಷ್ಟದಳ ಕಮಲದೊಳಗೆ ಈರೇಳು
ಸೃಷ್ಟಿಯಡಗಿದ ತೆರದೊಳು
ಮುಟ್ಟಿ ಮುಟ್ಟದ ಬಯಲು
ಗುಹೇಶ್ವರ ಲಿಂಗ
ಮೆಟ್ಟಿ ಆಡಿದನುಯ್ಯಾಲೆ !!!

ಓ ಓದುಗರೆ, ಆಡಿದಿರಾ ಶಿವಯೋಗವೆಂಬ ನಿಜದುಯ್ಯಾಲೆಯ ! ಕಂಡುಂಡಿರಾ ಶಿವಯೋಗಾನಂದದ ಆ ನೆಲೆಯ ! ಕೂಡಿಕೊಂಡಿರಾ ಆ ಪರಬ್ರಹ್ಮರೂಪ ಪರಂಜ್ಯೋತಿ ಕಳೆಯ ! ಹಾಗಾದರೆ ಬಾಗೋಣ ಬನ್ನಿ ಅವನ್ನು ಆಡಿಸಿದ ಅಲ್ಲಮಾಪ್ರಭುವಿನಡಿಗೆ ! ಗುಹೇಶ್ವರನೊಡಗೂಡಿ ನಿಜದುಯ್ಯಾಲೆಯಾಡಿ ಶಿವಯೋಗಾನಂದದ ನೆಲೆಯ ಕಂಡ ಜಾಣರ ಜಾಣ ಪ್ರಭುದೇವ. ಪಲ್ಲವಿಯಲ್ಲಿ ಉಯ್ಯಾಲೆ, ಸಂಭ್ರಮದ ನೆಲೆ ಯಾವುವು ಎಂಬುದನ್ನು, ಮೊದಲ್ನುಡಿಯಲ್ಲಿ ಆ ಉಯ್ಯಾಲೆಯ ಕಟ್ಟಿದ ಕಂಬ, ಸರಪಳಿ, ಮಣೆ ಯಾವು ಎಂಬುದನ್ನು, ಮುಂದಿನ ಎರಡು–ಮೂರನೆಯ ನುಡಿಗಳಲ್ಲಿ ಯಾರ ಹಾಡಿ ನೊಡನೆ ಎಂತಹ ಅರಿವು ತುಂಬಿ ಎಲ್ಲಿ ಎಂತು ಆಡಿದನೆಂಬುದನ್ನು ಸ್ವಾನುಭವದಿಂದ ಹೃದಯಂಗಮವಾಗಿ ಹಾಡಿದಾನೆ, ಆಡಿದಾನೆ; ಶಿವಾದ್ವೈತ ಸ್ವರೂಪವ ಮುಟ್ಟಿ ಮುಟ್ಟದ ಬಯಲ ನೋಟಕೂಟಗಳ ಪಡೆದಿದಾನೆ. ಅಂತಾಗುವುದೆ ವೀರಶೈವದರ್ಶನ ನಿರೂಪಣ.

ಇಲ್ಲಿ ಹೇಳಿರುವ ಅಷ್ಟದಳ ಕಮಲ ಹೃದಯದೊಳಗಿರುವುದಲ್ಲ; ಬ್ರಹ್ಮರಂಧ್ರ ದಲ್ಲಿರುವುದು. ಅಲ್ಲಿ ಆ ಸಹಸ್ರಾರದಲ್ಲಿ ನೂರುದಳದ ತಾವರೆ. ಅದರಲ್ಲಿ ಮತ್ತೊಂದು ಆಯ್ದು ದಳ ಮತ್ತು ಮೂರು ದಳವುಳ್ಳ ತಾವರೆ. ಆ ತ್ರಿದಳಗಳಲ್ಲಿ ಅ–ಉ–ಮಕಾರ ಪ್ರಣವಗಳಿವೆ. ಅವೇ ಪೀಠ. ಅದರಲ್ಲಿ ಚಿಚ್ಛಕ್ತಿಯ ತೇಜವಿದೆ. ಆ ತೇಜೋ ಮಂಡಲದಲ್ಲಿ ಸೂಕ್ಷ್ಮರಂಧ್ರವಿದೆ. ಅದರಲ್ಲಿ ಸಚ್ಚಿದಾನಂದರೂಪ ಅಮೃತ ಬಿಂದುವಿದೆ. ಅದುವೆ ಪರಮಸ್ವರೂಪ ಪ್ರಸಾದ. ಅಲ್ಲಿ ಶಿವಯೋಗ ಬಲ್ಲಿದ ಶಿವಯೋಗಿ ಉನ್ಮನಿ ಯಿಂದೇರಿ ಚಿದಂಗನಾಗಿ ಚಿದ್ಘನವೆ ಲಿಂಗವಾಗಿ ಅಂಗರೂಪ ಪಿಂಡಾಂಡ–ಲಿಂಗರೂಪ ಬ್ರಹ್ಮಾಂಡಗಳೊಡಗೂಡಿ ಒಡಗೂಡಿದಂತಿದ್ದು ಕ್ರಿಯಾ ಜ್ಞಾನಾದಿ ಶಕ್ತಿಗಳ ಉಲಿ ಗಳೊಡನೆ ಅವಿರಳ ಶಿವಯೋಗದುಯ್ಯಾಲೆ ಆಡುವನು. ಸತ್ಯ ಸಂಭ್ರಮದ ನೆಲೆ ಗೂಡುವನು. ಆ ಸಾವಿರದ ನೂರೆಂಟು ದಳದ ಲಿಂಗಾಂಗಯೋಗಾನುಭವವುಳ್ಳವನೆ ೧೧೦೮ ಜಗದ್ಗುರು. ಅಂತಹ ಆ ಜಗದ್ಗುರುವನ್ನು ಶಿವಯೋಗಿ ಶಿವಾಚಾರ್ಯನು ಈ ಪದ್ಯದಲ್ಲಿ ಪೊಡಮಟ್ಟು ತನ್ನ ಸಿದ್ಧಾಂತ ಶಿಖಾಮಣಿ ಗ್ರಂಥವನ್ನು ಗ್ರಥಿಸಲು ಆರಂಭಿಸಿ ದ್ದಾನೆ :

"ಶ್ರೀನಾಥಸ್ತೋಮ ಮೂರ್ತಿರ್ಜಯಂತಿ ಪರಶಿವಸ್ತ್ರ್ಯಂಬಕಸ್ತಾರ ರೂಪಃ ।
ಸ್ವಚ್ಛಶ್ರೀ ಬ್ರಹ್ಮರಂಧ್ರಸ್ಥಿತಸಿತಜಲ ಪ್ರೋದ್ಯದಬ್ಜ ತ್ರಿಕೋಣೇ ॥
ಇಚ್ಛಾಜ್ಞಾನಕ್ರಿಯಾಖ್ಯೇ ತ್ರಿವಿಧಲಿಪಿಮಯೇ ಹಕ್ಷಳಾರ್ಣಾಗ್ರಪಾರ್ಶ್ವೇ ।
ಕೃತ್ಸ್ನಾರ್ಣಾನ್ಮುಖ್ಯ ಬಿಂದೌ ಚಿದಚಿದುದಯಕೃತ್ ದೃಕ್ಕ್ರಿಯಾಂಘ್ರಿ
ದ್ವಯಾಢ್ಯಃ ॥"

ಶಿವಯೋಗದ ಸಾರಸರ್ವಸ್ವವೆ ಶ್ಲೋಕವಾಗಿದೆ. ಇಲ್ಲಿ ಬರುವ ಶ್ರೀನಾಥ ಪದಕ್ಕೆ ಶ್ರೀನಾಥಕವಿಯೆಂದು ಕೆಲವರು ಅಪಾರ್ಥ ಮಾಡುತ್ತಾರೆ. ಅವರು ಮುಂದೆ ಬರುವ

ವಿಶೇಷ್ಯನಾದ ಸೋಮಮೂರ್ತಿ(ಶಕ್ತಿ ವಿಶಿಷ್ಟಶಿವ)ಯ ಅರಿವನ್ನು ತಂದುಕೊಳ್ಳಲು ಆತನೆ ಪರಶಿವ, ಪ್ರಣವಸ್ವರೂಪ. ಇದರಿಂದಾಗಿ ಶ್ರೀನಾಥನೆಂಬುದು ವಿಶೇಷಣ. ಮೋಕ್ಷಲಕ್ಷ್ಮಿಯ ಒಡೆಯ–ಪರಶಿವನೆಂದರ್ಥ. ಇದರಿಂದಾಗಿ ಈ ಕೃತಿ (ಸಿ. ಶಿಖಾಮಣಿ) ಈಚಿನದೆಂದು ಹೇಳಲು ಸುತರಾಂ ಸಾಧ್ಯವಿಲ್ಲ. ಈ ಗ್ರಂಥಕ್ಕೆ ಆಕರ ವೀರಶಿವಾಗಮಗಳು. ಅಲ್ಲಿ ನಿರೂಪಿತವಾಗಿದೆ ವೀರಶೈವ ತತ್ತ್ವ; ವೀರಶೈವ ಸಿದ್ಧಾಂತ.

ಪರಿಭಾವ ಪ್ರಧಾನ ವೀರಶೈವ :

ವೀರಶೈವಮತದಲ್ಲಿ ಪರಿಭಾವಕ್ಕೆ ಪ್ರಾಧಾನ್ಯತೆಯಿದೆ. ಪರಿಭಾವವೆಂದರೆ ಗಂಭೀರವಾದ ಆಳವಾದ ಭಾವ; ದೃಕ್ಕ್ರಿಯಾನ್ವಿತ ಅನುಭಾವ. ಪ್ರಚೋದಿತ ಭಾವ. ತನ್ನ ವಿಶಾಲ ಪರಿಸರದ–ಪರಿಜನದ ಅನುವರಿತು, ತನ್ನತನವನ್ನು ದುರ್ಲಕ್ಷಿಸದೆ ಶ್ರದ್ಧೆ ನಿಷ್ಠೆಗಳಿಂದ ಅವಧಾನ ಅನುಭವಗಳಿಂದ ಕೂಡಿಕೊಂಡು ಭಾವಜೀವಿಯಾಗಿ ಬಾಳಬೇಕೆಂಬುದೆ ವೀರಶೈವಮತಧ್ಯೇಯ. ಪರಿಯೆಂದರೆ ರೀತಿ, ಬಗೆ, ಸ್ಥಿತಿ, ಗತಿ, ಪದ್ಧತಿ, ತ್ಯಾಗ, ನೀತಿ ಮೊದಲಾದ ಅರ್ಥಗಳಿವೆ. ಇವುಗಳಿಂದ ಕೂಡಿದ ಭಾವ. ಪರಿಭಾವವುಳ್ಳಾತ ಪರಿಭಾವಿ. ಪರಿಭಾವಿಯಲ್ಲಿ ಭಾವನಾಪರವಶತೆಯಿರುತ್ತದೆ. ಭಕ್ತಿರಸ ಪರಿಪೋಷಕ ಶಕ್ತಿಯಿರುತ್ತದೆ; ಪರಿಶುದ್ಧ ರಸಾವಿರ್ಭಾವವುಂಟಾಗುತ್ತದೆ. ಪರಿಭಾವನೆಯಲ್ಲಿ ಚಿತ್ತವೃತ್ತಿ ಪರಿಪಾಕಗೊಂಡಿರುತ್ತದೆ. ಭಾವವನ್ನು ಚನ್ನಾಗಿ ಚಲುವಾಗಿ ಇರಿಸಿಕೊಳ್ಳುವ ವಿಶಿಷ್ಟಶಕ್ತಿ; ಇರಿಸಿಕೊಂಡು ಹೊರಗೆ ಅಭಿವ್ಯಕ್ತಿ ಮಾಡುವ ಅಗ್ಗಳಿಕೆಯಿರುತ್ತದೆ.

ವೀರಶೈವಮತ ಗುರು–ಲಿಂಗ–ಜಂಗಮ ಪರಿಭಾವಕ್ಕೆ ಹೆಚ್ಚಿನ ಮಹತ್ವವನ್ನಿತ್ತಿದೆ. ಅಂತೆಯೆ ಪರಿಭಾವನೆಗೆ ತಕ್ಕ ಪರಿಜ್ಞಾನವನ್ನೂ ಪ್ರಕ್ರಿಯೆಯನ್ನೂ ಪ್ರಧಾನವಾಗಿ ಪರಿಗ್ರಹಿಸಿದೆ. ಪರಮಚೇತನ ಸನ್ನಿಹಿತತ್ವಕ್ಕೆ ಪರಿಜ್ಞಾನ ಪ್ರಕ್ರಿಯಾ ಸಮನ್ವಿತ ಪರಿಭಾವವೆ ಹೆಚ್ಚು ಹತ್ತಿರದ್ದು; ಹೆಚ್ಚು ಸಮರ್ಥವಾದದ್ದು. ಪರತತ್ತ್ವ ಭಾವವೆ ಪರಿಭಾವ. ಅದು ಸರ್ವಗಾಮಿ, ಸಮರಸಗಾಮಿ.

> "ದೇಹಿನೋಽಪಿ ಪರಾತ್ಮತ್ವಭಾವಿನೋ ನಿರಹಂಕೃತೇಃ
> ನಿರಸ್ತದೇಹ ಧರ್ಮಸ್ಯ ನಿರ್ದೇಹಾಗಮ ಉಚ್ಯತೇ ।
> ಶಿವೋಽಹಮಿತಿ ಯಸ್ಯಾಸ್ತಿ ಭಾವನಾ ಸರ್ವಗಾಮಿನೀ
> ತಸ್ಯ ದೇಹೇನ ಸಂಬಂಧಃ ಕಥಂ ಸ್ಯಾದಮಿತಾತ್ಮನಃ ।
> ನಿಷ್ಕಲೇ ನಿಷ್ಪ್ರಪಂಚೌಘೇ ಗಭೀರೇ ಚಿನ್ಮಹೋದಧೌ
> ನಿಮಗ್ನಮಾನಸೋ ಯೋಗೀ ಕಥಂ ದೇಹಂ ವಿಚಿಂತಯೇತ್ ।
> ಅಪರಿಚ್ಛೇದ್ಯಮಾತ್ಮಾನಂ ಚಿದಂಬರಮಿತಿ ಸ್ಮರನ್
> ದೇಹಯೋಗೇಽಪಿ ದೇಹಸ್ಥೈರ್ವಿಕಾರೈರ್ನ ವಿಲಿಪ್ಯತೇ ।"

–ಸಿದ್ಧಾಂತ ಶಿಖಾಮಣಿ.

ವೀರಶೈವ ಪರಿಭಾವಿಯ ವಿಶಿಷ್ಟ ಲಕ್ಷಣವು ಇಲ್ಲಿ ನಿರೂಪಿತವಾಗಿದೆ. ಪರತತ್ತ್ವ ಪರಿಭಾವಿಗೆ ದೇಹಾಭಿಮಾನ ಅಹಂಕಾರಗಳಿರುವುದಿಲ್ಲ. ತಾನು ಶಿವ ಸ್ವರೂಪವೆಂದು ಭಾವಿಸಿದ ಭಾವನೆ ಸೀಮಾತೀತ. ಅದಕ್ಕೆ ಮಿತತ್ವವಿರದು. ಅದು ಎಲ್ಲೆಲ್ಲಿಯೂ ಗಮಿಸಬಲ್ಲುದು. ನಿಷ್ಕಲವೂ ನಿಷ್ಪ್ರಪಂಚವೂ ಗಂಭೀರವೂ ಆದ ಚಿತ್‌ಸಾಗರದಲ್ಲಿ ಪರಿಭಾವಿಯ ಮನಸ್ಸು ಮುಳುಗಿರುತ್ತದೆ. ಆತ್ಮ ಅಪರಿಚ್ಛಿನ್ನ, ಚಿದಂಬರ; ಅದನ್ನು ಗಾಢವಾಗಿ ಸ್ಮರಿಸುವ ಭಾವವು ಅದರಂತೆ ಅಪರಿಚ್ಛಿನ್ನವಾಗಿ ಚಿದಂಬರಸ್ವರೂಪವಾಗಿ ಇರುತ್ತದೆ. ದೇಹಯೋಗವಿದ್ದರೂ ದೇಹವಿಕಾರಗಳಿರವು. ಆತನಿಗಿರುವ ದೇಹ ಅದೊಂದು ಯೋಗ. ಅದು ಈ ಭವರೋಗಕ್ಕೆ ಕಾರಣವಾಗದು. ಆತನ ಭಾವ ಭ್ರಾಂತಿಗೀಡಾಗದು; ಭಾವಾಂತರಕ್ಕೆ ಒಳಗಾಗದು. ಅಲ್ಲಿಯೆ ಆಳವಾಗಿ ಗಂಭೀರವಾಗಿ ಭಾವನಾಮಯವಾಗಿರುತ್ತದೆ. ವಿಶಿಷ್ಟ ವಿಚಾರಧಾರೆಯಿಂದ ಕೂಡಿರುತ್ತದೆ. ಪರಮ ಪರಿಭಾವನೆಯೇ ಪರಿಪೂರ್ಣ; ಅಖಂಡ. ಅದರಲ್ಲಿ ಅದಾವ ಕೊರತೆಯಿರದು. ಅಲ್ಲಿ ಭಾವೈಕ್ಯತೆ ಆಳವಟ್ಟು ನಿರ್ಭಾವದ ನಿಲುವಿಗೆ ಏರಿರುತ್ತದೆ. ಅಪ್ರಮಾಣ ಲಕ್ಷಣವನ್ನು ತಳೆದಿರುತ್ತದೆ.

"ಧ್ಯಾನ ಅಧ್ಯಾತ್ಮದಲ್ಲಿ ಕಂಡೆನೆಂಬುದು ಜೀವನಲ್ಲದೆ ಪರಮನಲ್ಲ;
ಜಪ ತಪ ನೇಮ ನಿತ್ಯಂಗಳಿಂದ ಕಂಡೆನೆಂಬುದು
ಪ್ರಕೃತಿಯಲ್ಲದೆ ಚಿತ್ತವಲ್ಲ;
ಭಾವದಿಂದ ಪ್ರಮಾಣಿಸುವುದೆ (ಪರಿಭಾವಿಸುವುದೆ)
ಏಕರೂಪ ಗುಹೇಶ್ವರಲಿಂಗವು ತಾನೆ !"

ಪರಿಭಾವನೆಗೆ ಬಾರದೆ ಪರಶಿವಲಿಂಗಾನುಭವವುಂಟಾಗದು, ಪರಮಾನಂದವುಂಟಾಗದು; ಲಿಂಗಸಂಗಸಮರಸವುಂಟಾಗದು. ಭಾವದ ಪ್ರಾಮಾಣಿಕತೆಯಿಲ್ಲದೆ ಅಂದರೆ ಪರಿಭಾವನೆಯಿಲ್ಲದೆ ಅದು ಇದು ಎಂದು, ಅಲ್ಲಿ ಇಲ್ಲಿ ಎಂದು ಭ್ರಮಿಸಿ ಹರಿದಾಡಿದರೆ ಅದು ಕರಿಗೊಳ್ಳುವುದಿಲ್ಲ; ಕೇವಲತೆ ಕೈಗೂಡುವುದಿಲ್ಲ. ಜೀವ ಪ್ರಕೃತಿಗಳನ್ನು ಚೇತನಗೊಳಿಸಲು ಧ್ಯಾನ ಜಪತಪಗಳು ಸಮರ್ಥವಾಗುವವಲ್ಲದೆ ಲಿಂಗವು ತಾನೆ ಆಗಲು ಇವು ನೆರವಾಗವು; ಪರಿಭಾವವೇ ಕಾರಣ. ಧ್ಯಾನದಲ್ಲಿ ಧ್ಯೇಯವಸ್ತು ತಾನಾಗಿರನೆಂಬುದು ದಿಟಕ್ಕೆ ದಿಟ. ಅದರಲ್ಲಿ ತ್ರಿಪುಟಿಭಾವವಿರುತ್ತದೆ. ಅಲ್ಲಿ ಭಾವ ಪ್ರಮಾಣವುಂಟಾಗಿರದು. ಅಂತೆಯೆ ಜಪ ತಪ ನೇಮ ನಿತ್ಯಗಳ ಮಾತು ಅಷ್ಟೇ! ಇವು ಇನ್ನೂ ದೂರ. ದೇಶಕಾಲಗಳ ವಶರಾಗಿರುತ್ತಾರೆ ಇವರು.

"ಸುತ್ತಿ ಸುತ್ತಿ ಬಂದಡಿಲ್ಲ, ಲಕ್ಷಗಂಗೆಯ ಮಿಂದಡಿಲ್ಲ;
ತುಟ್ಟ ತುದಿಯ ಮೇರುಗಿರಿಯ ಮುಟ್ಟಿ ಕೂಡಿದರಿಲ್ಲ.
ನಿತ್ಯ ನೇಮದಿಂದ ತನು ಮುಚ್ಚಿಕೊಂಡರಿಲ್ಲ

ನಿಚ್ಚಕ್ಕೆ ಮನವನಂದಂದಿಗೆ ಅತ್ತಿತ್ತ ಹರಿಯಲೀಯದೆ
ನಿಚ್ಚಯ ಚಿತ್ತದಲ್ಲಿ ಧರಿಸಬಲ್ಲಡೆ
ಬಚ್ಚಬರಿಯ ಬೆಳಗು ಗುಹೇಶ್ವರಲಿಂಗವು."

ವೀರಶೈವಮತದಲ್ಲಿ ಭಾವ ಪ್ರಮಾಣವೇ ಪ್ರಮಾಣ; ಅನುಭವಪ್ರಮಾಣವೇ ಪ್ರಮಾಣ. ಭಾವವು ವಿಭಾವವಾಗಿ ಅನುಭಾವವಾದಾಗ ಪರಿಭಾವವುಂಟಾಗುತ್ತದೆ. ಆಗ ಹೊರಗಿನ ಹರಿದಾಟವಿರದು. ಆತನು ಈ ನಿಶ್ಚಿತಕ್ಕೆ ಬಂದಿರುತ್ತಾನೆ :

"ದೇಹವೆ ದೇಗುಲವಾಗಿರಲು ಬೇರೆ ಮತ್ತೆ ದೇಗುಲವೇಕಯ್ಯ ?
ಪ್ರಾಣವೇ ಲಿಂಗವಾಗಿರಲು ಬೇರೆ ಮತ್ತೆ ಲಿಂಗವೇಕಯ್ಯಾ ?
ಹೇಳಲಿಲ್ಲ, ಕೇಳಲಿಲ್ಲ, ಗುಹೇಶ್ವರಾ.........."

ಅದು ಬೇರೆ ದೇಗುಲಗಳಲ್ಲಿ, ದೇಗುಲ ಸ್ಥಾವರ ಲಿಂಗಗಳಲ್ಲಿ ಸಿಕ್ಕುವುದಿಲ್ಲ. ಅವು ಸ್ವಯಕ್ಕೆ ದೂರ. ಅದು ಹೇಳಿ ಕೇಳಿ ಪಡೆವುದಲ್ಲ. ತನ್ನ ಅರಿವು ಆಚಾರ ಅನುಭವ ಪರಿಭಾವಗಳಿಂದ ತನ್ನಲ್ಲಿಯೇ ಅಳವಡುವ ಸಿದ್ಧವಸ್ತು; ಸ್ವಯವಸ್ತು.

"ಅಂಗದ ಮೇಲಣ ಲಿಂಗವ ಹಿಂಗಿ,
ಸ್ಥಾವರ ಲಿಂಗಕ್ಕೆರಗುವ ಭಂಗಿತರ (ಅನಿಶ್ಚಿತರ)
ಮುಖವ ನೋಡಲಾಗದು.........."

"ಹುಸಿಯನೆ ಪೂಜಿಸಿ ಗಸಣಿಗೊಳಗಾದರು ಗುಹೇಶ್ವರಾ !"

"ಹಿಂದಣ ಮುಂದಣ ಸಂದಳಿದು ಗುಹೇಶ್ವರ ಲಿಂಗದಲ್ಲಿ ಸಂದಿರಬೇಕು"

"ಆನೆಯು ಜರಿದು ಕೋಣವನೇರಿದರೆ, ಆರೇನು ಮಾಡುವರು ?
ಕಸ್ತುರಿಯ ಬಿಟ್ಟು, ಕೆಸರು ಪೂಸಿಕೊಂಡರೆ, ಆರೇನು ಮಾಡುವರು ?
ಪಾಯಸ ಜರಿದು ಮಧ್ಯವ ಕುಡಿದರೆ, ಆರೇನು ಮಾಡುವರು ?
ಅರಿದಂದು ಗುಹೇಶ್ವರನ ಶರಣರಲ್ಲಿ ವಾದಿಸಿದರೆ
ಆರೇನು ಮಾಡುವರು ಹೇಳಾ ?"

ಪರಿಭಾವವಿಲ್ಲದವರ ಪರಿಯಿದು. ಮೊದಲಿನ ಮಾತು ಅರಿವಿಲ್ಲದ ಭಾವಿಕರ ಮಾತು. ಇಲ್ಲವಾದರೆ ಅಂದರೆ ಭಾವದ ಅರಿವಿದ್ದಿದ್ದರೆ, ಆತ್ಮಲಿಂಗದ ಆಳವಾದ ವಿಚಾರಸಹಿತ ಭಾವವಿದ್ದಿದ್ದರೆ ಇಷ್ಟಲಿಂಗವಿದ್ದಂತೆ ಸ್ಥಾವರಲಿಂಗಕ್ಕೆ ಎರಗುತ್ತಿರಲಿಲ್ಲ. ಹುಸಿಯನು ಪೂಜಿಸಿ ಗಸಣಿಗೊಳಗಾಗುತ್ತಿರಲಿಲ್ಲ. ಅರಿವಿಲ್ಲದ ಭಾವ ಅಲ್ಲದುದನ್ನು ಸಲ್ಲದುದನ್ನು ಮಾಡಿಸಬಲ್ಲುದು; ಮಾಡಿಸುತ್ತಿದೆ. ಅಂತೆಯೇ ಭಾವವಿಲ್ಲದ ಅರಿವು ಅದೊಂದು ಹುಸಿ ಪೂಜೆ. ಬರೀ ಅರಿವಿನ ಆರಾಧನ, ಅದೊಂದು ಮಿಥ್ಯಾರಾಧನ.

ಕಾಣುವುದೆಲ್ಲ ಹುಸಿ ಎಂದು ಹೇಳಿಕೆ; ಆದರೆ ಇದೇ ಹುಸಿಯನ್ನು ಉಳಿದು ಅರೆನಿಮಿಷವೂ ಬಾಳುವುದಿಲ್ಲ. ಮಿಥ್ಯ ಎಂದು ಜರಿವುದನ್ನೆ ನಿತ್ಯ ಆರಾಧಿಸುತ್ತಿರುತ್ತಾನೆ ಮಿಥ್ಯಾವಾದಿ. ಎಲ್ಲವನ್ನೂ ಅರಿದಿರುವೆನೆಂಬ ಹುಸಿ ಹೆಮ್ಮೆಯಿಂದ ಸತ್ಯಶರಣರಲ್ಲಿ ಪರಿಭಾವ ವಿಲ್ಲದೆ ಅವರೊಡನೆ ಅಲ್ಲಸಲ್ಲದ ವಾದವ ಮಾಡಿದರೆ ಆನೆಯನ್ನು ಕಸ್ತೂರಿಯನ್ನು ಪಾಯಸವನ್ನು ಜರಿದಂತಾಗುತ್ತದೆ. ಮತ್ತು ಕೋಣವನೇರಿದಂತೆ, ಕೆಸರು ಪೂಸಿದಂತೆ, ಸುರೆಯ ಕುಡಿದಂತೆ ಆಗುತ್ತದೆ. ಈ ವಿಪರೀತ ವರ್ತನೆ ತೊಲಗಬೇಕಾದರೆ ಜ್ಞಾನ ಯುಕ್ತ ಭಾವ ಬೇಕೇ ಬೇಕು. ಜ್ಞಾನಯುಕ್ತ ಭಾವವೇ ಪರಿಭಾವ.

"ನ ಭಾವೇನ ವಿನಾ ಜ್ಞಾನಂ. ನ ಭಾವೋ ಜ್ಞಾನಮಂತರಾ ।
ಮೋಕ್ಷಾಯ ಕಾರಣಂ ಪ್ರೋಕ್ತಂ ತಸ್ಮಾದುಭಯಮಾಶ್ರಯೇತ್ ॥
ಏಕೀಕೃತೇ ಶಿವೇ ಭಾವೇ ಜ್ಞಾನೇನ ಸಹ ಸಂಯಮೀ ।
ವಿಸ್ಮೃತಾತ್ಮಸಮಾವೇಶಃ ಶಿವಭಾವೇ ವಿಭಾಸತೇ ॥

ಭಾವೇನ ನಾಸ್ತಿ ಸಂಬಂಧಃ ಕೇವಲ ಜ್ಞಾನಯೋಗಿನಃ ।
ತಥಾಪಿ ಭಾವಂ ಕುರ್ವೀತ ಶಿವೇ ಸಂಸಾರಮೋಚಕೇ ॥
ಪರಿಪೂರ್ಣ ಪ್ರಬೋಧೋಽಪಿ ಭಾವಂ ಶಂಭೌ ನ ವರ್ಜಯೇತ್ ।"
—ಸಿದ್ಧಾಂತ ಶಿಖಾಮಣಿ.

ಜ್ಞಾನವಿಶಿಷ್ಟ ಭಾವವನ್ನೊ ಅಥವಾ ಭಾವವಿಶಿಷ್ಟ ಜ್ಞಾನವನ್ನೊ (ಹೇಗೆ ಹೇಳಿದರೂ ಒಂದೆ) 'ಪರಿಭಾವ' ಎಂದು ಹೇಳಲಾಗುತ್ತದೆ. ಆದ್ದರಿಂದ ವೀರಶೈವ ಮತದಲ್ಲಿ ಬರೀ ಆಳವಾದ ವಿಚಾರಕ್ಕೆ ಪರಿಭಾವ ಎಂದು ಹೇಳಲಾಗುವುದಿಲ್ಲ; ವಿಚಾರದೊಡನೆ ಆಚಾರ–ಭಾವಗಳಿದ್ದರೆ ಮಾತ್ರ ಪರಿಭಾವ ಎಂದು ಹೇಳಲಾಗುತ್ತದೆ. ಶಿವಭಾವದೊಡನೆ ಶಿವಜ್ಞಾನ, ಶಿವಜ್ಞಾನದೊಡನೆ ಶಿವಭಾವ ಏಕೀಭವಿಸಿ ಆಚರಿತವಾಗಬೇಕು. ಆಗ ಬುದ್ಧಿ ಭಾವಾದಿ ಕರಣಗಳೆಲ್ಲವೂ ತಾದಾತ್ಮ್ಯಭಾವವನ್ನು ಪಡೆಯುತ್ತವೆ.

"ತರಂಗಾದ್ಯಾ ಯಥಾ ಸಿಂಧೋರ್ನ ಭಿದ್ಯಂತೇ ತಥಾತ್ಮನಃ ।
ಭಾವಾ ಬುದ್ಧ್ಯಾದಯಃ ಸರ್ವೇಯತ್ ತದ್ಭಾವಪ್ರಕಾಶನಂ ॥
ಗಲಿತಾಜ್ಞಾನ ಬಂಧಸ್ಯ ಕೇವಲಾತ್ಮಾನು ಭಾವಿನಃ ।
ಯತ್ರ ಯತ್ರೇಂದ್ರಿಯಾಸಕ್ತಿಸ್ತತ್ರ ತತ್ರ ಶಿವಾತ್ಮತಾ ॥
ಸಿದ್ಧಾಂತ ಶಿಖಾಮಣಿ

ಇದು ಪರಿಭಾವದ ಪರಿಣಾಮ. ಪರಿಭಾವದಲ್ಲಿ ಆಳವಾದ ಅರಿವು, ಆಳವಾದ ಭಾವ ಇರುವುದರಿಂದ ಅದು ಯಾವುದನ್ನೂ ಅಲ್ಲಗಳೆವುದಿಲ್ಲ; ಭಿನ್ನವಾಗಿ ಇದ್ದಂತಿದ್ದರೂ

ಭಿನ್ನವಾಗಿ ಭಾವಿಸುವುದಿಲ್ಲ. ಕಡಲ ತೆರೆಗಳಂತೆ ಅಭಿನ್ನವಾಗಿರಲಾಗುತ್ತದೆ. ಅಜ್ಞಾನ ಅಭಾವಗಳಿಲ್ಲದಿರುವ ಪರಿಭಾವದಲ್ಲಿ ಶಿವಾತ್ಮತ್ವವಿರುತ್ತದೆ. ಇದು ಇರುವಲ್ಲಿ ಭವದೋಷ ವಿರದು.

> "ಶಿವ ಏವ ಜಗತ್ಸರ್ವಂ ಶಿವ ಏವಾಹಮಿತ್ಯಪಿ ।
> ಭಾವಯನ್ ಪರಮೋ ಯೋಗೀ ಭವದೋಷೈರ್ನ ಬಾಧ್ಯತೇ ॥
> ಶಿವಭಾವೇ ಸ್ಥಿರೇ ಜಾತೇ ನಿರ್ಲೇಪಸ್ಯ ಮಹಾತ್ಮನಃ
> ಯೇ ಯೇ ಭಾವಾಃ ಸಮುತ್ಪನ್ನಾಸ್ತೇತೇ ಶಿವಮಯಾಃ ಸ್ಮೃತಾಃ ॥
> ರಾಗದ್ವೇಷಾದಯೋ ಭಾವಾಃ ಸಂಸಾರಕ್ಲೇಶಕಾರಣಂ ।
> ತೇಷಾಮುಪರಮೋಯತ್ರ ತತ್ರ ಭಾವಃ ಶಿವಾತ್ಮಕಃ ॥"
>
> ಸಿದ್ಧಾಂತ ಶಿಖಾಮಣಿ

ಇದು ಪರಿಭಾವದಿಂದಾಗುವ ಪ್ರಯೋಜನ; ಪ್ರಕಾಶನ. ಭಾವ ಪ್ರಕಾಶನವಿಲ್ಲದ ಬುದ್ಧಿ ಪ್ರಯೋಜನವಾಗದು; ಪ್ರಕಾಶಿಸದು.

ಪರಿಭಾವನೆಯಿಲ್ಲದ ಪ್ರಜ್ಞಾವಂತ ಭವದೋಷಗಳಿಂದ ಬಿಡುಗಡೆಯನ್ನು ಹೊಂದಲಾರ. ಜಗತ್ತೆಲ್ಲವನ್ನು ತನ್ನ ತನುವನ್ನು ತನ್ನನ್ನು ಶಿವಸ್ವರೂಪವನ್ನಾಗಿ ಭಾವಿಸಲಾರ ಎಲ್ಲವನ್ನು ಶಿವಮಯವನ್ನಾಗಿ ಕಾಣುವ ಭಾವ ಸ್ಥಿರವಾಗಿದ್ದರೂ ಎಲ್ಲದರಿಂದ ನಿರ್ಲಿಪ್ತನಾಗಿರಬೇಕು; ಆಗಿರುತ್ತಾನೆ. ಆದ್ದರಿಂದ ಭವದೋಷಗಳಿಂದ ಬಾಧ್ಯನಾಗುವುದಿಲ್ಲ. ಅವನು ಭಾವಿಸಿದ್ದೆಲ್ಲ ಶಿವಮಯ; ಅರಿತಿದ್ದೆಲ್ಲ ಶಿವಪ್ರಕಾಶ. ಮಾಡಿದ್ದೆಲ್ಲ ಶಿವಕಾರ್ಯ. ಆಡಿದ್ದೆಲ್ಲ ಶಿವಾನುಭಾವ. ಅವನಿಗೆ ಎಲ್ಲಿಯೂ ಯಾರಲ್ಲಿಯೂ ರಾಗದ್ವೇಷಗಳಿರವು. ಅಸ್ಮಿತ ಅಭಿನಿವೇಶಗಳಿರವು.

ಆದ್ದರಿಂದ ವೀರಶೈವರಲ್ಲಿ ಪರಿಭಾವಕ್ಕೆ ಪ್ರಾಧಾನ್ಯತೆಯಿದೆ. ಬುದ್ಧಿಜನ್ಯ ಜ್ಞಾನ, ಭಾವಜನ್ಯ ಕ್ರಿಯೆ ಇವೆರಡೂ ಸಮಸಮವಾಗಿ ವೀರಶೈವರಲ್ಲಿವೆ. ಇವೆರಡರ ಒಬ್ಬುಳಿಗೆ 'ಪರಿಭಾವ' ಎಂದು ಹೆಸರು. ವೀರಶೈವರ ಜ್ಞಾನ ಸಾಮಾನ್ಯ ಮಾತ್ರವಲ್ಲ ಅಸಾಮಾನ್ಯವೂ ಅಹುದು. ಅಂತೆಯೆ ಇವರ ಕ್ರಿಯೆಯೂ ಅತ್ಯಂತ ಸೂಕ್ಷ್ಮತಮವಾದುದು. ಇವೆರಡನ್ನೂ ಒಳಗೊಂಡ 'ಪರಿಭಾವ'ವೂ ಅತ್ಯಂತ ಆಳವಾದ ಆಚಾರ–ವಿಚಾರಗಳನ್ನೊಳಗೊಂಡು ಅದನ್ನೇ ಭೋಧಿಸುವ ಪದ. ಅದನ್ನೇ 'ಮಹಾನುಭವ' ಎಂದು ಹೇಳಲಾಗುತ್ತದೆ. ಇದಕ್ಕೆ ವೀರಶೈವದಲ್ಲಿ ಪ್ರಾಧಾನ್ಯತೆ ಇರುವುದು ಎಲ್ಲರಿಗೂ ತಿಳಿದುಬಂದ ಮಾತಾಗಿದೆ. ಮಹಾನುಭವವುಳ್ಳವನು ಮಹಾನುಭಾವಿಯೆನಿಸುವನು.

ವೀರಶೈವದ ಪ್ರಾಚೀನತೆ

ಕೊನೆಯದಾಗಿ ಈ ಬಗೆಗೆ ಇನ್ನೆರಡು ನುಡಿಗಳು : ವೀರಶೈವವು ವೇದಕಾಲಕ್ಕಿಂತ ಪೂರ್ವದ್ದು. ವೇದಾಗಮಗಳಲ್ಲಿ ಇದು ನಿರ್ದಿಷ್ಟವಾಗಿದೆ. ಹರಪ್ಪಾ ಮೊಹೆಂಜೊದಾರೊಗಳ ಸಂಶೋಧನೆಯಲ್ಲಿ ಕಂಥೆಯುಳ್ಳ ಸೂಕ್ಷ್ಮಲಿಂಗಗಳು, ಇವನ್ನಿಡುವ ಅಷ್ಟಕೋಣದ ಕರಂಡಕಗಳು, ವೀರರು ಉಪಯೋಗಿಸುವ ಆಯುಧಗಳು, ಶಿವ ಶಕ್ತಿ ಮೂರ್ತಿಗಳು ಮೊದಲಾದವುಗಳು ಸಿಕ್ಕಿವೆ. ಭೂಗರ್ಭಶಾಸ್ತ್ರಜ್ಞರು ಮತ್ತು ಪೂರ್ವೇತಿಹಾಸಜ್ಞರು ಇವೆಲ್ಲ ಅತ್ಯಂತಪೂರ್ವದವುಗಳೆಂದು ಏಕಕಂಠದಿಂದ ಉಗ್ಗಡಿಸಿದ್ದಾರೆ. ಮೈಸೂರಿನ ಪುರಾತನ ವಸ್ತುಸಂಗ್ರಹಾಲಯದಲ್ಲಿ ಕಂಥೆಯುಳ್ಳ ಪುರಾತನ ಲಿಂಗವೊಂದನ್ನಿಟ್ಟಿರುವುದಾಗಿ ಕೇಳಿದ್ದೇವೆ. ರುದ್ರ ಭದ್ರ ಶಿವ ಇವರೆಲ್ಲರು ಜಟಾಧಾರಿಗಳು. ಇವರನ್ನು 'ಕೇಶಿ'ಗಳೆಂದು ಕರೆಯಲಾಗುತ್ತಿತ್ತು. ಇವರು ಆರ್ಯೇತರ ಮುನಿಗಳು. ಇವರಿಗೆ ಆರ್ಯರು ಭಯಭಕ್ತಿಗಳಿಂದ ಶರಣಾಗತರಾಗಿದ್ದರು. ಇದು ಶ್ರೀರುದ್ರದಿಂದ ಸ್ಪಷ್ಟವಾಗುತ್ತದೆ. ಮುನಿಗಳೆಂದರೆ ಸಿಟ್ಟುಳ್ಳವರೂ ಎಂದು ಮತ್ತೊಂದರ್ಥ. ಇದಕ್ಕೆ ರುದ್ರ ಭದ್ರರು ಪ್ರತೀಕರಾಗಿದ್ದಾರೆ. ಆರ್ಯರು ಇವರನ್ನು ಆರಾಧಿಸುತ್ತಿದ್ದರು. ದ್ರಾವಿಡರು, ಮುಂದಾಳುಗಳು ಆಗಿದ್ದರು. ಲಿಂಗಧಾರಿಗಳಾಗಿದ್ದರು. ಲಿಂಗವು ಅವ್ಯಕ್ತ ಶಕ್ತಿ ವಿಶಿಷ್ಟದೇವನ ಪ್ರತೀಕ; ವ್ಯಕ್ತಸ್ವರೂಪ. ಲಿಂಗಧಾರಿಗಳಲ್ಲಿ ರುದ್ರದೇವನೆ ಮೊದಲಿಗನು. ರುದ್ರನು ಷಣ್ಮುಖಾದಿಗಳಿಗೆ ಲಿಂಗಧಾರಣ ಮಾಡಿದುದನ್ನು ಹಿಂದೆ ಹೇಳಿದೆ. ಬರಬರುತ್ತ ರುದ್ರದೇವನೆ ಲಿಂಗವೆಂಬ ಭಾವವುಂಟಾಯಿತು. 'ರುದ್ರೋಭೂತ್ವಾ ರುದ್ರಮರ್ಚ–ಯೇತ್' ಎಂಬ ಮಾತು ವೀರಶೈವ ಲಿಂಗಸಂಸ್ಕೃತಿಯ ಮೂಲಭೂತವಾದ ಮಾತಾಗಿದೆ. ರುದ್ರೋ(ಲಿಂಗೋ)ಪಾಸಕರು ಏಕೇಶ್ವರೋಪಾಸಕರು. ಆರ್ಯರು. ಅನೇಕ ದೇವತೋಪಾಸಕರು. ಲಿಂಗೋಪಾಸಕರನ್ನು ಆರ್ಯರು ಆಗಾಗ ದೂಷಿಸುತ್ತಿದ್ದರು. 'ಶಿಶ್ನದೇವಾಃ' ಎಂಬ ಋಗ್ವೇದ ಪಂಕ್ತಿ ಇದಕ್ಕೆ ಸಾಕ್ಷಿ. ಇದು ಆರ್ಯರ ಅಜ್ಞಾನದ ಕುರುಹು; ಅವರಿಗಿರುವ ಭಾವನೆಯ ಕುರುಹು. ಅವರ ವೃತ್ತಿಯನ್ನೆ ಎತ್ತಿ ಹೇಳಬಲ್ಲುದು. ಎಂತಹದನ್ನು ಉಂಡರೆ ಅಂತಹದನ್ನೆ ಕಕ್ಕುವುದು ಸ್ವಾಭಾವಿಕ ತಾನೆ? ಲಿಂಗಸಂಸ್ಕೃತಿಯ ಅಪಪ್ರಚಾರಕ್ಕೆ ಋಗ್ವೇದದ ಋಕ್ಕುಗಳಲ್ಲಿ ಸಾಕ್ಷಿ ಸಿಕ್ಕುತ್ತದೆ. ಅಲ್ಲದೆ ರಾಮಾಯಣ ಮಹಾಭಾರತಗಳ ಕಾಲದಲ್ಲಿಯೂ ಪ್ರಾಚೀನ ವೀರಶೈವ ಸಂಸ್ಕೃತಿಗೆ ಮಾನ್ಯತೆಯಿತ್ತು. ರಾಮನು ಯುದ್ಧಕ್ಕೆ ಮುನ್ನ ಲಿಂಗಪೂಜೆಯನ್ನು ಮಾಡುತ್ತಾನೆ. ಆತನಿಗೆ ಬೋಧಿಸಿದ ಯೋಗವಾಸಿಷ್ಠದಲ್ಲಿ ವೀರಶೈವ ಸಂಸ್ಕೃತಿಯ ಭಾವಗಳು ವಿಶೇಷವಾಗಿ ಬರುತ್ತವೆ. ಅಂತೆಯೆ 'ಭದ್ರ' ಪದವನ್ನು ರಾಮಾದಿಗಳ ಹೆಸರಿಗೆ ಜೋಡಿಸಿ ಹೇಳುವ ರೂಢಿ ಇತ್ತು.

ಮಹಾಭಾರತದಲ್ಲಿ "ಅಸಂಖ್ಯಾತಾ ಭವಿಷ್ಯಂತಿ ಭಿಕ್ಷವೋ ಲಿಂಗಿನಸ್ತಥಾ । ಆಶ್ರಮಾಣಾಂ ವಿಕಲ್ಪಾಶ್ಚ ವೃತ್ತೇऽಸ್ಮಿನ್ ವೈ ಕೃತೇಯುಗೇ ॥" ಎಂದಿದೆ. ಇದರಿಂದ

ಲಿಂಗಿಗಳು ಅಂದೇ ಅಸಂಖ್ಯಾತರಿದ್ದರೆಂಬುದು ಸುಸ್ಪಷ್ಟವಾಗುತ್ತದೆ. ಅಲ್ಲದೆ "ಕರಂಡ ದಂಡಪಾನೀಯ ಪಾತ್ರ ಮಾತ್ರ ಪರಿಗ್ರಹಾನ್ । ಕ್ವಚಿತ್ ತ್ರಿದಂಡಿನೋ ದೃಷ್ಟ್ವಾ ನಿಸ್ಸಂಗಾನ್ ನಿಷ್ಪರಿಗ್ರಹಾನ್ ॥" ಎಂದು ಅದೇ ಮಹಾಭಾರತದ ಕಾಶೀಖಂಡದಲ್ಲಿ ನಿರೂಪಿತವಾಗಿದೆ. ಇಲ್ಲಿ ಬರುವ ಮೊದಲಿನ 'ಕರಂಡ'ವನ್ನು ವೀರಶೈವರ ಕರಡಿಗೆ ಎಂದು ಟೀಕಾಕಾರನು ಹೇಳಿರುವನಂತೆ !

"ವೇದಶಾಸ್ತ್ರ ಪುರಾಣೇಷು ಕಾಮಿಕಾದ್ಯಾಗಮೇಷು ಚ ।
ಲಿಂಗಧಾರಣಮಾಖ್ಯಾತಂ ವೀರಶೈವಸ್ಯ ನಿಶ್ಚಯಾತ್ ॥
ವಿಷ್ಣು ಬ್ರಹ್ಮಾದಯೋ ದೇವಾ ಮುನಯೋ ಗೌತಮಾದಯಃ ।
ಧಾರಯಂತಿ ಸದಾ ಲಿಂಗಂ ಉತ್ತಮಾಂಗೇ ವಿಶೇಷತಃ ॥

ಎಂದು ಸಿದ್ಧಾಂತ ಶಿಖಾಮಣಿ ಸ್ಪಷ್ಟವಾಗಿ ಹೇಳಿರುವುದನ್ನು ಹಿಂದೆಯೆ ಉದ್ಧರಿಸಲಾಗಿದೆ. ಅಲ್ಲದೆ ಸ್ಕಂದ ಪುರಾಣದಲ್ಲಿ :

"ಇಂದ್ರ ನೀಲಮಯಂ ಲಿಂಗಂ ವಿಷ್ಣುಃ ಪೂಜಯತೇ ಸದಾ ।
ಬ್ರಹ್ಮಾ ಮಣಿಮಯಂ ಲಿಂಗಂ ಪೂಜಯತ್ಯನಿಶಂ ಶುಭಂ ।
ಇಂದ್ರೋರತ್ನಮಯಂ ಲಿಂಗಂ, ಚಂದ್ರೋ ಮುಕ್ತಾಮಯಂ ತಥಾ ।
ಭಾನುಸ್ತಾಮ್ರಮಯಂ ಲಿಂಗಂ ಪೂಜಯತ್ಯನಿಶಂ ಶುಭಂ ।
ರೌಕ್ಮಂ ಲಿಂಗಂ ಕುಬೇರಶ್ಚ ಪಾಶೀಚಾಲಕ್ತಮೇವ ಚ ।
ಯಮೋ ನೀಲಮಯಂ ಲಿಂಗಂ ರಾಜತಂ ನೈಋತಸ್ತಥಾ ।
ಕಾಸ್ಮೀರಂ ಪವನೋಲಿಂಗಮರ್ಚ್ಚಯತ್ಯನಿಶಂ ವಿಭೋ ॥" ಎಂದು ಹೇಳಿದೆ.

ಇದರಂತೆ ಲಿಂಗಪುರಾಣ, ಪದ್ಮಪುರಾಣ ಆದಿತ್ಯ ಪುರಾಣಗಳು 'ಶಿವಧರ್ಮ' ಕೃತಿಯೂ ಉಗ್ಗಡಿಸಿವೆ. ಅಂತೆಯೇ ವಚನಕಾರರಲ್ಲಿ ವಿಶಿಷ್ಟಸ್ಥಾನವನ್ನು ಜ್ಞಾನವನ್ನು ಪಡೆದ ಚನ್ನಬಸವಣ್ಣನು ಮೇಲಿನ ಸ್ಕಂದಾದಿ ಪುರಾಣ ನಿರೂಪಣವನ್ನು ಒಪ್ಪಿಕೊಂಡು ಹೀಗೆ ಹೇಳಿದ್ದಾನೆ :

"ಶ್ರುತಿ ಪುರಾಣಾಗಮ ಇತಿಹಾಸಂಗಳಿಂ ಶಿವನೇ ಅಧಿಕನೆಂದರಿದು, ಸಕಲ ಋಷಿ ಜನಂಗಳು ದೇವರ್ಕಳು—ರತ್ನ, ಸುವರ್ಣ, ರಾಜತ, ತಾಮ್ರ, ಚಂದ್ರಕಾಂತ, ಸ್ಫಟಿಕ, ಪವಳದ ಲಿಂಗಂಗಳನಾರಾಧಿಸಿ, ಅಗಸ್ತ್ಯ, ದಧೀಚಿ, ಸ್ಕಂದ, ಬಾಣಾಸುರ, ಪುರಂದರ, ಬ್ರಹ್ಮ, ವಿಷ್ಣು, ದುರ್ವಾಸ, ವೀರಭದ್ರ, ನಂದಿಕೇಶ್ವರ, ಭೃಂಗಿರಿಟಿ ಪ್ರಮಥಾದಿ ಗಣಂಗಳೆಲ್ಲರೂ ಶಿವನ ಪೂಜಿಸಿ ಮಹದೈಶ್ವರ್ಯಂಗಳಂ ಪಡೆದರು. ಆದಿತ್ಯೇ—"ರುದ್ರೇಣ ದೀಕ್ಷಿತೋ ಭೂತ್ವಾ ಸ್ಕಂದಃ ಶಿವಸಮೋಽಭವತ್ । ಶಿವಾಚಾರರಹಸ್ಯಸ್ಯ ಪ್ರಾತ್ರತಾಂ ಪ್ರಥಮಂ ಗತಃ ॥" ಎಂದುದಾಗಿ, ಇದನರಿದು ಪರಶುರಾಮ, ಪರಾಶರ, ವಶಿಷ್ಠ, ವಾಲ್ಮೀಕಿ.

ಕಮಲಾಕರ, ವಿಶ್ವಾಮಿತ್ರ ಮುನಿಗಳೆಲ್ಲರೂ ಶಿವಲಿಂಗಮಂ ಧರಿಸಿಕೊಂಡು ಶಿವಲಿಂಗಾರ್ಚನೆಯಂ ಮಾಡಿ ಪಾದತೀರ್ಥ–ಪ್ರಸಾದಗಳಂ ಕೊಂಡು ಮುಕ್ತರಾದರು. ಶಿವಧರ್ಮೇ– "ಪಾಣಿನಿಷ್ಚ ಕಣಾದಶ್ಚ ಕಪಿಲೋ ಗೌತಮಾದಯಃ । ಪ್ರಸಾದ ಸೇವಾನಾದ್ಧ್ಯಾನಾದ್ಧಾರಣಾದರ್ಚನಾದಪಿ ॥" ಎಂದುದಾಗಿ, ಇದುಕಾರಣ ಕೂಡಲ ಚನ್ನಸಂಗಮದೇವರ ಪೂಜಿಸಿ ಪಾದೋದಕ ಪ್ರಸಾದಮಂ ಕೊಂಡು ಅತ್ಯಂತ ಶುದ್ಧರಾದರಲ್ಲಾ ದೇವತೆಗಳು, ಎಲ್ಲಾ ಋಷಿಗಳು."

"ದುಂಡಿ ನಂದಿ ಮಹಾಕಾಳ ಪ್ರಮುಖಾ ಗಣನಾಯಕಾಃ ।
ಚತುರ್ದ್ದಶ ಸಹಸ್ರಂ ಹಿ ಕೈಲಾಸಾವರಣಾಧಿಪಾಃ ।
ಮತಪ್ರವರ್ತಕಾಃ ಸರ್ವೇ ಗುರುಪೀಠಾಧಿರೋಹಿಣಃ ।
ಮಾಹೇಶ್ವರ ಸಮೀಪೇ ತೇ ವರ್ತಂತೇ... ...
......ಏತೇ ಸರ್ವೇ ಮಹಾಭಾಗಾ ಅತಿವರ್ಣಾಶ್ರಮೇ ರತಾಃ ।
ವೀರಶೈವಾಃ ಸಮಾಖ್ಯಾತಾಃ ಜೀವನ್ಮುಕ್ತಾ ನ ಸಂಶಯಃ ।

ಎಂದು 'ವೀರಶೈವಾನ್ವಯ ಚಂದ್ರಿಕೆ'ಯಲ್ಲಿ ಹೇಳಿದೆ. ಹೀಗೆ ಹಲವು ಉದಾಹರಣೆಗಳಿವೆ. ಇದರಿಂದಾಗಿ ವೀರಶೈವವು ಪ್ರಾಚೀನ ಮತವೆಂದು ಸಿದ್ಧವಾಗುವುದಲ್ಲದೆ ಆಗಲೇ ಬೃಹತ್ತಾಗಿತ್ತೆಂಬುದೂ ಸ್ಪಷ್ಟವಾಗುತ್ತದೆ. ಇವರೆಲ್ಲರೂ ಮತಪ್ರವರ್ತಕರು, ವೀರಶೈವರು, ಗುರುಪೀಠಾಧಿಪರು ಎಂದು ಹೇಳಿರುವುದನ್ನು ಗಮನಿಸಬೇಕಾಗುತ್ತದೆ.

"ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ ।
ನಿರ್ದಿಷ್ಟಮುತ್ತರೇ ಭಾಗೇ ವೀರಶೈವಮತಂ ಪರಂ ॥"

—ಸಿದ್ಧಾಂತ ಶಿಖಾಮಣಿ

ವೀರಶೈವ ತತ್ವ

ಯಸ್ಯೋರ್ಮಿ ಬುದ್ಬುದಾಭಾಸಃ ಷಟ್‌ತ್ರಿಂಶತ್ತತ್ತ್ವ ಸಂಚಯಃ ।
ನಿರ್ಮಲಂ ಶಿವನಾಮಾನಂ ತಂ ವಂದೇ ಚಿನ್ಮಹೋದಧಿಂ॥"

—ಸಿದ್ಧಾಂತ ಶಿಖಾಮಣಿ

ಮಲರಹಿತನಾದ ಪರಶಿವನೊಂದು ಚಿನ್ಮಯ ಹೆಗ್ಗಡಲು. ಅದರ ತೆರೆ–ನೊರೆಗಳು ಮೂವತ್ತಾರು ತತ್ತ್ವಗಳು. ತದ್ವಸ್ತುವಿಗೆ ಅಭಿನ್ನಗಳು.

ವ್ಯಷ್ಟಿ ಸಮಷ್ಟಿ ಸೃಷ್ಟಿಗಳೆರಡರ ಸೃಜನಕಾರ್ಯಕ್ಕೆ ಬೇಕಾದ ಮಾಧ್ಯಮಗಳು ತತ್ತ್ವಗಳು. ಇವು ವ್ಯಕ್ತಾವ್ಯಕ್ತಸ್ಥಿತಿಯಲ್ಲಿರುತ್ತವೆ. ಇವುಗಳಲ್ಲಿ ಹಲವು ಎಂದಿಗೂ ಅವ್ಯಕ್ತವಾಗಿರುತ್ತವೆ. ಗುಣಕ್ರಿಯೆಗಳಿಂದ ಮಾತ್ರ ಮೇಯವಾಗುತ್ತವೆ; ಜ್ಞೇಯವಾಗುತ್ತವೆ. ಇನ್ನು ಹಲವು ವ್ಯಕ್ತವಾಗಿದ್ದು ನಾಮ ರೂಪ ಗುಣಕ್ರಿಯೆಗಳಿಂದ ಮೇಯವಾಗುತ್ತವೆ. ಇವು ಸಹ ಸೃಷ್ಟಿಗೆ ಮುನ್ನ ಅವ್ಯಕ್ತವಾಗಿರುತ್ತವೆ. ಇವುಗಳ ವ್ಯಕ್ತೀಕರಣವೆ ಸೃಷ್ಟಿ. ಇವು ಬ್ರಹ್ಮಾಂಡ ತೋರಿಕೆಗೆ ಕಾರಣವಾದಂತೆ, ಪಿಂಡಾಂಡ ತೋರಿಕೆಗೂ ಕಾರಣಗಳಾಗಿವೆ.

ವೀರಶೈವ ಮತದಂತೆ ತತ್ತ್ವಗಳು ಮೂವತ್ತಾರು: ಶಿವ, ಶಕ್ತಿ, ಸದಾಶಿವ, ಈಶ್ವರ, ಶುದ್ಧವಿದ್ಯಾ; ಅಶುದ್ಧವಿದ್ಯಾ, ಮಾಯಾ, ಕಲಾ, ಕಾಲ, ರಾಗ, ನಿಯತಿ, ಪುರುಷ, ಪ್ರಕೃತಿ, ಬುದ್ಧಿ, ಅಹಂಕಾರ, ಮನ, ಜ್ಞಾನೇಂದ್ರಿಯ ಪಂಚಕ, ಕರ್ಮೇಂದ್ರಿಯ ಪಂಚಕ, ತನ್ಮಾತ್ರಪಂಚಕ, ಭೂತಪಂಚಕಗಳು.

ಈ ೩೬ ತತ್ತ್ವಗಳನ್ನು ವೀರಶೈವರು ಸಾಮಾನ್ಯವಾಗಿ ಎರಡುಗುಂಪುಗಳನ್ನಾಗಿ, ವಿಶೇಷವಾಗಿ ಮೂರು ಗುಂಪುಗಳನ್ನಾಗಿ ವಿಂಗಡಿಸುವರು. ಇದು ಇವರ ವಿವೇಚನಪರತೆಗೆ ಪ್ರಜ್ಞೆಗೆ ಕುರುಹು. ಮೊದಲಿನವಯ್ದು ಪರತತ್ತ್ವ ಅಂದರೆ ಲಿಂಗತತ್ತ್ವಗಳೆಂದೂ, ಉಳಿದವು ಮೂವತ್ತೊಂದು ಅಪರ ಅಂದರೆ ಅಂಗ ತತ್ತ್ವಗಳೆಂದೂ ಹೇಳಲಾಗಿದೆ. ಎರಡನೆಯದಾಗಿ ಪರ(ಲಿಂಗ)ತತ್ತ್ವಗಳೆನಿಸುವ ಮೊದಲಿನವಯ್ದು

ಶುದ್ಧಾಧ್ವ ಚಿತ್ ತತ್ತ್ವಗಳು. ಬಳಿಕಿನ ಏಳು ಮಿಶ್ರಾಧ್ವ ಚಿದಚಿತ್ ತತ್ತ್ವಗಳು; ಅಂದರೆ ಶುದ್ಧಾಶುದ್ಧಗಳು. ಇನ್ನು ಪ್ರಕೃತಿ ಮೊದಲ್ಗೊಂಡು ಉಳಿದವುಗಳೆಲ್ಲ ಅಶುಧ್ವ ಅಚಿತ್ ತತ್ತ್ವಗಳು. ಚಿತ್ ತತ್ತ್ವಗಳಯ್ಟು ಸಂಪೂರ್ಣ ಸುಟ್ಟ ಕಟ್ಟಿಗೆಗಳು; ಆದರಿಂದ ಅವು ಶುದ್ಧ ತತ್ತ್ವಗಳು; ಚಿನ್ಮಯಗಳು. ಚಿದಚಿತ್–ತತ್ತ್ವಗಳೇಳು ಅರೆ ಕೊರೆ ಸುಟ್ಟ ಕಟ್ಟಿಗೆಗಳು; ಇದರಿಂದಾಗಿ ಇವು ಶುದ್ಧಾಶುದ್ಧಗಳು. ಪ್ರಕೃತ್ಯಾದಿ ಅಚಿತ್ ತತ್ತ್ವಗಳು ಸುಡದಿರುವ ಕಟ್ಟಿಗೆಗಳು; ಅಶುದ್ಧಗಳು.

ಇವುಗಳ ಕಾರಣ–ಕಾರ್ಯಭಾವದ ಬಗೆಗೆ, ಗುಣಕ್ರಿಯೆಗಳ ಬಗೆಗೆ, ಗತಿಸ್ಥಿತಿಗಳ ಬಗೆಗೆ ವೀರಶೈವ ಮತದಲ್ಲಿ ಚಿಂತನಪರ ಪರಿಶೋಧನೆ ನಡೆದಿದೆ. ಈ ಚಿಂತನಪರ ಪರಿಶೋಧನೆಯಿಂದ ಹೊಸ ವಿಷಯಗಳ, ಹೊಸ ಗುಣಾಗುಣಗಳ ಆವಿಷ್ಕಾರವಾಗಿದೆ; ಆಗುತ್ತಿದೆ. ಇವುಗಳ ಸಕ್ರಿಯ ಶೋಧನೆಯಿಂದ ಅಂದರೆ ಸಂಸ್ಕಾರದೀಕ್ಷೆಯಿಂದ ವಿಶುದ್ಧಿ ವಿಕಾಸಗಳುಂಟಾಗುತ್ತವೆ. ಇವೆರಡೂ ವೀರಶೈವರಲ್ಲಿ ನಡೆದು ಬಂದಿವೆ; ಬರುತ್ತಿವೆ. ಆದರೆ ವಿಚಾರ ಮತ್ತು ವಿವೇಚನೆ ವಿರಹಿತವಾಗಿ ನಡೆದು ಬಂದರೆ ಪ್ರಯೋಜನವಿಲ್ಲ. ವಾಸ್ತವ ಪ್ರಜ್ಞೆಯಿಂದ ಸಕ್ರಮವಾಗಿ ಇವುಗಳ ವಿಚಾರಾಚಾರಗಳು ಸಾಗಿದರೆ ಶುದ್ಧವಾದ ಪ್ರಬುದ್ಧವಾದ ಸತ್ಯ ಚಾರಿತ್ರ್ಯ ನಿರ್ಮಾಣವಾಗುತ್ತದೆ. ವಿಶ್ವಾದರ್ಶ ವ್ಯಕ್ತಿತ್ವ ರೂಪಿತವಾಗುತ್ತದೆ.

ತತ್ತ್ವಸಂಸ್ಕಾರವೆಂದರೆ ಮೂಲ ನಿರ್ಮಲ ತತ್ತ್ವತನಕ್ಕೆ ಅಂಟಿಕೊಳ್ಳುವಿಕೆ. ಕಾರ್ಯವಾದಲ್ಲಿ ಆವರಿಸುವ ದೋಷಗಳನ್ನು ನಿವಾರಿಸಿ ಮೂಲ ಗುಣಗಳನ್ನು ಅಂಗೀಕರಿಸುವಿಕೆ. ಇದು ಸಮಷ್ಟಿಕಾರ್ಯದ ಮಾತಾಯಿತು. ಅಂತೆಯೆ ವ್ಯಕ್ತಿನಿಷ್ಠ ವ್ಯಷ್ಟಿಕಾರ್ಯದಲ್ಲಿ ಮಲತ್ರಯಗಳ ಆವರಣವಾಗಿರುತ್ತದೆ–ಪ್ರಾಕೃತಿಕವಾಗಿ! ಇದಕ್ಕೆ ಅಕ್ಕಪಕ್ಕದ ಪರಿಸರ ಮತ್ತು ಮಾನಸಿಕ ಪ್ರವೃತ್ತಿ ಕಾರಣಗಳು.

ತತ್‌ತನವುಳ್ಳವು ತತ್ತ್ವಗಳು. ತತ್ತ್ವತನವುಳ್ಳವು ಅಂಗ ಲಿಂಗಗಳು; ಅಂದರೆ ದೇಹಾತ್ಮಗಳು. ತತ್ ಬೀಜ, ತತ್ತ್ವ ಭೂಜ; ದೇಹಾತ್ಮ ಫಲ. ಮೊದಲಿನ ಐದು ತತ್ತ್ವಗಳಿಂದ ಆತ್ಮ; ಉಳಿದ ೩೧ ತತ್ತ್ವಗಳಿಂದ ದೇಹ.

ಜೀವನಕ್ಕೂ ತತ್ತ್ವಗಳಿಗೂ ನಿಕಟ ಸಂಬಂಧ. ತತ್ತ್ವಗಳಿಂದಾದ ದೇಹಿ ತತ್ತ್ವಗಳಿಂದಲೇ ಜೀವಿಸಬಲ್ಲ, ಜೀವಿಸುತ್ತಿದ್ದಾನೆ; ಜೀವಿಸುವನು. ವ್ಯಷ್ಟಿ ಸಮಷ್ಟಿ ಪ್ರಪಂಚಗಳೆರಡೂ ತತ್ತ್ವಗಳಿಂದ ಹುಟ್ಟಿ, ತತ್ತ್ವಗಳಿಂದ ಬಾಳಿ. ತತ್ತ್ವಗಳಲ್ಲಿ ತಲ್ಲೀನವಾಗುತ್ತವೆ. ತತ್ತ್ವಗಳು ಚರಾಚರ ತಿರೆಯ ಮಾಧ್ಯಮಗಳು. ತತ್ತ್ವಗಳಿಂದಾದ ತಿರೆ ತತ್ತ್ವದಲ್ಲಿ ಅಡಗುತ್ತದೆ; ಅಡಗಬೇಕು. ಇದು ನಿಸರ್ಗ ನಿಯತಿ. ಇದರಿಂದಾಗಿ ತತ್ತ್ವಗಳ ತಿರುಳನ್ನು ತಿಳಿಯುವುದು ಅನಿವಾರ್ಯ. ತಿಳಿದು ತಳೆವುದು ಅಗತ್ಯ. ಅಂತಾಗಬೇಕಾದರೆ

ತತ್ತ್ವಶೋಧನ ತತ್ತ್ವಸಂವರ್ಧನ ಅತ್ಯಗತ್ಯ. ಇದರಿಂದ ಬಾಳು ಬೆಳುವಾಗಿ ಬೆಳೆದು ನಿಲ್ಲುತ್ತದೆ. ಫಲಶಾಲಿಯಾಗುತ್ತದೆ. ಅಂದರೆ ಅಶುದ್ಧತೆಯಿಂದ ಶುದ್ಧತೆಗೆ, ಕತ್ತಲೆ ಯಿಂದ ಬೆಳಕಿಗೆ, ಮೃತತ್ವದಿಂದ ಅಮೃತತ್ವಕ್ಕೆ ಬರುತ್ತದೆ.

ತತ್ತ್ವವಿಜ್ಞಾನ–ತತ್ತ್ವಶೋಧನ ಪ್ರಗತಿಪರ ಜೀವನದ ಅಡಿಗಲ್ಲು. ತತ್ತ್ವ ವಿಜ್ಞಾನ ವಿಚಾರಾತ್ಮಕವಾದುದು; ತತ್ತ್ವಶೋಧನ ಆಚಾರರೂಪ ಸಂಸ್ಕಾರಾತ್ಮಕ ವಾದುದು. ತತ್ತ್ವಚಿಂತನದಿಂದ ಸಮ್ಯಗ್‌ಜ್ಞಾನದ ಆವಿರ್ಭಾವವಾಗುತ್ತದೆ; ಅಂದರೆ ನಿಜಸ್ಥಿತಿಯ ಅಥವಾ ಸತ್ಯಸ್ವರೂಪದ ಪ್ರಜ್ಞೆಯುಂಟಾಗುತ್ತದೆ. ಸಂಸ್ಕಾರಾತ್ಮಕ ತಾತ್ತ್ವಿಕಾಚಾರಗಳಿಂದ ವಿಕಾಸವುಂಟಾಗುತ್ತದೆ. ಕ್ರಿಯೆ ಮಂತ್ರ ವೇಧ ಸಂಸ್ಕಾರಗಳಿಂದ ತತ್ತ್ವಗಳು ಪರಿಶುದ್ಧವಾಗುತ್ತವೆ; ಪ್ರಬುದ್ಧವಾಗುತ್ತವೆ. ಅಂದರೆ ಸಂಕುಚಿತಗೊಂಡ ತತ್ತ್ವಗಳು ವಿಕಾಸವಾಗುತ್ತವೆ. ತತ್ತ್ವವಿಕಾಸವೆಂದರೆ ಜೀವನ ವಿಕಾಸ. ತತ್ತ್ವಶುದ್ಧಿ ಯೆಂದರೆ ಜೀವನಶುದ್ಧಿ. ವಸ್ತುನಿಷ್ಠವಾಗಿ ವಾಸ್ತವಿಕವಾಗಿ ಬಾಳುವುದೆ ತಾತ್ತ್ವಿಕತೆ ಅಥವಾ ಅವಿಕೃತ ಜೀವನ. ಮೂಲದ ಸಂಬಂಧ–ಸಂಸ್ಮರಣ–ಸಂವಿಧಾನ ಕ್ರಿಯೆಗಳಿಂದ ಕೂಡಿರುವಿಕೆ. ಇದರಿಂದಾಗುವುದು ವಿಶಿಷ್ಟ ಚೇತನದ ಚಿಮ್ಮುವಿಕೆ. ಅನಿಷ್ಟಗಳ ವಿಯೋಗವಾಗಿ ಇಷ್ಟ ಸಂಯೋಗವಾಗುವಿಕೆ. ಸತ್ಯ ಶುದ್ಧ ಆದರ್ಶಗಳನ್ನು ನಿಷ್ಠೆಯಿಂದ ಬದುಕಿನಲ್ಲಿ ಆದರಿಸುವಿಕೆ. ಬಾಳಿನಲ್ಲಿ ತತ್ತ್ವಸಾಕ್ಷಿಯಾಗಿ ನಡೆಯುವಿಕೆ.

ಲೌಕಿಕ–ಅಲೌಕಿಕ ಜೀವನ ನಿರ್ವಹಣವೆ ವೀರಶೈವ ತತ್ತ್ವ; ಸಮನ್ವಯ ಸತ್ವ. ಇವೆರಡಕ್ಕೂ ಪರಸ್ಪರತೆಯನ್ನು ಪ್ರತಿಪಾದಿಸಿ ಪರಿಪಾಲಿಸುವುದೆ ವೀರಶೈವ ಧ್ಯೇಯ. ಇವೆರಡೂ ಹಾಸು ಹೊಕ್ಕಾಗಿವೆ. ಅಲೌಕಿಕವು ಲೌಕಿಕಕ್ಕೆ, ಲೌಕಿಕವು ಅಲೌಕಿಕ್ಕೆ ಪೂರಕ ಗಳು. ಅಲೌಕಿಕ ವಸ್ತುವಿನ ತೆರೆಗಳು ಲೌಕಿಕಗಳು. ಅದರಲ್ಲಿಯೆ ತೋರಿವೆ; ಅದ ರಲ್ಲಿಯೆ ಅಡಗಬೇಕೆಂಬುದೆ ವೀರಶೈವದ ಉದ್ದೇಶ; ಇದುವೆ ಸಹಜ. ಇದರಿಂದಾಗಿ ಈ ಮೂವತ್ತಾರು ತತ್ತ್ವಗಳು ನಶ್ವರವಲ್ಲ, ಮಿಥ್ಯ ಮೊದಲೆ ಅಲ್ಲ. ಮಣ್ಣಿನಿಂದಾದ ಮಡಕೆ ಮಣ್ಣೇ ಆಗಿರುವಂತೆ, ಚಿನ್ನದಿಂದಾದ ಒಡವೆ ಚಿನ್ನೇ ಆಗಿರುವಂತೆ ಸತ್ಯದಿಂದಾದ ತತ್ತ್ವಗಳು ಸತ್ಯಗಳೇ ಆಗಿವೆ.

> "ಆ ಪರಬ್ರಹ್ಮವಪ್ಪ ನಿತ್ಯ ನಿರಾಳ ನಿಶ್ಶೂನ್ಯಲಿಂಗವೇ ತನ್ನ ಲೀಲಾವಿಲಾಸ ದಿಂದ ತಾನೇ ಸುನಾದ ಬಿಂದು ಪ್ರಕಾಶತೇಜೋಮೂರ್ತಿಯಾಗಿ ಮಹಾ ಲಿಂಗ ವೆಂದೆನಿಸಿತ್ತು, ಆ ಮಹಾಲಿಂಗವೇ ಪಂಚಸಾದಾಖ್ಯವೆಂದೆನಿಸಿತ್ತು.
> ಆ ಪಂಚಸಾದಾಖ್ಯವೇ ಪಂಚಲಿಂಗಪ್ರಕಾಶವೆಂದೆನಿಸಿತ್ತು,
> ಆ ಪಂಚಲಿಂಗಪ್ರಕಾಶವೆ ಪಂಚಮುಖವೆಂದೆನಿಸಿತ್ತು,
> ಆ ಪಂಚಮುಖದಿಂದವೆ ಪಂಚಾಕ್ಷರಿಯುತ್ಪತ್ತಿ,
> ಆ ಪಂಚಾಕ್ಷರಿಯಿಂದವೆ ಪಂಚಕಲೆಗಳ ಉತ್ಪತ್ತಿ,

ಆ ಪಂಚಕಲೆಗಳಿಂದವೆ ಮನ ಬುದ್ಧಿ ಚಿತ್ತ ಅಹಂಕಾರಗಳ ಜನನ,
ಅವುಗಳಿಂದ ತನ್ಮಾತ್ರಂಗಳುತ್ಪತ್ತಿ,
ಆ ತನ್ಮಾತ್ರಂಗಳಿಂದವೆ ಪಂಚಭೂತಂಗಳುತ್ಪತ್ತಿ,
ಆ ಪಂಚಭೂತಂಗಳೇ ಪಂಚೀಕರಣವನೈದಿ ಆತ್ಮಂಗೆ ಅಂಗವಾಯಿತ್ತು"

"ಅನಾದಿಯ ಮಗನು ಆದಿ, ಆದಿಯ ಮಗನತೀತ;
ಅತೀತನ ಮಗನು ಆಕಾಶ, ಆಕಾಶನ ಮಗನು ವಾಯು;
ವಾಯುವಿನ ಮಗನಗ್ನಿ, ಅಗ್ನಿಯ ಮಗನು ಅಪ್ಪು;
ಅಪ್ಪುವಿನ ಮಗ ಪೃಥ್ವಿ, ಪೃಥ್ವಿಯಿಂದ ಸಕಲ ಜೀವರೆಲ್ಲರೂ
ಉದ್ಭವ ಕಾಣಾ ಗುಹೇಶ್ವರಾ !"

"ಒಂದೆರಡಾದುದನಾರೂ ಅರಿಯರು;
ಆ ಒಂದು ಒಂದೇ ಆಯಿತ್ತು,
ತ್ರಿತತ್ತ್ವವಾಯಿತ್ತು, ವೇದಾತೀತವಾಯಿತ್ತು; ಭರಿತವಾಯಿತ್ತು,
ಪ್ರಾದೇಶಿಕವಾಯಿತ್ತು, ಭಕ್ತಿಗೆ ಸಾಧ್ಯವಾಯಿತ್ತು,
ಅದಕ್ಕೆ ಆಧಾರ ದೇಹವಾಯಿತ್ತು;
ಅದು ಅಷ್ಟ ವಿಗ್ರಹ ಸ್ವರೂಪವಾಗಿರುತಿಪ್ಪುದು
ಮತ್ತೆ ಇರ್ದ ಒಂದು ಮಾಯಾಶಕ್ತಿಯಂ ಕೂಡಿ, ಗುಣತ್ರಯಂಗಳ ಕೂಡಿ,
ನಾನಾತ್ಮನೆನಿಸಿಕೊಂಡು ವಿಷಯಾತ್ಮ ಇಂದ್ರಿಯಾತ್ಮ–
ಭೂತಾತ್ಮ ದೇವಾತ್ಮ ಪರಮಾತ್ಮರೆನಿಸಿಕೊಂಡು,
ಪ್ರಾಣಾದಿ ವಿಷಯಂಗಳಂ ಕೂಡಿಕೊಂಡು,
ಜಡಕೃತಿಗಳಂ ಕಲ್ಪಿಸಿ,
ನಾನಾ ಯೋನಿ ಪ್ರಾಪ್ತವಾಗುತ್ತಿರ್ಪ
ಲೋಕಾದಿ ಲೋಕಂಗಳೊಳು ತೊಳಲಿ ಬಳಲಿ
ತನ್ನ ಮೊದಲ ಕೂಡುವ ಪ್ರಕಾರಮಂ ಬಯಸಿ.
ನಾನಾ ಪಥದಿಂದ ಅರಸಿ ಹರಿಯುತ್ತಿಪ್ಪರಖಿಳ ಜೀವಿಗಳೆಲ್ಲರು......
..................ಗುಹೇಶ್ವರಾ !"

ಮೊದಲೆರಡು ವಚನಗಳಲ್ಲಿ ಸಮಷ್ಟಿ ಸೃಷ್ಟಿಯ ಉತ್ಪತ್ತಿ ನಿರೂಪಿತವಾಗಿದೆ. ಮೂರನೆಯ ವಚನದಲ್ಲಿ ವ್ಯಷ್ಟಿರೂಪಾದ ವ್ಯಕ್ತಿತತ್ತ್ವೋದಯ ನಿರೂಪಿತವಾಗಿದೆ.

ಶಕ್ತಿವಿಶಿಷ್ಟವಾದ ಆ ಶಿವಾದ್ವೈತವೆ ತನ್ನ ಆ ವಿಮರ್ಶಾತ್ಮಕ ಶಕ್ತಿಯ ಸ್ಪಂದನ ಲೀಲೆಯಿಂದ ಅಂಗ–ಲಿಂಗವೆಂದೆರಡಾಗಿ ಪೂಜಕ ಪೂಜ್ಯಭಾವವನ್ನು ತಳೆಯುವುದು.

ಮುಂದೆ ಅಂಗಸ್ಥಲಗಳು ೪೪, ಲಿಂಗಸ್ಥಲಗಳು ೫೭ ಆಗುವುವು. ಆಗಿ ೧೦೧ ಆಗುವವು. ಮರಳಿ ಒಂದರೊಳಗೆ ಇನ್ನೊಂದು ಸೇರಿ ಅಂದರೆ ಅಂಗ–ಲಿಂಗರು ಸಮರಸವಾಗಿ 'ಆ ಒಂದೇ ಒಂದಾಗುವುದು'. ಆ ಒಂದೇ ಒಂದಾದ ಶೂನ್ಯಲಿಂಗವೇ ಸಮಷ್ಟಿಯಲ್ಲಿ ಶಿವ ಜೀವ ಜಗತ್ತಾಗಿ, ವ್ಯಷ್ಟಿಯಲ್ಲಿ ಗುರು–ಲಿಂಗ–ಜಂಗಮವಾಗಿ ತ್ರಿತತ್ತ್ವವಾಗುವುದು. ವಾಸ್ತವ ವಾಗಿ ಇವು ವೇದಾತೀತವಾಗಿ, ವಿಭುವಾಗಿ, ಪ್ರಾದೇಶಿಕವೂ ಆಗಿ ಭಕ್ತರ ಭಕ್ತಿಗೆ ಸಾಧ್ಯ ವಾಗುವವು. ಈ ಚತುರ್ವಿಧಕ್ಕೂ ದೇಹ(ಅಂಗ)ವೆ ಆಧಾರ. ಸಮಷ್ಟಿದೇಹವೂ ಪಂಚಭೂತಗಳು ಸೂರ್ಯಚಂದ್ರ ಆತ್ಮರು ಸೇರಿ ಅಷ್ಟ ವಿಗ್ರಹ(ಮೂರ್ತಿ)ವುಳ್ಳದಾಗಿದೆ. ವ್ಯಷ್ಟಿ ಅಂದರೆ ವ್ಯಕ್ತಿನಿಷ್ಠದೇಹವೂ ಅಷ್ಟಾಂಗಗಳುಳ್ಳದಾಗಿದೆ. ಜೊತೆಗೆ ಪ್ರಕೃತಿ ರೂಪ ಮಾಯೆಯೂ ಇದೆ. ಮಾಯೆಯಿಂದಾಗಿ ಸತ್ವ ರಜ ತಮವೆಂಬ ಗುಣತ್ರಯು ಗಳಿರುತ್ತವೆ. ಗುಣಭೇದಗಳಿಂದ ಆತ್ಮರು ಅನೇಕರೆನಿಸಿದ್ದಾರೆ. ಇವರು ಪ್ರಾಣ ಪಂಚಕ ವಿಷಯಪಂಚಕ ದಶೇಂದ್ರಿಯಗಳಿಂದ ಕೂಡಿರುತ್ತಾರೆ. ಪ್ರಕೃತಿ ಸಂಗದಿಂದ ಜಡರೆನಿಸಿ ಜಡಕರ್ಮಗಳನ್ನೆಸಗಿ ಆ ಆ ಕರ್ಮಾನುಸಾರವಾಗಿ ನಾನಾಯೋನಿಗಳಲ್ಲಿ ಹುಟ್ಟಿ ಬಂದು, ಕರ್ಮಗಳಿಗೆ ತಕ್ಕ ಲೋಕಗಳನ್ನು ಪಡೆದು ತೊಳಲಿ ಬಳಲುತ್ತಿರುವಾಗ ತತ್ತ್ವ ದತ್ತ ಸತ್ಯದತ್ತ ಮನ ಹರಿಯುತ್ತದೆ. ಹಲವು ಹೊಲಬುಗಳಲ್ಲಿ ಹೋಗಿ ಬೆದಕು ವಂತಾಗುತ್ತದೆ; ಆಗುತ್ತಿದೆ. ಇದು ಇಲ್ಲಿನ ಎಲ್ಲ ಜೀವರಿಗುಂಟಾಗುವ ಅವಸ್ಥೆ.

ವಿವಿಧ ಮಾರ್ಗಗಳಲ್ಲಿ ವೀರಶೈವಮಾರ್ಗವೆ ಉಚಿತ ಮತ್ತು ಉಪಯುಕ್ತ. ವೀರಶೈವಪಥದಲ್ಲಿ ತತ್ತ್ವಸಮನ್ವಯವಿದೆ. ಮುನ್ನಡೆಯಲು ಸಾಧನಗಳಾದ ಮೂವ ತ್ತಾರು ತತ್ತ್ವಗಳ ಸತ್ಯತೆಯನ್ನು ಕಾಣುವ, ಕಂಡು ಅವನ್ನು ಆಧರಿಸಿ ಮೇಲೇರುವ ಅಥವಾ ತತ್‌ಸ್ವರೂಪವನ್ನು ತಳೆವ ನೇರ ಹೊಲಬಿದೆ. ಅಂಗತತ್ತ್ವ ಲಿಂಗತತ್ತ್ವಗಳು ಸಮೀಕರಣಕ್ರಿಯೆಯಲ್ಲಿ ಸಮೀಚೀನವಾದ ಸೌಲಭ್ಯವಿದೆ. ಅಂಗಸತಿ ಲಿಂಗಪತಿಯ ಕೈವಿಡಿವ, ಕೈವಿಡಿದು ಬಾಳಿ ಬದುಕುವ, ಬದುಕಿ ಬೆಳಗುವ ಸದವಕಾಶವಿದೆ. ಅಂಗನು ತನ್ನ ಭಕ್ತಿಭಾವದಿಂದ ಲಿಂಗಶಕ್ತಿಯನ್ನು ಲಿಂಗಕಳೆಯನ್ನು ಲಿಂಗಪ್ರಸಾದವನ್ನು ಕೊನೆಗೆ ಲಿಂಗಸ್ವರೂಪವನ್ನು ಪಡೆವ ಷಟ್‌ಸ್ಥಲ ಮಾರ್ಗವಿದೆ. ಮುನ್ನಡೆಯಲು ದೃಕ್ಕ್ರಿಯೆಗಳ ಆಶ್ರಯವಿದೆ; ಅನನ್ಯ ಸ್ವಾತಂತ್ರ್ಯವಿದೆ. ಗುರು – ಲಿಂಗ – ಜಂಗಮರ ಅಪ್ರತಿಮ ಅನುಗ್ರಹವಿದೆ.

ವೀರಶೈವಮತದಲ್ಲಿ ಜೀವನ ಸಂಕೋಚಕಾರಣಕಾರ್ಯಗಳನ್ನೆಲ್ಲ ಕಳಚಿಹಾಕಿ, ಕಳೆಗೂಡಿ ವಿಕಾಸವಾದಕ್ಕೆ ಬೇಕಾದ ಮತ್ತು ಲಿಂಗಪ್ರಕಾಶಪ್ರಾಪ್ತಿಗೆ ಅನುಕೂಲವಾದ ನಿರ್ಣಯಾತ್ಮಕ ಸಾಹಿತ್ಯವನ್ನು ಸಂಪಾದಿಸಿ ಸಕಲ ತತ್ತ್ವಗಳನ್ನು ಸಮವೇಧಿಸಿಕೊಳ್ಳುವಿಕೆ ಸಿದ್ಧವಾಗಿದೆ. ಸಕೀಲ ಸಾಹಿತ್ಯವಿದೆ.

ಮೂರು ಮಲಂಗಳ ತೊಳೆದು, ಮೂವ-
ತ್ತಾರು ತತ್ತ್ವಂಗಳ ಮರ್ಮವ ತಿಳಿದು,

ಮೂರಯ್ದು ಮದಗಳ ಕಳೆದು, ಪೂರ್ಣ-
ತಾರಕ ಬ್ರಹ್ಮದ ಪ್ರಭೆಯೊಳು ಸುಳಿದು,
ತನ್ನ ತಾನರಿದೊಡೆ ಮುಕ್ತ."

ಎಂದು ಸರ್ಪಭೂಷಣ ಶಿವಯೋಗಿಗಳು ಸ್ವಾನುಭವದಿಂದ ಇಂತು ಒರೆದಿದ್ದಾರೆ: ತ್ರಿವಿಧ ತನುಶುದ್ಧಿ ಮೊದಲು, ತತ್ತ್ವಗಳಿಂದಾದ ತನು ಶುದ್ಧಿಯಿಲ್ಲದೆ ಏನೂ ಆಗದು. ಬಳಿಕ ಮೂವತ್ತಾರು ತತ್ತ್ವಗಳ ತಿರುಳ (ರಹಸ್ಯ)ನ್ನು ಅರಿಯಬೇಕು. ತತ್ತ್ವಜ್ಞಾನ ಅಗತ್ಯ. ತಪ್ಪು ದಾರಿಯಲ್ಲಿ ನಡೆವುದನ್ನು ಬಿಡಲು ಅನುಕೂಲ. ಮಲಜನ್ಯವಾಗುವ ಮದಗಳೆಂಟನ್ನು ಕಳೆಯುವ ಶಕ್ತಿಯುಂಟಾಗುತ್ತದೆ. ತತ್ತ್ವಜ್ಞಾನಾನುಷ್ಠಾನದಿಂದ ತಾರಕಬ್ರಹ್ಮಪ್ರಭೆಯಲ್ಲಿ ಸುಳಿದು ತನ್ನತಾನರಿವ ಸಾಮರ್ಥ್ಯವುಂಟಾಗುತ್ತದೆ. ತನ್ನ ತಾನರಿವುದೆ ಮುಕ್ತಿ. ತಾರಕಬ್ರಹ್ಮವೆಂದರೆ ಭವದಿಂದ ದಾಟಿಸುವ, ದಾಟಿಸಿ ರಕ್ಷಿಸುವ ಪ್ರಾಸಾದಿಕ ಲಿಂಗಚೈತನ್ಯ. ಓಂಕಾರಕ್ಕೆ ತಾರಕಮಂತ್ರವೆಂದು ಹೆಸರು. ಓಂಕಾರ ಸ್ವರೂಪ ಮಹಾಲಿಂಗವೆಂತಲೂ ಅರ್ಥವಾಗುತ್ತದೆ. ಮಹಾಲಿಂಗಪ್ರಭೆ ಅದೊಂದು ಮಹಾಪ್ರಭೆ. ಅದೇ ಸ್ವಯಂಜ್ಯೋತಿ. ಅದು ತತ್ತ್ವಜ್ಞಾನದಿಂದ ಅಳವಡುತ್ತದೆ. ಆ ಸ್ವಯಪ್ರಕಾಶದಲ್ಲಿ ತನ್ನತನವೆಂಬ ಕುಸುಮದ ವಿಕಾಸವಾಗುತ್ತದೆ. ಬೀಜದಂತಿರುವ ತನ್ನತನ ಬೆಳೆದು ಭೂಜವಾಗಿ ಹಸಿರು–ಹೂವುಗಳಿಂದ ತಂಪು–ಕಂಪುಗಳಿಂದ ಪರಿಶೋಭಿಸುತ್ತದೆ.

ಸ್ವಸ್ವರೂಪದ ಸಂದರ್ಶನಕ್ಕೆ ಸಾಕ್ಷಾತ್ಕಾರಕ್ಕೆ ತತ್ತ್ವಪಥದಲ್ಲಿಯೇ ಸಾಗಬೇಕು. ಸ್ವರೂಪದ ಸಾಕಾರರೂಪಗಳೆ ತತ್ತ್ವಗಳು. ಸಾಕಾರವಿಡಿದು ನಡೆದು ನಿರಾಕಾರದ ನಿಲವಿಗೇರಬೇಕು. ಪೃಥಿವ್ಯಾದಿ ಎಲ್ಲ ತತ್ತ್ವಗಳನ್ನು ತನ್ನಲ್ಲಿ ತಿಳಿಗೊಳಿಸಿ ಅಳವಡಿಸಿ ಕೊಳ್ಳುವುದೆ ಅಂದರೆ ಅವುಗಳ ಗುಣಕ್ರಿಯೆಗಳನ್ನು ಮೈಗೂಡಿಸಿಕೊಳ್ಳುವುದೆ ತತ್ತ್ವೋಪಾಸನಧ್ಯೇಯ. ನಿರಸನಮಾರ್ಗದಿಂದ ಬೇಡಾದ ಪೂರ್ವಾಶ್ರಯದೋಷಗಳನ್ನು ಪರಿಹರಿಸಿ ಬೇಕಾದ ಉತ್ತಮಗುಣಧರ್ಮಗಳನ್ನು ಅಳವಡಿಸಿಕೊಳ್ಳುವುದೆ ತಾತ್ತ್ವಿಕ ಉಪಾಯ. ಮತ್ತು ಬಿಡಿ ಬಿಡಿಯಾದವುಗಳನ್ನು ಇಡಿಯಾಗಿಸಿಕೊಳ್ಳುವುದೂ ಮೂಲ ಉದ್ದೇಶ. ಹಾಲನ್ನು ಹೆಪ್ಪಿಟ್ಟು ಕಡೆದು ತಿರುಳಾದ ಬೆಣ್ಣೆಯನ್ನು ತೆಗೆವಂತೆ, ತತ್ತ್ವ ಚಿಂತನ ಮಂಥನಗಳಿಂದ ತನ್ನತನವನ್ನು ತಳೆಯಬೇಕು. ತಾತ್ತ್ವಿಕಾಚರಣೆಯೆ ಅಜಡ ಕ್ರಿಯೆ, ಆತ್ಮೀಯಕ್ರಿಯೆ. ತಾತ್ತ್ವಿಕವಿಚಾರವೆ ಸಮ್ಯಗ್‌ಜ್ಞಾನ, ಶಾಶ್ವತಜ್ಞಾನ: ಸ್ವಯಜ್ಞಾನವೂ ಅಹುದು.

ವೀರಶೈವತತ್ತ್ವ ಶೋಧನೆಯಲ್ಲಿ ಅರೆ ಕೊರೆಯಿಲ್ಲ. ಮೂವತ್ತಾರನ್ನು ಕಂಡು ಹಿಡಿದು ಒಪ್ಪಿರುವಲ್ಲಿ ಒಂದು ಸಂ ತಪೂ ಇದೆ. ಮೂರು ಆರಾಗುವ, ಆರು ಮೂರಾಗುವ ಸಂಕೇತದ ಜೊತೆಗೆ ಆರು ಆರಾರಂತೆ ಮೂವತ್ತಾರು ಆಗುವ

ತಾತ್ತ್ವಿಕಸಂಕೇತವೂ ಇದೆ. ಅಂಗಸ್ಥಲತತ್ತ್ವಗಳು ಮೂವತ್ತಾರು; ಲಿಂಗಸ್ಥಲ ತತ್ತ್ವಗಳು ಮೂವತ್ತಾರು. ಅವು ಹೀಗಿವೆ :

ಆಚಾರಾಂಗ, ಗೌರವಾಂಗ, ಶಿವಾಂಗ, ಚರಾಂಗ, ಪ್ರಸಾದಾಂಗ, ಮಹದಂಗ-ಇವಾರು ಭಕ್ತಾಂಗಸ್ಥಲತತ್ತ್ವಗಳು.

ಆಚಾರನಿಷ್ಠೆ, ಗುರುನಿಷ್ಠೆ, ಲಿಂಗನಿಷ್ಠೆ, ಚರನಿಷ್ಠೆ, ಪ್ರಸಾದನಿಷ್ಠೆ, ಮಹನ್ನಿಷ್ಠೆ-ಇವಾರು ಮಾಹೇಶ್ವರಾಂಗಸ್ಥಲತತ್ತ್ವಗಳು.

ಅಚಾರಾವಧಾನಿ, ಗೌರವಾವಧಾನಿ, ಲಿಂಗಾವಧಾನಿ, ಚರಾವಧಾನಿ,ಪ್ರಸಾದಾವಧಾನಿ, ಮಹದವಧಾನಿ–ಇವಾರು ಪ್ರಸಾದಿಸ್ಥಲತತ್ತ್ವಗಳು.

ಸಾಧ್ಯ, ವೇದ್ಯ, ಭೇದ್ಯ, ಯೋಗ್ಯ, ಸನ್ನಿಹಿತ, ಮಹಾನುಭಾವಿ–ಇವಾರು ಪ್ರಾಣಲಿಂಗಿಸ್ಥಲತತ್ತ್ವಗಳು.

ಆಯತ, ಸ್ವಾಯತ, ಸನ್ನಿಹಿತ, ಕಳಾಗ್ರಾಹಕ, ಮನೋಮಗ್ನತೆ, ಘನಸಮರಸ–ಇವಾರು ಶರಣಾಂಗಸ್ಥಲತತ್ತ್ವಗಳು.

ಆಚಾರತೃಪ್ತಿ, ಗುರುತೃಪ್ತಿ, ಲಿಂಗತೃಪ್ತಿ, ಪ್ರಸಾದತೃಪ್ತಿ, ಮಹತ್‌ತೃಪ್ತಿ–ಇವಾರು ಐಕ್ಯಾಂಗಸ್ಥಲತತ್ತ್ವಗಳು.

ಕ್ರಿಯಾ, ಮಂತ್ರ, ವೇದ, ಯಜನ, ಈಳನ, ನಿರೀಕ್ಷಣ–ಇವಾರು ಆಚಾರಲಿಂಗ ಸ್ಥಲತತ್ತ್ವಗಳು.

ಕ್ರಿಯಾದೀಕ್ಷೆ, ಮಂತ್ರದೀಕ್ಷೆ, ವೇಧದೀಕ್ಷೆ, ಬೋಧದೀಕ್ಷೆ, ಪ್ರಸನ್ನದೀಕ್ಷೆ, ನಿರ್ವಾಣ ದೀಕ್ಷೆ–ಇವಾರು ಗುರುಲಿಂಗಸ್ಥಲತತ್ತ್ವಗಳು.

ಕರಸ್ಥಳ, ನಯನಸ್ಥಳ, ಹೃದಯಸ್ಥಳ, ಮಂತ್ರಸ್ಥಳ, ತ್ರಿಕೂಟಸ್ಥಳ, ಲಯಳಣಸ್ಥಳ–ಇವಾರು ಶಿವಲಿಂಗಸ್ಥಲತತ್ತ್ವಗಳು.

ಸ್ವಯ, ಚರ, ಪರ, ನಿರುಪಾಧಿಕ, ಪರಿಪೂರ್ಣ, ಪರಮಾನಂದ–ಇವಾರು ಚರಲಿಂಗ ಸ್ಥಲತತ್ತ್ವಗಳು.

ಇಂದ್ರಿಯಾನಂದ, ಪ್ರಾಣಾನಂದ, ಜ್ಞಾನಾನಂದ, ಭಾವಾನಂದ, ತುರ್ಯಾನಂದ, ಮಹಾನಂದ–ಇವಾರು ಪ್ರಸಾದಲಿಂಗಸ್ಥಲತತ್ತ್ವಗಳು.

ಪಿಂಡಾಕಾಶ, ಬಿಂದ್ವಾಕಾಶ, ಮಹದಾಕಾಶ, ಭಾವಗಮ್ಯ, ಸರ್ವತತ್ತ್ವಾಶ್ರಯ, ಪರಿಪೂರ್ಣಪ್ರಕಾಶ–ಇವಾರು ಮಹಾಲಿಂಗಸ್ಥಲತತ್ತ್ವಗಳು.

ಈ ೩೬ ಸ್ಥಲತತ್ತ್ವಗಳು ವೀರಶೈವ ಪ್ರತಿವ್ಯಕ್ತಿನಿಷ್ಠಗಳು; ಷಟ್‌ಸ್ಥಲನಿಷ್ಠಗಳು. ಇವುಗಳ ಅನುಷ್ಠಾನದಿಂದ ಅಂಗನು ತತ್ತ್ವವೇ ಆಗುತ್ತಾನೆ. ಮಹತ್‌ತೃಪ್ತನಾಗುವಲ್ಲಿಗೆ ಅಂಗನ ಅಂಗತ್ವ ಲಿಂಗವಾಗುತ್ತದೆ. ತಾತ್ತ್ವಿಕ ಚೈತನ್ಯವಾಗುತ್ತದೆ. ಸರ್ವತತ್ತ್ವಾಶ್ರಯವಾಗುತ್ತದೆ. ಪರಿಪೂರ್ಣ ಪ್ರಕಾಶಮಯವಾಗುತ್ತದೆ.

ಆಚಾರ ಆದಿ ಅಂಗಸ್ಥಲ. ಇದು ಅಳವಟ್ಟಲ್ಲಿ ಆಚಾರಲಿಂಗವಾಗಿ ಪರಿಣಮಿಸಿ ಆಚಾರ ಚೇತನತ್ವ, ಆಚಾರಕಳಾತ್ವಗಳು ಅಳವಟ್ಟು ಆಚಂದ್ರಾರ್ಕವಾಗಿ ಆದರ್ಶವನ್ನು ಉಳಿಸುತ್ತಾನೆ. ಎರಡನೆಯದೇ ಗೌರಾಂಗ. ಇದು ಆಚಾರಾಂಗತ್ವ ಅಳವಡದೆ ಬಾರದು. ಇದು ಕೇವಲ ದೀಕ್ಷೆಯಿಂದ ಬರುವುದಿಲ್ಲ. ಪ್ರಥಮದೀಕ್ಷೆಯಿಂದ ಭಕ್ತತ್ವ ಬರುತ್ತದೆ. ಮಾಹೇಶತ್ವ ಪ್ರಸಾದಿತ್ವಗಳಿಗೆ ಬೇರೆ ಬೇರೆ ದೀಕ್ಷೆಗಳಿವೆ. ಇವನ್ನು ಪಡೆವ ಹಕ್ಕು ಎಲ್ಲರಿಗಿದ್ದರೂ ಸಾಮಾಜಿಕ ಮಾಹೇಶತ್ವವನ್ನು ಪಡೆಯಲು ಗುರುದೇವನಿಂದ ಅರ್ಹತೆಯನ್ನು (ಅಧಿಕಾರವನ್ನು) ಪಡೆಯಬೇಕಾಗುತ್ತದೆ. ದ್ವಿತೀಯ ದೀಕ್ಷೆಯಿಂದ ತಾತ್ತ್ವಿಕ ಮಾಹೇಶತ್ವ ಮಾತ್ರ ಅಳವಡುತ್ತದೆ. ಇದರಿಂದ ಮಂತ್ರಾನುಷ್ಠಾನ ಅರ್ಹತೆಯೊದಗುತ್ತದಲ್ಲದೆ ಮಂತ್ರೋಪದೇಶ ಅರ್ಹತೆ ಬಾರದು. ಗುರುಸ್ಥಲತತ್ತ್ವದ ಅನುಗ್ರಹಕ್ಕೆ ಒಳಗಾಗಬೇಕಾಗುತ್ತದೆ. ವಿದ್ಯಾರ್ಥಿಗಳಿಗೆಲ್ಲರಿಗೂ ಶಿಕ್ಷಕರಾಗುವ ಹಕ್ಕಿರುತ್ತದೆ. ಆದರೆ ಅವರಷ್ಟಕ್ಕೆ ಅವರೇ ಆಗುವ ಹಕ್ಕಿರದು ಪ್ರಾಯೋಗಿಕವಾಗಿ ! ಎಲ್ಲರೂ ಆಗಲಾರರು. ಹಲವರಾದರೂ 'ಪರ್ಮಿಟ್' ಇಲ್ಲದೆ ಆಗಲಾರರು. ಆಗುವುದಾದರೆ ಅದು ಅಧಿಕೃತವಾಗಿರದು. ಆಚಾರಾಂಗ ಆಚಾರನಿಷ್ಠವಾದರೆ, ಗೌರಾಂಗ ವಿಚಾರನಿಷ್ಠ. ಗೌರತತ್ತ್ವದಲ್ಲಿ ನಿಷ್ಠೆ ಕರಿಗೊಂಡಿರಬೇಕು ವೈಚಾರಿಕವಾಗಿ ! ಆಚಾರಕ್ಕೆ ಶ್ರದ್ಧೆ ಅಗತ್ಯ; ವಿಚಾರಕ್ಕೆ ನಿಷ್ಠೆ ಅಗತ್ಯ. ಆಚಾರಾಂಗದಲ್ಲಿ ಸದ್ವಾಸನೆ ಸಮನಿಸಿದರೆ ಗೌರಾಂಗದಲ್ಲಿ ಚಿದ್ರಸ ಚಿಮ್ಮುತ್ತದೆ. ಇದಾದ ಬಳಿಕ ಮೂರನೆಯದೆ ಶಿವಾಂಗ. ಸಚ್ಚಿತ್‌ಗಳು ಅಳವಟ್ಟ ಬಳಿಕ ಸಮನಿಸುತ್ತದೆ. ಇದಕ್ಕೆ ಅವಧಾನ ಸುಖರೂಪ ಸಮನಿಸುತ್ತದೆ. ನಾಲ್ಕನೆಯದೆ ಚರಾಂಗ. ಇದು ಹಿಂದಿನ ತ್ರಿವಿಧಾಂಗಗಳು ಸಂಗಡಿಸಿದ ಬಳಿಕ ಉಂಟಾಗುವ ಅಂಗ. ಸದ್ವಾಸನೆ–ಚಿದ್ರಸ–ಸುಖರೂಪಗಳಲ್ಲಿ ಚರಿಸುವಶಕ್ತಿ ಸಮನಿಸುತ್ತದೆ. ಇದಕ್ಕೆ ತಕ್ಕ ಅನುಭವ ಬೇಕು. ಇದು ಗತಿಪ್ರಧಾನವಾದ ಅಂಗ. ಇದರಿಂದ ಎಲ್ಲೆಲ್ಲಿಯೂ ಸುಸ್ಪರ್ಶತ್ವವುಂಟಾಗುತ್ತದೆ. ಅನಂತರ ಅಯ್ದನೆಯದೆ ಪ್ರಸಾದಾಂಗ. ಸುಸ್ಪರ್ಶತ್ವ ಬಾರದೆ ಸುಶಬ್ದ ಪ್ರಸಾದವುಂಟಾಗದು; ಹೃದಯಾಕಾಶದಲ್ಲಿ ಪ್ರಸನ್ನತೆ ಪ್ರಾಪ್ತಿಸದು, ಪ್ರಸಾದಾಂಗವೆನಿಸದು. ಆರನೆಯದೆ ಮಹದಂಗ. ಹಿಂದೆ ಹೇಳಿದವುಗಳೆಲ್ಲ ಅಳವಟ್ಟರೆ ತತ್ತ್ವೈಕ್ಯತೆ ತನಗುಂಟಾಗುತ್ತದೆ. ತತ್ತ್ವೈಕ್ಯತೆ ಅಳವಟ್ಟಲ್ಲಿ ಮಹಾಲಿಂಗತ್ವವುಂಟಾಗುತ್ತದೆ. ಇದರಂತೆ ಇನ್ನುಳಿದ ಅಂಗ ಲಿಂಗಗಳ ಬಗೆಗೆ ಭಾವಿಸಬೇಕು.

ಒಟ್ಟಿನಲ್ಲಿ, ಶಿವಾದಿ ಪೃಥಿವ್ಯಂತ ಮೂವತ್ತಾರು ತತ್ತ್ವಗಳು ಸೃಷ್ಟಿಕಾರಣಗಳು; ಆಚಾರಾಂಗಾದಿ ಪರಿಪೂರ್ಣಪ್ರಕಾಶಾಂತ ಮೂವತ್ತಾರು ತತ್ತ್ವಗಳು ಸುಸ್ಥಿತಿಕಾರಕಗಳು, ತಲ್ಲೀನಕಾರಕಗಳು. ಈ ಎಲ್ಲ ತತ್ತ್ವಗಳು ಅನುಷ್ಠಾನನಿರತ ಅಂಗನಲ್ಲಿ ಉಂಟು ಮಾಡುವ ಸುಸ್ಥಿತಿಗಳನ್ನು ಸಹೃದಯರು ಗಮನಿಸಬೇಕು. ಇವು ಇವುಗಳ ಹೆಸರು ಗಳಲ್ಲಿಯೆ ವೆಗ್ಗಳಿಸಿವೆ.

ಹೃದಯಮುಕುರದೊಳಗಿನ ಸುಂದರಜೀವನಚಿತ್ರ ವೀರಶೈವತತ್ತ್ವ. ಅದು ಜೀವನಕ್ಕೆ ಅಭಿನ್ನವಾಗಿದೆ. ಜೀವನದಲ್ಲಿ ಅನುಷ್ಠಿಸಲು ಅನುಕೂಲವಾದ ಆಚಾರ-ವಿಚಾರ ಗಳು, ಭಕ್ತಿ-ಶಕ್ತಿಗಳು ಇದರಲ್ಲಿವೆ. ಜೀವನದ ನೈಸರ್ಗಿಕಕ್ರಮಗಳನ್ನೆ ಕಂಡು ಹಿಡಿದು ಅವುಗಳಿಗೆ ನೈಜವಾದ ನಿವೃತ್ತಿಪರವಾದ ನಿಷ್ಪತ್ತಿಪರವಾದ ಉದಾತ್ತತೆಯನ್ನು ಯೋಜಿಸಿದ ವೈಶಿಷ್ಟ್ಯ ವೀರಶೈವಕ್ಕಿದೆ. ಬಾಳೆಲ್ಲ ಬೆಳುವಾಗಿ ತಿಳಿಯಾಗಿ ಮಾರ್ಪೊಳೆವ. ಮಾರ್ಪೊಳಿಸುವ ಶಕ್ತಿ ಇದಕ್ಕಿದೆ. ಶ್ರದ್ಧೆ ಶೀಲಗಳನ್ನು ಕುದುರಿಸುವ, ಮನ ಬುದ್ಧಿ ಭಾವಗಳನ್ನು ನಿಶ್ಚಲಗೊಳಿಸಿ ನಿರ್ಣಯ (ಸಿದ್ಧಾಂತ)ಕ್ಕೆ ನಿಲುಕಿಸುವ ಶಕ್ತಿ ಇದಕ್ಕಿದೆ. ಜೀವನ ಸಾರ್ಥಕ್ಯವನ್ನುಂಟು ಮಾಡಿ, ಇದಕ್ಕೆ ಅನುಗುಣವಾದ ವಿಶ್ವವಿಶಾಲದರ್ಶನವನ್ನು ಮಾಡಿಸುವ ಸಾಮರ್ಥ್ಯ ಇದಕ್ಕಿದೆ. ಸತ್ಯಕ್ಕೆ ಹೊರತಾದುದು ಯಾವುದೂ ಇಲ್ಲೆಂಬು ದನ್ನು, ಸತ್ತೆ ಎಲ್ಲದರ ಸೊತ್ತೆಂಬುದನ್ನು ನಿರ್ಣಯಿಸಿದೆ ಈ ಶಿವಾದ್ವೈತ ಸಿದ್ಧಾಂತ. ವ್ಯಕ್ತಿನಿಷ್ಠ ಆತ್ಮ, ವ್ಯಕ್ತಿನಿಷ್ಠ ಜೀವನಗಳನ್ನು ವಿಶ್ವನಿಷ್ಠಆತ್ಮವು ವಿಶ್ವನಿಷ್ಠ ಜೀವನ ವಾಗುವಂತೆ ಮಾಡಿ ಬೆಳ್ಳಂಬೆಳಗಿಸುವ ಬಲ್ಮೆಯಿದೆ. ಈ ವಿಶ್ವರೂಪಕ್ಕೆ ವಿಶ್ವ ಚೇತನವೇ ಸತ್ಯ, ಶಾಶ್ವತ ಸ್ವರೂಪ. ಈ ವಿಶ್ವಜೀವನಕ್ಕೂ ಸತ್ಯ ಶಾಶ್ವತ ನಿಮಿತ್ತ ಎಂಬುದೇ ವೀರಶೈವ ತತ್ತ್ವದ ಆಶಯ, ಧ್ಯೇಯ.

> "ಚಿದಾತ್ಮನಿ ಶಿವೇ ನ್ಯಸ್ತಂ ಜಗದೇತಚ್ಚರಾಚರಂ
> ದೃಶ್ಯತೇ ತನ್ಮಯಂ ಸರ್ವಮಗ್ನೌ ಕಾಷ್ಠಾದಿಕಂ ಯಥಾ ।
> ನ ಭಾತಿ ಪೃಥ್ವೀ ನ ಜಲಂ ನ ತೇಜೋ ನೈವ ಮಾರುತಃ
> ನಾಕಾಶೋ ನಾಽಪರಂ ತತ್ತ್ವಂ ಶಿವೇ ದೃಷ್ಟೇ ಚಿದಾತ್ಮನಿ ॥
> ಜ್ಯೋತಿರ್ಲಿಂಗೇ ಚಿದಾಕಾರೇ ಜ್ವಲತ್ಯಂತರ್ ನಿರಂತರಂ
> ವಿಲೀನಂ ನಿಖಿಲಂ ತತ್ತ್ವಂ ಪಶ್ಯನ್ ಯೋಗೀನ ಲಿಪ್ಯತೇ ।"

ಸಿದ್ಧಾಂತ ಶಿಖಾಮಣಿ.

ಸೃಷ್ಟಿಕಾರಣವಾದ ತತ್ತ್ವಗುಣಕ್ರಿಯೆಗಳಿಂದ ಭಿನ್ನ ಭಿನ್ನವಾಗಿ ಸ್ಥೂಲ ಸ್ಥೂಲ ವಾಗಿ ಸೃಷ್ಟಿಸಿದರೆ, ಸ್ಥಿತಿಕಾರಕವಾದ ವೀರಶೈವತತ್ತ್ವ ಸೂಕ್ಷ್ಮಸೂಕ್ಷ್ಮಕ್ಕೊಯ್ದು ಚಿತ್ಪ್ರಕಾಶವನ್ನಳವಡಿಸಿ ಅಭಿನ್ನತೆಯನ್ನುಂಟು ಮಾಡುತ್ತದೆ. ಚಿದಾತ್ಮವೆ ಶಿವ. ಅದು ಆಂತರಂಗಿಕ. ಅದರಲ್ಲಿ ಚರಾಚರಜಗತ್ತು ನ್ಯಸ್ತವಾಗಿ ಚಿನ್ಮಯತ್ವವನ್ನು ತಳೆಯುತ್ತದೆ.

ನಿರಂತರತೆಯನ್ನು ತಾಳುತ್ತದೆ. ಬಿತ್ತರಗೊಂಡ ಎಲ್ಲ (ಮೂವತ್ತಾರು) ತತ್ತ್ವಗಳು ಆ ಚಿದಾತ್ಮಸ್ವರೂಪ ಶಿವನಲ್ಲಿ ವಿಲೀನಗೊಳ್ಳುವವು; ದರ್ಶನತೆಯನ್ನುಂಟುಮಾಡುವವು.

ಮೂವತ್ತಾರು ತತ್ತ್ವೋದಯ :

ಶಿವಾದಿ ಪೃಥ್ವ್ಯಂತ ೩೬ ತತ್ತ್ವಗಳ ಉದಯಕ್ಕೆ ಆಧಾರವಾದುದು ಶೂನ್ಯ. ಆ ಶೂನ್ಯಕ್ಕೆ ಮಾಧ್ಯಮ ನಿಶ್ಶೂನ್ಯ. ಆ ನಿಶ್ಶೂನ್ಯ ಮೂಲಾಧಾರವಾದುದು ಸರ್ವಶೂನ್ಯ ನಿರಾಲಂಬ. ಅದು ಸಹಜ; ಅದಕ್ಕೊಂದು ಆಲಂಬವಸ್ತುವಿಲ್ಲ.

೧. ಸರ್ವಶೂನ್ಯ ನಿರಾಲಂಬ :

ಅಂತರವಿಲ್ಲದಂದು, ಬಾಹ್ಯವಿಲ್ಲದಂದು,
ಅಡಿ ಮುಡಿ ಒಡಲು ಮತ್ತೊಂದೆಡೆ ಏನೂ ಇಲ್ಲದಂದು,
ದಶದಿಕ್ಕುಗಳು, ವಿಶ್ವಪ್ರಪಂಚಗಳು ಏನೂ ಇಲ್ಲದಂದು,
ಸ್ಥಾವರಾತ್ಮಕಂಗಳಿಗೆ ಆಧಾರ ಕರ್ತೃ ಎಂಬ ನಾಮಂಗಳೇನೂ ಇಲ್ಲದಂದು,
ಸರ್ವ ಶೂನ್ಯ ನಿರಾಲಂಬನಾಗಿರ್ದೆಯಲ್ಲ,
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ !

ಆದಿ ಅನಾದಿ ಇಲ್ಲದಂದು,
ಹಮ್ಮು ಬಿಮ್ಮುಗಳಿಲ್ಲದಂದು,
ಸುರಾಳ ನಿರಾಳವಿಲ್ಲದಂದು,
ಶೂನ್ಯ ನಿಶ್ಶೂನ್ಯವಿಲ್ಲದಂದು
ಸಚರಾಚರವೆಲ್ಲ ರಚನೆಗೆ ಬಾರದಂದು
ಗುಹೇಶ್ವರನೊಬ್ಬನೇ ಇದ್ದಿಯಲ್ಲ–ಇಲ್ಲದಂತೆ !

ಶೂನ್ಯಹೃದಯ ನಿಶ್ಶೂನ್ಯವಿಲ್ಲದಂದು,
ಬ್ರಹ್ಮ ವಿಷ್ಣು ಮಹೇಶ್ವರರಿಲ್ಲದಂದು,
ಹದಿನಾಲ್ಕು ಭುವನ ದಿಗ್ವಳಯವಿಲ್ಲದಂದು,
ಕೂಡಲಚೆನ್ನಸಂಗಯ್ಯನೆಂಬ ಹೆಸರು ಮುನ್ನಿಲ್ಲದಂದು.

ಈ ಮೂರು ವಚನಗಳಿಂದ 'ಸರ್ವಶೂನ್ಯ ನಿರಾಲಂಬ' ಎಂಬ ಮೂಲವಸ್ತುವಿನ ಸ್ವರೂಪವನ್ನು ಅರಿಯಬಹುದಾಗಿದೆ. ಮೊದಲಿನ ವಚನದಲ್ಲಿ ತೋಂಟದ ಸಿದ್ಧಲಿಂಗಯತಿಯು ಹೇಳದಿರುವ ಆದಿ ಅನಾದಿ, ಹಮ್ಮು ಬಿಮ್ಮು, ಸುರಾಳ ನಿರಾಳಗಳನ್ನು ಹೇಳುವುದಲ್ಲದೆ ವಿಶೇಷವಾಗಿ ಅದರಿಂದಾದ ನಿಶ್ಶೂನ್ಯ–ಶೂನ್ಯಗಳನ್ನೂ ನಿರೂಪಿಸಿದ್ದಾನೆ ಅಲ್ಲಮ

ಪ್ರಭು. ಇವರಿಬ್ಬರೂ ನೇರವಾಗಿ ಹೇಳದಿರುವ ಬ್ರಹ್ಮ ವಿಷ್ಣು ಮಹೇಶ್ವರರಿಗೂ ಮೊದಲೆಂದು ಚನ್ನಬಸವಣ್ಣ ಹೇಳಿದ್ದಾನೆ. ಇಲ್ಲಿ ಮಹೇಶ್ವರನೆಂದರೆ ಶಿವ; ಮೂವತ್ತಾರು ತತ್ತ್ವಗಳಲ್ಲಿ ಮೊದಲಿನ ತತ್ತ್ವ. ಇದು ಇಲ್ಲದ ಮುನ್ನ, ಇದಕ್ಕೆ ಕಾರಣವಾದ ಶೂನ್ಯ ನಿಶ್ಶೂನ್ಯಗಳಿಲ್ಲದ ಮುನ್ನ ಆ ಸರ್ವಶೂನ್ಯ ನಿರಾಲಂಬವಿದ್ದಿತು.

೨. ನಿಶ್ಶೂನ್ಯ :

ಅದು ನಿರಾಳ, ನಿರಾಕಾರ, ನಿರವಯಲ. ಅದನ್ನೆ ಬಟ್ಟಬಯಲು-ಬಚ್ಚ ಬಯಲು ಎಂದು ಈ ಶರಣರು ಕರೆಯುತ್ತಾರೆ. ಶೂನ್ಯ ರೂಪವಿಲ್ಲದ್ದು ನಿಶ್ಶೂನ್ಯ. ಅಂತೆಯೆ ಅದು ನಿರಾಕಾರ. ನಿರಾಳವೆಂದರೆ ನಿರಾವಿಲ; ಅದಕ್ಕೆ ಯಾವ ಆವಿಲವಿಲ್ಲ, ನೋವಿಲ್ಲ, ಮಲ – ಕಲಕುಗಳಿಲ್ಲ.ಪ್ರಶಾಂತ, ಮಹಂತ; ಅಲ್ಲಿ ಸಂಕಲ್ಪವಾಗಲಿ, ಚಿಂತೆಯಾಗಲಿ ಇಲ್ಲ. ಅದು ಶೂನ್ಯದಂತೆ , ಶೂನ್ಯದನಿತು ವ್ಯಕ್ತವಲ್ಲ. ಶೂನ್ಯ ಸಹಸ್ರಾರದಲ್ಲಿದ್ದರೆ ನಿಶ್ಶೂನ್ಯ ಶಿಖಾಚಕ್ರದಲ್ಲಿರುತ್ತದೆ. ಅಲ್ಲಿಗೇರುವುದೆ ಚರಮಧ್ಯೇಯ. ಅದೇ ಉಪಾದೇಯ ದೇವ. ಅದರಲ್ಲಿ ಏನೊಂದೂ ಇಲ್ಲ. ಅದು ಬೀಜಕ್ಕೆ ಬೀಜ; ಅಂದರೆ ಕಾರಣಕ್ಕೆ ಕಾರಣ, ಮಹಾಕಾರಣ. ನಿತ್ಯಕ್ಕೆ ನಿತ್ಯ, ಮಹಾನಿತ್ಯ. ಪೂರ್ಣಕ್ಕೆ ಪೂರ್ಣ, ಅದೇ ಪರಮ.

> "ವೇದ ದೈವವೆಂದು ನುಡಿವರು; ಶಾಸ್ತ್ರ ದೈವವೆಂದು ನುಡಿವರು.
> ಪುರಾಣ ದೈವವೆಂದು ನುಡಿವರು; ಕಲ್ಲು ದೈವವೆಂದು ನುಡಿವರು.
> ಕಾಷ್ಠ ದೈವವೆಂದು ನುಡಿವರು; ಪಂಚಲೋಹ ದೈವವೆಂದು ನುಡಿವರು.
> ಇವರೆಲ್ಲ ಸಕಲ ಸಂದೇಹವನೆ ಪೂಜಿಸಿ ಸತ್ತು ಹೋದರಲ್ಲಾ !
> ಸಮಸ್ತ ಪ್ರಾಣಿಗಳೆಲ್ಲರು ತಾಯನರಿಯದ ತರ್ಕಿಗಳು;
> ತಂದೆಯನರಿಯದ ಸಂದೇಹಿಗಳು.
> ತನು ಪೃಥ್ವಿಯಿಂದಲಾಯಿತ್ತು; ಮನ ವಾಯುವಿನಿಂದಲಾಯಿತ್ತು.
> ವಾಯುವಾಧಾರದ ಪವನ ಸಂಯೋಗದ ಅನಾಹತ ಚಕ್ರದಿಂದ
> ಮೇಲಣ ಆಜ್ಞಾಚಕ್ರಕ್ಕೇರಿ, ಸಹಸ್ರಾರದಲ್ಲಿ ನಿಂದು
> ಅನಂತಕೋಟಿ ಬ್ರಹ್ಮಾಂಡಗಳ ಮೆಟ್ಟಿ,
> ಕಾಯದ ಕಣ್ಣ ಮುಚ್ಚಿ, ಜ್ಞಾನದ ಕಣ್ದೆರೆದು ನೋಡಲ್ಕೆ
> ಅಲ್ಲಿ ಒಂದು ನಿರಾಕಾರವುಂಟು;
> ಆ ನಿರಾಕಾರದಲ್ಲಿ ನಿಂದು ನಿಶ್ಚಯಿಸಿ ನೋಡಲ್ಕೆ
> ಅಲ್ಲಿ ಒಂದು ನಿಶ್ಶೂನ್ಯವುಂಟು.
> ಆ ನಿಶ್ಶೂನ್ಯದಲ್ಲಿ ನಿಂದು ನಿಶ್ಚಯಿಸಿ ನೋಡಲ್ಕೆ
> ಕತ್ತಲೆಯಿಲ್ಲ, ಬೆಳಗಿಲ್ಲ;
> ಬಚ್ಚ ಬಯಲಲ್ಲದಿಲ್ಲ ಗುಹೇಶ್ವರಾ !"

"ನಿರ್ಮೂಲವಾಯಿತ್ತಾಹಾ ! ನಿರಾಲಂಬವಾಯಿತ್ತಾಹಾ !!
ನಿರಾಕುಳವಾಯಿತ್ತಾಹಾ !!!
ಪುಣ್ಯದ ಫಲ ತೋರಿ ಬಯಲನೆ ಕೂಡಿತ್ತು. ಆ ಬಯಲು ನಿರ್ವಯ
ಲಾಯಿತ್ತು.
ಆ ನಿರ್ವಯಲನುಡಿಗಿ ನಿಜಸುಖಿಯಾದೆನಯ್ಯಾ ನಾನು;
ಸಂಗಯ್ಯನಲ್ಲಿ ನಿಶ್ಶೂನ್ಯವಾಯಿತ್ತಯ್ಯಾ !"

ಎಂದು ಪ್ರಭುದೇವರು ನಿಶ್ಶೂನ್ಯದ ನಿಲವನ್ನು ನಿಶ್ಚಯಿಸಿದ್ದಾರೆ ಮೊದಲ ತಮ್ಮ ವಚನದಲ್ಲಿ. ವೈದಿಕರು ಹೇಳುವಂತೆ ವೇದ ಶಾಸ್ತ್ರಗಳು ದೈವವಲ್ಲ. ಪೌರಾಣಿಕರು ಹೇಳುವಂತೆ ಪುರಾಣಗಳಾಗಲಿ ಕಲ್ಲುಕಾಷ್ಠಾದಿಗಳಾಗಲಿ ಪಂಚಲೋಹಗಳಾಗಲಿ ದೈವವಲ್ಲ. ಹೀಗೆ ಹೇಳುವುದು ತತ್ತ್ವವಲ್ಲ; ಅಂದರೆ ವಾಸ್ತವವಲ್ಲ ಮತ್ತು ಸಿದ್ಧಾಂತವಲ್ಲ; ಅಂದರೆ ನಿಶ್ಚಯವಲ್ಲ. ಇವೆಲ್ಲ ಅವಾಸ್ತವ, ಅನಿಶ್ಚಯ. ಸಂದೇಹ ಕ್ಕಾಸ್ಪದಗಳನ್ನೆ ಅವರೆಲ್ಲ ಆರಾಧಿಸಿದರು; ಅಳಿದು ಹೋದರು. ಸಮಸ್ತರು ತಾಯ (ಮೂಲ)ನರಿಯದ ತನ್ನತನವನರಿಯದ ತಾರ್ಕಿಕರು; ಶಕ್ತಿ ತತ್ತ್ವವನರಿಯದವರು, ಶಿವ(ಶುಭಚೇತನ)ವೆಂಬ ತಂದೆಯನರಿಯದ ಸಂದೇಹಿಗಳು. ಶಕ್ತಿ–ಶಿವರೇ ಸತ್ಯವಾದ ತಾಯಿತಂದೆಗಳು ಜಗತ್ತಿಗೆ ! ಇವರೆ ವೀರಶೈವ ಮತದ ತತ್ತ್ವಗಳಿಗೆ ಮೂಲರಾಗಿದ್ದಾರೆಂಬುದನ್ನು ಗಮನಿಸಬೇಕು. ಅಲ್ಲದೆ ತಾನೆ ಹೊತ್ತ ಪೃಥ್ವಿತತ್ತ್ವದ ತನು, ವಾಯುತತ್ತ್ವದ ಮನಗಳಲ್ಲಿಯೆ ನಿಲ್ಲದೆ ಇವನ್ನು ಸಂಸ್ಕರಿಸಿಕೊಂಡು ಇವುಗಳ ಆಧಾರವಿಡಿದು ಪ್ರಾಣಪವನಸಂಯೋಗವುಳ್ಳ ಅನಾಹತ (ಅನಾಹತಚಕ್ರ ಅಂತರ್ವಾಯು ಮಂಡಲ)ಕ್ಕೇರಿ ಅಲ್ಲಿಂದ ವಿಶುದ್ಧಿ ಆಜ್ಞಾಚಕ್ರಗಳಿಗೇರಿ ನಾದ, ಚೇತನಗ ಳನ್ನಳವಡಿಸಿಕೊಂಡು ಮುಂದೆ ಸಹಸ್ರಾರಕ್ಕೇರಬೇಕು. ಅಲ್ಲಿರುವುದು ಶೂನ್ಯಲಿಂಗ. ಅದರ ಗರ್ಭದಲ್ಲಿ ಇರುವವು ಅನಂತಕೋಟಿ ಬ್ರಹ್ಮಾಂಡಗಳು. ಅವನ್ನೆಲ್ಲ ಗೆಲಿದು, ಕಾಯದ ಕಣ್ಣನ್ನು ಮುಚ್ಚಬೇಕು. ಅಂದರೆ ಕಾಯಭಾವವನ್ನು, ಕಾಯವಾಸನೆಯನ್ನು ಕಳೆಯಬೇಕು. ಇವಿದ್ದರೆ ಜ್ಞಾನದ ಕಣ್ಣು ತೆರೆಯದು. ಅದು ಸ್ವಯಪ್ರಜ್ಞೆ; ಚಿಚ್ಚಕ್ಷು. ಅಂತೆಯೆ ಅದಕ್ಕೆ ಆ ನಿರಾಕಾರವನ್ನು ಕಂಡು ನಿರ್ಣಯಿಸುವ ಶಕ್ತಿ. ಆ ನಿರ್ಣಯವೆ ನಿಶ್ಶೂನ್ಯ. ಅದು ಕತ್ತಲು ಬೆಳಗುಗಳಿಲ್ಲದ 'ಬಚ್ಚಬಯಲು' ! 'ಬಚ್ಚ ಬರಿಯ ಬಯಲು' ಸರ್ವಶೂನ್ಯನಿರಾಲಂಬವಸ್ತು. 'ಬಯಲು'–ಶೂನ್ಯವಸ್ತು. ಆ ಬಚ್ಚಬರಿಯ ಬಯಲು,–ಬಯಲ ಸೇರಿ ಶೂನ್ಯವೆನಿಸಿದೆ. ಈ ಬಯಲು ನಿರ್ವಯ ಲಾಗಿ ನಿಶ್ಶೂನ್ಯವೆನಿಸಿದೆ; ಅದು ಶಿಖಾಶಿಖರಸ್ಥಲಸ್ಥ. ಅಲ್ಲಿಗೇರುವದೇ ನಿಶ್ಶೂನ್ಯತ್ವ. ಅಲ್ಲಿಗೆ ಏರಿಕೆ ಕೊನೆ. ಬಯಲು ಸೃಷ್ಟಿಯ ಮೂಲಸಂಪತ್ತು. ನಿರ್ವಯಲು ನಿಜಸುಖ. ಎಂಬ ವಿವೇಚನೆಯು ಎರಡನೆಯ ವಚನದಲ್ಲಿ ನಿರ್ದಿಷ್ಟವಾಗಿದೆ. ನಿಶ್ಶೂನ್ಯವೆ ಶೂನ್ಯವಾ ಗುತ್ತದೆ.

೩. ಶೂನ್ಯ :

ಬಚ್ಚಬರಿಯ ಬಯಲು, ಬಚ್ಚಬಯಲುಗಳಾದ ಸರ್ವಶೂನ್ಯ – ನಿಶ್ಶೂನ್ಯಗಳೆರಡನ್ನು ನಿರೂಪಿಸಿದ ಬಳಿಕ ಬಯಲು ಎಂದೆನಿಸಿದ ಶೂನ್ಯತತ್ತ್ವದ ನಿರೂಪಣೆ ಕ್ರಮ ಪ್ರಾಪ್ತ. ಒಂದು ನಿರಾಕಾರಾತೀತ, ಇನ್ನೊಂದು ನಿರಾಕಾರ; ಇದು ನಿರಾಕಾರದೊಳಗಿನ ಸಾಕಾರ ಹಾಗೂ ಸಾಕಾರದೊಳಗಿನ ನಿರಾಕಾರವೂ ಅಹುದು. ವೀರಶೈವ ಮತದಲ್ಲಿ ಶೂನ್ಯವೆಂದರೆ ಪೂರ್ಣ; ಏನೆಲ್ಲವನ್ನೂ ಒಳಗೊಂಡ ಸತ್ಯವಸ್ತು, ಒಡಗೂಡಿದ್ದರೂ ಒಡಮೂಡದೆ ಅದರಲ್ಲಿ ಅಡಗಿರುತ್ತದೆ ಈ ವಿಚಿತ್ರವಿಶ್ವ. ಮಯೂರಾಂಡರಸದಲ್ಲಿ ನವಿಲಿನ ಎಲ್ಲ ಬಗೆಯ ಬಣ್ಣಗಳು ಕಣ್ಣುಗಳು ಕಾಯಕರಣೇಂದ್ರಿಯಗಳು ಅಡಗಿರುವಂತೆ, ಅಡಗಿಕಾಣದಿರುವಂತೆ ವಿವಿಧಾಕಾರದ ಜಗತ್ತು ಶೂನ್ಯಬಿಂದುವಿನಲ್ಲಿ ಅಡಗಿರುತ್ತದೆ. ಬೀಜದಲ್ಲಿ ಭೂಜ ಅಡಗಿದಂತಿರುತ್ತದೆ. ಕಾಣದ ಬಗೆಯಲ್ಲಿ ಉಂಟು; ಕಾಣುವ ಬಗೆಯಲ್ಲಿ ಇಲ್ಲ. ವೀರಶೈವದ ಶೂನ್ಯಲಿಂಗ ಪೂಜ್ಯ–ಪೂಜಕತ್ವಕ್ಕೆ ಧರ್ಮ–ಕರ್ಮಗಳಿಗೆ ಒಳಗಾದುದಲ್ಲ.

> "ಅಯ್ಯಾ, ನಿರವಯ ಶೂನ್ಯಲಿಂಗಮೂರ್ತಿಯ ನಿಲುಕಡೆ ಎಂತೆಂದಡೆ :
> ಸಾಕಾರನಲ್ಲ ನಿರಾಕಾರನಲ್ಲ ನೋಡಾ !
> ನಿರವಯ ಶೂನ್ಯಲಿಂಗಮೂರ್ತಿ ಆದಿಯಲ್ಲ, ಅನಾದಿಯಲ್ಲ;
> ಇಹದವನಲ್ಲ, ಪರದವನಲ್ಲ; ಸುಖದವನಲ್ಲ, ದುಃಖದವನಲ್ಲ;
> ನಿರವಯಶೂನ್ಯಲಿಂಗಮೂರ್ತಿ ಪುಣ್ಯಪಾಪದವನಲ್ಲ,
> ಕರ್ತೃ ಭೃತ್ಯನಲ್ಲ, ಕಾರಣ ಕಾರ್ಯನಲ್ಲ;
> ಧರ್ಮಿ ಕರ್ಮಿಯಲ್ಲ, ಪೂಜ್ಯ ಪೂಜಕನಲ್ಲ.
> ಇಂತು ಉಭಯವನಳಿದು ಬೆಳಗುವ ನೋಡಾ ನಮ್ಮ ಗುಹೇಶ್ವರಲಿಂಗವು

ಶೂನ್ಯಲಿಂಗ ಲಕ್ಷಣದ ಬಗೆಗೆ ಈ ವಚನದಲ್ಲಿ ಶೂನ್ಯಸಿಂಹಾಸನದ ಅಲ್ಲಮಪ್ರಭು ತೂಗಿ ತೂಗಿ ನಿರೂಪಿಸಿದ್ದಾನೆ. ಶೂನ್ಯವು ನಿರವಯ ಲಿಂಗಮೂರ್ತಿ. ಅದಕ್ಕೊಂದು ಅವಯವವಿಲ್ಲ, ಇದರಿಂದಾಗಿ ಅವಯವಾತ್ಮಕ ಸಾಕಾರವಸ್ತುಗಳ ದೃಷ್ಟಿಯಲ್ಲಿ ಅದು ನಿರಾಕಾರ. ಲಿಂಗಮೂರ್ತಿಯಾಗಿರುವುದರಿಂದ ಸರ್ವಶೂನ್ಯ ನಿಶ್ಶೂನ್ಯವಸ್ತುಗಳ ದೃಷ್ಟಿಯಲ್ಲಿ ನಿರಾಕಾರದೊಳಗಿನ ಆಕಾರ. ಅಂತೆಯೆ ಶೂನ್ಯಲಿಂಗ ಸಾಕಾರನಲ್ಲ–ನಿರಾಕಾರನಲ್ಲ. ಸಾಕಾರನಲ್ಲೆಂದರೆ ನಿರಾಕಾರ; ನಿರಾಕಾರನಲ್ಲೆಂದರೆ ಸಾಕಾರ. ಅಂತೆಯೆ ಆದಿಯಲ್ಲ–ಅನಾದಿಯಲ್ಲ; ಎರಡೂ ಅಹುದು. ಇಹದವನಲ್ಲ–ಪರದವನಲ್ಲ, ಇಹ ಪರಗಳು ಅವನಿಲ್ಲದಿಲ್ಲ. ಇನ್ನು ಆ ಶೂನ್ಯಲಿಂಗಮೂರ್ತಿ ಸುಖ–ದುಃಖಗಳಿಗೆ, ಪುಣ್ಯ–ಪಾಪಗಳಿಗೆ, ಕರ್ತೃ–ಭೃತ್ಯತ್ವಗಳಿಗೆ, ಕಾರಣ–ಕಾರ್ಯಗಳಿಗೆ, ಧರ್ಮ – ಕರ್ಮಗಳಿಗೆ, ಪೂಜ್ಯ–ಪೂಜಕಗಳಿಗೆ ನಿಲುಕುವವನಲ್ಲ. ಈ ದ್ವಂದ್ವಗಳನ್ನು ಮೀರಿ ದೀಪ್ತಿಗೊಂಡಿರುವವನು. ಅಂತಹ ಆ ಶೂನ್ಯದ ಬೆಳಗೇ ಶಿವತತ್ತ್ವ; ಬಿಸಿಯೇ ಶಕ್ತಿತತ್ತ್ವ.

"ಅಡಬಾರದ ಬಯಲು, ನೋಡಬಾರದ ಬಯಲು;
ನುಡಿಯಬಾರದ ಬಯಲು, ಹಿಡಿಯಬಾರದ ಬಯಲು;
ಈ ಒಡಲಿಲ್ಲದ ಬಯಲೊಳಗೆ (ಸೃಷ್ಟಿ) ಅಡಗಿದ್ದ ಭೇದವ
ಈ ಲೋಕದ ಜಡರೆತ್ತ ಬಲ್ಲರೈ ರಾಮನಾಥ !"

ಹೀಗೆ ದೇವರದಾಸಿಮಯ್ಯಗಳು ಹಾಡಿ ಈ ಸೃಷ್ಟಿ ಆ ಶೂನ್ಯದೊಳಗೆ ಅಡಗಿದೆಯೆಂದಿದ್ದಾರೆ. 'ಶೂನ್ಯೇ ಚಿದಂಬರೇ ಸ್ಥಾನೇ ದೂರೇ ವಾಙ್ಮನಸಾಧ್ವನ: ವಿಲೀನಾತ್ಮಾ ಮಹಾಯೋಗೀ ಕೇನ ಕಿಂ ವ್ಯಾಪಿ ಭಾವಯೇತ್ ॥" ಎಂದಿದೆ ಸಿದ್ಧಾಂತ ಶಿಖಾಮಣಿ. ಆ ಶೂನ್ಯಲಿಂಗವನ್ನು ಸಂಪಾದಿಸಿ ಅದರಲ್ಲಿ ತಲ್ಲೀನನಾದವನೆ ಮಹಾಯೋಗಿ ! ಆತನಿಗೆ ಆ ಪೂರ್ಣತ್ವ ಅಳವಡುತ್ತದೆ. ಕೊರತೆಯಿರದು, ಇದರಿಂದಾಗಿ ಏನನ್ನೂ ಬಗೆಯದು.

ಶಿವತತ್ತ್ವ :

"ಆದ್ಯಂತಶೂನ್ಯಮಮಲಂ ಪರಿಪೂರ್ಣಮೇಕಂ
ಸೂಕ್ಷ್ಮಂ ಪರಾತ್ಪರಮನಾಮಯಮಪ್ರಮೇಯಂ ।
ಭಾವೈಕಗಮ್ಯಮಜಡಂ ಶಿವತತ್ತ್ವಮಾಹುಃ
ಚಿಚ್ಛಕ್ತಿ ಸಂಸ್ಫುರಣರೂಪ ಮಹಾತ್ಮಲಿಂಗಂ ॥"

—ಶಿವಾನುಭವಸೂತ್ರ.

'ಶಿವತತ್ತ್ವಕ್ಕೆ ಹುಟ್ಟುಸಾವಿಲ್ಲ. ಅದು ಸ್ವಚ್ಛಪ್ರಕಾಶ, ಪರಿಪೂರ್ಣ, ಏಕೈಕ, ಸೂಕ್ಷ್ಮ, ಪರಕ್ಕೆ ಪರ, ಅಮಯರಹಿತ; ಅಪ್ರಮೇಯ. ಆದರೂ ಅನುಭಾವೈಕಗಮ್ಯ, ಚಿಚ್ಛಕ್ತಿ ಸಂಯುಕ್ತವೂ ಸಂಸ್ಫುರಣ ರೂಪವೂ ಆಗಿದೆ. ಅದುವೆ ಮಹಾಚೇತನಲಿಂಗ.'

ಸಕಲ ತತ್ತ್ವಗಳಿಗೆಲ್ಲ ಸ್ಥಾನವಾಗಿ ಸ್ಥಲವೆನಿಸಿದೆ ಆ ಶಿವತತ್ತ್ವ. ಸಕಲವಿದ್ಯೆ ಸಕಲ ಮಂತ್ರಗಳಿಗೆ ಶಿರೋಧಾರಿಯಾದುದು ಪ್ರಣವಪಂಚಾಕ್ಷರಿ; ಅದಕ್ಕೆ ಪ್ರಾಣವಾಗಿದೆ ಶಿವತತ್ತ್ವ. ವಾಚ್ಯ—ವಾಚಕರೂಪಾಗಿದೆ. ಮಂತ್ರಾಕ್ಷರಗಳೆ ಶಕ್ತಿ, ಮಂತ್ರಾರ್ಥವೆ ಶಿವ. ಈ ಚರಾಚರ ಪ್ರಪಂಚವನ್ನು ವ್ಯಾಪಿಸಿದೆ. ವಿಮರ್ಶಾಶಕ್ತಿ ವಿಶಿಷ್ಟವಾಗಿದೆ.

ಕಾಂತಿಯೆಂದರ್ಥವುಳ್ಳ 'ವಶ' ಧಾತುವಿನಿಂದ ವರ್ಣವ್ಯತ್ಯಾಸವಾಗಿ 'ಶಿವ'ವಾಗಿದೆ ಎಂದು ಸಂಸ್ಕೃತಜ್ಞರು ಅಭಿಪ್ರಾಯಪಡುತ್ತಾರೆ. ಆದರೆ ವಾಸ್ತವವಾಗಿ ಇದು ಶುದ್ಧ ದ್ರವಿಡ ನುಡಿ. 'ವಶ' ಧಾತುವಿನಿಂದ ಬಲಾತ್ಕರಿಸಿ ತಿರುಗಿಸಿ ಶಕಾರವನ್ನು ಇತ್ವಮಾಡಿ 'ಶಿವ' ಎಂದು ಮಾಡುವುದರಿಂದಲೆ ಇದು ಸಂಸ್ಕೃತಪದವಲ್ಲೆಂದು ತಿಳಿಯುತ್ತದೆ.

ಶಿವ ಎಂದರೆ ಕಲ್ಯಾಣ, ಶುಭ, ಮಂಗಲವೆಂದೂ. ಕಲ್ಯಾಣಗುಣವಿಶಿಷ್ಟನು, ಮಂಗಳಪ್ರದನು, ಸಚ್ಚಿದಾನಂದಸ್ವರೂಪನು, ಶಕ್ತಿಸಂಪನ್ನನು, ಸ್ಥಲವಾಚ್ಯನು, ಸರ್ವಾತ್ಮ, ಸರ್ವಶಕ್ತಿ, ಸರ್ವತೇಜಸ್ಸುಗಳಿಗೆ ಆಧಾರನು, ನಿರುಪಾಧಿಕನು, ನಿತ್ಯಪರಿಪೂರ್ಣನು, ವಿಶ್ವಾಧಿಷ್ಠಾನನು, ವಿಶ್ವವ್ಯಾಪಕನು, ವಿಶ್ವಾತೀತನು, ಏಕನು, ಸಕಲೈಶ್ವರ್ಯಗಳಿಗೆ ವಿಶ್ರಾಂತಿಸ್ಥಾನಸ್ವರೂಪನು, ಚಿಂತಾಮಣಿಯಂತೆ ಚಿಂತಿತಾರ್ಥಪ್ರದನು, ಅಪರಿಚ್ಛಿನ್ನನು, ಮುಮುಕ್ಷುಗಳಿಗೆ ಮುಖ್ಯೋಪಾಸ್ಯನು, ಸಾಮರಸ್ಯರೂಪ ಮುಕ್ತಿಪ್ರದನೂ ಆಗಿರುವನು.

ಶಿವನು ವೀರಶೈವಧರ್ಮದಲ್ಲಿ ಶಿವಲಿಂಗಸ್ವರೂಪನು; ಲಿಂಗಕ್ಕೆ ಅಭಿನ್ನನು. ಅಂತೆಯೆ ಲಿಂಗಪೂಜೆಯಲ್ಲಿ ಶಿವಪಂಚಾಕ್ಷರಿಯನ್ನೇ ಜಪಿಸಲಾಗುತ್ತದೆ.

> "ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಪರಮೇಶ್ವರ
> ಎಂಬ ಸಂದಣಿ ತಲೆದೋರದ ಮುನ್ನ ಬಯಲೇ ಸ್ವರೂಪವಾಯಿತ್ತು.
> ಆ ಸ್ವರೂಪಿನ (ಶಿವನ) ನಡೆಯನುಪಮಿಸಬಾರದು.
> ನೋಡಬಾರದ ಬೆಳಗು, ಕೂಡಬಾರದ ಮೂರ್ತಿ;
> ಅಖಂಡ ಅಪ್ರತಿಮ ಗುಹೇಶ್ವರ ಲಿಂಗದ ಬೆಳಗಿನ ಮೂಲವ
> ಲಿಂಗ ಸಂಗಿಗಳಲ್ಲದ ಮಿಕ್ಕಿನ ಅಂಗವಿಕಾರಿಗಳೆತ್ತ ಬಲ್ಲರು ?"

ಆ ಬಯಲೆ ಅಂದರೆ ಶೂನ್ಯವೆ ಶಿವಸ್ವರೂಪವಾಗಿ ಲಿಂಗವಾಗಿ ಬೆಳಗುತ್ತಿದೆ. ಸ್ಥೂಲರೂಪದಿಂದ ಕೂಡಬಾರದ ಮೂರ್ತಿ; ನೋಡಬಾರದ ಬೆಳಗು. ಶಿವಲಿಂಗದ ಬೆಳಗಿನ ಮೂಲ ಶೂನ್ಯ. ಅದನ್ನು ಪಡೆವವರು ಲಿಂಗಸಂಗಿಗಳು.

> "ಆತ್ಮಶಕ್ತಿವಿಕಾಸೇನ ಶಿವೋ ವಿಶ್ವಾತ್ಮನಾ ಸ್ಥಿತಃ
> ಕುಟೀ ಭಾವಾದ್ಯಥಾ ಭಾತಿ ಪಟಃ ಸ್ವಸ್ಯ ಪ್ರಸಾರಣಾತ್ ।
> ಪತ್ರಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ
> ತಥಾ ಭೂಮ್ಯಾದಿ ರೂಪೇಣ ಶಿವ ಏಕೋ ವಿರಾಜತೇ ॥"
>
> —ಸಿದ್ಧಾಂತ ಶಿಖಾಮಣಿ.

ಶಿವನು ತನ್ನ ಶಕ್ತಿವಿಕಾಸದಿಂದ ತಾನೇ ವಿಶ್ವರೂಪನಾಗಿದ್ದಾನೆ. ಇದರಿಂದಾಗಿ ವೀರಶೈವಮತದಲ್ಲಿ ವಿಶ್ವಕ್ಕೆ ಹುಟ್ಟಿಲ್ಲ, ಸಾವಿಲ್ಲ. ವಿಶ್ವಲಯವೆಂದರೆ ಕುಟೀಭಾವ; ವಿಶ್ವಸೃಷ್ಟಿಯೆಂದರೆ ತನ್ನ ಪ್ರಸರಣಭಾವ. ಪತ್ರ ಪುಷ್ಪ ಫಲ ಶಾಖೋಪಶಾಖ ಮೂಲ ಮೊದಲಾದ ರೂಪಗಳಲ್ಲಿ ಬೀಜವೇ ತೋರುತ್ತದೆ, ಇರುತ್ತದೆ, ಬೀಜದಲ್ಲಿಯೆ ಅಡಗುತ್ತದೆ. ಅಂತೆಯೆ ಶಿವನು ವಿಶ್ವವೃಕ್ಷರೂಪನಾಗಿ ತೋರುವನು, ಇರುವನು, ಅಡಗುವನು.

"ಶಿವತತ್ತ್ವಾತ್ ಸಮುತ್ಪನ್ನಂ ಜಗದಸ್ಮಾನ್ನಭಿದ್ಯತೇ
ಫೇನೋರ್ಮಿ ಬುದ್ಬುದಾಕಾರೋ ಯಥಾ ಸಿಂಧೋರ್ನಭಿದ್ಯತೇ ।"
—ಸಿದ್ಧಾಂತ ಶಿಖಾಮಣಿ.

"ಶಿವ ಜಗವಾಗಬಲ್ಲ, ಶಿವ ಜಗವಾಗದಿರಬಲ್ಲ;
ಶಿವ ರೂಪಾಗಬಲ್ಲ, ಶಿವ ರೂಪಾಗದಿರಲೂ ಬಲ್ಲ;
ಶಿವ ಅಜಾಂಡಕೋಟಿಗಳ ಮಾಡಬಲ್ಲ, ಮಾಡದಿರಲೂ ಬಲ್ಲ;
ಶಿವ ಕೆಡಿಸಬಲ್ಲ, ಕೆಡಿಸದಿರಲೂ ಬಲ್ಲ,
ಶಿವನು ಜಂಗಮವಾಗಿ ಪೂಜಿಸಬಲ್ಲ,
ಶಿವಲಿಂಗವಾಗಿ ತಾನೇ ಪೂಜೆಯ ಕೊಳಲೂ ಬಲ್ಲ......
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು ನಮಗೆಲ್ಲ ಮಾತಾಪಿತನು"

ಮೇಲಿನ ಶ್ಲೋಕದಿಂದ ಈ ಜಗತ್ತು ಶಿವನ ಸೃಷ್ಟಿ; ಶಿವನಿಗೆ ಅಭಿನ್ನ. ಶಿವನು ಜಲಧಿ, ಜಗತ್ತು ಜಲತರಂಗ- ಎಂಬುದು ಗೊತ್ತಾದರೆ, ಅದೇ ಆಶಯವನ್ನು ಬಿತ್ತರಿಸುವ ಉರಿಲಿಂಗ ಪೆದ್ದಿ ವಚನದಿಂದ ಶಿವನ ಲೋಕಲೀಲೆ ವ್ಯಕ್ತವಾಗುತ್ತದೆ. ಚರಾಚರತ್ವ ಸಿದ್ಧಿಸುತ್ತದೆ. ಪೂಜಕ ಪೂಜ್ಯತ್ವ ಸಿದ್ಧಿಸುತ್ತದೆ. ಶಿವನು ಜಗತ್ತಿನ ತಾಯಿ–ತಂದೆ !

ಶಕ್ತಿತತ್ತ್ವ:

"ತದೀಯಾ ಪರಮಾಶಕ್ತಿಃ ಸಚ್ಚಿದಾನಂದಲಕ್ಷಣಾ
ಸಮಸ್ತಲೋಕ ನಿರ್ಮಾಣ ಸಮವಾಯ ಸ್ವರೂಪಿಣೀ ।
ವಿಮರ್ಶಾಖ್ಯಾ ಪರಾಶಕ್ತಿರ್ ವಿಶ್ವವೈಚಿತ್ರ್ಯಕಾರಿಣೀ
ಯಸ್ಮಿನ್ ಪ್ರತಿಷ್ಠಿತಾ ಬ್ರಹ್ಮ ತದಿದಂ ವಿಶ್ವಭಾಜನಂ ।
ಯಥಾ ಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವವಸ್ತು ಪ್ರಕಾಶಿನೀ
ತಥಾ ಶಕ್ತಿರ್ ವಿಮರ್ಶಾಖ್ಯಾ ಪ್ರಕಾಶೇ ಬ್ರಹ್ಮಣಿ ಸ್ಥಿರಾ !"
—ಸಿದ್ಧಾಂತ ಶಿಖಾಮಣಿ

ಆ ಶಿವನದೇ ಆದ ಒಂದು ಸಾಮರ್ಥ್ಯವೇ ಶಕ್ತಿ. ಅದು ಅಸಾಮಾನ್ಯ ಶಕ್ತಿ. ಸತ್ ಚಿತ್ ಆನಂದಗಳಿಂದ ಕೂಡಿದ ಶಕ್ತಿ. ಸಮಸ್ತಲೋಕನಿರ್ಮಾಣಕಾರ್ಯದಲ್ಲಿ ಬಿಡದಂತೆ ಕೂಡಿದ್ದು ಸೃಷ್ಟಿಗೆ ಬೇಕಾದ ಅನೇಕ ಸಹಕಾರಿವಸ್ತುಗಳನ್ನು ಒದಗಿಸಿ ಸಂಘಟಿಸಿ ಕೊಡುವವಳು. ಈ ವಿಶ್ವವೈಚಿತ್ರ್ಯಕ್ಕೆ ಅವಳೇ ಕಾರಣಳು. ಅಂತೆಯೆ ಅವಳು ವಿಮರ್ಶಾಶಕ್ತಿ, ಪರಾಶಕ್ತಿ. ಅವಳು ಚಂದ್ರನಲ್ಲಿ ಚಂದ್ರಿಕೆ ಇರುವಂತೆ ಇದ್ದು ವಿಶ್ವವಸ್ತುಗಳನ್ನೆಲ್ಲ ಪ್ರಕಾಶಿಸುತ್ತಾಳೆ. ಅವಳು ಶಿವಬ್ರಹ್ಮನಲ್ಲಿ ಸ್ಥಿರವಾಗಿ ಇದ್ದಾಳೆ;

ಶಿವನು ಅವಳಲ್ಲಿ ಪ್ರತಿಷ್ಠಿತನಾಗಿದ್ದಾನೆ. ಅಂತೆಯೆ ಅವಳಲ್ಲಿ ವಿಶ್ವವೂ ಪ್ರತಿಷ್ಠಿತವಾಗಿದೆ. ಶಿವನು ಶಕ್ತಿವಿಶಿಷ್ಟನಾದುದರಿಂದ ವಿಶ್ವಭಾಜನನಾಗಿದ್ದಾನೆ.

ಸೃಷ್ಟಿಯನ್ನು ಸೃಜಿಸಬಯಸಿದ ನಾದರೂಪ ಶಿವನ ಬಿಂದುಕಲಾರೂಪವೆ ಶಕ್ತಿತತ್ತ್ವ, ಚಿದಚಿದ್ರೂಪ ಪಶುಪಾಶಗಳ ಅನುಗ್ರಹಕ್ಕೆ ಸಾಧನ ಮತ್ತು ಪರಮಕಾರಣ. ಆ ಬಿಂದುವಿನ ಉನ್ಮೇಷರೂಪ ಪ್ರಥಮಪರಿಣಾಮವೆ ಭುವನರೂಪ; ಕಲಾರೂಪ. ಹೀಗೆ ಆ ಶಿವನ ಸ್ಫುರಣರೂಪ ಆದಿ ಪರಿಣಾಮವೆ ಶಕ್ತಿತತ್ತ್ವ !

ಶಕ್ತಿತತ್ತ್ವವು ಶಿವನಲ್ಲಿ ಅಪೃಥುಕ್ ಸಿದ್ಧವಾದ ವಿಶೇಷಣ. ಇದರಿಂದ ವಿಶಿಷ್ಟನಾಗಿಯೂ ಶಿವನು ಅದ್ವಯನಾಗಿರುವನು. ಶಿವ–ಶಕ್ತಿಯರಿಗೆ ಸ್ವರ್ಣಾಭರಣ ದೃಷ್ಟಾಂತದಿಂದ ಭೇದಾಭೇದ ಸಿದ್ಧವಾಗಿ ಶಿವಾದ್ವೈತಭಾವಕ್ಕೆ ವಿರೋಧವಿಲ್ಲ.

ಶಕ್ತಿಗೆ ಶಿವೆಯೆಂದು ಮತ್ತೊಂದು ಮುಖ್ಯನಾಮ. ಶಿವನೊಳಗೆ ಅವಿನಾಭಾವ ಸಂಬಂಧದಿಂದ ಸತ್ಯವೆನಿಸಿದ ಕಾರಣ, ಸರ್ವಮಂಗಳೆಯಾದ ಕಾರಣ–ಶಿವಾ ಅಥವಾ ಶಿವೆ ಎಂಬ ಸರಿಬರಿ ಹೆಸರು ಬಂದಿದೆ. ಹೆಸರಿನಲ್ಲಿಯ ಶಿವಸಾದೃಶ್ಯ–ಶಿವ ಸಾಮರಸ್ಯರೂಪ ಶಿವಸ್ವಾಭಾವಿಕತ್ವಗಳು ಶಕ್ತಿತತ್ತ್ವದಲ್ಲಿ ಸಿದ್ಧವಾಗಿವೆ.

"ತಾದಾತ್ಮ್ಯಮನಯೋರ್ ನಿತ್ಯಂ ವಹ್ನಿದಾಹಕಯೋರಿವ
ಶಕ್ತಿ ಶಕ್ತಿಮತೋರ್ ಯಸ್ಮಾತ್ ಅಭೇದಃ ಸರ್ವದಾಸ್ಥಿತಃ ।"

ಈ ಉಕ್ತಿ ಶಿವ–ಶಕ್ತಿ ಸಮರಸಭಾವಕ್ಕೆ ಸಾಕ್ಷಿಯಾಗಿದೆ. ದೀಪ–ದೀಪ್ತಿಯಂತೆ ಶಿವಶಕ್ತಿಯರಿಗೆ ತಾದಾತ್ಮ್ಯ; ಸದಾ ಸತ್ತಾಭಾವ. ಅದರಿಂದ ಶಿವನು ಸೃಷ್ಟಿಕಾರ್ಯದಲ್ಲಿ ಶಕ್ತನೆನಿಸಿದ್ದಾನೆ.

"ಪರಾಸ್ಯ ಶಕ್ತಿರ್ ವಿವಿಧೈವ ಶ್ರೂಯತೇ
ಸ್ವಾಭಾವಿಕೀ ಜ್ಞಾನ ಬಲ ಕ್ರಿಯಾ ಚ ।"

ಶಿವನಲ್ಲಿರುವ ಆ ಪರಾಶಕ್ತಿ ಸ್ವಾಭಾವಿಕವಾಗಿ ಕ್ರಿಯಾಶಕ್ತಿ ಜ್ಞಾನಶಕ್ತಿ ಇಚ್ಛಾಶಕ್ತಿಯಾಗಿ ಶಿವನಿಗೆ ಸಹಾಯಕಳಾಗಿದ್ದಾಳೆ. ಜೀವರಿಗೂ ಸಹಾಯಕಳಾಗಿದ್ದಾಳೆ. ಇದರಿಂದಾಗಿ ಆ ಪರಾಶಕ್ತಿ ವಿಮರ್ಶಾಕಲೆಯೆನಿಸಿದೆ. ಇದಿರುವುದರಿಂದ ಶಿವನು ತನ್ನ ಸಚ್ಚಿದಾನಂದ ಸ್ವರೂಪದ ಅರಿವುಳ್ಳವನಾಗಿದ್ದಾನೆ; ಆಚರಿಸಲು ಸಮರ್ಥನಾಗಿದ್ದಾನೆ; ಅನುಭವಿಸಲು ಅಳವುಳ್ಳವನಾಗಿದ್ದಾನೆ. ಅಂತೆಯೇ ಅಸ್ಮಿ ಪ್ರಕಾಶೇ ನಂದಾಮಿ- ಎಂದು ತನ್ನನ್ನು ತಾನೇ ವಿಮರ್ಶಿಸಿಕೊಳ್ಳುವ ಶಕ್ತಿಸಂಪನ್ನನೂ ಆಗಿದ್ದಾನೆ; ಸ್ವತಃ ಸಿದ್ಧನೂ ಆಗಿದ್ದಾನೆ. ಒಟ್ಟಾರೆ ಹೇಳುವುದಾದರೆ, ಪರಶಿವನ ಪರಾಶಕ್ತಿಯು ಇಚ್ಛಾಶಕ್ತಿಯು

ಬಹಿರಂಗರೂಪ ಕ್ರಿಯಾಂಶದಲ್ಲಿ ಪ್ರವೇಶವಾಗಿ ಭಾವೀ ವಿಶ್ವೋಪಾದಾನ ಕಾರಣವಾದ ಅರಿವಿನ ಅವಿರಳಾಂಶವೆ ಶಕ್ತಿತತ್ತ್ವ!

"ಅನಾದಿ ನಿಧನಾಚ್ಛಾಂತಾಚ್ಛಿವಾತ್ ಪರಮಕಾರಣಾತ್
ಇಚ್ಛಾಶಕ್ತಿರ್ ವಿನಿಷ್ಕ್ರಾಂತಾ, ತತೋ ಜ್ಞಾನಂ, ತತಃಕ್ರಿಯಾ
ತತೋತ್ಪನ್ನಾನಿ ಭೂತಾನಿ ಭುವನಾನಿ ಚತುರ್ದಶ ।"

– ಆಗಮೋಕ್ತಿ.

ಆದ್ಯಂತರಹಿತನೂ ಶಾಂತನೂ ಪರಮಕಾರಣನೂ ಶಕ್ತಿಸಹಿತನೂ ಆದ ಶಿವನು ಸೃಜನಕ್ರಿಯೆಗೆ ಅಭಿಮುಖನಾಗಲು, ಅವನೊಳಗಿರುವ ಆ ವಿಮರ್ಶಾಶಕ್ತಿಯೆ ಇಚ್ಛಾ ಶಕ್ತಿಯಾಗಿ ಪರಿಣಮಿಸುವುದು. ಆ ಇಚ್ಛಾಶಕ್ತಿಯಲ್ಲಿ ಜ್ಞಾನಶಕ್ತಿ, ಜ್ಞಾನಶಕ್ತಿಯಿಂದ ಕ್ರಿಯಾಶಕ್ತಿ ಸಂಭವಿಸುವುವು. ಆ ಜ್ಞಾನಶಕ್ತಿಯಲ್ಲಿ ಪರಶಿವನು ಸ್ಫುರಿಸಿ ಸರ್ವಜ್ಞನೆನಿಸಿ ಶಿವತತ್ತ್ವವೆನಿಸುವನು. ಆ ಕ್ರಿಯಾಶಕ್ತಿಯಲ್ಲಿ ಆ ಪರಶಿವನು ಸ್ಫುರಿಸಿ ಸರ್ವಕರ್ತನೆನಿಸಿ ಶಕ್ತಿತತ್ತ್ವ ವೆನಿಸುವನು. ಶಕ್ತಿವಿಶಿಷ್ಟ ಶಿವನು ತನ್ನ ಈ ಭಾವೀ ಸೃಷ್ಟಿಗೆ ಅಭಿನ್ನ ನಿಮಿತ್ತೋಪಾದಾನ ಕಾರಣನಾಗುವನು.

ಪ್ರಪಂಚದ ಪ್ರತಿಯೊಂದು ಪದಾರ್ಥವು ತನತನಗೆ ತಕ್ಕ ಶಕ್ತಿಯಿಂದ ಅಂದರೆ ಸಾಮರ್ಥ್ಯದಿಂದ ಅಥವಾ ಧರ್ಮದಿಂದ ಕೂಡಿಕೊಂಡಿದೆ. ಪ್ರಪಂಚಕ್ಕೆ ಮೂಲಭೂತ ಗಳಾದ ಪಂಚಭೂತಗಳಲ್ಲಿಯೂ ಒಂದೊಂದು ಶಕ್ತಿಯಿದೆ. ಅಂತೆಯೆ ಭೂಮಿ ಯಲ್ಲಿಯೂ ಒಂದು ಶಕ್ತಿಯಿದೆ. ಈ ಭೂಖಂಡ ಶಕ್ತಿಯೆ ಭೂಮಿಯನ್ನು ಚಲಿಸು ವಂತೆ ಸ್ಥಳಾಂತರಿಸುವಂತೆ ಮಾಡುತ್ತದೆ. ಆ ಶಕ್ತಿಯನ್ನು ವಿಜ್ಞಾನಿಗಳು ಕನ್ವೇಕ್ಷನ್ ಕರೆಂಟ್ (Convection current) ಎಂದು ಕರೆಯುತ್ತಾರೆ. ಜಡವಸ್ತುವನ್ನು ಚಲಿಸುವಂತೆ ಮಾಡುವ ಶಕ್ತಿಯಿದು. ಭೂಗರ್ಭದಲ್ಲಿ ವಿದ್ಯುತ್‌ವಿಕಿರಣಕ್ರಿಯಾ ಶಕ್ತಿಯ ದೆಸೆಯಿಂದ 'ಕನ್ವೇಕ್ಷನ್ ಕರೆಂಟ್ಸ್' ಪ್ರವಹಿಸತೊಡಗುತ್ತವೆ. ಇದು ಸಂಶೋ ಧಕರ ಅಭಿಪ್ರಾಯವಾಗಿದೆ. ಪ್ರಪಂಚದ ಪ್ರತಿಯೊಂದು ಪದಾರ್ಥಕ್ಕೂ ಒಂದೊಂದು ಶಕ್ತಿ ಯಿದೆಯೆಂದು ಇದರಂತೆ ಪರಶಿವನಲ್ಲಿಯೂ ಒಂದು ತಾದಾತ್ಮ್ಯ ಸಂಬಂಧವುಳ್ಳ ಶಕ್ತಿ ಯಿದೆಯೆಂದು ಎಂದೋ ಸಿದ್ಧಾಂತಮಾಡಿದ್ದಾರೆ ಶಿವಾದ್ವೈತಿಗಳು. ಅವರ ಈ ಭಾಗವತ ಅನುಭಾವವು ಇಂದು ವಿಜ್ಞಾನಿಗಳ ಇಂತಹ ಸಂಶೋಧನಾತ್ಮಕ ವೈಚಾರಿಕ ಉಕ್ತಿಶಕ್ತಿ ಅಸ್ತಿತ್ವದ ಮೂರ್ತಿ ರೂಪವನ್ನು ತಾಳಿನಿಂತಿದೆ. ವಿಶ್ವರೂಪದಲ್ಲಿ ದೃಷ್ಟವ್ಯವಾಗಿದೆ. ಶಬ್ದರೂಪದಲ್ಲಿ ಶ್ರೋತವ್ಯವಾಗಿದೆ. ಮನಕ್ಕೆ ಮಂತವ್ಯವೂ ಆಗಿದೆ.

ಶಕ್ತಿತತ್ತ್ವವು ತನಗೆ ಕಾರಣವಾದ ಬಿಂದುವಿನಿಂದ ಭಿನ್ನವಿಲ್ಲವಾಗಿ ನಿರವಯವು. ಆ ಬಿಂದುವು ಶಕ್ತಿವಿಶಿಷ್ಟವಾಗಿಯೆ ಪರಮ ಕಾರಣತ್ವವನ್ನು ಪಡೆವುದು. ಪರಿಮಿಳಿತ ಮತ್ತು ಪರಿಮಳಿತ ಸ್ವರೂಪದಿಂದಿರುವುದು. ಪರಮಾರ್ಥವಾಗಿರುವುದು.

ಆ ಶಕ್ತಿವಿಶಿಷ್ಟ ಶಿವನಲ್ಲಿ ಇಚ್ಛಾಶಕ್ತಿ, ಆ ಇಚ್ಛಾಶಕ್ತಿಯ ಅಂತರಂಗದಲ್ಲಿ ಜ್ಞಾನ ಶಕ್ತಿ, ಬಹಿರಂಗದಲ್ಲಿ ಕ್ರಿಯಾಶಕ್ತಿ ಇರುವುವು. ಇದ್ದು ಹೊಮ್ಮುವವು. ಇದು ಶಕ್ತಿ ವಿಕಾಸಕ್ರಿಯೆಯು. ಈ ದೃಕ್ಕ್ರಿಯಾ ಶಕ್ತಿಗಳೆರಡರಲ್ಲಿ ನ್ಯೂನಾಧಿಕಭಾವವಿಲ್ಲ. ಈ ಸಮವಾದ ದೃಕ್ಕ್ರಿಯಾ ಶಕ್ತಿಗಳೆರಡರಲ್ಲಿ ನ್ಯಾನಾಧಿಕಭಾವವಿಲ್ಲ.

ಇಚ್ಛಾಶಕ್ತಿಯ ಅಂತರಂಗವಾದ ಜ್ಞಾನವು ಪರಾ, ಅಪರಾ ಎಂದು ಇಬ್ಬಗೆ. ಪರಾವಿದ್ಯೆ ಕಾರ್ಯ ಕಾರಣರೂಪದ ಪರಶಿವನಿಗೆ ಸಂಬಂಧ. ಅಪರಾವಿದ್ಯೆ ಕಾರ್ಯರೂಪ ಪ್ರಪಂಚಕ್ಕೆ ಸಂಬಂಧ. ಆ ಪರಾವಿದ್ಯೆ ಪ್ರಣವ ಪಂಚಾಕ್ಷರಿಯಿಂದ ಪ್ರಾಪ್ತಿಸುತ್ತದೆ. ಈ ಅಪರಾವಿದ್ಯೆ ನಿಗಮಾಗಮಾದಿ ಸಕಲವೈಚಾರಿಕ ಸಾಹಿತ್ಯದಿಂದ ಸಿಕ್ಕುತ್ತದೆ. ಪಂಚಾಕ್ಷರಿಯನ್ನು ಮೂಲವಿದ್ಯೆಯೆಂದು, ಶೈವಸೂತ್ರವೆಂದು ಶಿವಾಚಾರ್ಯರ ಸಮ್ಮತಿ.

ಶಿವಾದ್ವೈತಮತದಲ್ಲಿ ಶಿವನು ನಿರ್ವಿಶೇಷನಲ್ಲ; ಸವಿಶೇಷ. ಶಕ್ತಿವಿಶಿಷ್ಟನಾದ ಕಾರಣ ಸವಿಶೇಷ. ಜಗದುತ್ಪತ್ತಿಗೆ ಕಾರಣನಾಗಿ ಸವಿಶೇಷ. ಇನ್ನು ಜೀವಾತ್ಮನ ವಿಷಯದಲ್ಲಿ ಹೇಳುವ ಸುಷುಪ್ತಿಕಾಲದಲ್ಲಿನ ನಿರ್ವಿಶೇಷತ್ವವನ್ನು ಶಿವಾದ್ವೈತಿಗಳು ಒಪ್ಪುವುದಿಲ್ಲ. ಕಾರಣ, ಅಲ್ಲಿಯೂ ಜೀವನು ಶಕ್ತಿಸಹಿತನಾಗಿಯೆ ಇರುತ್ತಾನೆ. ಅಲ್ಲದೆ ಕಾರ್ಯಕಾರಣಾದಿಗಳು ಅಲ್ಲಿಯೂ ಅವ್ಯಕ್ತವಾಗಿ ಇದ್ದೇ ಇರುತ್ತವೆ.

ಸದಾಶಿವತತ್ತ್ವ :

ಶಿವಶಕ್ತಿ ಸಂಪುಟದಲ್ಲಿ ಸ್ಫುರಿಸಿ ನೀರೊಳಗೆ ನೆನೆದ ಕಾಳಿನಂತೆ, ಅಂಕುರಮುಖವಾದ ಪ್ರಪಂಚಾಭಿಮಾನದಿಂದ ಸದಾಶಿವತತ್ತ್ವೋದಯ. ಸಮವಾದ ದೃಕ್ಕ್ರಿಯಾ ಶಕ್ತಿ ಸ್ಫುರಣದಲ್ಲಿ ಉಂಟಾದ ಬಿಂದುವಿನ ಎರಡನೆಯ ಸ್ಫುರಣರೂಪ ಪರಿಣಾಮ ವಿಶೇಷವೆ ಸದಾಶಿವತತ್ತ್ವ. ಈ ತತ್ತ್ವವನ್ನು ಸಾದಾಖ್ಯರುದ್ರ ಎಂಬರು. ಇದುವೆ ಇದಂತಾರೂಪ ವಿಶ್ವೋತ್ಪತ್ತಿಗೆ ಕಾರಣ. ಇದು ಆಕಾಶಾವಚ್ಛಿನ್ನ ಚೈತನ್ಯ.

"ಸದಾಶಿವಮುಖಾಶೇಷ ತತ್ತ್ವೋನ್ಮೇಷ ವಿಧಾಯಿನೇ
ನಿಷ್ಕಲಂಕಸ್ವಭಾವಾಯ ನಮಃ ಶಾಂತಾಯ ಶಂಭವೇ ॥"

— ಸಿದ್ಧಾಂತ ಶಿಖಾಮಣಿ

ಮೂವತ್ತಾರುತತ್ತ್ವಗಳಲ್ಲಿ ಮೂರನೆಯದು ಸದಾಶಿವತತ್ತ್ವ. ಇದು ಮುಂದಿನ ಎಲ್ಲ ತತ್ತ್ವಗಳ ಉನ್ಮೇಷ ವಿಧಾಯಿ. ಪರಶಿವನು ಸಕಲಸೃಷ್ಟಿಕರ್ತನಾಗಬೇಕಾದರೆ ಸದಾಶಿವ ಮುಖದಿಂದಲೆ ! ಶಿವಶಕ್ತಿಯರಿಂದ ಮುಮ್ಮೊದಲು ಮೈದೋರಿದವನು ಸದಾಶಿವನು. ನಿರಾಕಾರ–ಸಾಕಾರಗಳೆರಡನ್ನೂ ಪ್ರತಿನಿಧಿಸುವ ಏಕೈಕಮೂರ್ತಿ ಆ ಸದಾಶಿವನು.

ಮೂರ್ತಾಮೂರ್ತ ಸ್ವರೂಪೇಣ ಯಥಾ ವಾಯುರ್‌ವಿರಾಜತೇ
ಸದಾಶಿವಸ್ತಥಾ ಭಾತಿ ಸರ್ವಾನುಗ್ರಹಕಾರಕಃ ।
ಶಿವತತ್ತ್ವಂ ಮಹಾಸೇನ ನಿಷ್ಕಲಂ ಚೇತಿ ಕೀರ್ತಿತಂ
ಸಕಲಂ ನಿಷ್ಕಲಂ ಚೈವ ಸದಾಶಿವಮಿಹೋಚ್ಯತೇ ॥
—ಶ್ರೀ ತಂತ್ರಾಲೋಕ

ಮೂವತ್ತಾರುತತ್ತ್ವಗಳಲ್ಲಿ ಮೊದಲಿನ ಶಿವತತ್ತ್ವ ನಾದ. ಎರಡನೆಯ ಶಕ್ತಿ ತತ್ತ್ವ ಬಿಂದು. ಮೂರನೆಯ ಸದಾಶಿವತತ್ತ್ವ ಕಲೆ. ಶಿವತತ್ತ್ವ ನಿಷ್ಕಲ, ಸದಾಶಿವ ತತ್ತ್ವ ಸಕಲ ನಿಷ್ಕಲ. "ಕಲಾವಿದ್ಯೇ ಸದಾಶಿವಃ" ಎಂದು ಅದೇ ಶ್ರೀ ತಂತ್ರಾಲೊಕ ಹೇಳಿದೆ.

"ಪೃಥ್ವ್ಯಾಂ ಬ್ರಹ್ಮಾ. ಜಲೇ ವಿಷ್ಣುಸ್ತಥಾರುದ್ರೋ ಹುತಾಶನೇ
ಈಶ್ವರಃ ಪವನೇ ದೇವೋಹ್ಯಾಕಾಶೇತು ಸದಾಶಿವಃ
ಸೋಮಸೂರ್ಯಾಗ್ನಿಮಧ್ಯಸ್ಯ ವ್ಯೋಮವ್ಯಾಪಿನ್ ಸದಾಶಿವಃ ॥ "

ಹೀಗೆಂದು ಯೋಗ ತತ್ತ್ವೋಪನಿಷತ್ತು, ವಾತುಲಾಗಮ, ಸ್ಕಾಂದ, ಸೂಕ್ಷ್ಮಾಗಮಾದಿಗಳು ಸದಾಶಿವ ತತ್ತ್ವವನ್ನು ಬಗೆಬಗೆಯಾಗಿ ಬಣ್ಣಿಸಿವೆ. ವಿಸ್ತಾರ ಭಯದಿಂದ ವಿಸ್ತರಿಸಲಾಗಿಲ್ಲ. ಶಿವನು ತಿಳಿದುಪ್ಪ; ಸದಾಶಿವನು ಗಟ್ಟಿ(ಹೆತ್ತ)ದುಪ್ಪ.

ಈಶ್ವರತತ್ತ್ವ:

ದೃಕ್ಕ್ರಿಯಾಶಕ್ತಿಯ ಉದ್ರೇಕಾವಸ್ಥೆಯಲ್ಲಿ ಪ್ರತಿಫಲಿಸಿ, ಭೂಮಿಯಲ್ಲಿ ಬಿತ್ತಿದ ಬೀಜವಂತೆ ಜಲಾಶ್ರಯದಲ್ಲಿ ನೆನೆದು ಪೂರ್ವಾವಸ್ಥೆಗೆ ವಿಲಕ್ಷಣವಾಗಿ ಅಂಕುರೋನ್ಮುಖ ವಾದುದೆ ಇದಂತಾರೂಪವು. ಇದು ಮುಂದೆ ಅಹಂತತೆಯಿಂದ ಆಚ್ಛಾದಿತವಾಗುತ್ತದೆ. ಹೀಗೆ ಇದಂ ಮತ್ತು ಅಹಂ ಎಂಬೆರಡರಿಂದ ಕೂಡಿದುದೆ–ಕಾಣುವ ಈ ವಿಶ್ವರೂಪ. ಹೀಗೆ ಅಂಕುರಿಸಿದ ಅಖಂಡ ಪ್ರಪಂಚಾಭಿಮಾನವುಳ್ಳವನಾಗಿ, ಅಹಂತತೆಯಿಂದ ಆವರಿಸಿದ ಇದಂ ರೂಪ ವಿಶ್ವಸ್ಫೂರ್ತಿಮಯನಾಗಿ ಈಶ್ವರತತ್ತ್ವವುಂಟಾಗುವುದು.

ಈಶ್ವರತತ್ತ್ವ ವಾಯ್ವುವಚ್ಛಿನ್ನ ಚೈತನ್ಯ. ಪ್ರಪಂಚ ಪ್ರಜ್ಞೆಗೆ ಪ್ರಾಣದಂತಿರುತ್ತದೆ. 'ಈಶ್ವರಃ ಸರ್ವ ವಿದ್ಯಾನಾಂ' ಎಂಬುದನ್ನು ನೆನೆಯಬೇಕು.

ಶುದ್ಧವಿದ್ಯಾ ತತ್ತ್ವ:

ಇದಂ ಎಂಬ ಭಾವವು ಕ್ರಿಯಾಪ್ರಧಾನ. ಅಹಂ ಎಂಬುದು ಜ್ಞಾನಪ್ರಧಾನ. ಒಂದು ಬಹಿರಂಗ, ಇನ್ನೊಂದು ಅಂತರಂಗ; ಇವೆರಡಕ್ಕೂ ನೀರು–ತೆರೆಗಳಂತೆ ಭೇದವಿ

ದ್ದರೂ ಸ್ವರೂಪೈಕ್ಯರೂಪ ಅಭೇದವೂ ಉಂಟು. ಆ ಅಭೇದರೂಪ ಐಕ್ಯಪ್ರತಿಪತ್ತಿಯೆ ಶುದ್ಧವಿದ್ಯಾತತ್ತ್ವ. ಕಡಲ ತೆರೆಗಳಂತೆ ಚಲನವುಂಟಾಗಿ ಈ ಶುದ್ಧವಿದ್ಯಾತತ್ತ್ವವು ಸಂಭವಿಸುತ್ತದೆ. ಇದಕ್ಕೆ ಸೃಷ್ಟಿಕಾರ್ಯದಲ್ಲಿ ಸಹಕರಿಸುವ ಚೇತನಕ್ಕೆ ಚತುರ್ಮುಖವುಳ್ಳ ಬ್ರಹ್ಮ ಎಂಬುದು ನಾಮಾಂತರವಿದೆ. ಈ ಶುದ್ಧವಿದ್ಯಾತತ್ತ್ವವು ಗುರುಕೃಪೆಯಿಂದ ಲಭ್ಯ. ಈ ತತ್ತ್ವದಲ್ಲಿ ಕ್ರಿಯಾಶಕ್ತಿ ಗೌಣ. ಒಟ್ಟಾರೆ, ದೃಕ್ಕ್ರಿಯಾಶಕ್ತಿ ಸಮರೂಪವೆ ಸದಾಶಿವತತ್ತ್ವ; ಕ್ರಿಯಾಶಕ್ತಿಯ ಆಧಿಕ್ಯವುಳ್ಳುದೆ ಈಶ್ವರ ತತ್ತ್ವ; ಜ್ಞಾನಶಕ್ತಿಯ ಆಧಿಕ್ಯವುಳ್ಳುದೆ ಶುದ್ಧವಿದ್ಯಾತತ್ತ್ವ.

ಶಿವ ಶಕ್ತಿ ಸದಾಶಿವ ಈಶ್ವರ ಶುದ್ಧವಿದ್ಯಾ ಇವಯ್ದು ಶುದ್ಧತತ್ತ್ವಗಳು. ಸದಾಶಿವ ತತ್ತ್ವದಲ್ಲಿ ಅಕ್ಷರಾತ್ಮಕವಾದ ಬಿಂದುಪದಾರ್ಥವೂ ಸ್ಥೂಲಧ್ವನಿಯುಳ್ಳ ನಾದ ಪದಾರ್ಥವೂ ಅಂತರಿತವಾಗಿರುವವು. ಈಶ್ವರತತ್ತ್ವದಲ್ಲಿ ಅನಂತನೇ ಮೊದಲಾದ ವಿದ್ಯೇಶ್ವರರೆಲ್ಲರೂ ಅಂತರ್ಭೂತರಾಗಿರುವರು. ಶುದ್ಧವಿದ್ಯಾತತ್ತ್ವದಲ್ಲಿ ಸಪ್ತಕೋಟಿ ಮಹಾಮಂತ್ರಗಳು, ಇತರ ಸರ್ವವಾಚಕಶಬ್ದಗಳು, ಕಾಮಿಕಾದಿ ಇಪ್ಪತ್ತೆಂಟು ಆಗಮಗಳು ಅಂತರ್ಗತವಾಗಿರುವುವು. ಸದಾಶಿವ, ಈಶ್ವರ, ಶುದ್ಧವಿದ್ಯಾ—ಈ ಮೂರು ಮೊದಲಿರುವ ಆ ಶಿವ–ಶಕ್ತಿ ಸಂಪುಟದೊಳಗಿನವು. ಪಾರಮಾರ್ಥಿಕವಾಗಿ ಇವಕ್ಕೆ ಭಿನ್ನಭಾವವಿಲ್ಲ.

ಮಾಯಾತತ್ತ್ವ :

ಆರನೆಯದಾದ ಇದು ಶುದ್ಧಾಶುದ್ಧತತ್ತ್ವ. ಮರ್ತ್ಯಲೋಕದ ಮೂಲ. ವಿಶ್ವಸೃಷ್ಟಿ ಸಾಹಿತ್ಯ ಸಂಗ್ರಹಿಣಿ. ಸದಸದ್ರೂಪಿಣಿ. ಮೋಹ ಭ್ರಮೆಗಳಿಗೆ ಕಾರಣೆ. ಶುದ್ಧಾಧ್ವದಲ್ಲಿ ಶಿವನಿಗೆ ಶಕ್ತಿ ಸಾಧನವಾದಂತೆ, ಅಶುದ್ಧಾಧ್ವದಲ್ಲಿ ಸಾಧನವಾಗುವುದೆ ಮಾಯೆ. ಅಶುದ್ಧಾಧ್ವದಲ್ಲಿ ಆದಿಯಲ್ಲಿ ಪರಿಣಾಮಗೊಳ್ಳುವುದೆ ಮಾಯೆ. ಇದು ಅತ್ಯಂತ ಸೂಕ್ಷ್ಮವಾಗಿದ್ದು ಅಮೂರ್ತವೆನಿಸಿದೆ. ಇದು ಕಾರ್ಯಾನುಮೇಯಿ. ಏಕತ್ವ ನಿತ್ಯತ್ವ ವ್ಯಾಪಕತ್ವ ಧರ್ಮವುಳ್ಳುದು. ಆದ್ಯಂತ ಶೂನ್ಯವಾಗಿ ಲೌಕಿಕ ಸತ್ತೆಯುಳ್ಳುದಾಗಿದೆ. ಇದಕ್ಕೆ ಪ್ರಕೃತಿ–ವಿಕೃತಿ ಎಂದು ಎರಡು ರೂಪು.

> "ಮಾಯಾಂತು ಪ್ರಕೃತಿಂ ವಿದ್ಯಾನ್ಮಾಯಿನಂತು ಮಹೇಶ್ವರಃ ।
> ತಸ್ಯಾವಯಭೂತೈಸ್ತು ವ್ಯಾಪ್ತಂ ಸರ್ವಮಿದಂ ಜಗತ್ ॥"
>
> —ಶ್ವೇತಾಶ್ವೇತರ ಶ್ರುತಿ
>
> "ಮಾಂ ಶಿವಂ ಪರಮಂ ಬ್ರಹ್ಮ ಪ್ರಾಪ್ನೋತಿತಿ ಸ್ವಭಾವತಃ
> ಮಾಯೇತಿ ಪ್ರೋಚ್ಯತೇ ಬ್ರಹ್ಮನಿಷ್ಠಾ ಸನಾತನೀ ।"
>
> —ಸಿದ್ಧಾಂತಾಗಮ

ಈ ಎರಡು ಶ್ಲೋಕಗಳು ಮಾಯಾತತ್ತ್ವದ ಬಗೆಗೆ ಅತ್ಯುತ್ತಮವಾದ ಅರ್ಥ ಅಭಿಪ್ರಾಯಗಳನ್ನು ನಿರುಕ್ತಿಯನ್ನು ನಿರೂಪಿಸಿವೆ. ಮಾಯೆ ಪ್ರಕೃತಿಯೆಂದು, ಆ ಮಾಯೆಯುಳ್ಳವನೆ ಮಹೇಶ್ವರನೆನಿಸುವನೆಂದು. ಅದು ಜಗದ್ವ್ಯಾಪಕ ತತ್ತ್ವವೆಂದು• ಅಲ್ಲದೆ ಅದು ಸ್ವಾಭಾವಿಕವಾಗಿ ಪರಶಿವಬ್ರಹ್ಮವನ್ನು ಪಡೆವ ಭಾವವುಳ್ಳದೆಂದು, ಬ್ರಹ್ಮನಿಷ್ಠವೂ ಸನಾತನವೂ ಆಗಿದೆಯೆಂದು ಹೇಳಿ ಮಾಯೆಯ ಬಗೆಗಿರುವ ಹೇಯ ಭಾವದಿಂದ ಉಪಾದೇಯ ಭಾವದತ್ತ ಕರೆದೊಯ್ಯುತ್ತವೆ.

ಮಾಯಾಶಬ್ದಕ್ಕೆ ರೂಢಿಯಲ್ಲಿ ವೇದಾಂತದಲ್ಲಿ ಹೀನವಾದ ಅರ್ಥಗಳಿವೆ. ಇಲ್ಲ ದುದು ಮಾಯೆ, ಮೋಹ, ಭ್ರಮೆ, ಕಣ್ಮನಗಳಿಗೆ ಮೋಸ. ಇವನ್ನು ಮಾಡುವುದು ಮಾಯೆ. ವಿಕೃತಿಗೆಳಸುವುದು, ಕೆಡಿಸುವುದು ಮಾಯೆ. ಅಧ್ಯಾಸಕ್ಕೆ ಅಂದರೆ ಹಗ್ಗ ವನ್ನು ಹಾವೆಂದು ಭಾವಿಸುವಿಕೆ ಮಾಯೆ. ಒಟ್ಟಿನಲ್ಲಿ, ಅಸ್ವಾಭಾವಿಕ ಸ್ಥಿತಿ–ಗತಿಗಳೆಲ್ಲ ಮಾಯೆಯೆಂದು ಹೇಳಲಾಗುತ್ತದೆ.

ಇವಕ್ಕೆಲ್ಲ ಇದಿರಾಗಿ ಶ್ವೇತಾಶ್ವೇತರ ಶ್ರುತಿಯು ಮಾಯೆಯನ್ನು ಪ್ರಕೃತಿ ಎಂದು ಸಾರಿದೆ. ಪ್ರಕೃತಿಯೆಂದರೆ ಸಮಷ್ಟಿ ವ್ಯಷ್ಟಿಗಳ ಸ್ವಾಭಾವಿಕ ಸ್ಥಿತಿ ಮತ್ತು ಸ್ವಭಾವ ಧರ್ಮ. ಅಲ್ಲದೆ ನಿಸರ್ಗವೆಂದು ನೀರೆಯೆಂದು ಶರೀರವೆಂದು ಹೇಳಲಾಗುತ್ತದೆ ಈ ಸೃಷ್ಟಿಗೆ ಕಾರಣವಾದ ಶಕ್ತಿ ತತ್ತ್ವ. ಹುಟ್ಟುಗುಣ ಎಂದು ಮುಂತಾಗಿ ಹೇಳುವುದುಂಟು ಇದಲ್ಲದೆ ಪ್ರಕೃಷ್ಟ ಕೃತಿ ಅಂದರೆ ಉತ್ಕೃಷ್ಟವಾದ ಪ್ರಧಾನವಾದ ಕಾರ್ಯ–ಕಾವ್ಯವೆಂದೂ ಹೇಳುವುದುಂಟು.

ವೀರಶೈವ ಮತದಲ್ಲಿ ಸೃಷ್ಟಿಗೆ ಕಾರಣವಾಗಿರುವ ಆ ಶಕ್ತಿಯನ್ನೆ ಪ್ರಕೃತಿ ಎಂದು ಹೇಳಲಾಗುತ್ತದೆ. ಈ ಉದಾತ್ತಭಾವದ ಅಭಿಪ್ರಾಯವನ್ನು ಸಿದ್ಧಾಂತಶಿಖಾಮಣಿ ಹೀಗೆ ಪ್ರತಿಪಾದಿಸಿ ತನ್ನ ಘನಗಂಭೀರ ಭಾವವನ್ನು ಬಿತ್ತರಿಸಿದೆ :

"ಯಾಮಾಹುಃ ಸರ್ವಲೋಕಾನಾಂ ಪ್ರಕೃತಿಂ ಶಾಸ್ತ್ರಪಾರಗಾಃ
ತಾಂ ಧರ್ಮಚಾರಿಣೀಂ ಶಂಭೋಃ ಪ್ರಣಮಾಮಿ ಪರಾಂ ಶಿವಾಂ ।
ಯಯಾ ಮಹೇಶ್ವರಃ ಶಂಭುಃ ನಾಮರೂಪಾದಿ ಸಂಯುತಃ
ತಸ್ಯೈ ಮಾಯಾ ಸ್ವರೂಪಾಯೈ ನಮಃ ಪರಮಶಕ್ತಯೇ ॥"

ಎಲ್ಲ ಶಾಸ್ತ್ರಗಳು ಆ ಪರಶಿವೆಯನ್ನೆ ಸರ್ವಲೋಕ ಪ್ರಕೃತಿ ಎಂದು ಹೇಳುತ್ತವೆ. ಅಲ್ಲದೆ ಅವಳು ಶಿವಧರ್ಮಚಾರಿಣಿಯೂ ಆಗಿದ್ದಾಳೆ. ಅವಳಿಂದಲೇ ಆ ಶಿವನಿಗೆ ಮಹೇಶ್ವರ, ಶಂಭು, ಈಶ, ಈಶ್ವರ, ಶಂಕರ ಎಂದು ಹೆಸರುಗಳು ಬಂದಿವೆ; ಆ ಆ ಹೆಸರುಗಳಿಗೆ ತಕ್ಕಂತೆ ರೂಪಗಳೂ ಬಂದಿವೆ. ಅಂತಹ ಆ ಪರಶಿವೆಯೆ ಪ್ರಕೃತಿ.

ಈ ಪ್ರಕೃತಿಯೆ ಮಾಯೆ. ಇವಳದು ಬರೀ ರೂಪವಲ್ಲ, ಸ್ವರೂಪ. ಇಂತಹ ಪರಮ ಶಕ್ತಿಗೆ ನಮ– ಪ್ರಣಾಮಗಳು.'

ಇದಲ್ಲದೆ ಎಲ್ಲರ ತಾಯಿಯೆಂದು, ಶಿವಕರಿಯೆಂದು, ಇಚ್ಛಾಜ್ಞಾನಕ್ರಿಯಾತ್ಮಕಳೆಂದು, ವಿಶ್ವಭಾವಿನಿಯೆಂದು, ಪರಮಾನಂದಪ್ರಬೋಧಲಹರಿಯೆಂದು, ಸುವಿದ್ಯಾಪ್ರದಾಯಿನಿಯೆಂದು, ಈಶಾನಮನೋರಮೆಯೆಂದು ಅದೇ ಸಿದ್ಧಾಂತಶಿಖಾಮಣಿ ಸಿದ್ಧಾಂತ ಮಾಡಿದೆ.

'ಮಂ–ಶಿವಂ ಅಯತಿ–ಸ್ವಭಾವತಃ ಪ್ರಾಪ್ನೋತೀತಿ ಮಾಯಾ' ಎಂದು ಮಾಯಾ ಶಬ್ದವನ್ನು ಸಿದ್ಧಾಂತಾಗಮವು ವಿಗ್ರಹಿಸಿ ಮಾಯಾಸ್ವರೂಪವನ್ನು, ಸ್ವಭಾವವನ್ನು ಸ್ಪಷ್ಟಗೊಳಿಸಿದೆ; ಸ್ಪಷ್ಟಗೊಳಿಸಿದ್ದಾರೆ ಶಿವಾಚಾರ್ಯರು. ಇದರಿಂದಾಗಿ ಪುರಾತನವೂ ಶಾಶ್ವತವೂ ಆದ ಮಾಯೆ ವೀರಶೈವಮತದಲ್ಲಿ ಮಿಥ್ಯಾಭೂತವಾದುದಲ್ಲ; ಅವಿದ್ಯೆಯಲ್ಲ. ಪ್ರಾಪಂಚಿಕವೂ ಪಾರಮಾರ್ಥಿಕವೂ ಆದ ಪ್ರಕೃತಿ. ಇದು ಕ್ರಿಯಾಶಕ್ತಿ, ನಿವೃತ್ತಿಕಲೆಗಳಿಂದ ಕೂಡಿಕೊಂಡಿರುತ್ತದೆ. ಮಹೇಶ್ವರನ ಸಂಕಲ್ಪದಂತೆ ಸದ್ಧರ್ಮದಂತೆ ಇರುತ್ತದೆ; ಆತನ ಕ್ರೀಡೋ(ಲೀಲೋ)ಪಕರಣವೂ ಆಗಿರುತ್ತದೆ.

ಒಟ್ಟಿನಲ್ಲಿ, ತಾನೆ ತಾನಾಗಿ ಇರುವ ಶಿವನನ್ನು ಸೃಷ್ಟಿಕ್ರಿಯೆಗೆ ತೊಡಗಿಸುವ ಕೆಲಸದಲ್ಲಿರುವಾಗ ಆ ಅವಿಚಲಶಕ್ತಿಯೆ ಮಾಯೆಯೆನಿಸುತ್ತಾಳೆ. ಸೃಷ್ಟಿ ಸ್ಪಂದನಕ್ರಿಯೆಯೆ ಮಾಯೆ. ಇದರಿಂದಾಗಿ ಮಾಯೆಗೆ ಮಾತೃತ್ವ ಬಂದಿದೆ; ಸೃಜನಸಾಮರ್ಥ್ಯ ಸಮನಿಸಿದೆ. ಈ ಮಾಯೆಯ ಸತ್ವಗುಣದಲ್ಲಿ ಪ್ರತಿಫಲಿಸಿದ ಶುದ್ಧಚೈತನ್ಯವೆ ಸೃಷ್ಟಿಕ್ರಮಕ್ಕೊಳಗಾದ ರುದ್ರ ಅಥವಾ ಮಹೇಶ್ವರ. (ಸೃಷ್ಟಿಗಾದಿಯಲ್ಲಿದ್ದ, ಇರುವ ರುದ್ರನೊಬ್ಬ ಬೇರೆ) ರಜೋಗುಣದಲ್ಲಿ ಪ್ರತಿಫಲಿಸಿದ ಚೈತನ್ಯವೇ ಬ್ರಹ್ಮ. ತಮೋಗುಣದಲ್ಲಿ ಪ್ರತಿಫಲಿಸಿದ ಚೈತನ್ಯವೇ ವಿಷ್ಣು. ಈ ಸೃಷ್ಟಿಕ್ರಮದಲ್ಲಿರುವ ರುದ್ರನಲ್ಲಿ ಅಗ್ನಿತತ್ತ್ವ, ಬ್ರಹ್ಮನಲ್ಲಿ ಸೋಮತತ್ತ್ವ, ವಿಷ್ಣುವಿನಲ್ಲಿ ಸೂರ್ಯತತ್ತ್ವಗಳು ಅಂತರ್ಗತವಾಗಿರುವುವು. ರುದ್ರನ ತೇಜೋಂಶದಲ್ಲಿ ಗಣರು ಜಂಗಮರು ಉತ್ಪತ್ತಿಗೊಳ್ಳುವರು. ವಿಶ್ವಾಧಿಕನೂ ವಿಶ್ವವಂದ್ಯನೂ ರುದ್ರನಾಗಿರುವುದರಿಂದ ಅವನಿಂದಾದ ಗಣರು ವಿಶ್ವವಂದ್ಯರು.

> "ಅನಾದಿಯಾಗಿ ಶಿವನುಂಟು, ಮಾಯೆಯುಂಟು,
> ಇಂತು ಮಾಯಾಶಕ್ತಿಯಿಂದ ಸಮಸ್ತಜಗತ್ತಿನ ಜನನ ನೋಡಾ !
> ಇದನಾವರಿದೆವಯ್ಯಾ !......... ಆ ಲಿಂಗನಿರ್ಮಿತದಿಂದ ಮಾಯೆ ಪುಟ್ಟಿ,
> ಆ ಮಾಯೆಯಿಂದ ತತ್ತ್ವ ಬ್ರಹ್ಮಾಂಡಾದಿ ಲೋಕಾದಿ ಲೋಕಂಗಳು
> ಹುಟ್ಟಿದವು ನೋಡಾ !......"

ಎಂದು ತೋಂಟದ ಸಿದ್ಧೇಶ್ವರರ ವಚನವುಂಟು.

ಪಂಚಕಂಚುಕತತ್ತ್ವ :

ಅಶುದ್ಧ ವಿದ್ಯಾ, ಕಲಾ, ಕಾಲ, ರಾಗ, ನಿಯತಿ ಇವು ಐದು ಕವಚಗಳು. ಇವು ಜಗವನ್ನು ಆವರಿಸಿವೆ. ಇದರಿಂದ ಇವನ್ನು ಪಂಚಕಂಚುಕಗಳೆಂದು ಹೇಳುವರು. ಇವು ಜ್ಞಾತೃತ್ವಶಕ್ತಿ, ಪೂರ್ಣತ್ವಶಕ್ತಿ, ನಿತ್ಯತ್ವಶಕ್ತಿ, ಕರ್ತೃತ್ವಶಕ್ತಿ, ವ್ಯಾಪಕತ್ವಶಕ್ತಿಗಳ ಅತ್ಯಂತ ಸಂಕೋಚಾವಸ್ಥೆಯಿಂದ ಕ್ರಮವಿಡಿದು ರೂಪುಗೊಳ್ಳುತ್ತವೆ. ಇವನ್ನು ಆಶ್ರಯಿಸಿದವರ ಸ್ವಭಾವಗಳನ್ನು ಸಂಕೋಚಗೊಳಿಸುತ್ತವೆ; ಜೀವನವನ್ನು ಮೊಟಕು ಗೊಳಿಸುತ್ತವೆ.

ಈ ಪ್ರಪಂಚವನ್ನು ಪಂಚಮಲಗಳು ಆವರಿಸಿವೆ. ಆಣವ, ಮಾಯಾ, ಕಾರ್ಮಿಕ, ಮೋಹ, ತಿರೋಧಾನ–ಇವೇ ಐದು ಮಲಗಳು. ಇವುಗಳಲ್ಲಿ ಆಣವ ಮಲದಿಂದ ಪೂರ್ಣತ್ವಶಕ್ತಿ ಸಂಕೋಚಗೊಂಡು ಕಲಾಕಂಚುಕ, ಮಾಯಾಮಲದಿಂದ ಜ್ಞಾತೃತ್ವ ಶಕ್ತಿ ಸಂಕೋಚಗೊಂಡು ಅಶುದ್ಧ ವಿದ್ಯಾ (ಅವಿದ್ಯಾ)ಕಂಚುಕ, ಕಾರ್ಮಿಕಮಲದಿಂದ ಕರ್ತೃತ್ವಶಕ್ತಿ ಸಂಕೋಚಗೊಂಡು ನಿಯತಿಕಂಚುಕ, ಮೋಹಮಲದಿಂದ ವ್ಯಾಪಕತ್ವ ಶಕ್ತಿ ಸಂಕೋಚಗೊಂಡು ರಾಗಕಂಚುಕ, ತಿರೋಧಾನಮಲದಿಂದ ನಿತ್ಯತ್ವಶಕ್ತಿ ಸಂಕೋಚಗೊಂಡು ಕಾಲಕಂಚುಕ ಆವಿರ್ಭವಿಸಿ ಆವರಣವಾಗಿವೆ.

ಅಲ್ಪಜ್ಞಾತೃತ್ವವೆ ಅಶುದ್ಧವಿದ್ಯೆ ಅಥವಾ ಅವಿದ್ಯೆ. ಚೂರ್ಣಶಕ್ತಿಯೆ ಕಲೆ. ಅಲ್ಪಕಾಲ ಸೂಚಕವೆ ಅಥವಾ ಕಾಲಮಾಪಕವೆ ಕಾಲ. ಮೋಹಮಲದಿಂದ ವ್ಯಾಪಕ ವಾದ ವಿಶುದ್ಧವಾದ ಪ್ರೇಮ ಅವ್ಯಾಪಕವಾಗಿ ಅಶುದ್ಧವಾಗಿ ರಾಗವೆನಿಸಿದೆ. ತಿರೋ ಧಾನವೆಂದರೆ ಮುಚ್ಚುಮರೆಮಾಡುವಿಕೆ, ಅಡಗಿಸಿ ಅಲ್ಲಗಳೆಯುವಿಕೆ: ಇದರಿಂದಾಗಿ ಕಾಲ ಕಲ್ಮಷವಿಲ್ಲದ ಅಥವಾ ಅಡೆತಡೆಯಿಲ್ಲದ ನಿತ್ಯತ್ವ ಸಂಕೋಚವಾಗಿ ನಿಯಮಹೇತುಭೂತ ವಾದ ನಿಯತಿಯು ಕಂಚುಕವೆನಿಸಿದೆ. ಇವುಗಳಿಗೆ ಒಳಗಾದ ಪುರುಷ–ಪ್ರಕೃತಿಗಳು ಸಂಕುಚಿತಗೊಳ್ಳುತ್ತಾರೆ.

ಈ ಪಂಚಾವರಣರೂಪ ಕಂಚುಕಗಳ ಪರಿಹಾರಕ್ಕಾಗಿ ಅಷ್ಟಾವರಣಗಳನ್ನು ತನ್ನ ಗುರುದೇವನಿಂದ ಪುರುಷ-ಪ್ರಕೃತಿಯರು ಪಡೆಯಬೇಕೆಂಬುದು ವೀರಶೈವಮತ. ಪಡೆದರೆ ಮಲಪಂಚಕವೆಂಬ ಮಣ್ಣಿನ ಗಡಿಗೆಯಿಂದ ಮುಚ್ಚಿದ ಪುರುಷ–ಪ್ರಕೃತಿಗಳ ಪ್ರಕಾಶವು ಗುರುಕಾರುಣ್ಯಬಲದಿಂದ ಮಣ್ಣುಕೊಡದಿಂದ ಹೊರಗೆ ಬಂದು ಹಿರಿದಾದ ಹೊಳಪೇರು ತ್ತದೆ. ಸೀಮಿತಶಕ್ತಿ ಸೀಮಾತೀತವಾಗುತ್ತದೆ. ಜೀವನು ಶಿವನೆನಿಸುತ್ತಾನೆ. ಅಣುತ್ವ ದಿಂದ ವಿಭುತ್ವಕ್ಕೆ ಬರುತ್ತಾನೆ. ಮಲಿನ ಮಾಯಾವರಣವನ್ನು ಮಾಣಿಸಿ ಮಹಾ ಮಾಯಾಸ್ಥಿತನಾಗುತ್ತಾನೆ. ಪವಿತ್ರ ಪ್ರೇಮಾಸ್ಪದನಾಗುತ್ತಾನೆ. ನಿಯಮ್ಯನೆನಿಸದೆ ನಿಯಾಮಕನೆನಿಸುತ್ತಾನೆ. ಜ್ಞಾತೃತ್ವ ಕರ್ತೃತ್ವಗಳಲ್ಲಿ ಪೂರ್ಣತ್ವವನ್ನು ಪಡೆಯುತ್ತಾನೆ.

ಕಾಲಬಾಧೆ ಕಾಲಭಯಗಳಿಗೆ ಒಳಗಾಗದಂತಿರುತ್ತಾನೆ. ಕಲೆಯನ್ನು ಕಳೆಯನ್ನಾಗಿಸಿಕೊಂಡು ಕಳಾತ್ಮನಾಗುತ್ತಾನೆ.

> "ತನುತ್ರಯ ಗತಾನಾದಿ ಮಲತ್ರಯಮಸೌ ಗುರುಃ
> ದೀಕ್ಷಾತ್ರಯೇಣ ನಿರ್ದಗ್ಧ್ವಾ ಲಿಂಗತ್ರಯಮುಪಾದಿಶತ್ ।"

ಅನಾದಿಯಿಂದ ತನಗೆ ಗಂಟುಬಿದ್ದ ಮಲಗಳು ನಿರ್ಮಲವಾಗಬೇಕಾದರೆ ಗೌರ ಸಂಸ್ಕಾರವೇ ಬೇಕು; ಅದೇ ಆಧಾತ್ಮಪ್ರಕಾಶಭಾನು. ಗುರುಕಾರುಣ್ಯದಿಂದ ಮಲಗಳನ್ನು ಮಾಣಿಸುವ ಮಹಾಕಳೆಗಳುಳ್ಳ ಲಿಂಗತ್ರಯಗಳು ಪುರುಷ–ಪ್ರಕೃತಿಯರಿಗೆ ಪ್ರಾಪ್ತಿಸುತ್ತವೆ.

ಕಂಚುಕಸ್ವಭಾವದ ಮಲಗಳು ಆನುವಂಶಿಕ, ಆರ್ಜಿತ ಎಂದು ಎರಡು ಬಗೆ. ತಂದೆಯ ರೇತಸ್ಸು, ತಾಯಿಯ ರಕ್ತ–ಇವೆರಡು ಪರಿವಿಡಿದು ಕಾರ್ಮಿಕ–ಮಾಯಾಮಲಗಳಾಗುತ್ತವೆ. ಮತ್ತು ಆ ರೇತೋರಕ್ತ ಸಮ್ಮಿಶ್ರಣವೆ ಆಣವಮಲವೆನಿಸುತ್ತದೆ. ಇವು ಆನುವಂಶಿಕಮಲತ್ರಯ. ಮೋಹ–ತಿರೋಧಾನ ಮಲಗಳೆರಡು ಮಾಯಾ–ಆಣವ ಮಲಗಳಲ್ಲಿಯೆ ಇರುತ್ತವೆಯೆಂದು ವೀರಶೈವಮತ. ವೀರಶೈವ ಮಲತ್ರಯವಾದದಲ್ಲಿ ತಂದೆಯ ಕರ್ಮ ಆತನ ರೇತಸ್ಸಿನಲ್ಲಿ, ತಾಯಿಯ ಅಜ್ಞಾನ ಅವಳ ರಕ್ತದಲ್ಲಿ ಬೆರೆತು ಬಂದಿರುತ್ತವೆ. ಅವೆರಡರ ಕೂಟದಿಂದಾದ ಪಿಂಡದಲ್ಲಿ ಬಂದು ನಿಂತ ವಿಭು ಚೈತನ್ಯ ಅಣುವಾಗುವುದರಿಂದ ಆಣವತ್ವ ಘಟಿಸುತ್ತದೆಂದು ಅಭಿಪ್ರಾಯ.

ಇನ್ನು ಮಾನವನ ಸಂಚಿತಾದಿ ಕರ್ಮ, ಪ್ರಾಕೃತಿಕಮಾಯೆ, ಅಲ್ಪತ್ವಭಾವ–ಇವು ಆರ್ಜಿತ ಮಲತ್ರಯಗಳು. ಇವು ತ್ರಿವಿಧ ದೀಕ್ಷೆಯಿಂದ ಒದಗುವ ತ್ರಿವಿಧ ಲಿಂಗಧಾರಣದಿಂದ ನಿವೃತ್ತಿಯಾಗುತ್ತವೆ.

ಇಲ್ಲಿ ಮಲವೆಂದರೆ ಬರೀ ಸ್ಥೂಲವಾದ ಬಾಹ್ಯವಾದ ಕೊಳೆಯೆಂದರ್ಥವಲ್ಲ. ಬಹಿರಂಗ ಅಂತರಂಗಗಳಲ್ಲಿ ಜಡಕರ್ಮ ಜಡಜ್ಞಾನ ಜಡಭಾವಗಳಿಂದ ಉಂಟಾಗುವ ಸಂಕೋಚರೂಪ ಅನಿಷ್ಟದೋಷಗಳು. ಆ ನಿತ್ಯಪೂರ್ಣಾಖಂಡಸ್ವರೂಪ ಶಿವಾದ್ವೈತ ತತ್ತ್ವದಲ್ಲಿರುವ ಮಹದಿಚ್ಛಾಶಕ್ತಿಯ ಸಂಕೋಚರೂಪವೆ ಅಂದರೆ ಅಲ್ಪಭೋಕ್ತೃತ್ವವೆ ಅಥವಾ ಅಪರಿಪೂರ್ಣತ್ವವೆ ಆಣವೀಯ ಮಲ. ಆ ಮಹಾಜ್ಞಾನ ಶಕ್ತಿಯ ಸಂಕೋಚವೆ ಅಂದರೆ ಅಲ್ಪಜ್ಞತ್ವವೇ ಮಾಯಾಮಲ. ಆ ಮಹಾಕ್ರಿಯಾಶಕ್ತಿಯ ಸಂಕೋಚತ್ವವೇ ಅಂದರೆ ಅಲ್ಪಕರ್ತೃತ್ವವೆ ಕಾರ್ಮಿಕ ಮಲ. ಇವು ಮೂರು ಪರಿವಿಡಿದು ಪುರುಷ ಪ್ರಕೃತಿಯರ ಕಾರಣ ಸೂಕ್ಷ್ಮ ಸ್ಥೂಲ ತನುಗಳಲ್ಲಿರುತ್ತವೆ. ತ್ರಿವಿಧ ತೇಜಗಳನ್ನು ಮುಚ್ಚಿರುತ್ತವೆ, ಸತ್‌ಚಿತ್ ಆನಂದತ್ವಗಳಿಗೆ ವಂಚಿತರನ್ನಾಗಿಸುತ್ತವೆ. ಇವು ಪುರುಷ ಪ್ರಕೃತಿ ನಿಷ್ಠಗಳು.

ಪುರುಷತತ್ತ್ವ :

ಇದು ಪನ್ನೆರಡನೆಯ ತತ್ತ್ವ. ಪ್ರಾಂಪಚಿಕ ಪ್ರಧಾನತಕತ್ತ್ವ. ಅಂತೆಯೆ ಪಾರಮಾರ್ಥಿಕ ತತ್ತ್ವವಾಗಿಯೂ ಪ್ರತಿಪಾದಿತವಾಗಿದೆ ಶಾಸ್ತ್ರಗ್ರಂಥಗಳಲ್ಲಿ ! ಪುರುಷ ಅಂದರೆ ಆತ್ಮ. ಮನುಷ್ಯ , ಗಂಡು ಎಂದು ಅರ್ಥಗಳಿರುವಂತೆ ಪರಶಿವ ಪರಬ್ರಹ್ಮ ವಿಷ್ಣು ಎಂದರ್ಥಗಳೂ ಇವೆ. ಇವೆಲ್ಲಕ್ಕಿಂತ ಇಲ್ಲಿ ಪ್ರಕೃತದಲ್ಲಿ 'ದೇಹಿ'ಯನ್ನು ಕುರಿತು ವಿಚಾರವಿದೆ.

ಪರಂಜ್ಯೋತಿರೂಪ ಪರಮಾತ್ಮನ ಇಚ್ಛಾಶಕ್ತಿಯ ಪ್ರೇರಣೆಯಿಂದ ಬೇರ್ಪಟ್ಟು ಮಾಯಾತತ್ತ್ವದಲ್ಲಿ ಪ್ರತಿಫಲಿಸಿದ ಆತನ ಪ್ರಕಾಶಾಂಶವೆ ಪುರುಷತತ್ತ್ವ ! ಅಗ್ನಿ–ಅಗ್ನಿ ಸ್ಫುಲಿಂಗಗಳಂತೆ ಪರಮೇಶ್ವರ–ಪುರುಷರ ಭೇದಾಭೇದ ಪ್ರವೃತ್ತಿ ! ಸ್ಫುಲಿಂಗಗಳಂತೆ ಪುರುಷರು ಅನೇಕರು. ಅಗ್ನಿಯಂತೆ ಆ ಪರಶಿವನೊಬ್ಬ. ಪುರುಷತತ್ತ್ವ ಅಜಡ, ಅಸೀಮಿತ. ಆದರೂ ತ್ರಿಮಲಬದ್ಧನಾಗಿ ತ್ರಿಕರ್ಮ ಆವೃತನಾಗಿ ಸಂಸಾರಜೀವಿಯೆ ನಿಸಿದ್ದಾನೆ. ಅಲ್ಪಕರ್ತೃ, ಅಲ್ಪಜ್ಞ, ಅಪೂರ್ಣ, ಅನಿತ್ಯ, ಅವ್ಯಾಪಕನೆನಿಸಿದ್ದಾನೆ. ಔಪಾಧಿಕ ಜೀವಭಾವವನ್ನು ತಾಳಿದ್ದಾನೆ. ಸ್ವಯಂ ಪ್ರಕಾಶಸ್ವರೂಪ ಪರಶಿವನಿಂದ ವಿಭಜಿತನಾಗಿ ವಿಚ್ಛಿನ್ನನಾಗಿ ಅಶುದ್ಧ ಮಾಯೆಯಿಂದ ಆವೃತನಾಗಿ ನಾನು ದೇವನಲ್ಲ ವೆಂಬ, ತನ್ನ ದೇಹಾದಿಗಳೆ ತಾನೆಂಬ, ತಾನು ಅಲ್ಪನೆಂಬ ಭಾವನೆಯ ಆಣವಮಲದಿಂದ ಆವೃತನಾಗುತ್ತಾನೆ. ಆ ಆಣವಮಲಜನ್ಯ ಅಜ್ಞಾನದಿಂದ, ವೈಷಯಿಕ ವಾಸನೆ ಯಿಂದ ಕರ್ಮತ್ರಯ ಸಂಚಯದೊಳಗೆ ಮುಳುಗಿ, ಕಾರ್ಮಿಕಮಲದಿಂದ ಕೂಡಿರುತ್ತಾನೆ. ಆ ಕಾರ್ಮಿಕಮಲದಿಂದ ಸ್ವಾರ್ಥಸಂಕುಚಿತ ಸ್ವಭಾವದವನಾಗಿ, ಅನ್ಯೋನ್ಯ ಭೇದಭಾವದಿಂದ ಸಮದರ್ಶಿತ್ವವನ್ನು ಕಳೆದುಕೊಂಡು, ಅವಿದ್ಯಾವೃತನಾಗಿ ಮಾಯೀಯ ಮಲವುಳ್ಳ ವನಾಗುತ್ತಾನೆ. ಈ ತ್ರಿಮಲ ಶೃಂಖಲದಿಂದ ಬಂಧಿತನಾಗಿ, ಬದ್ಧಜೀವಿಯಾಗಿ, ಅಶುದ್ಧ ಭಾವಿಯಾಗಿ, ಅಪ್ರಬುದ್ಧಜೀವಿಯಾಗಿ ಬಾಳುತ್ತಾನೆ. 'ಪುರಿ ಶೇತ ಇತಿ ಪುರುಷಃ', ದಹರ ಪುಂಡರೀಕ ಪುರಿಯಲ್ಲಿರುವವನಾಗಿ ಪುರುಷನೆನಿಸಿದ್ದಾನೆ. ಈ ಮಲಯುಕ್ತ ಪುರದಲ್ಲಿ ಅಂದರೆ ಗುರುಸಂಸ್ಕಾರವಾದ ಶರೀರದಲ್ಲಿ ಮೋಹವುಳ್ಳವನಾಗಿ ಪುರುಷ ನೆನಿಸಿದ್ದಾನೆ, ಪುರುಷಾರ್ಥವಿಹೀನನಾಗಿದ್ದಾನೆ. ಅದೇ ಎಚ್ಚೆತ್ತು ಗುರು ಸನ್ನಿಧಿಯಲ್ಲಿ ಪ್ರಾರ್ಥಿಸಿ, ಗುರುಕರುಣೆಯನ್ನು ಪೊಂದಿ, ದೇಹವನ್ನು ತನ್ನನ್ನು ದೇವತ್ವಕ್ಕೇರಿಸಿ ಪುರುಷಪದವನ್ನು ಆ ಪರಮ ಅರ್ಥದಲ್ಲಿ ಸಾರ್ಥಕಗೊಳಿಸಿ ಶಿವಾದ್ವೈತಿಯೆನಿಸುತ್ತಾನೆ.

ಇಹ– ಪರಗಳಿಗೆ ಪುರುಷನೇ ಕಾರಣ: ಇವನೇ ಅಗ್ರಗಣ್ಯ. ಪಿಂಡಾಂಡವಲ್ಲಿಯಂತೂ ಇವನಿಗೆ ಅಗ್ರಸ್ಥಾನ ಸಹಜವಾಗಿ ಮೀಸಲಾಗಿದೆ.

"ಇಂದ್ರಿಯೇಭ್ಯಃ ಪರಾಹ್ಯರ್ಥಾ ಅರ್ಥೇಭ್ಯಶ್ಚ ಪರಂ ಮನಃ
ಮನಸಸ್ತು ಪರಾ ಬುದ್ಧಿರ್ ಬುದ್ಧೇರಾತ್ಮಾ ಮಹಾನ್ ಪರಃ ।

ಮಹತಃ ಪರಮವ್ಯಕ್ತಮವ್ಯಕ್ತಾತ್ ಪುರುಷಃ ಪರಃ
ಪುರುಷಾನ್ನ ಪರಂ ಕಿಂಚಿತ್ ಸಾ ಕಾಷ್ಠಾ ಸಾ ಪರಾಗತಿಃ ॥"

— ಕಠೋಪನಿಷತ್.

ಪುರುಷನ ವ್ಯಕ್ತಿತ್ವ ಹಿರಿಯದು, ಹರವಾದುದು. ಪ್ರಪಂಚ – ಪರಮಾರ್ಥಗಳೆರಡರ ಜೀವಾಳ ಆತನಾಗಿದ್ದಾನೆ. ಪ್ರಕೃತಿ ಈತನ ಒಂದಂಗ, ಒಂದಂಶ. ಇದರ ವಿಕೃತಿಗೆ ವಶನಾದ ಪುರುಷನು ತನ್ನ ಆ ಪ್ರತಿಭಾನ್ವಿತ ವ್ಯಕ್ತಿತ್ವವನ್ನು ಮಂಕಾಗಿಸಿಕೊಳ್ಳುತ್ತಾನೆ. ಅದೇ ಶುದ್ಧಪ್ರಕೃತಿನಿಷ್ಠವಾಗಿದ್ದರೆ ಮಂಕಾಗದು. ದಿಟವಾಗಿ ಚೇತನಪುರುಷನಿಗೆ ಸಂಸಾರ ಸಂಬಂಧವಿಲ್ಲ; ಈ ಭವದ ಬಂಧನವಿಲ್ಲ. ಅಚ್ಚ ಬೆಳಗಾಗಿ, ಅವಸ್ಥೆಗಳ ನೀಗಿ, ತುರ್ಯ–ತುರ್ಯಾತೀತನಾಗಿ ಬಾಳುವ, ಆ ಹೆಬ್ಬೆಳಗನ್ನು ಲೋಕಕ್ಕೆ ಹಂಚುವ ಅಗ್ಗಳಿಕೆಯುಳ್ಳವನಾಗುವನು. ಎಲ್ಲವನ್ನೂ ವಿಚಾರಿಸಿ ಆಚರಿಸಬಲ್ಲ; ಅಳವಡಿಸಿಕೊಳ್ಳಬಲ್ಲ; ಅಳವಡಿಸಿಕೊಂಡು ಅಳವಿಗನಾಗಬಲ್ಲ. ಆ ಸಾಮರ್ಥ್ಯವನ್ನು ಸಂಗಳಿಸಿಕೊಂಡಲ್ಲಿ ಈ ಪುರುಷ ಆ ಪುರುಷನಾಗಬಲ್ಲ; ಅಂದರೆ ಪರಮಪುರುಷನಾಗಬಲ್ಲ. 'ಪುರುಷ ಏವೇದಂ ಸರ್ವಂ' ಎಂದಿದೆ ಪುರುಷಸೂಕ್ತ.

ಈ ಪ್ರಪಂಚಜಂಜಡದಲ್ಲಿ ಮಾತ್ರ ತಲ್ಲೀನನಾದ ಈತನಿಗೆ ಅಶುದ್ಧವಿದ್ಯಾ, ಕಲಾ, ಕಾಲ, ರಾಗ, ನಿಯತಿಗಳು ಕಂಚುಕಗಳಾಗಿ ಪರಿಣಮಿಸಿವೆ. ಇವುಗಳಿಂದ ಪರಿವೀತನಾಗಿ, ಪರಿಮಿತ ಶಕ್ತನಾಗಿ, ಪರಿಹೃತ ಶಕ್ತನಾಗಿ ಇವನು 'ಕಂಚುಕಿ' ಯೆನಿಸುತ್ತಾನೆ.

"ಸಹಸ್ರ ಶೀರ್ಷನು ಆದಿಪುರುಷನು;
ತ್ರಿಪಾದೂರ್ಧ್ವ ಪುರುಷನೊಬ್ಬ ಪುರುಷನು;
ಉದನ್ಮುಖನೊಬ್ಬ ಪುರುಷನು;
ಉದಯ ಪುರುಷನೊಬ್ಬ ಪುರುಷನು;
ವಿರಾಟ್ ಪುರುಷನೊಬ್ಬ ಪುರುಷನು;
ಆದಿಪುರುಷನೊಬ್ಬ ಪುರುಷನು;
ತದ್ವಿಯತ್ಪುರುಷನೊಬ್ಬನು; ಪುರುಷನಿಲ್ಲದ ಪ್ರಭೆಯು ನೋಡಿರೇ.
ವೇದನಾದಾತೀತ, ತುರೀಯ ಪರಮಾನಂದ, ನಿರವಯ;
ಷಟ್‌ತ್ರಿಂಶತ್ ಪ್ರಭಾಪಟಲದ ಬೆಳಗಿದೆ ನೋಡಿರೋ !
ಬೆಳಗಿನೊಳಗಣ ಮಹಾಬೆಳಗಿನ ಬೆಳಗು
ನಮ್ಮ ಕೂಡಲಸಂಗಮದೇವಯ್ಯ."

ಬಸವಣ್ಣನವರ ವಚನದಲ್ಲಿ ಪುರುಷಪ್ರಭೇದಗಳು ಪ್ರತಿಪಾದಿತವಾಗಿವೆ. ಕೊನೆಯದಾಗಿ, ಪರಮ ಪುರುಷನ ಸಲ್ಲಕ್ಷಣವಿಧಾನವಿದೆ. ಷಟ್‌ತ್ರಿಂಶತ್ ಅಂದರೆ ೩೬

(ಮೂವತ್ತಾರು). ಇವನ್ನು (ತತ್ತ್ವಗಳನ್ನು) ಪರಮಾರ್ಥವಾಗಿ ಅಳವಡಿಸಿಕೊಂಡವನಲ್ಲಿ ಅವುಗಳ ಆ ಪ್ರಭಾಪಟಲದ ಬೆಳಗನ್ನು ಪಡೆಯುತ್ತಾನೆ; ಬೆಳಗಿನೊಳಗಿನ ಮಹಾಬೆಳಗಿನ ಬೆಳಗಾಗಿ ಬೆಳಗುತ್ತಾನೆ. ಆತನೇ ಆ ಚಿಚ್ಛೈತನ್ಯ ಪುರುಷ; ಸತ್ಯ ಶಿವಲಾವಣ್ಯ ಪುರುಷ.

ಪ್ರಕೃತಿ ತತ್ತ್ವ :

ಇದು ಪುರುಷನ ಸ್ವಭಾವ; ಮೂಲರೂಪ . ಇದು ಪುರುಷನಿಗೆ ಭಿನ್ನವಲ್ಲ. ಪುರುಷನ ಶಕ್ತಿಸ್ವರೂಪಿಣಿ; ಗುಣವಿಕಾಸಕಾರಿಣಿ.

ಕಾರ್ಯೋನ್ಮುಖವಾದ ಆ ಇಚ್ಛಾಶಕ್ತಿಯು ತನ್ನೊಳಗಿರುವ ಜ್ಞಾನಕ್ರಿಯಾ ಶಕ್ತಿಗಳ ಅನ್ಯೋನ್ಯಾಭಾವರೂಪ ಮಾಯಾತತ್ತ್ವದಲ್ಲಿ ಮರಳಿ ಪ್ರತಿಸ್ಫುರಣಗೊಂಡು ಪ್ರಕೃತಿತತ್ತ್ವವೆನಿಸುವುದು. ಇಧರ ಸುಖ–ದುಃಖ–ಮೋಹಗಳನ್ನು ಪರಿಪಡಿದು ಹುಟ್ಟಿಸುವ ಸತ್ವರಜತಮೋಗುಣಗಳಿಂದ ಕೂಡಿರುವುದು. ಇದು ಪುರುಷನ ಸ್ಥೂಲಾಂಗದಲ್ಲಿ ದೇಹಾಕಾರವಾಗಿ, ಸೂಕ್ಷ್ಮಾಂಗದಲ್ಲಿ ಪ್ರಾಣಾಕಾರವಾಗಿ, ಕಾರಣಾಂಗದಲ್ಲಿ ಭಾವಮಯವಾಗಿ ಇರುತ್ತದೆ. ಜಾಗ್ರದವಸ್ಥೆಯಲ್ಲಿ ಸತ್ವಗುಣವನ್ನು, ಸ್ವಪ್ನದಲ್ಲಿ ರಜೋಗುಣವನ್ನು, ಸುಷುಪ್ತಿಯಲ್ಲಿ ತಮೋಗುಣವನ್ನು ಅಭಿವ್ಯಕ್ತಗೊಳಿಸುತ್ತದೆ. ಮೂಲಭೂತವಾಗಿ ಈ ಮೂರು ಗುಣಗಳು ಪ್ರಕೃತಿಯಲ್ಲಿ ಹೆಚ್ಚು ಕಮ್ಮಿಯಿಲ್ಲದೆ ಸಮವಾಗಿರುತ್ತವೆ. ಪ್ರಕೃತಿಯು ತನ್ನ ಸಾಮ್ಯಗುಣವನ್ನು ಬಿಟ್ಟು ವೈಷಮ್ಯಾವಸ್ಥೆಗೆ ಬಂದಾಗ ಮುಂದಿನ ಇಪ್ಪತ್ತುಮೂರು ತತ್ತ್ವೋತ್ಪತ್ತಿಗೆ ಕಾರಣವಾಗುವುದು. ವಿಶ್ವವಿಕಾಸವಾದಕ್ಕೆ ಸಮಷ್ಟಿಪ್ರಕೃತಿ ಪ್ರಥಮವಸ್ತು. ಅಂತೆಯೆ ಪಿಂಡಾಂಡ ವಿಕಾಸಕ್ಕೂ ವ್ಯಷ್ಟಿ ಪ್ರಕೃತಿಯೊಡನೆ ಸಹಕರಿಸುತ್ತದೆ. ಕಲೆಯು ಉಭಯ ಪ್ರಕೃತಿಯ ಆವರಣಶಕ್ತಿ.

"ಕಲೆಯುಯ್ದು ಆರಿಂದ ಸೃಷ್ಟಿಯಂ ತಾಳ್ದಪವೊ
ಕಲೆಗಳ್ಗೆ ಮೂಲಮಾ ಕುಂಡಲಿನಿ ಉದಯಿಸಿತೊ
ಅವಳನಾಂ ಕೆಯ್ಮುಗಿದು ಕೊಂಡಾಡುವೆಂ ಮಿಗೆ
ಅವಳೆ ಲೋಕಕೆ ಮಾತೆ, ಅವಳೆ ಮಂಗಳದಾತೆ !

— ಸಿದ್ಧಾಂತ ಶಿಖಾಮಣಿಯ ಕನ್ನಡ ಅನುವಾದ

ಇಚ್ಛಾಶಕ್ತಿಯು ಪುರುಷನ ಭೋಗಸಿದ್ಧಿಗಾಗಿ ಕಲಾಮಯವಾದ ಪ್ರಕೃತಿ ತತ್ತ್ವವನ್ನು ಹುಟ್ಟಿಸುವುದು. ಈ ಪ್ರಕೃತಿಯಲ್ಲಿ ಸತ್ವಾದಿಗುಣಗಳು ಮೂಲದಲ್ಲಿ ಅವ್ಯಕ್ತವಾಗಿರುವುದರಿಂದ ಇವನ್ನು ಅವ್ಯಕ್ತವೆಂದು ಕರೆವುದುಂಟು.

ತ್ರಿಗುಣ ಪರಿಣಾಮವು ಪ್ರಕೃತಿಗುಣ. ತನ್ನ ತ್ರಿಗುಣಗಳಿಂದ ತ್ರಿವಿಧ ಅವಸ್ಥೆ ಗಳಲ್ಲಿ ಪುರುಷನೊಡನೆ ವ್ಯವಹರಿಸುತ್ತದೆ. ಜಾಗ್ರುತ್ ಸ್ವಪ್ನ ಸುಷುಪ್ತಿಗಳಲ್ಲಿ ಕ್ರಮವಾಗಿ

ಕಾಯ ಪ್ರಾಣ ಮನಗಳನ್ನಾಶ್ರಯಿಸಿ ವ್ಯವಹರಿಸುತ್ತದೆ. ಈ ಪ್ರಕೃತಿ ತತ್ತ್ವವನ್ನು ಶಿವಾದ್ವೈತಿಗಳು 'ಚಿತ್ತ' ಎಂದು ಹೇಳುತ್ತಾರೆ. ಹಾಗೂ ಪ್ರಕೃತಿಪುರುಷರಿಗೆ ಪರಸ್ಪರ ಸಾಪೇಕ್ಷತೆ ಸಮಾನತೆ ಸಮನ್ವಯಗಳನ್ನು ಅಂಗೀಕರಿಸುತ್ತಾರೆ.

"ಆವಳಂ ಸರ್ವಲೋಕಕೆ ಪ್ರಕೃತಿಯೆಂಬರೋ
ಆವಳಂ ಪರಶಿವೆಯ ಪೆಸರಿನಿಂ ಕರೆವರೋ
ಆವಳಂ ಶಂಭುಧರ್ಮಚಾರಿಣಿಯೆನುವರೋ
ಅವಳ ನಾಂ ಪೊಡಮಡುವೆ ಹೃದಯಾಂತರಾಳದೊಳ್!"

— ಸಿದ್ಧಾಂತ ಶಿಖಾಮಣಿಯ ಕನ್ನಡ ಅನುವಾದ

ಪ್ರಕೃತಿ ವಿಷಯದಲ್ಲಿ ಶಿವಾದ್ವೈತಿಗಳ ಪವಿತ್ರದೃಷ್ಟಿಯಿದು. ಸರ್ವಲೋಕ ಪ್ರಕೃತಿಯೆಂದು ಹೇಳಿ ಅವಳ ಸ್ವರೂಪವನ್ನು, ಶಂಭುಧರ್ಮಚಾರಿಣಿ ಯೆಂದು ಹೇಳಿ ಅವಳ ಸ್ವಭಾವವನ್ನು, ಪರಶಿವೆಯೆಂದು ಹೇಳಿ ಅವಳ ಶಿವಸಾಮ್ಯಸ್ವಾಯತ್ತತೆಗಳನ್ನು, ಅವಳ ನಾಂ ಪೊಡಮಡುವೆ ಎಂದು ಹೇಳಿ ಅವಳ ಪೂಜಾರ್ಹತೆಯನ್ನು ಉಗ್ಗಡಿಸಲಾಗಿದೆ. ಇದರಿಂದಾಗಿ ಸಾಂಖ್ಯರು ಹೇಳುವಂತೆ ಪ್ರಕೃತಿ ಜಡವಲ್ಲ; ಪ್ರಕೃತಿ ವಿಚಾರದಲ್ಲಿ ಇತರರಂತೆ ಜಿಹಾಸೆಯಿಲ್ಲ.

ಪ್ರಕೃತಿಯ ರಜೋ ತಮೋಗುಣಗಳು ಹೆಚ್ಚಿ ವಿಕೃತಿಗೊಳಗಾದರೆ ಮಾತ್ರ ಅದೇ ಅಶುದ್ಧಮಾಯೆಯಾಗಿ ಕಾಡುವುದು.

"ಒಡಲುಗೊಂಡ ಮಾನವರೆಲ್ಲ ನೀವು ಕೇಳಿರೋ
ಬಿಡದೆ ಕಾಡುವುದು ವಿಧಿ ಮೂರು ಲೋಕವನೆಲ್ಲ.
ಒಡಲೊಡವೆಯನೊಲ್ಲೆನೆಂಬವರುಗಳಿಗೆ ತೊಡರನಿಕ್ಕಿತ್ತು ಮಾಯೆ.
ಆರು ದರುಶನಕೆಲ್ಲ ಮಡದಿ ಮಕ್ಕಳನೊಲ್ಲೆನೆಂಬ
ಹಿರಿಯರೆಲ್ಲರಿಗೆಲ್ಲ ತೊಡರನಿಕ್ಕಿತ್ತು ಮಾಯೆ.
ಮೃಡ ಮೊದಲಾದ ಹರಿವಿರಿಂಚಿಗಳೆಲ್ಲರನೂ
ಕೋಡಗದಾಟವನಾಡಿಸುವಂತೆ ಆಡಿಸಿತ್ತು ಗುಹೇಶ್ವರಾ ನಿನ್ನ ಮಾಯೆ.

ಅಡವಿಯ ಹೊಗಸಿತ್ತು. ಹುಡುಕು ನೀರಲದ್ದಿತ್ತು.
ಜಡೆಗಟ್ಟಿ ಭಸ್ಮವ ತೊಡಿಸಿತ್ತು. ಎಡೆ ಪುಚ್ಚುಗೊಳಿಸಿತ್ತು.
ಹಿಡಿದೊತ್ತಿ ಕೇಶವ ಕೀಳಿಸಿತ್ತು. ಹುಡಿ ಹುಚ್ಚುಗೊಳಿಸಿತ್ತು.
ಊರೊಳಗೆಲ್ಲ ಈ ಬೆಡಗಿನ ಮಾಯೆಯು ಬಡಿಹೋರಿ
ಸಮಯಿಗಳ ನುಡಿಗೆ ನಾಚುವೆನೆಂದನಂಬಿಗ ಚೌಡಯ್ಯ.

ರೂಪಲ್ಲದವಳೊಡನಾಡಿ ಮೃತ್ಯುವಿಪ್ಪ ಠಾವನರಿಯಬಾರದು.
ಹಿತವೆಯಂತಿರ್ಪಳು. ಒತ್ತಿಕೆಡುಹುವನು ತೊಪ್ಪನೆ ಭೂಮಿಗೆ,
ಅವಳಿಪ್ಪವ ಅಗಲುವ ತರವ ನೋಡಾ ಈ ಲೋಕದೊಳಗೆ
ಎನ್ನ ಕಪಿಲಸಿದ್ಧಮಲ್ಲಿನಾಥ ದೇವರ ದೇವಾ !

ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ,
ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ.
ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ.
ನೆನಹಿಂಗೆ ಅರಿವಾಗಿ ಕಾಡಿತ್ತು ಮಾಯೆ.
ಜಗದ ಜಂಗುಳಿಗಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ.
ಚನ್ನಮಲ್ಲಿಕಾರ್ಜುನ, ನೀನೊಡ್ಡಿದ ಮಾಯೆಯನಾರು ಗೆಲಬಾರದು.

ಈ ಜಗದಲ್ಲಿ ಜನಜಂಗುಳಿಯೆ ಹೆಚ್ಚು. ಮನದ ಪ್ರವೃತ್ತಿಗೆಳಸುವವರೆ ಹೆಚ್ಚು. ಕಾಯಸುಖದ ಬೆನ್ನಹತ್ತುವವರೆ ಹೆಚ್ಚು. ವಿಷಯ ನೆನಹಿನ ಅರಿವಿಗೆ ಅಡಿಯಾಳಾಗುವವರೆ ಹೆಚ್ಚು. ಇವರಿಗೆಲ್ಲ ಹೊಲ್ಲದ ಹುಚ್ಚುಹಿಡಿಸಿ ಬೆಂಬತ್ತಿ ಕಾಡುವುದು ವೈಕೃತಿಕ ಪ್ರಕೃತಿ. ಇದುವೆ ಅಶುದ್ಧ ಮಾಯೆ; ದುರ್ವಿಧಿ.

ಬುದ್ಧಿ ತತ್ತ್ವ :

ನಿಶ್ಚಯಾತ್ಮಕವಾದುದೆ ಬುದ್ಧಿತತ್ತ್ವ. ಮಹತ್‌ತತ್ತ್ವವೆಂಬುದು ಈ ಬುದ್ಧಿಗೆ ಇನ್ನೊಂದು ಹೆಸರು. ಇದು ಪುರುಷನ ನಿಶ್ಚಯರೂಪ ಅಧ್ಯವಸಾಯ ಸಾಧನವಾಗಿರುವುದು. ಇದು ಪುರುಷನ ಕಾರ್ಯ ಸೌಕರ್ಯಕ್ಕಾಗಿ ಸಾತ್ವಿಕ ರಾಜಸ ತಾಮಸ ಎಂದು ಮೂಬಗೆಯಾಗಿರುವುದು. ಅಶುದ್ಧ ವಿದ್ಯೆಯೆ ಇದರ ಮೂಲವಸ್ತು.

ಎಲ್ಲ ವಿಚಾರಗಳ ಕೇಂದ್ರ ಬುದ್ಧಿ. ಇದು ಅವಿಚಾರಕ್ಕೆ ಒಳಗಾದರೆ ಅವಿದ್ಯೆಗೆ ಒಳಗಾದರೆ ಬೆಳಗದು. ಭಾವದ ಬೆಸುಗೆಗೆ ಬೆನ್ನಾಸರವಾಗದು. ಪ್ರಕೃತಿ ಪುರುಷರನ್ನು ತನ್ನ ಜ್ಞಾನ ಸಂವೇದನ–ನಿವೇದನಗಳಿಂದ ಅರಿವಂತೆ ಮಾಡುವ ಅವಸ್ಥೆಯೆ ಬುದ್ಧಿತತ್ತ್ವ ! ಇದರಿಂದಾಗಿ ಇದು ಮಹತ್ ಎಂದೆನಿಸಿಕೊಂಡಿದೆ, ಸತ್ವಶಾಲಿಯಾಗಿದೆ. ಬುದ್ಧಿ ಬಲವೇ ಬಲ. ಅದರ ಜ್ಞಾನದ ಬೆಳಕೇ ಬೆಳಕು. ಬುದ್ಧಿಯು ಜ್ಞಾತೃವಿಗೆ ಭಿನ್ನವಾದ ತತ್ತ್ವವಲ್ಲ; ಜ್ಞಾತೃವಿನ ಅವಸ್ಥಾಂತರವೇ ಬುದ್ಧಿ. ಆತ್ಮನು ಜಲತತ್ತ್ವದ ಜತೆಗೂಡಿದಾಗ ಬುದ್ಧಿತತ್ತ್ವ ಉತ್ಪತ್ತಿಯಾಗುತ್ತದೆ. ಇದಕ್ಕೆ ವಿಷ್ಣು ಅಧಿದೇವತೆಯೆಂಬುವುದರಿಂದ ಇದರ ವ್ಯಾಪ್ತಿ ದೀಪ್ತಿತವಾಗುತ್ತದೆ. ಪುರುಷನ ಜ್ಞಾನಶೀಲತೆಯೆ ಬುದ್ಧಿತತ್ತ್ವ.

ಅಹಂಕಾರ ತತ್ತ್ವ :

ನಾನು, ನನ್ನದು, ನನ್ನವರು ಎಂದು ಅಭಿಮಾನಿಸುವುದೆ ಅಹಂಕಾರ. ಅಹಂ ತತ್ತ್ವ, ಅಹಂಕಾರ ಅದರ ಗುಣ. ಗ್ರಾಹಕಾಧ್ಯವಸಾಯವೆ ಇದರ ಕಾರ್ಯ. ಬುದ್ಧಿಯು ವಸ್ತು ವಿಚಾರವನ್ನುಂಟು ಮಾಡಿಕೊಟ್ಟರೆ, ಅಹಂಕಾರವು ವಸ್ತು ಸ್ವರೂಪವೆ ತಾನಾಗ ಬಲ್ಲುದು ಪಾರಮಾರ್ಥಪಥದಲ್ಲಿ ! ವ್ಯಕ್ತಿಸ್ವರೂಪವನ್ನು ತೋರಬಲ್ಲುದು ಪ್ರಾಪಂಚಿಕ ಪಥದಲ್ಲಿ ! ಆತ್ಮನು ಅಗ್ನಿತತ್ತ್ವದಲ್ಲಿ ಕೂಡಿ ಅಹಂಕಾರೋತ್ಪತ್ತಿಯಾಗುತ್ತದೆ. ಇದಕ್ಕೆ ರುದ್ರನು ಅಧಿದೇವತೆಯಾದುದರಿಂದ ಇದು ಸರ್ವವನ್ನು ತನ್ನೊಳಗೆ ಒಳಗೊಳ್ಳುತ್ತದೆ. ಇದು ರಜೋಗುಣ ಪರಿಣಾಮವಾದುದರಿಂದ ಪ್ರೇರಕತ್ವ ಸಂಗ್ರಾಹಕತ್ವ ಶಕ್ತಿಯುಳ್ಳುದಾಗಿದೆ. ಅಲ್ಲದೆ ಇದೂ ಸಹ ತ್ರಿಗುಣಗಳಿಂದ ತ್ರಿವಿಧವೂ ಆಗಿದೆ. ಸಾತ್ವಿಕ–ರಾಜಸ–ತಾಮಸ ಅಹಂಕಾರಗಳಿಗೆ ಕ್ರಮವಾಗಿ ತೈಜಸಾಹಂಕಾರ, ವೈಕಾರಿಕಾ-ಹಂಕಾರ, ಭೂತಾದ್ಯಹಂಕಾರ ಎಂದು ಹೆಸರುಗಳುಂಟು. ರಾಗತತ್ತ್ವವೇ ಇದರ ಆವರಣ. ಮಾನವನ ಅಸ್ತಿತ್ವಕ್ಕೆ ಅಸ್ತಿತ್ವದ ಅರಿವಿಗೆ ಕಾರಣ.

ಪ್ರಕೃತಿಯಿಂದ ಮಹತ್(ಬುದ್ಧಿ), ಮಹತ್ತಿನಿಂದ ಅಹಂಕಾರ, ಅಹಂಕಾರದಿಂದ ಮನ ಸಾಕ್ಷಾತ್ತಾಗಿ ಹುಟ್ಟುವವೆಂದು ಸಾಂಖ್ಯರ ಅಭಿಪ್ರಾಯ.

> "ಶಿವೋಽಹಮಿತಿ ಭಾವಸ್ಯ ನೈರಂತರ್ಯ ವಿಶೇಷತಃ
> ಶಿವಭಾವೇ ಸಮುತ್ಪನ್ನೇ ಶಿವವತ್ಪೂಜ್ಯ ಏವಸಃ।
> ಅಹಂಕಾರಸ್ಯ ಸಂಬಂಧಾನ್ಮನುಷ್ಯತ್ವಾದಿ ವಿಭ್ರಮಃ
> ನ ಸ್ವಭಾವ ಇತಿಜ್ಞಾನಾದಂತರಾತ್ಮೇತಿ ಕಥ್ಯತೇ ॥
>
> — ಸಿದ್ಧಾಂತ ಶಿಖಾಮಣಿ.

ಅಹಂ ಮತ್ತು ಅಹಂಕಾರಗಳ ವಿಶ್ಲೇಷಣ ಇಲ್ಲಿ ವಿಶಿಷ್ಟಬಗೆಯಲ್ಲಿ ಬಿತ್ತರಗೊಂಡಿದೆ. ಅಹಂ ಶಿವವಾದಲ್ಲಿ ಶಿವತ್ವವೇ ಸಮನಿಸುತ್ತದೆ. ಅದೇ ಅಹಂಕಾರವಾಗಿ ಸಂಬಂಧವಾದರೆ ಮನುಷ್ಯತ್ವದ ವಿಭ್ರಮೆಯುಂಟಾಗುತ್ತದೆ. ಇದು ಸ್ವಭಾವವಲ್ಲೆಂದು ಬಿಟ್ಟು ಸ್ವಯಜ್ಞಾನಿಯಾದರೆ ಆತನೇ ಅಂತರಾತ್ಮನೆಂದೆನಿಸುತ್ತಾನೆ.

> "ನಾ ನೀನೆಂಬ ಅಹಂಕಾರ ತಲೆದೋರಿದಲ್ಲಿ
> ಅಟಮಟ ಕುಟಿಲ ಕುಹಕವೆಂಬ ಬಿರುಗಾಳಿ ಹುಟ್ಟಿತ್ತು.
> ಬಿರುಗಾಳಿ ಹುಟ್ಟಲೊಡನೆ ಜ್ಞಾನಜ್ಯೋತಿ ಕೆಟ್ಟಿತ್ತು.
> ಜ್ಞಾನಜ್ಯೋತಿ ಕೆಡಲೊಡನೆ ನಾಬಲ್ಲೆ ಬಲ್ಲಿದರೆಂಬ
> ಅರುಹಿರಿಯರೆಲ್ಲರೂ ತಾಮಸಕ್ಕೊಳಗಾಗಿ,
> ಸೀಮೆಗೆಟ್ಟು ಕೆಟ್ಟರು ಕಾಣಾ ಗುಹೇಶ್ವರಾ !"

ಹಮ್ಮು ಬಿಮ್ಮುಗಳಿಂದ ಬೆಬ್ಬನೆ ಬೆರೆವವರಿಗಾಗುವ ಸ್ಥಿತಿ ಇಲ್ಲಿ ಸ್ಫುಟವಾಗಿದೆ.

ಮನಸ್ತತ್ತ್ವ :

ಸಂಕಲ್ಪ ವಿಕಲ್ಪಾತ್ಮಕವಾದುದು ಮನ. ಸಂಕಲ್ಪವೆಂದರೆ ಬಯಕೆ ಎಂಬರ್ಥ ಪ್ರಸಿದ್ಧ. ಉದ್ದೇಶ, ಗುರಿ, ನಿರ್ಣಯ ಎಂಬ ಅರ್ಥಗಳೂ ಉಂಟು. ಅಂತೆಯೆ ವಿಕಲ್ಪ ವೆಂದರೆ ಅನುಮಾನ ಸಂದೇಹ ಅನಿಶ್ಚಯ ದುರ್ವಿಚಾರ ಎಂಬ ಅರ್ಥಗಳಿವೆ. ಇದು ಮೋಟುಮರವೋ ಮನುಷ್ಯನೋ ಎಂಬ ಸಂಕಲ್ಪ–ವಿಕಲ್ಪಗಳಿಗೆ ಸಾಧನವಾದುದೆ ಮನಸ್ತತ್ತ್ವ. ಇಲ್ಲಿ ಮೋಟುಮರವೆಂಬುದೆ ಸಂಕಲ್ಪ; ಅದು ಸಮ್ಯಕ್ ಕಲ್ಪ. ಮರಳಿ ಅದನ್ನೆ ಮನುಷ್ಯನಿರಬಹುದೆಂದು, ಕಳ್ಳನಾಗಿರಬಹುದೆಂದು ಊಹಿಸಿದ ಕಾರಣ ಇದು ವಿಕಲ್ಪ; ವಿಪರೀತ ಕಲ್ಪ.

ಬೇಕು–ಬೇಡೆಂದು ಬಯಸುವುದೆ ಮನೋಧರ್ಮ. ಹರಿದಾಟವೆ ಮನದ ಗುಣ. ಆತ್ಮನು ವಾಯುತತ್ತ್ವದಲ್ಲಿ ಕೂಡಿದಾಗ ಮನಸ್ತತ್ತ್ವ ಹುಟ್ಟುತ್ತದೆ. ಇದಕ್ಕೆ ಚಂದ್ರನ-ಧಿದೇವತೆಯಾದುದರಿಂದ ಇದು ಕೃಷ್ಣ–ಶುಕ್ಲಧರ್ಮವುಳ್ಳುದಾಗಿದೆ. ಐಂದ್ರಿಕವಾಗಿ ಪ್ರಾಪಂಚಿಕವಾಗಿ ಹರಿದಾಡಿ ಮಲಿನವಾಗುತ್ತದೆ. ಆತ್ಮಿಕವಾಗಿ ಪಾರಮಾರ್ಥಿಕವಾಗಿ ನಿವೃತ್ತಿಗೊಂಡಾಗ ಉನ್ಮನವಾದಾಗ ಶುಭ್ರ(ನಿರ್ಮಲ)ವಾಗಿರುತ್ತದೆ. ಇಲ್ಲಿ ಮಲಿನ ವೆಂದರೆ ಮರೆವು; ನಿರ್ಮಲಿನವೆಂದರೆ ಅರಿವು. ಚಲ–ನಿಶ್ಚಲವೆಂದೂ ಅರ್ಥವಿಸಬಹುದು.

“ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ ।
ಬಂಧಾಯ ವಿಷಯಾಸಕ್ತಿಃ ಮುಕ್ತ್ಯೈರ್ ನಿರ್ವಿಷಯಂ ಸ್ಮೃತಂ ॥”

ಮನಸ್ತತ್ತ್ವದಿಂದಾಗುವ ಪರಿಣಾಮಗಳಿವು.

ಬುದ್ಧಿ ಅಹಂಕಾರ ಮನ ಇವು ಮೂರು ಶರೀರದೊಳಗಿರುವ ಮತ್ತುಹೊರಗಿರುವ ಕಾರಣವನ್ನು ಸುಖ ದುಃಖಾದಿಗಳನ್ನು ತನ್ನನ್ನು ತಿಳಿಯಲು ತಳೆಯಲು ನೆನೆಯಲು ಕಾರಣವಾಗಿರುವುದರಿಂದ ಮತ್ತು ಒಳಗಿರುವುದರಿಂದ ಇವಕ್ಕೆ ಅಂತಃಕರಣಗಳೆನ್ನುವರು. ಇವನ್ನು ಭೋಗೇಂದ್ರಿಯಗಳೆಂದೂ ಹೇಳುವರು. ಇವು ಮೂರು ಇಚ್ಛಾಶಕ್ತಿಯಿಂದ ಪ್ರೇರಕಗಳು. ಪುರುಷ-ಪ್ರಕೃತಿಗಳ ಭೋಕ್ತೃತ್ವಕ್ಕೆ ಕರಣಗಳು.

“ಆತ್ಮಾನಂ ರಥಿನಂ ವಿದ್ಧಿ, ಶರೀರಂ ರಥಮೇವ ಚ
ಬುದ್ಧಿಂ ತು ಸಾರಥಿಂ ವಿದ್ಧಿ, ಮನಃ ಪ್ರಗ್ರಹಮೇವ ಚ
ಇಂದ್ರಿಯಾಣಿ ಹಯಾನಾಹುರ್ ವಿಷಯಾಂಸ್ತೇಷು ಗೋಚರಾನ್
ಆತ್ಮೇಂದ್ರಿಯ ಮನೋಯುಕ್ತಂ ಭೋಕ್ತೇತ್ಯಾಹುರ್ ಮನೀಷಿಣಃ ॥”

—ಕಠೋಪನಿಷತ್

ಪುರುಷ–ಪ್ರಕೃತಿ, ಬುದ್ಧಿ–ಮನ, ಇಂದ್ರಿಯ–ವಿಷಯ ಇವುಗಳಿಗೆ ಹೃದಯಂಗಮವಾದ ಒಂದು ರೂಪಕವನ್ನು ಕೊಟ್ಟಾಗಿದೆ. ಇದರಿಂದ ಇವುಗಳ ಕರ್ತೃತ್ವ ಕಾರಣತ್ವ ಕರಣತ್ವಾದಿಗಳು ಸ್ಪಷ್ಟವಾಗುತ್ತವೆ. ಇವೆಲ್ಲದರ ಸಹಕಾರ ಭೋಕ್ತೃನಿಗೆ ಅತ್ಯಗತ್ಯ. ಇಂದ್ರಿಯುಗಳ ವಿಷಯುಗಳ ಬಗೆಗೆ ಮುಂದೆ ನಿರೂಪಿಸಲಾಗುತ್ತದೆ. ಮನಕ್ಕೆ ಬಂದುದನ್ನು ಮಾಡಬೇಕಾದರೆ ಇಂದ್ರಿಯಗಳು ಅಗತ್ಯ. ಗ್ರಹಿಸಿ ಭೋಗಿಸಬೇಕಾದರೆ ವಿಷಯುಗಳು ಅಗತ್ಯ.

ಜ್ಞಾನೇಂದ್ರಿಯ ಪಂಚಕ :

ಪೂರ್ವೋಕ್ತ ಪ್ರಕೃತಿ ತತ್ತ್ವವೆ ಶರೀರದಲ್ಲಿದ್ದು ಪಂಚಜ್ಞಾನೇಂದ್ರಿಯಗಳಾಗುತ್ತದೆ. ಕಿವಿ, ತೊವಲು(ಕೆನ್ನೆ), ಕಣ್ಣು, ನಾಲಗೆ, ಮೂಗು ಇವಯ್ದು ಮೊಗದಲ್ಲಿದ್ದು ಅರಿವವು. ವಿಷಯುಗಳನ್ನು ಗ್ರಹಿಸುವವು. ಇವನ್ನು ಬುದ್ಧೀಂದ್ರಿಯಗಳೆಂದೂ ಪಂಚಹೃಷೀಕ ಗಳೆಂದೂ ಹೇಳುತ್ತಾರೆ.

ಶಬ್ದಜ್ಞಾನ ಮಾತ್ರ ಸಾಧನವಾಗಿ ಶ್ರೋತ್ರ, ಸ್ಪರ್ಶಜ್ಞಾನ ಮಾತ್ರ ಸಾಧನವಾಗಿ ತ್ವಕ್, ರೂಪಗ್ರಹಣ ಮಾತ್ರ ಸಾಧನವಾಗಿ ನೇತ್ರ, ರಸಗ್ರಹಣ ಮಾತ್ರ ಸಾಧನವಾಗಿ ರಸನ, ಗಂಧಗ್ರಹಣ ಮಾತ್ರ ಸಾಧನವಾಗಿ ಘ್ರಾಣ–ಹೀಗೆ ಇವಯ್ದು ಜನಿಸಿರುವವು. ಇವುಗಳಿಗೆ ಪರಿವಿಡಿದು ಮುಗಿಲು, ಗಾಳಿ, ಬೆಂಕಿ, ನೀರು, ನೆಲ ಇವು ಮೂಲಭೂತ ಗಳಾಗಿವೆ. ಇನ್ನು ದಿಕ್ಕು, ಚಂದ್ರ, ಸೂರ್ಯ, ಅರುಣ, ಅಶ್ವಿನಿ ಇವಯ್ದು ಕ್ರಮವಾಗಿ ಕಿವಿ ಮೊದಲಾದವುಗಳಿಗೆ ಅಧಿದೇವತೆಗಳು. ಪಂಚಜ್ಞಾನೇಂದ್ರಿಯಗಳಿಗೂ ಅಂತಃಕರಣ ಗಳಿಗೂ ವ್ಯತ್ಯಾಸವಿದೆ. ಅಂತಃಕರಣಗಳು ಶಬ್ದಾಶಬ್ದ, ಸ್ಪರ್ಶಾಸ್ಪರ್ಶ, ರೂಪಾರೂಪ, ರಸಾರಸ, ಗಂಧಾಗಂಧಗಳಿಗೆ ಸಾಧಾರಣ ಸಾಧನಗಳಾಗಿವೆ; ಭೋಗಹೇತುಗಳಾಗಿವೆ. ಜ್ಞಾನೇಂದ್ರಿಯಗಳು ಅಸಾಧಾರಣ ಸಾಧನಗಳಾಗಿದ್ದು ಗ್ರಹಣಕಾರಣಗಳಾಗಿವೆ. ಇದರಿಂದಾಗಿ ಮೇಲೆ ಹೇಳಿದ ಲಕ್ಷಣಗಳು ಅವುಗಳಲ್ಲಿ ಬರುವುದಿಲ್ಲ. ಅಂದರೆ ಅತಿವ್ಯಾಪ್ತಿ ದೋಷ(ಲಕ್ಷಣಸಾಂಕರ್ಯ)ಉಂಟಾಗುವುದಿಲ್ಲ. ಜ್ಞಾನೇಂದ್ರಿಯಗಳು ಗ್ರಹಿಸಿ ವಿಷಯ ಗಳನ್ನು ಅರಿಯಬಲ್ಲವು. ಆಚರಿಸಬಲ್ಲವು; ಅಂದರೆ ನಡೆಗೆ ನಿಲುಕುವವು ಕರ್ಮೇಂದ್ರಿಯ ಗಳು. ಆದ್ದರಿಂದ ಅವುಗಳ ಉತ್ಪತ್ತಿಯನ್ನು ತಿಳಿಯಬೇಕು.

ಕರ್ಮೇಂದ್ರಿಯ ಪಂಚಕ :

ವಾಣಿ, ಪಾಣಿ, ಪಾದ, ಪಾಯು, ಉಪಸ್ಥ-ಇವು ಕರ್ಮೇಂದ್ರಿಯ ಪಂಚಕ. ಇವಕ್ಕೂ ಪ್ರಕೃತಿಯೇ ಕಾರಣ. ವಾಣಿ ನುಡಿಯಬಲ್ಲುದು. ಪಾಣಿ ಮಾಡಬಲ್ಲುದು. ಪಾದ

ನಡೆಯುಬಲ್ಲುದು. ಪಾಯು–ಉಪಸ್ಥಗಳು ಬಿಡಬಲ್ಲವು. ಅಂತೆಯೆ ಮಾತಿಗೆ ಸಾಧನವಾಗಿ ವಾಣಿ, ದಾನಾದಾನಾದಿ ಕ್ರಿಯಾಸಾಧನವಾಗಿ ಪಾಣಿ, ಗಮನಾಗಮನ ಸಾಧನವಾಗಿ ಪಾದ, ಶುಕ್ರ–ಮೂತ್ರ ವಿಸರ್ಜನಕಾರಣವಾಗಿ ಗುಹ್ಯ, ಮಲ ಮತ್ತು ಅಪಾನವಾಯು ವಿಸರ್ಜನ ಸಾಧನವಾಗಿ ಗುದ ಇರುವವು. ಇವು ಕರ್ಮ ಪ್ರಧಾನವಾಗಿರುವುದರಿಂದ ಕರ್ಮೇಂದ್ರಿಯಗಳು. ಇವುಗಳ ಉತ್ಪತ್ತಿಗೆ ಆಕಾಶಾದಿ ಪಂಚಭೂತಗಳೆ ಕಾರಣಗಳಾಗಿವೆ. ಅಂದರೆ ಆಕಾಶತತ್ತ್ವದಿಂದ ವಾಣಿ, ವಾಯುತತ್ತ್ವದಿಂದ ಪಾಣಿ, ಅಗ್ನಿತತ್ತ್ವದಿಂದ ಪಾದ, ಜಲತತ್ತ್ವದಿಂದ ಗುಹ್ಯ, ಪೃಥ್ವಿತತ್ತ್ವದಿಂದ ಗುದ ಉದಿಸುವುದು. ಇವುಗಳಿಗೆ ಪರಿವಿಡಿದು ಸರಸ್ವತಿ, ಇಂದ್ರ, ವಿಷ್ಣು, ಮೃತ್ಯು, ಬ್ರಹ್ಮರು ಅಧಿದೇವತೆಗಳು. ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯ ಇವು ಕ್ರಮವಾಗಿ ವಾಗಾದಿಗಳಿಗೆ ಚೇತನಕಾರಿಗಳಾಗಿವೆ. ಇವಕ್ಕೆ ಕ್ರಿಯಾರೂಪ ಪಂಚ ಹೃಷೀಕಗಳೆಂದು ಹೇಳುತ್ತಾರೆ. ಹೃಷೀಕವೆಂದರೆ ಜ್ಞಾನ. ಇವಕ್ಕೆ ಕ್ರಿಯಾತ್ಮಕ ಜ್ಞಾನವಿರುತ್ತದೆಯೆಂದರ್ಥ. ಜ್ಞಾನೇಂದ್ರಿಯಗಳಲ್ಲಿ ಜ್ಞಾನಾತ್ಮಕ ಕ್ರಿಯೆಗಳಿರುತ್ತವೆ. ಕರ್ಣ–ವಾಣಿ, ತ್ವಕ್–ಪಾಣಿ, ನೇತ್ರ–ಪಾದ, ಜಿಹ್ವೆ-ಗುಹ್ಯ, ಘ್ರಾಣ–ಗುದಗಳಿಗೆ ಸೃಷ್ಟಿ–ಲಯಗಳ ಸಹಕಾರವಿದೆ. ಕಿವಿ ಕೇಳಿದ್ದನ್ನು ನಾಲಗೆ ನುಡಿದು ಹೊರಬಿಡುತ್ತದೆ. ತ್ವಕ್ ಮುಟ್ಟಿದ್ದನ್ನು ಕೈ ತನ್ನ ಬೆರಳಿನ ಉಗುರುಗಳ ಮುಖಾಂತರ ಬಿಡುತ್ತದೆ. ಕಣ್ಣು ಕಂಡದ್ದನ್ನು ಕಾಲು ತಮ್ಮ ಬೆರಳುಗಳ ಮುಖಾಂತರ ಬಿಡುತ್ತದೆ. ನಾಲಗೆ ಸವಿದ ರಸಜಲಗಳನ್ನು ಗುಹ್ಯೇಂದ್ರಿಯ ಬಿಡುತ್ತದೆ. ಮೂಗು ಮೂಸಿದುದನ್ನು ಗುದ ಅಪಾನವನ್ನಾಗಿಸಿ ಬಿಡುತ್ತದೆ. ಇನ್ನು ಭೋಗೇಂದ್ರಿಯಗಳಾದ ಚಿತ್ತ ಬುದ್ಧಿ ಅಹಂಕಾರ ಮನ ಜ್ಞಾನಗಳು ಪರಿವಿಡಿದು ಗಂಧ ರಸ ರೂಪ ಸ್ಪರ್ಶ ಶಬ್ದಗಳನ್ನು ಇರಿಸಿಕೊಂಡು(ಸ್ಥಿತಿ)ಭೋಗಿಸುತ್ತವೆ. ಜ್ಞಾನೇಂದ್ರಿಯಗಳಿಗಿರುವ ತನ್ಮಾತ್ರ–ಭೂತಗಳು ಕರ್ಮೇಂದ್ರಿಯ ಭೋಗೇಂದ್ರಿಯಗಳಿಗೂ ಇರುತ್ತವೆ. ಒಟ್ಟಿನಲ್ಲಿ ಶಬ್ದಾದಿ ವಿಷಯಗಳು ಶ್ರೋತ್ರಾದಿ ಜ್ಞಾನೇಂದ್ರಿಯಗಳಲ್ಲಿ ಕ್ರಮವಾಗಿ ಸೃಷ್ಟಿಗೊಂಡು, ಜ್ಞಾನಾದಿ ಭೋಗೇಂದ್ರಿಯಗಳಲ್ಲಿ (ಮತ್ತು ವಿಶುದ್ಧಾದಿ ಚಕ್ರಗಳಲ್ಲಿ) ಸ್ಥಿತಿಗೊಂಡು, ವಾಣ್ಯಾದಿ ಕರ್ಮೇಂದ್ರಿಯಗಳಲ್ಲಿ ಲಯಗೊಳ್ಳುತ್ತವೆ. ಪುರುಷನು ಜ್ಞಾನೇಂದ್ರಿಯಗಳ ಸಂಗದಿಂದ ಜ್ಞಾತೃ, ಕರ್ಮೇಂದ್ರಿಯಗಳ ಸಂಗದಿಂದ ಕರ್ತೃ, ಭೋಗೇಂದ್ರಿಯ ಸಂಗದಿಂದ ಭೋಕ್ತೃ ಎಂದೆನಿಸುವನು. ಇದಕ್ಕೆಲ್ಲ ಪ್ರಕೃತಿ ಸಹಕಾರಿಣಿಯಾಗಿರುತ್ತದೆ.

ತನ್ಮಾತ್ರ ಪಂಚಕ; ಸ್ಥೂಲಭೂತ ಪಂಚಕ :

ಮೇಲ್ಕಂಡ ಪಂಚಜ್ಞಾನೇಂದ್ರಿಯ ಗ್ರಾಹ್ಯವಿಷಯವಾಗಿ ಕ್ರಮವಾಗಿ ಶಬ್ದ, ಸ್ಪರ್ಶ, ರೂಪ, ರಸ, ಗಂಧ–ಎಂಬೀ ಪಂಚತನ್ಮಾತ್ರಗಳು ತೋರುವುವು. ತನ್ನಿಂದಾದವುಗಳು ತನಗಾಗಿ ಇರುವವುಗಳು. ಸೂಕ್ಷ್ಮವಾಗಿ ತೋರುವವುಗಳು ಎಂಬರ್ಥದಲ್ಲಿ ತನ್ಮಾತ್ರಗಳೆನಿಸಿವೆ. ಇವು ಗುಣಗಳು. ಇವುಗಳಿಗೆ ಆಶ್ರಯವಾಗಿ ಗುಣಿಗಳೆನಿಸಿ ಆಕಾಶಾದಿ ಪಂಚಭೂತಗಳು ಸ್ಥೂಲವಾಗಿ ಉದ್ಭವಿಸುವವು.

ತನ್ಮಾತ್ರಗಳು ಇಂದ್ರಿಯ ವಿಷಯಗಳು. ಇವೇ ಘನೀಭವಿಸಿ ಸ್ಥೂಲರೂಪ ಗಳನ್ನು ತಳೆದು ಮಹಾಭೂತ ಪಂಚಕಗಳಾಗುವವು.

ಶಬ್ದಾದಿ ತನ್ಮಾತ್ರಗಳಲ್ಲಿ ಧ್ವನಿ–ವರ್ಣ, ಶೀತ–ಉಷ್ಣ, ಬಿಳುಪು–ಕಪ್ಪು, ಸಿಹಿ–ಕಹಿ, ಗಂಧ–ದುರ್ಗಂಧ ಎಂಬೀ ವಿಭಾಗವಿಲ್ಲದೆ ಸಾಮಾನ್ಯರೂಪದಿಂದಿರುವುವು, ಅಲ್ಲದೆ ಪ್ರಕೃತಿಯ ಪರಿಣಾಮ ವಿಶೇಷವಾದ ತಾಮಸಾಹಂಕಾರ ದ್ರವ್ಯವೆ ಪಂಚತನ್ಮಾತ್ರ ದ್ರವ್ಯವಾಗಿ ಪರಿಣಮಿಸುವುವು. ಸ್ಥೂಲಗಳಾದ ಪಂಚಭೂತಗಳ ಅವ್ಯವಹಿತ ಸೂಕ್ಷ್ಮಾ ವಸ್ಥೆಯಿಂದೊಡಗೂಡಿದ ದ್ರವ್ಯಗಳು ತನ್ಮಾತ್ರಗಳೆನಿಸುವುವು. ಅಂದರೆ ತನ್ಮಾತ್ರಗಳು ಉತ್ಕಟಾವಸ್ಥೆಯನ್ನು ಹೊಂದದೆ ಸೂಕ್ಷ್ಮ ಶಬ್ದಾದಿ ಗುಣಾಶ್ರಯವಾಗಿರುವುದರಿಂದ ಇವಕ್ಕೆ ಈ ಹೆಸರು. ಇನ್ನು ಇವುಗಳ ಉತ್ಪತ್ತಿ ಲಕ್ಷಣ ವಿವರ :

೧) ತಾಮಸಾಹಂಕಾರ–ಆಕಾಶಗಳೆರಡರ ಮಧ್ಯಮಾವಸ್ಥೆಯಿಂದ ಕೂಡಿ, ಉತ್ಕಟಾವಸ್ಥೆಯಿಲ್ಲದ ಶಬ್ದಗುಣವುಳ್ಳುದಾಗಿ ಸ್ಪರ್ಶಗುಣ ಶೂನ್ಯವಾಗಿ ಆಕಾಶಕ್ಕೆ ಉಪಾದಾನ ಕಾರಣವಾಗಿ ಇರುವ ದ್ರವ್ಯವೆ ಶಬ್ದತನ್ಮಾತ್ರವೆನಿಸುವುದು.

೨) ಆಕಾಶ–ವಾಯುಗಳೆರಡರ ಮಧ್ಯಮಾವಸ್ಥೆಯಿಂದೊಡಗೂಡಿ, ಉತ್ಕಟಾ ವಸ್ಥೆಯಿಲ್ಲದ ಸ್ಪರ್ಶಗುಣವುಳ್ಳುದಾಗಿ ರೂಪಗುಣ ಶೂನ್ಯವಾಗಿ, ವಾಯುವಿಗೆ ಉಪಾ ದಾನ ಕಾರಣವಾಗಿರುವ ದ್ರವ್ಯವೆ ಸ್ಪರ್ಶತನ್ಮಾತ್ರವೆನಿಸುವುದು.

೩) ವಾಯು–ಅಗ್ನಿಗಳೆರಡರ ಮಧ್ಯಮಾವಸ್ಥೆಯಿಂದೊಡಗೂಡಿ, ಉತ್ಕಟಾ ವಸ್ಥೆಯಿಲ್ಲದ ರೂಪಗುಣವುಳ್ಳುದಾಗಿ ರಸಗುಣರಹಿತವಾಗಿ ಅಗ್ನಿಗೆ ಉಪಾದಾನ ಕಾರಣ ವಾಗಿರುವ ದ್ರವ್ಯವೆ ರೂಪತನ್ಮಾತ್ರವೆನಿಸುವುದು.

೪) ಅಗ್ನಿ–ಜಲಗಳೆರಡರ ಮಧ್ಯಮಾವಸ್ಥೆಯಿಂದೊಡಗೂಡಿ, ಉತ್ಕಟಾವಸ್ಥೆ ಯಿಲ್ಲದ ರಸಗುಣವುಳ್ಳುದಾಗಿ ಗಂಧಗುಣ ಶೂನ್ಯವಾಗಿ ಜಲಕ್ಕೆ ಉಪಾದಾನ ಕಾರಣ ವಾಗಿರುವ ದ್ರವ್ಯವೆ ರಸತನ್ಮಾತ್ರವೆನಿಸುವುದು.

೫) ಜಲ–ಪೃಥ್ವಿಗಳೆರಡರ ಮಧ್ಯಮಾವಸ್ಥೆಯಿಂದೊಡಗೂಡಿ, ಉತ್ಕಟಾವಸ್ಥೆ ಯಿಲ್ಲದ ಗಂಧಗುಣವುಳ್ಳುದಾಗಿ ಪೃಥ್ವಿಗೆ ಉಪಾದಾನ ಕಾರಣವಾಗಿರುವ ದ್ರವ್ಯವೆ ಗಂಧತನ್ಮಾತ್ರವೆನಿಸುವುದು.

ಇನ್ನು ಇವೇ ವ್ಯಕ್ತಾವಸ್ಥೆಯನ್ನು ಹೊಂದಿ ಶಬ್ದಾದಿ ಗುಣಗಳಿಗೆ ಆಶ್ರಯವಾಗಿ- ರುವ ದ್ರವ್ಯಗಳೆ ಪಂಚಭೂತಗಳೆನಿಸಿಕೊಳ್ಳುವುವು. ಇದು ಪಂಚಭೂತಗಳ ಸಾಮಾನ್ಯ ಲಕ್ಷಣ.

ಈ ಪಂಚಭೂತಗಳಲ್ಲಿ ಶಾಂತತೆ, ಘೋರತೆ, ಮೂಢತೆಗಳೆಂಬ ಮೂರು ಅವಸ್ಥೆಗಳುಂಟು. ಇಲ್ಲಿ ಮೂಢತೆಯೆಂದರೆ ಉದಾಸೀನತೆ; ಅಂದರೆ ಶಾಂತತ್ವ–ಘೋರತ್ವ-ಗಳಿಲ್ಲದೆ ಇರುವಿಕೆ. ಶಾಂತ, ಘೋರ ಪದಗಳಿಗೆ ಅನುಕೂಲ–ಪ್ರತಿಕೂಲವೆಂದರ್ಥ. ಈ ಶಾಂತತ್ವಾದಿ ತ್ರಿವಿಧ ಧರ್ಮಗಳು ತನ್ಮಾತ್ರಗಳಲ್ಲಿಲ್ಲ. ಇವನ್ನೆ ಉತ್ಕಟಾವಸ್ಥೆಗಳೆಂದು ತಿಳಿಯುವುದು. ಭೂತಪಂಚಕಗಳು ಶಬ್ದಾದಿ ಗುಣಗಳಿಗೆ ಆಶ್ರಯವಾಗಿರುವುದರಿಂದ ಇವೆರಡಕ್ಕೂ ವೈಲಕ್ಷಣ್ಯವನ್ನು ಈ ಮೂರವಸ್ಥೆಗಳು ತೋರುತ್ತವೆ. ಅಲ್ಲದೆ ಗುಣ–ಗುಣಿಭಾವದಿಂದಲೂ ವೈಲಕ್ಷಣ್ಯವಿರುತ್ತದೆ.

ಪಂಚಭೂತಗಳ ಅಸಾಧಾರಣ ಲಕ್ಷಣಗಳಿವು :

೧) ವ್ಯಕ್ತಾವಸ್ಥೆಯುಳ್ಳ ಶಬ್ದಗುಣಕ್ಕೆ ಆಶ್ರಯವಾಗಿ, ಶ್ರೋತ್ರೇಂದ್ರಿಯಕ್ಕೆ ಆಪ್ಯಾಯನವಾಗಿ ಸ್ಪರ್ಶಗುಣವಿಲ್ಲವಾಗಿ ಇರುವ ಭೂತದ್ರವ್ಯವೆ ಆಕಾಶವೆನಿಸುವುದು. ಉಳಿದ ವಾಯ್ವಾದಿ ನಾಲ್ಕು ಭೂತಗಳಿಗೆ ಅವಕಾಶಕೊಡುವುದರಿಂದ ಆಕಾಶವೆನಿಸುವುದು.

೨) ವ್ಯಕ್ತಾವಸ್ಥೆಯುಳ್ಳ ಸ್ಪರ್ಶಗುಣಾಶ್ರಯವಾಗಿ, ತ್ವಗಿಂದ್ರಿಯ ಗೋಚರವಾಗಿ ರೂಪರಹಿತವಾಗಿ ಇರುವ ಭೂತದ್ರವ್ಯವೆ ವಾಯುವೆನಿಸುವುದು. ತಿರ್ಯಗ್ ಗಮನವು ಇದರ ಸ್ವಾಭಾವಿಕ ಕ್ರಿಯೆ. ಭೂಮ್ಯಾದಿಗಳ ಅಭಿಘಾತದಿಂದ ಊರ್ಧ್ವಗಮನ, ಭ್ರಮಣ, ಕಂಪನ, ಶೋಷಣಾದಿ ಗುಣಕ್ರಿಯೆಗಳುಂಟಾಗುವುದುಂಟು, ಮೋಹನ ಕ್ರಿಯೆಯೂ ಉಂಟು.

೩) ವ್ಯಕ್ತಾವಸ್ಥೆಯುಳ್ಳ ಉಷ್ಣ ಮತ್ತು ರೂಪಗುಣಾಶ್ರಯವಾಗಿ, ನೇತ್ರೇಂದ್ರಿಯ ಗೋಚರವಾಗಿ, ರಸರಹಿತವಾಗಿ ಇರುವ ಭೂತದ್ರವ್ಯವೆ ಅಗ್ನಿ ಅಥವಾ ತೇಜವೆನಿಸುವುದು. ದಾಹಕ, ಪ್ರಕಾಶಕ, ಪಾಚಕ ಶಕ್ತಿಯುಳ್ಳದು ಅಗ್ನಿತತ್ತ್ವ.

೪) ವ್ಯಕ್ತಾವಸ್ಥೆಯುಳ್ಳ ಶೀತ ಮತ್ತು ರಸಗುಣವುಳ್ಳದಾಗಿ, ರಸನೇಂದ್ರಿಯ ಗೋಚರವಾಗಿ, ಗಂಧಶೂನ್ಯವಾಗಿ, ಗುರುತ್ವಗುಣವುಳ್ಳದಾಗಿ ಇರುವ ಭೂತದ್ರವ್ಯವೆ ಜಲವೆನಿಸುವುದು. ದ್ರವತ್ವ, ಶುಕ್ಲತ್ವ ಗುಣಗಳುಂಟು. ಪಿಂಡೀಕರಣ ಕ್ರಿಯೆಯೂ ಉಂಟು.

೫) ವ್ಯಕ್ತಾವಸ್ಥೆಯುಳ್ಳ ಗಂಧಗುಣದಿಂದ ಘ್ರಾಣೇಂದ್ರಿಯಗೋಚರವಾಗಿ ಗುರುತ್ವ(ಭಾರ) ಗುಣವುಳ್ಳದಾಗಿ, ಕಾಠಿಣ್ಯವುಳ್ಳದಾಗಿ, ಇರುವ ಭೂತದ್ರವ್ಯವೆ ಪೃಥ್ವಿಯೆನಿಸುವುದು. ಇದು ಅನ್ನೋತ್ಪತ್ತಿಗೆ ಧಾತೂತ್ಪತ್ತಿಗೆ ಆಕರವಾಗಿದೆ. ಧಾರಣ ಕ್ರಿಯಾಶ್ರಿತವೂ ಆಗಿದೆ.

ಪೃಥ್ವಿಯಲ್ಲಿ ಶಬ್ದ ಸ್ಪರ್ಶ ರೂಪ ರಸ ಗಂಧ ಈ ಐದು ಗುಣಗಳಿರುವುವು. ಗಂಧ ಇದರ ಸ್ವಂತ ಗುಣ. ಜಲದಲ್ಲಿ ಶಬ್ದ ಸ್ಪರ್ಶ ರೂಪ ರಸ ಈ ನಾಲ್ಕು ಗುಣಗಳಿರುವುವು. ರಸ ಇದರ ಸ್ವಂತಗುಣ, ತೇಜದಲ್ಲಿ ಶಬ್ದ ಸ್ಪರ್ಶ ರೂಪ–ಈ ಮೂರು ಗುಣಗಳಿರುವುವು. ರೂಪ ಇದರ ಸ್ವಂತಗುಣ. ವಾಯುವಿನಲ್ಲಿ ಶಬ್ದ ಸ್ಪರ್ಶ–ಈ ಎರಡು ಗುಣಗಳಿರುವುವು. ಸ್ಪರ್ಶ ಇದರ ಸ್ವಂತಗುಣ. ಆಕಾಶದಲ್ಲಿ ಸ್ವಂತದ ಶಬ್ದಗುಣವೊಂದೆ ಇರುವುದು.

ಪೀತವರ್ಣದ ಪೃಥ್ವಿಗೆ ಬ್ರಹ್ಮನೊಡೆಯ. ಶ್ವೇತವರ್ಣದ ಸಲಿಲಕ್ಕೆ ವಿಷ್ಣುವೊಡೆಯ. ರಕ್ತವರ್ಣದ ತೇಜಕ್ಕೆ ರುದ್ರನೊಡೆಯ. ಹಸುರು ಬಣ್ಣದ ಗಾಳಿಗೆ ಈಶ್ವರನೊಡೆಯ. ನೀಲವರ್ಣದ ಮುಗಿಲಿಗೆ ಸದಾಶಿವನೊಡೆಯ.

ಈ ಮೂವತ್ತಾರು ತತ್ತ್ವಗಳಲ್ಲಿ ಮೊದಲಿನ ಹನ್ನೊಂದು ಲಿಂಗತತ್ತ್ವಗಳು ಉಳಿದ ಇಪ್ಪತ್ತಯ್ದು ಅಂಗತತ್ತ್ವಗಳು. ಲಿಂಗತತ್ತ್ವಗಳು ನಿಃಕಲ ತತ್ತ್ವದಲ್ಲಿ ಉತ್ಪತ್ತಿಗೊಳ್ಳುವುವು. ಅಂಗತತ್ತ್ವಗಳು ಸಕಲತತ್ತ್ವದಲ್ಲಿ ಉತ್ಪತ್ತಿಗೊಳ್ಳುವುವು.

ಈ ಮೂವತ್ತಾರು ತತ್ತ್ವಗಳಲ್ಲಿ ಮೊದಲಿನ ಶಿವ–ಶಕ್ತಿ ಸದಾಶಿವ–ಈಶ್ವರ–ಶುದ್ಧವಿದ್ಯೆ ಈ ಅಯ್ದು ತತ್ತ್ವಗಳು ಅಂಕುರಿಸುವ–ಅಂಕುರಿಸಿರುವ ಇದಂ ರೂಪಾದ ವಿಶ್ವಕ್ಕೆ ಸ್ಫುರಣ ರೂಪಾಗಿರುವುದರಿಂದ ಅಪರತತ್ತ್ವವೆನಿಸುವುವು. ಇವುಗಳಲ್ಲಿರುವ ಅಹಂ–ಇದಂ–ಇಚ್ಛಾದಿ ಧರ್ಮಗಳು ಪರತತ್ತ್ವವೆನಿಸುವುವು. ಈ ಪರಾಪರತತ್ತ್ವಗಳು ಮೋಕ್ಷ ಕಾರಣಗಳಾಗಿರುವುದರಿಂದ ತುರೀಯವೆಂದೆನಿಸುವುವು. ಆರನೆಯದಾದ ಮಾಯಾತತ್ತ್ವ ಅಪರತತ್ತ್ವ. ಏಕೆಂದರೆ ಅದು ಸಾಗರ ತರಂಗ ನ್ಯಾಯದಿಂದ ಅಭೇದ-ದಲ್ಲಿ ಪರ್ಯವಸಾನವಾಗುವುದಾಗಿ ಪರತ್ವಕ್ಕೂ ಏರುವುದು. ಅಲ್ಲದೆ ಸ್ಪಂದನದಿಂದ ವಿಭಾಗವಾಗಿ (ಅತ್ಯಂತ ಅಗಲಿಕೆಯಲ್ಲ–ತರಂಗದಂತೆ) ಬಂದು ಭೇದ ಬುದ್ಧಿ ಪ್ರಧಾನವುಳ್ಳುದಾಗಿ ಬಂಧಕಾರಣವಾಗಿ ಸ್ಥೂಲ ವಿಶ್ವವಾಗಿ ಪರಿಣಮಿಸುವುದರಿಂದ ಅಪರತತ್ತ್ವಸಮಾವೇಶವೂ ಉಂಟು.

ಬುದ್ಧಿ ಅಹಂಕಾರ ಮನ ಪ್ರಕೃತಿಗಳಿಂದ ಕೂಡಿದ ಪುರುಷನಿಗೆ ಜ್ಞಾನೇಂದ್ರಿಯ, ಕರ್ಮೇಂದ್ರಿಯ, ತನ್ಮಾತ್ರ, ಭೂತ–ಪಂಚಕಗಳು ಸೇರಿ ಈ ಇಪ್ಪತ್ತು ತತ್ತ್ವಗಳು ಜಾಗ್ರದ-ವಸ್ಥೆಯಲ್ಲಿ ಉಪಯೋಗವಾಗುವುದರಿಂದ ಪುರುಷನಲ್ಲಿಯೆ ಅಂತರ್ಗತವಾಗುವುವು.

ಪೃಥ್ವಿವ್ಯಾದಿ ಪುರುಷಾಂತವಾದ ಇಪ್ಪತ್ತಯ್ದು ತತ್ತ್ವಗಳಿಗೆ ಕ್ರಮವಾಗಿ ಕ–ಕಾರಾದಿ ಮ–ಕಾರಾಂತವಾದ ವರ್ಗೀಯ ಸ್ಪರ್ಶಾಕ್ಷರಗಳಾಗಿ ವಾಚಕಗಳಾಗಿವೆ. ಅಂತಃಸ್ಥ ವರ್ಣಗಳಾದ ಯ–ರ–ಲ–ವಗಳು ಮನೋ ಬುದ್ಧ್ಯಹಂಕಾರ ಪ್ರಕೃತಿ ವಿಶಿಷ್ಟ

ಪುರುಷ ವಾಚ್ಯಗಳಾಗಿವೆ; ಮತ್ತು ಕಲಾದಿ ಪಂಚತತ್ತ್ವಗಳು ಸ್ವಪ್ನಾವಸ್ಥೆಯಲ್ಲಿ ಅಂತರ್ಗತವಾಗಿರುತ್ತವೆ. ಮಾಯಾತತ್ತ್ವವು ಮೋಹಕವಾಗಿ ಪುರುಷತತ್ತ್ವಕ್ಕೆ ಸುಷುಪ್ತ್ಯವಸ್ಥಾಂತರ್ಗತವಾಗಿರುತ್ತವೆ.

ಅಶುದ್ಧವಿದ್ಯೆ, ಕಲಾ, ಕಾಲ, ರಾಗ, ನಿಯತಿ ಎಂಬಯ್ದು ಕಂಚುಕಗಳಿಂದ ಕೂಡಿದ ಅಂದರೆ ಆವೃತನಾದ ಪುರುಷನು ಭೋಕ್ತೃ ಎನಿಸುತ್ತಾನೆ. ಈ ಅಶುದ್ಧ ವಿದ್ಯಾದಿ ಪಂಚಕಂಚುಕಗಳು ಮಾಯಾಜನ್ಯಗಳಾಗಿ ಮಾಯಾ ಕಾರ್ಯಗಳೆನಿಸಿವೆ. ಇದರಿಂದ ಮಾಯೆ ಮೊದಲಾಗಿ ಈ ಆರು ಭೋಕ್ತೃವಾದ ಪುರುಷತತ್ತ್ವದಲ್ಲಿ ಅಂತರ್ಗತವಾಗುವುವು. ಇನ್ನು ಪ್ರಕೃತಿ ಮಹದಹಂಕಾರ ಮನಸ್ಸುಗಳೆಂಬೀ ನಾಲ್ಕು ಭೋಕ್ತೃಪುರುಷನ ಭೋಗ ನಿರ್ವಹಣೆಗಾಗಿ, ಬೇಕಾದ ಅಂತಃಕರಣಗಳಾಗಿ ಆ ಪುರುಷನಲ್ಲಿಯೇ ಅಂತರ್ಭಾವವಾಗುತ್ತವೆ. ಜ್ಞಾನೇಂದ್ರಿಯ–ಕರ್ಮೇಂದ್ರಿಯ ದಶಕವು ಆ ಅಂತಃಕರಣಗಳಿಗೆ ವಿಷಯ ಭೋಗ ಕಾಲದಲ್ಲಿ ಸಹಕಾರಿಗಳಾಗಿದ್ದುಕೊಂಡು ಭೋಕ್ತೃವಿಗೆ ಭೋಗೋಪಕರಣಗಳಾಗಿರುವ ಕಾರಣ ಇವೂ ಸಹ ಆ ಪುರುಷತತ್ತ್ವದಲ್ಲಿಯೆ ಅಂತರ್ಭೂತವಾಗುವುವು.

ಭೋಗ್ಯವಸ್ತುವಿಲ್ಲದೆ ಭೋಗ್ಯವುಂಟಾಗದಾಗಿ ಭೋಗ್ಯವಸ್ತುಗಳಾದ ತನ್ಮಾತ್ರಗಳೂ ಭೋಗಾಯತನವಾದ ಶರೀರರೂಪ ಪಂಚಭೂತಗಳೂ ಪುರುಷ ತತ್ತ್ವದಲ್ಲಿಯೆ ಅಂತರ್ಭೂತಗಳಾಗುತ್ತವೆ. ಹೀಗೆ ಈ ಮೂವತ್ತು ತತ್ತ್ವಗಳು ಪುರುಷತತ್ತ್ವದಲ್ಲಿ ಸಮಾವೇಶಗೊಳ್ಳುವುವು. ಉಳಿದ ಶಿವ–ಶಕ್ತಿ, ಸದಾಶಿವ, ಈಶ್ವರ, ಶುದ್ಧವಿದ್ಯಾ ಎಂಬೀ ಅಯ್ದು ತತ್ತ್ವಗಳು 'ಶ–ಷ–ಸ–ಹ' ಎಂಬೀ ಊಷ್ಮ ವರ್ಣಗಳಿಗೆ ವಾಚ್ಯಗಳಾಗಿವೆ. ಈ ಊಷ್ಮವರ್ಣಗಳು ಶಕ್ತಿರೂಪಗಳಾಗಿವೆ. ಶಕ್ತಿ ಪರಶಿವ ಸ್ವಭಾವವಾಗಿದೆ. ಇದರಿಂದಾಗಿ ಆ ಪರಶಿವನಲ್ಲಿ ಶುದ್ಧ ಅನುಸಂಧಾನರೂಪದಿಂದ ಏಕರೂಪವಾಗಿವೆ.

ಹೇಗೆ ಓಂಕಾರದಲ್ಲಿ ಉಳಿದೆಲ್ಲ ಅಕ್ಷರಗಳು ಅಡಕವಾಗುವವೋ ಹಾಗೆ ಶಿವನಲ್ಲಿ ಸಕಲತತ್ತ್ವಗಳು ಅಂದರೆ ಮೂವತ್ತಯ್ದು ತತ್ತ್ವಗಳು ಅಡಕವಾಗಿ ವೀರಶೈವ ಸಿದ್ಧಾಂತದಲ್ಲಿ ತತ್ತ್ವೈಕ್ಯವು ಸಿದ್ಧಿಸುತ್ತದೆ. ಇವೆಲ್ಲಕ್ಕೂ ತತ್ತ್ವತನವೂ ಸಿದ್ಧಿಸುತ್ತದೆ.

ವಾಚಕವಾದ ಓಂಕಾರವೂ ಸಹ ವಾಚ್ಯನಾದ ಆ ಪರಶಿವನಲ್ಲಿ ಸಮರಸಗೊಳ್ಳುತ್ತದೆ. ಸಮರಸಗೊಂಡು ಶೂನ್ಯವುಳಿಯುತ್ತದೆ. ಪ್ರಣವ–ಪರಶಿವರಿಗೆ ಅಭೇದ ರೂಪವಿದೆಯಲ್ಲದೆ ಅತ್ಯಂತ ಭೇದವಿಲ್ಲ.

"ಬ್ರಹ್ಮಾ ಶಿವೋಮೆ ಅಸ್ತು ಸದಾ-ಶಿವೋಂ" ಎಂಬ ಶ್ರುತಿಪ್ರಮಾಣವು ಅಭೇದವನ್ನೇ ಸಮರ್ಥಿಸುತ್ತದೆ. 'ಪ್ರಕರ್ಷೇಣ ನವಂ ಯಸ್ಮಾತ್ ಪರಂ ಬ್ರಹ್ಮ ಸ್ವಭಾವತಃ' ಎಂಬುದಾಗಿ ಶಿವತತ್ತ್ವರತ್ನಾಕರದಲ್ಲಿ ಉಕ್ತವಾಗಿದೆ. ಪ್ರಣವವೇ ಪರಬ್ರಹ್ಮ. ಪ್ರಣವವೇ

ಹೃದ್ಗತ–ಪ್ರಾಣಗತ ನವಚೈತನ್ಯ. 'ಓಂಕಾರ ಏವ ಲಿಂಗಂ ಸ್ಯಾತ್' ಎಂಬೀ ಯೋಗ ಜಾಗಮೋಕ್ತಿಯಂತೆ ಓಂಕಾರವೇ ಲಿಂಗವಾಗಿದೆ. 'ಲಿಂಗಂ ಸತ್ಯನಿಷ್ಕಳಂ ಬ್ರಹ್ಮರೂಪಂ' ಲಿಂಗವೇ ಪರಶಿವಬ್ರಹ್ಮವಾಗಿದೆ. 'ಮಂತ್ರಂ ಲಿಂಗಮಿತಿ' ಎಂಬೀ ಶಿವಾನುಭವಸೂತ್ರವು ಮಂತ್ರವೇ ಲಿಂಗವೆಂದು ಘೋಷಿಸಿದೆ. ಆ ಮಂತ್ರವು ಪಿಂಡಾಂಡದ ಪ್ರಾಣನಿಷ್ಠ' ಹಂಸಮಂತ್ರವೆ ಅಂದರೆ ಶ್ವಾಸ–ನಿಃಶ್ವಾಸಗಳೇ ವಿಕೃತ ಪ್ರಾಣಾಯಾಮದಿಂದ 'ಸೋsಹಂ. ಆಗಿ ಕುಂಭಕ ಪ್ರಾಣಾಯಾಮದಿಂದ ಓಂ ಆಗುವುದೆಂದು ಹಿಂದೆ ಹೇಳಿದೆ. ಇದರಿಂದ ತೇಲುವುದೇನೆಂದರೆ ಪ್ರವೃತ್ತಿಯಲ್ಲಿ ತನ್ನಿಂದ ವಿಸ್ತಾರಗೊಂಡ ಈ ಎಲ್ಲ ತತ್ತ್ವಗಳು ನಿವೃತ್ತಿಯಲ್ಲಿ ತಾದಾತ್ಮ್ಯವನ್ನು ತಳೆಯುತ್ತವೆ–ಪಿಂಡಾಂಡ ಸೂತ್ರದಲ್ಲಿ ! ಮತ್ತು ಲಿಂಗ ಚಿಚ್ಚೇತನದಲ್ಲಿ !!

ಇನ್ನು ಜಗತ್ರಯವ ಬಳಸಿಕೊಂಡಿರುವ 'ಅಹಂ' ಎಂಬ ಪದವು ಸಹ ವೀರಶೈವ ಮತ ಪ್ರಕ್ರಿಯೆಯಲ್ಲಿ ಪ್ರಜ್ಞಾನಾನುಭೂತಿಯಲ್ಲಿ ಶಿವಾದ್ವೈತ ಸ್ವರೂಪವೆ ಆಗಿದೆ. ಅಂಗನಿಷ್ಠ ಅಹಂ ಚೂರ್ಣ; ಲಿಂಗನಿಷ್ಠ ಅಹಂ ಪೂರ್ಣ. ಅಹಂ ಶಿವ–ಶಕ್ತಿ ಸಂಪುಟ. ಅಕಾರಕ್ಕೆ ಪ್ರಕಾಶಸ್ವರೂಪನಾದ ಪರಶಿವನೆಂತಲೂ ಹ-ಕಾರಕ್ಕೆ ಕಲಾರೂಪ ವಿಮರ್ಶಾಶಕ್ತಿ ಯೆಂತಲೂ ಶಿವ–ಶಕ್ತಿ ಸಾಮರಸ್ಯ ಸೂಚಕವೇ ಅಂತ್ಯದಲ್ಲಿರುವ ಶೂನ್ಯಪದವೆಂತಲೂ ವೀರಶೈವಮತ. ಇದರಿಂದ ಶಕ್ತಿವಿಶಿಷ್ಟಾದ್ವೈತವೇ ಶಿವಾದ್ವೈತಪದದರ್ಥವೆಂಬುದು ಸಿದ್ಧಾಂತ. ಮತ್ತು ಅ–ಕಾರ ಆದಿ ಅಕ್ಷರ; ಹ–ಕಾರ ಅಂತ್ಯಾಕ್ಷರ. ಇವೆರಡರ ಮಧ್ಯ ದಲ್ಲಿರುವ ಇಕಾರಾದಿ ಸಕಾರಾಂತ ಅಕ್ಷರಗಳೆಲ್ಲವೂ 'ಅಹಂ' ಪದದಲ್ಲಿ ಅಡಕವಾಗಿವೆ. ಶುದ್ಧ ಚಿನ್ಮಾತ್ರ ಅಹಂ ಪದ ವಾಚ್ಯನು ಅಕ್ಷರ ಸ್ವರೂಪ; ಅಖಂಡಸ್ವರೂಪ. ಸರ್ವಾತ್ಮ ಸ್ವರೂಪ. ಪರಿಪೂರ್ಣ ಮಹಾನಂದ ಸ್ವರೂಪ. ಆ ಪೂರ್ಣಾಹಂಭಾವದಲ್ಲಿ ಜ್ಞೇಯಾಂತರ ವಿಷಯುವಿರದು. ಆ ಪರಮಾಕಾಶಸ್ವರೂಪವೆ ಆಗಿ ಪರಿಣಮಿಸಿರು ತ್ತದೆ ವೀರಶೈವನ ಅಂಗ. ಆಗ ಪರಮತತ್ತ್ವತನವುಂಟಾಗುತ್ತದೆ.

ತತ್ತ್ವ ಪರ, ಅಪರ ಎಂದು ಇಬ್ಬಗೆ ! ಪರತತ್ತ್ವ ಶೂನ್ಯ. ಅಪರ ತತ್ತ್ವ ಶಿವಾದಿ ಪೃಥಿವ್ಯಾಂತಗಳು. ಪರತತ್ತ್ವವಾಗುವುದೆ ಅಪರತತ್ತ್ವಗಳ ಗುರಿ. ತತ್ ಪರತೆಯನ್ನು ಬೋಧಿಸುತ್ತದೆ ತತ್ತ್ವಜ್ಞಾನ. ಅದನ್ನೆ ಹೊಂದಿಕೊಂಡು ಅದರ ಆಚಾರ ವಿಚಾರಗಳಲ್ಲಿ ತೊಡಗಿರುವಿಕೆಯೆ ವೀರಶೈವಮತತತ್ತ್ವ. ಅರ್ಚನ–ಅರ್ಪಣ–ಅನುಭವ ಗಳು ಇದನ್ನೆ ಗರ್ಭೀಕರಿಸಿಕೊಂಡಿವೆ. ಸತ್ಯ ಶೋಧನ, ಸತ್ಯ ಸಾಧನ, ಸತ್ಯಸಿದ್ಧಿಗಳೆ ವೀರಶೈವ ತತ್ತ್ವ ಧ್ಯೇಯ. ತತ್‌ಸ್ವರೂಪವಾಗುವುದೆ ಗುರಿ.

ತತ್ತ್ವವೆಂದರೆ ಸ್ವಭಾವ, ಸ್ವರೂಪ; ಸಹಜತೆ. ಮತ್ತು ಸ್ವಾಭಾವಿಕ ವಸ್ತು; ಯಥಾರ್ಥವಾದ ಪದಾರ್ಥ. ಅದರ ಬಗೆಗೆ ಆಚಾರ ವಿಚಾರ ಪಥದಿಂದ ಅನುಭವ ಪಡೆವುದೆ ತತ್ತ್ವಾನುಭೂತಿ. ಇದು ವೀರಶೈವ ಪೂರ್ಣ ತತ್ತ್ವದರ್ಶನದೃಷ್ಟಿ. ಇದು

ಸಮ್ಯಗ್ ದೃಷ್ಟಿ, ಸಂಪೂರ್ಣ ದೃಷ್ಟಿ. ಕೇವಲ ಜ್ಞಾನದೃಷ್ಟಿಯಾಗಲಿ, ಕೇವಲ ಆತ್ಮ ದೃಷ್ಟಿಯಾಗಲಿ, ಕೇವಲ ಪುರುಷ ದೃಷ್ಟಿಯಾಗಲಿ ಸಮ್ಯಗ್ ದೃಷ್ಟಿಯಲ್ಲ, ಸಂಪೂರ್ಣ ದೃಷ್ಟಿಯೂ ಅಲ್ಲ. ಅಂತೆಯೆ ಅದು ಸಹಜ ತತ್ತ್ವವಲ್ಲ. ದೃಶ್ಯವನ್ನೊಳಗೊಂಡಿದೆ ದೃಕ್; ದೃಕ್ಕನ್ನೊಳಗೊಂಡಿದೆ ದೃಶ್ಯ. ಅಂತೆಯೆ ಜ್ಞಾನ–ಕ್ರಿಯೆಗಳು; ಆತ್ಮ–ಅಂಗ ಗಳು; ಪುರುಷ–ಸ್ತ್ರೀಯರು–ಪರಸ್ಪರ ಪೂರಕಗಳಾಗಿವೆ; ಹಾಸು ಹೊಕ್ಕಾಗಿವೆ. ಇದನ್ನೂ ಬಿತ್ತರಿಸುವುದು ವೀರಶೈವ ತತ್ತ್ವ. ಈ ದಿಸೆಯಲ್ಲಿ ಇದಕ್ಕಿರುವ 'ಶಿವಾದ್ವೈತ' ನಾಮ ಪದ ಅನ್ವರ್ಥಕವಾಗಿದೆ. ಅದರಲ್ಲಿ ಶಿವ–ಶಿವೆಯರು ಅದ್ವಯರಾಗಿದ್ದಾರೆ. ಶಿವ ಶಬ್ದಕ್ಕೆ ಜ್ಞಾನ, ಆತ್ಮ. ಪುರುಷ, ದೃಕ್, ಮಂಗಲ ಎಂಬ ಅರ್ಥಗಳಿದ್ದರೆ, ಶಿವಾ ಶಬ್ದಕ್ಕೂ ಕ್ರಿಯೆ, ಅಂಗ, ಸ್ತ್ರೀ, ದೃಶ್ಯ, ಮಂಗಳಾ ಎಂಬ ಅರ್ಥಗಳಿವೆ ಶಿವಾದ್ವೈತದಲ್ಲಿ ! ಇವೆಲ್ಲದರ ಸಮನ್ವಯ ಸಿದ್ಧಾಂತವೆ ಶಿವಾದ್ವೈತ ತತ್ತ್ವ ! '...ಆತ್ಮಾನುಭೂತಿಃ ಪ್ರತಿಬಂಧ ಶೂನ್ಯಾ' ಎಂಬುದು ಇಲ್ಲಿ ಸಂಪೂರ್ಣವಾಗಿ ಸಮನ್ವಯವಾಗುತ್ತದೆ. ಕೇವಲ ಆತ್ಮ ಸತ್ತೆಯೇ ಸಾಧನೆಯೇ ತತ್ತ್ವವಲ್ಲ. ಅಲ್ಲಿ ತತ್ತ್ವ ಪದಕ್ಕೆ ಅವಕಾಶವೂ ಇಲ್ಲ. ಆತ್ಮ ವಿಕಾಸವಾದ ಸರ್ವವೂ ಸತ್ತಾ ಸ್ವರೂಪವುಳ್ಳುದೆಂಬುದನ್ನು ಅರಿಯಬೇಕು. ಅರಿತಲ್ಲಿ ತತ್ತ್ವದರ್ಶನಕ್ಕೆ ಅವಕಾಶವಿದೆ.

ಔಪನಿಷತ್ತಿನ ಶಿವಾದ್ವೈತಕ್ಕಿಂತ ಶಿವಾಗಮ ಶಿವಾದ್ವೈತವು ಇನ್ನೂ ಮುಂದುವ ರಿದು ಸಂಪೂರ್ಣವೆನಿಸಿತು. 'ಶಿವಮದ್ವೈತಂ ಚತುರ್ಥಂ ಮನ್ಯತೇ' ಎಂಬುದು ಕೇವಲ ಶಿವನ ಅದ್ವೈತವನ್ನು ಉಪನಿಷತ್ ಪ್ರತಿಪಾದಿಸಿದರೆ, ಶಿವಾಗಮವು ಶಿವ–ಶಿವೆಯರ, ಕಳೆ–ಕಲೆಗಳ ಅದ್ವೈತವನ್ನು ಪ್ರತಿಪಾದಿಸಿದೆ. ಇದುವೆ ಸಮದರ್ಶನ; ಸಮ ರಸದರ್ಶನ. ಇದುವೆ ತೆರಹಿಲ್ಲದ ತತ್ತ್ವ. ಇದುವೆ ಕೊರತೆಯಿಲ್ಲದ ಕೈವಲ್ಯ.

ಎಲೆ ಹೂವು ಹಣ್ಣು ಏನೆಲ್ಲ ಆದುದು ಬೀಜವೆ ! ಅಂತೆಯೆ ಕಾಯ, ಕ್ರಿಯೆ, ಪ್ರಾಣ–ಜ್ಞಾನ, ಸೃಷ್ಟಿ–ದೃಷ್ಟಿ, ಪುರುಷ–ಪ್ರಕೃತಿ ಇದು ಏನೆಲ್ಲವೂ ಆದುದು ಅದೇ ಆ ತತ್ತ್ವವೊಂದೆ ! ಇಪ್ಪುದೆ ಆಗುತ್ತದೆ; ಇಲ್ಲದ್ದು ಆಗದು. ಏನೇನೋ ಆಗಿರುವ ಇವೆಲ್ಲದರ ಪೂರ್ಣತೆಯನ್ನು ಸತ್ಯತೆಯನ್ನು ಸಮತ್ವ–ಸಮರಸತ್ವಗಳನ್ನು ಸಂಪಾದಿಸು ವುದೆ ವೀರಶೈವದ ವಾಸ್ತವ ತತ್ತ್ವಾನುಭವ. ಆಗ ತತ್ತ್ವ ಪದ ಸಂಪೂರ್ಣ ಸತ್ಯವುಳ್ಳ ದಾಗುತ್ತದೆ. "ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ । ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವ ಶಿಷ್ಯತೇ ॥" ಎಂಬುದು ಪೂರ್ಣ ಪರಮಾರ್ಥ ರೂಪವನ್ನು ತಾಳುತ್ತದೆ.

ವೀರಶೈವದ ಸಾಮರಸ್ಯಕ್ಕೆ ಸಾಮ್ಯವಾದವೆ ಅಡಿಗಲ್ಲು. ಸ್ವರಗಳು ಬೇರಾದರೂ ಅವುಗಳಿಂದಾಗುವ ರಾಗವೊಂದೆ ! ಸ. ರಿ. ಗ. ಮ. ಪ. ದ. ನಿ.ಗಳಂತೆ ವ್ಯಕ್ತಿಗಳ ಪದಾರ್ಥ ಗಳು ಭಿನ್ನವಾಗಿದ್ದರೂ ಶಕ್ತಿ ಒಂದೆ; ತೃಪ್ತಿ ಒಂದೆ, ಕವಿಯಿಂದ ಅಥವಾ ಸಾಹಿತಿಯಿಂದ

ಅನೇಕ ಶಬ್ದಗಳು ಸೃಷ್ಟಿಯಾದರೂ ಕಾವ್ಯವೊಂದೆ; ಸಾಹಿತ್ಯವೊಂದೆ. ಅಂತೆಯೆ ಆ ಅದ್ವೈತದಿಂದ ದ್ವೈತವೆಲ್ಲವೂ ಸೃಷ್ಟವಾಗಿ ದೃಷ್ಟವಾಗಿದ್ದರೂ ಒಂದೆ ! ಕವಿಯಿಂದಾದ ನುಡಿಗಳೆಲ್ಲ ಹೇಗೆ ಕವಿಗೆ ಅಭಿನ್ನವೋ ಅಂದರೆ ಕವಿಗೆ ಕಾವ್ಯ ಹೇಗೆ ಅಭಿನ್ನವೊ ಈ ದ್ವೈತವೆಲ್ಲವು ಅದ್ವೈತವೆ ! ದೃಶ್ಯವೆಲ್ಲವೂ ದೃಕ್ಕೆ ! ಮರವೆಲ್ಲ ಬೀಜದಲ್ಲಿ ಅದ್ವೈತವಾಗುವಂತೆ ದೃಶ್ಯವೆಲ್ಲ ದೃಕ್ಕಿನಲ್ಲಿ ತಲ್ಲೀನವಾಗುತ್ತವೆ. ಒಂದೆರಡಾಗುವುದು ಪ್ರಕೃತಿ ನಿಯತಿ; ಎರಡೊಂದಾಗುವುದು ಪರಮಾರ್ಥ ನಿಯತಿ. ಒಂದು ಪ್ರವೃತ್ತಿ; ಇನ್ನೊಂದು ನಿವೃತ್ತಿ. ಹೆಣ್ಣು ಗಂಡಸನ್ನು ಲಗ್ನವಾಗುವಂತೆ, ದ್ವೈತವು ಅದ್ವೈತದಲ್ಲಿ ಲಗ್ನವಾಗುತ್ತದೆ. ಅದೇ ಶುಭ ಮುಹೂರ್ತ. ಅದೇ ಶಿವಾದ್ವೈತ ತತ್ತ್ವ. ಸತಿ ಪತಿ ಕೂಡಿ 'ದಂಪತಿ'ಯಾದಂತೆ ಶಿವ–ಶಿವೆಯರು ಕೂಡಿ 'ಶಿವಾದ್ವೈತ'ವಾಗುತ್ತದೆ. ಅಂತೆಯೆ ಪ್ರಪಂಚ ಪರಮಾರ್ಥವಾಗುತ್ತದೆ. ಸತಿ ಪತಿಗೆ ಭಿನ್ನಳಲ್ಲ; ಪ್ರಪಂಚ ಪರಮಾರ್ಥಕ್ಕೆ ಭಿನ್ನವಲ್ಲ. ಸತೀತ್ವ ಪತಿಯಲ್ಲಿ ತಾದಾತ್ಮ್ಯಗೊಂಡಂತೆ, ಮರವೆಲ್ಲ ಬೀಜದಲ್ಲಿ, ಹಾಲೆಲ್ಲ ತುಪ್ಪದಲ್ಲಿ ತದ್ರೂಪಗೊಳ್ಳುವಂತೆ, ದ್ವೈತವೆಲ್ಲ ಅದ್ವೈತವಾಗಿ, ಅಖಂಡ ಸತ್ತಾಗಿ, ಪರಿಪೂರ್ಣ ಚಿತ್ ಆಗಿ, ನಿತ್ಯಾನಂದವಾಗಿ ನಿಲ್ಲುತ್ತದೆ. ಅಂದರೆ ತತ್ತ್ವವಾಗಿಯೇ ಇರುತ್ತದೆ.

ಅಪರ ತತ್ತ್ವದಲ್ಲಿ ಪರತತ್ತ್ವವೆಂದರೆ ಆತ್ಮಗುರು. ಏಕೆಂದರೆ ಆ ಪರತತ್ತ್ವವೆ ತಾನಾಗಿರುತ್ತಾನೆ.

"ಗುರುರೇವ ಪರಂ ತತ್ತ್ವಂ, ಪರತತ್ತ್ವಂ ಗುರುಃ ಸ್ಮೃತಃ ।
ತದೇಕತ್ವಾನುಭಾವೇನ ನ ಕಿಂಚಿದವಶಿಷ್ಯತೇ ॥"

— ಸಿದ್ಧಾಂತ ಶಿಖಾಮಣಿ

ಮೂವತ್ತಾರು ಅಪರ ತತ್ತ್ವಗಳು ಆತನಿಂದ ಶುದ್ಧವಾಗುವುವು; ಪರತ್ವ ಸಿದ್ಧಿಗೇರುವುವು. ಗುರುದೇವನ ಅನುಗ್ರಹ ಅಂತಹದು. ತತ್ತ್ವಗಳನ್ನು ಶುದ್ಧಿಸುವ ಅಧಿಕಾರ ಆತನದು. ಗುರುಪ್ರಸಾದದಲ್ಲಿ ಪರಮಾನಂದ ಪ್ರಕಾಶವಿರುತ್ತದೆ. ಪರಮ ಚಿತ್ಕ್ರಿಯಾಶಕ್ತಿಯಿರುತ್ತದೆ. ಇದರಿಂದಾಗಿ ಗುರುಪ್ರಸಾದವೆ ಸೇವ್ಯ. ಆತನಿಂದಾಗುವ ಆ ದೀಪ್ತಿ ಆ ಶಕ್ತಿ ಬೇರೆ ಯಾವುದರಿಂದಲೂ ಆಗವು. ತಪಯೋಗ ಧ್ಯಾನಾದಿಗಳಿಗಿಂತ ಅದು ಹೆಚ್ಚಳ. ಆತನ ಕ್ರಿಯೆಯಲ್ಲಿ ಆತನ ಮಂತ್ರದಲ್ಲಿ ಆತನ ವೇಧೆಯಲ್ಲಿ ಅಂತಹ ಅಪೂರ್ವಶಕ್ತಿಯಿದೆ. ಆ ಪರತತ್ತ್ವವನ್ನು ಆಯತಗೊಳಿಸುವ ಸ್ವಾಯತಗೊಳಿಸುವ ಸನ್ನಿಹಿತಗೊಳಿಸುವ ಗುರುಶಕ್ತಿ ಗುರುತರವಾದುದೆ ! ಅದರಿಂದ ಪ್ರಾಕೃತಿಕಭಾವ ಪರಿವರ್ತಿತವಾಗಿ ಅಪ್ರಾಕೃತಿಕವಾಗುತ್ತದೆ. ಅಂದರೆ ಅಸ್ವಾಭಾವಿಕತೆ ಹೋಗಿ ಸ್ವಾಭಾವಿಕತೆ ಬರುತ್ತದೆ. ಜೀವಭಾವ ತೊಲಗಿ ಪರಶಿವಭಾವವುಂಟಾಗುತ್ತದೆ. ಅಣುಭಾವ ಅಳಿದು ಮಹದಾವವುಂಟಾಗುತ್ತದೆ. ಭೂತಿತ್ವ ಹೋಗಿ ವಿಭೂತಿತ್ವವೊದಗುತ್ತದೆ.

"ಜೀವಭಾವಂ ಪರಿತ್ಯಜ್ಯ ಯದಾ ತತ್ತ್ವಂ ವಿಭಾವ್ಯತೇ ।
ಗುರೋಶ್ಚ ಬೋಧಯೋಗೇನ ತದಾತ್ಮಾಯಂ ಪ್ರಕೀರ್ತಿತಃ ॥"
— ಸಿದ್ಧಾಂತ ಶಿಖಾಮಣಿ

ಗುರುದೇವನದು ಅದೊಂದು ಬೋಧಯೋಗ. ಅದರಿಂದ ಜೀವಭಾವ ತೊಲಗುತ್ತದೆ; ತತ್ತ್ವವಿಭಾವವುಂಟಾಗುತ್ತದೆ. ಅಲ್ಲದೆ 'ತದಾತ್ಮಾಯಂ ಪ್ರಕೀರ್ತಿತಃ' ಈ ಆತ್ಮನು ತತ್ ಎಂಬುದಾಗಿ ಪರಿಕೀರ್ತಿತನಾಗುತ್ತಾನೆ. ಇದು ಗುರುದೇವನ ಬೋಧಯೋಗದ ಬೃಹತ್ ಪ್ರಭಾವ. ಇಲ್ಲಿ ತದಾತ್ಮಾ ಪದವನ್ನು ತತ್ ಆತ್ಮಾ ಎಂದೇ ಬಿಡಿಸಬೇಕು. ಅದೇ ಆ ಶಿವಯೋಗಿ ಶಿವಾಚಾರ್ಯನ ಆಶಯ; ಅದೇ ಅತಿಶಯ. ಅದೇ ಪ್ರಸ್ತುತ ಪ್ರಸಂಗದ ಹೃದಯ. ತತ್ತ್ವವಿಭಾವದ ಫಲವೂ ಅದೇ ತತ್ ಆಗಿದೆ.

"ಗುರು ವಾಕ್ಯಾಮೃತಾಸ್ವಾದಾತ್ ಪ್ರಾಪ್ತಬೋಧ ಮಹಾಫಲಃ ।"
— ಸಿದ್ಧಾಂತ ಶಿಖಾಮಣಿ

ತತ್ತ್ವಜ್ಞಾನ ಪಥದಲ್ಲಿ ಗುರುವಾಕ್ಯವೇ ದಿವ್ಯಕಾವ್ಯ. ಅದರದು ಅಮೃತರಸ. ಅದರ ಆಸ್ವಾದದಿಂದ ಅಳವಡುತ್ತದೆ ಬೋಧವೆಂಬ ಮಹಾಫಲ. ಬೋಧ ಮಹಾಫಲವಾದ್ದರಿಂದ ಬೋಧ (ಜ್ಞಾನ) ಸಾಮಾನ್ಯವಲ್ಲ; ಅಸಾಮಾನ್ಯ ಮೌಲ್ಯವುಳ್ಳ ಮಹಾಜ್ಞಾನ.

"ಗುರೋಃ ಕಟಾಕ್ಷವೇಧೇನ ಶಿವೋ ಭವತಿ ಮಾನವಃ ।
........................'ಗುರುವತ್ ಪೂಜ್ಯತಾಂ ವ್ರಜೇತ್ ।'

ಗುರುವಿನವು ವಾಕ್ಪರುಷ; ನೇತ್ರಪರುಷ; ಹಸ್ತಪರುಷ. ಅವು ಜಡ ಪರುಷಮಣಿಗಿಂತ ಮಹತ್ತರವಾದವುಗಳು. ಗುರುದೇವನ ಮಂತ್ರೋಪದೇಶದಿಂದ ಮಹಾನುಭಾವ ಪ್ರಸಂಗದಿಂದ ಮಾನವನ ಮನ ಘನವಾಗುತ್ತದೆ; ಮಾಂಸಪಿಂಡ ಮಂತ್ರಪಿಂಡವಾಗುತ್ತದೆ. ಗುರುದೇವನ ಕಟಾಕ್ಷವೀಕ್ಷಣದಿಂದ, ಹಸ್ತಸ್ಪರ್ಶದಿಂದ ಮಾನ–ವನು ಶಿವನೇ ಆಗುತ್ತಾನೆ; ಗುರುವಿನಂತೆ ಗೌರವಾನ್ವಿತನಾಗುತ್ತಾನೆ. ಶಾಂತನೂ ದಾಂತನೂ ಲಿಂಗಪೂಜಾತಪಶ್ಶೀಲನೂ ಸತ್ಯವಾಕ್ಕನೂ ಸಮದರ್ಶಿಯೂ ಆಗುವನು ಗುರುದೀಕ್ಷೆ ಶಿಕ್ಷೆಗಳಿಂದ. ಪ್ರವೃತ್ತಿಯಿಂದಾದ ಅಪರತತ್ತ್ವಗಳನ್ನೆಲ್ಲ ಪರತತ್ತ್ವಗಳನ್ನಾಗಿಸುವುದೆ ಗುರುಕಾರುಣ್ಯ. ಪಂಚಭೂತ ಕಾಯವನ್ನು ಲಿಂಗಕಾಯವನ್ನಾಗಿಸುತ್ತಾನೆ. ಕಾಯ ಮೂಲವಾದ ಭೂತಶುದ್ಧಿ ಗುರುದೇವನಿಂದ ! ತನ್ಮಾತ್ರಗಳಾದ ವಿಷಯಗಳನ್ನು ಪ್ರಸಾದಗಳನ್ನಾಗಿಸುತ್ತಾನೆ. ಕರ್ಮೇಂದ್ರಿಯ –ಜ್ಞಾನೇಂದ್ರಿಯಗಳಲ್ಲಿ ಶಿವಾಚಾರ ಶಿವ ವಿಚಾರ ತುಂಬಿ ಇವನ್ನು ಶಿವತತ್ತ್ವನಿಷ್ಠಗಳನ್ನಾಗಿಸುತ್ತಾನೆ.

"ಶಿವಾಚಾರೇ ಶಿವಧ್ಯಾನೇ ಶಿವಜ್ಞಾನೇ ಚ ನಿರ್ಮಲೇ
ಗುರೋರಾದೇಶಮಾತ್ರೇಣ ಪರಾಂ ನಿಷ್ಠಾಮವಾಪ್ನುಯಾತ್ ।
ಗುರೋರ್ ಲಬ್ಧ್ವಾ ಮಹಾಜ್ಞಾನಂ ಸಂಸಾರಾಮಯಭೇಷಜಂ
ಮೋದತೇ ಯಃ ಸುಖೀ ಶಾಂತಃ ಸ ಜೀವನ್ಮುಕ್ತ ಏವ ಹಿ ॥"

ಎಂದಿದೆ ಸಿದ್ಧಾಂತ ಶಿಖಾಮಣಿ! ಗುರುದೇವನಿಂದ ಇವನ್ನು ಪಡೆಯುವುದಕ್ಕಿಂತ ಬೇರೆ ಮಹಾಭಾಗ್ಯವುಂಟೆ? ಇಲ್ಲಿ ಶಿವಜ್ಞಾನ ಶಿವಧ್ಯಾನಗಳಂತೆ ಶಿವಾಚಾರವೂ ಒಂದೆಂಬುದನ್ನು ಗಮನಿಸಬೇಕು. ವ್ಯಕ್ತಿನಿಷ್ಠ ಆಚಾರ ಮಾತ್ರವನ್ನು ಬೋಧಿಸುವ ಪದವನ್ನು ಸಮಷ್ಟಿನಿಷ್ಠ ಸಮಾಜವನ್ನೆ ಪ್ರತಿನಿಧಿಸುವಂತೆ ಮಾಡುವುದು ಸಮಂಜಸವಲ್ಲ.

ವೀರಶೈವನಿಗೆ ಭೂತಕಾಯ ಭೂತೇಂದ್ರಿಯಗಳು ನಿರಸನವಾಗಿ ಶಿವಕಾಯ ಶಿವೇಂದ್ರಿಯ ಶಿವಬುದ್ಧಿ, ಶಿವೋಹಂಭಾವ, ಶಿವಮನಗಳಾಗಬೇಕಾದರೆ ಶಿವಾಚಾರಾದಿಗಳು ಬೇಕು. ಶಿವಾಚಾರಾದಿಗಳು ಗುರುವಿನ ಅನುಗ್ರಹಮಾತ್ರದಿಂದ ಆದೇಶಮಾತ್ರದಿಂದ ಅಳವಡುತ್ತವೆ. ಸಂಸಾರಾಮಯ ನೀಗುತ್ತದೆ. ಗುರುಕಾರುಣ್ಯ ಲಭಿಸುತ್ತದೆ. ಜೀವನ್ಮುಕ್ತನಾಗಿ ಶಾಂತನೂ ಸುಖಿಯೂ ಆಗುತ್ತಾನೆ. ಶಾಂತನಾಗುವುದಕ್ಕಿಂತ ಸುಖಿಯಾಗುವುದಕ್ಕಿಂತ ಬೇರಿಲ್ಲ ಜೀವನ್ಮುಕ್ತಿ. ಬುದ್ಧಿ ಅಹಂಕಾರ ಮನ ಪ್ರಕೃತಿ ಪುರುಷನು ಶಾಂತರಾದರೆ ಹಿಂದೆ ಹೇಳಿದ ಪಂಚ ಕಂಚುಕಿಗಳ ಆವರಣ ಹಳಚುತ್ತದೆ. ಪಂಚಕ್ಲೇಶಗಳು ತೊಲಗಿ ಪರಮಸುಖಿಯಾಗುತ್ತಾನೆ. ಶುದ್ಧ ವಿದ್ಯಾ ವಿನಯಾನ್ವಿತನಾಗುತ್ತಾನೆ. ಪ್ರಕೃತಿಯೆ ಮೊದಲಾದ ೨೫ ತತ್ತ್ವಗಳ ಈಶ್ವರತ್ವವುಂಟಾಗುತ್ತದೆ. ಇದುಂಟಾದಲ್ಲಿ ಸದಾ–ಶಿವತ್ವ ಜೀವನ ಲಭಿಸುತ್ತದೆ; ಶಿವಶಕ್ತಿ ಸಮನಿಸುತ್ತದೆ. ಅಶಿವ ಪ್ರಕೃತಿ ತೊಲಗುತ್ತದೆ. ಅಶಿವ ಪ್ರಕೃತಿ ಅಶಿವಶಕ್ತಿಗಳು ಭ್ರಷ್ಟಾಚಾರಗಳಿಗೆ ಮೂಲಗಳು. ಶಿಷ್ಟಾಚಾರ ಶಿಷ್ಟವಿಚಾರಗಳಿಂದ ಬಾಳಿ ಸಮಾಜಕ್ಕೆ ದೇಶಕ್ಕೆ ಕಂಟಕನಾಗದೆ ತನ್ನ ಉದ್ಧಾರವನ್ನು ಮಾಡಿಕೊಳ್ಳಬೇಕಾದರೆ ತನ್ನೊಳಗಿರುವ ತತ್ತ್ವಗಳ ಶುದ್ಧಿಯೆ ವೃದ್ಧಿಯೇ ತಾತ್ತ್ವಿಕೋಪಾಯ. ಇದನ್ನು ಕೂಲಂಕಷವಾಗಿ ಕಂಡುಹಿಡಿದಿದೆ ವೀರಶೈವಮತ. ಕಂಡುಹಿಡಿದು ಸಂಸ್ಕಾರ ಮೂಲಕ ಪ್ರಯೋಗದಲ್ಲಿ ತಂದಿದೆ; ತರುತಿದೆ. ಆದರೆ ಇದಕ್ಕೆ ಮನಸ್ಸು ಮಾಡುವವರು ವಿರಳ.

ವೀರಶೈವ ಮತದ ಈ ಉಪಾಯ ಸಣ್ಣದಲ್ಲ, ಕಡೆಗಣ್ಣಿನಿಂದ ಕಾಣುವಂತಹದಲ್ಲ. ೩೬ ತತ್ತ್ವಶುದ್ಧಿ ಸಾಮಾನ್ಯವೆ? ಜೀವನ್ಮುಕ್ತಿ ಸಾಮಾನ್ಯವೆ? ತ್ರಿಕರಣಗಳೊಡನೆ ಹೃದಯ ತಾವರೆ ಅರಳುವುದು ಅದರ ಬಂಡುಣಿಸಿಗೆ ಪರಮತುಂಬಿ ತುಂಬಿ ಬರುವುದು ಸಾಮಾನ್ಯವೆ? ಈ ಬಗೆಗೆ ಮಹಾಗುರುವಾದ ಶ್ರೀ ರೇಣುಕ ಶಿವಾಚಾರ್ಯನ ಸಾರ ಸಂದೇಶದಂತಿರುವ ಈ ಆರೇಳು ನುಡಿಗಳನ್ನು ಆಲಿಸಿ; ಆರಿಸಿ ಅಳವಡಿಸಿಕೊಂಡು ಆರನ್ನು ಗಳಿಸಿ ಈ ದುರ್ಧರವಾದ ಸಂಸಾರ ಪಂಕದಿಂದ ಎದ್ದೇಳಿ:

"ಅದ್ವೈತ ಪರಮಾನಂದ ಪ್ರಬೋಧೈಕ ಪ್ರಕಾಶಕಂ
ಉಪಾಯಂ ಶೃಣುಯಾಚ್ಛಿಷ್ಯಃ ಸದ್ಗುರುಂ ಪ್ರಾಪ್ಯ ಸಾಂಜಲಿಃ ।
ಕಿಂ ತತ್ತ್ವಂ ಪರಮಂ ಜ್ಞೇಯಂ ಕೇನ ಸರ್ವೇ ಪ್ರತಿಷ್ಠಿತಾಃ
ಕಸ್ಯ ಸಾಕ್ಷಾತ್ಕ್ರಿಯಾ ಮುಕ್ತಿಃ ಕಥಯೇತಿ ಸಮಾಸತಃ ।

ಶಿಷ್ಯನು ಸದ್ಗುರುವನ್ನು ಪಡೆದು ಕೈಮುಗಿದು ಬಿಡದೆ 'ಅದ್ವೈತಪರಮಾನಂದ ಪ್ರಬೋಧೈಕ ಪ್ರಕಾಶಕ' ವಾದ ಉಪಾಯವನ್ನು ಕೇಳಬೇಕು. ಆ ಉಪಾಯದ ವಿವರ ವೇನು? ಯಾವುದು ಪರಮವೂ ಜ್ಞೇಯವು ಆದ ತತ್ತ್ವ? ಯಾವ ತತ್ತ್ವದಲ್ಲಿ ಯಾವ ಕಾರಣದಿಂದ ಈ ಎಲ್ಲವೂ ಪ್ರತಿಷ್ಠಿತವಾಗಿದೆ? ಮುಕ್ತಿರೂಪವಾದ ಅದರ ಸಾಕ್ಷಾತ್ಕಾರ ಯಾರಿಗೆ? ಇದನ್ನೆಲ್ಲ ಸಾವಧಾನದಿಂದ ಸಮಾಧಾನದಿಂದ ಸಾಕಲ್ಯವಾಗಿ ಉಪದೇಶಿಸು_ಎಂದು ಶಿಷ್ಯನು ಶ್ರೀಗುರುದೇವನನ್ನು ಕೇಳಬೇಕು.

"ಇತಿ ಪ್ರಶ್ನೇ ಕೃತೇ ಪೂರ್ವಂ ಶಿಷ್ಯೇನ ನಿಯತಾತ್ಮನಾ ।
ಬ್ರೂಯಾತ್ತತ್ತ್ವಂ ಗುರುಸ್ತಸ್ಮೈ ಯೇನ ಸ್ಯಾತ್ಸಂಸೃತೇರ್ ಲಯಃ ॥"

'ಶೀಲ ಸಂಪನ್ನನಾದ ಶಿಷ್ಯನು ಹೀಗೆ ಕೇಳಲು, ಅವನಿಗೆ ಶ್ರೀಗುರುದೇವನು ಸಂಸ್ಕೃತಿಯನ್ನು ಸಂಹರಿಸಿ ಶಿವಸಂಸ್ಕೃತಿಯನ್ನುಂಟು ಮಾಡುವ ತತ್ತ್ವವನ್ನು ಹೇಳಿ ತಿಳಿಸಬೇಕು.'

ಗುರೂಪದೇಶವಿದು :

"ಶಿವ ಏವ ಪರಂ ತತ್ತ್ವಂ ಚಿದಾನಂದ ಸದಾಕೃತಿಃ ।
ಸ ಯಥಾರ್ಥಸ್ತದನ್ಯಸ್ಯ ಜಗತೋ ನಾಸ್ತಿ ನಿತ್ಯತಾ ॥
ಶಿವೋऽಹಮಿತಿ ಭಾವೇನ ಶಿವೇ ಸಾಕ್ಷಾತ್ಕೃತೇ ಸ್ಥಿರಂ ।
ಮುಕ್ತೋ ಭವತಿ ಸಂಸಾರ ಮೋಹಗ್ರಂಥಿ ವಿಭೇದತಃ ॥
ಶಿವಂ ಭಾವಯ ಚಾತ್ಮಾನಂ ಶಿವಾದನ್ಯನ್ನ ಚಿಂತಯ ।
ಏವಂ ಸ್ಥಿರೇ ಶಿವಾದ್ವೈತೇ ಜೀವನ್ಮುಕ್ತೋ ಭವಿಷ್ಯಸಿ ॥
ಏವಂ ಪ್ರಬೋಧಿತಃ ಶಿಷ್ಯೋ ಗುರುಣಾ ಗುಣಶಾಲಿನಾ ।
ಶಿವಮೇವ ಜಗತ್ ಪಶ್ಯನ್ ಜೀವನ್ಮುಕ್ತೋऽಭಿ ಜಾಯತೇ ॥"

ಇಲ್ಲಿದೆ ಉನ್ನಯನದ ಉಜ್ಜೀವನದ ಉದಾತ್ತ ಉಪಾಯ; ಸಾರಭೂತವಾದ ಸಂಸೇವ್ಯವಾದ ಸತ್ವಾತ್ಮಕ ಜೀವನ್ಮುಕ್ತಿಪ್ರದವಾದ ತತ್ತ್ವೋಪದೇಶ. ಸಾರಭೂತ ವಾದರೂ ಸಮಗ್ರತೆಯನ್ನೊಳಗೊಂಡ ಉಪಾಯವುಳ್ಳ ಉಪದೇಶ. ಗುಣಶಾಲಿ ಯಾದ ಗುರುದೇವನ ಈ ಮೂರು ಮಾತುಗಳು ಬರೀ ಮಾತುಗಳಲ್ಲ, ಮುತ್ತು.

ರತ್ನಗಳು; ಜೀವನ್ಮುಕ್ತಿಯನ್ನೆ ಅನುಗ್ರಹಿಸುವ ಜ್ಯೋತಿರ್ಮಯ ಶಿವತತ್ತ್ವಗಳು; ಜ್ಯೋತಿರ್ಲಿಂಗಗಳು.

'ಶಿವನೇ ಪರತತ್ತ್ವ. ಸಚ್ಚಿದಾನಂದವೇ ಶಿವಪರತತ್ತ್ವದ ಸದಾಕೃತಿ. ಯಾವಾಗಲೂ ಸತ್ ಚಿತ್ ಆನಂದತ್ವಗಳಿಗೆ ಹೊರತಾಗಿ ಆತನ ಆಕೃತಿಯಿಲ್ಲ; ಆತನ ಕೃತಿಯಿಲ್ಲ. 'ಸದಾಕೃತಿ' ಎಂತಹ ಭವ್ಯಭಾವವುಳ್ಳ ಉಭಯ ಲಕ್ಷ್ಯವುಳ್ಳ ಉಪಯುಕ್ತ ಪದಸಂಹಿತ; ಉಭಯಾರ್ಥ ಸಂಪೃಕ್ತ ಪದ ಸಂಹಿತ ! ಜಗಚ್ಚೇತನವನ್ನು ಜಗತ್ತನ್ನು ಸಂಬೋಧಿಸುವ ಸಂವಹನ ಸಂ–ಪದ! ಇಷ್ಟೇ ಅಲ್ಲ; ಆ ಶಿವಪರತತ್ತ್ವ ಯಥಾರ್ಥ; ಅಂದರೆ ಸಹಜಸತ್ಯ. ಅದಕ್ಕಿಂತ ಈ ಜಗತ್ತಿನ ನಿತ್ಯತೆ ಬೇರಿಲ್ಲ.

ಆ ಶಿವಪರತತ್ತ್ವವೆ ತಾನೆಂದು ವಿಭಾವಿಸಬೇಕು. ಆಗ ಶಿವಸಾಕ್ಷಾತ್ಕಾರವು ಸ್ಥಿರವಾಗುತ್ತದೆ. ಸಂಸಾರಮೋಹವೆಂಬ ಗ್ರಂಥಿ(ಗಂಟು)ಬಿಚ್ಚುತ್ತದೆ; ಬಂಧದಿಂದ ಮುಕ್ತನಾಗುತ್ತಾನೆ.

ಇದರಿಂದ ಓ ಶಿಷ್ಯಶಿಶುವೆ, ಆತ್ಮನನ್ನು ಶಿವನೆಂದು ಭಾವಿಸು; ಶಿವನಿಗೆ ಅನ್ಯವಾದುದನ್ನು ಚಿಂತಿಸಬೇಡ. ಶಿವಭಾವ ಶಿವಚಿಂತನ ಸ್ಥಿರವಾಗುವುದೆ ಶಿವಾದ್ವೈತ. ಶಿವಾದ್ವೈತವೆಂದರೆ ಶಿವನೇ ತಾನಾಗುವಿಕೆ; ಶಿವಶಕ್ತಿ ಸ್ಥಿರವಾಗಿ ಅಳವಡುವಿಕೆ. ಹೀಗಾಗುವುದೇ ಜೀವನ್ಮುಕ್ತಿ. ಹೀಗೆ ನಡೆದರೆ ನೀನು ಜೀವನ್ಮುಕ್ತನಾಗುವೆ !

ಶ್ರೀಗುರುದೇವನ ಈ ಉಪದೇಶದಿಂದ ಪ್ರಬೋಧಿತನಾದ ಶಿಷ್ಯನು ಪ್ರಬುದ್ಧನಾಗಿ ಜಗತ್ತನ್ನು ಶಿವಸ್ವರೂಪವನ್ನಾಗಿಯೆ ಕಾಣುತ್ತಾನೆ. ಹೀಗೆ ಕಾಣುವವನೆ ಜೀವನ್ಮುಕ್ತನು.

ಹೀಗೆ ಉಪದೇಶಿಸುವ ಗುರುವಿಗಿಂತ ಗುಣಶಾಲಿ ಯಾರು ? ಇಂತಹ ಗುರುವಾಕ್ಯಗಳಿಗಿಂತ ಅಮೃತ ಬೇರೆ ಯಾವುದು? ಅದರ ಆಸ್ವಾದಕ್ಕಿಂತ ಬೇರೆ ಆಸ್ವಾದ ಯಾವುದು? ಬೇರೆ ರಸರುಚಿ ಯಾವುದು? ಇದುವೇ ಪ್ರಬೋಧರೂಪ ಮಹಾಫಲ. ಇದನುಂಡು ಜೀರ್ಣಿಸಿಕೊಂಡವನೆ ಅಂದರೆ ಅಳವಡಿಸಿಕೊಂಡವನೆ ಜೀವನದಲ್ಲಿಯೆ ಮುಕ್ತನಾಗುತ್ತಾನೆ. ಶಿವ–ಪರತತ್ತ್ವಕ್ಕೇರಿ ಶಿವಗುರುವಿನಂತೆ ಸೇವ್ಯನಾಗುತ್ತಾನೆ. ಶಿವಪರತತ್ತ್ವಾನುಭವಾನಂದ ಸಮರಸ ಸಿದ್ಧಾಂತ ಸಮನಿಸುತ್ತದೆ.

ವೀರಶೈವಾಂಗ ತ್ರಿವಿಧ; ಒಂದು ತ್ಯಾಗಾಂಗ, ಇನ್ನೊಂದು ಭೋಗಾಂಗ, ಮತ್ತೊಂದು ಯೋಗಾಂಗ. ಇವು ಪರಿವಿಡಿದು ಕ್ರಿಯಾಂಗ–ಜ್ಞಾನಾಂಗ–ಭಾವಾಂಗವೆನಿಸಿವೆ. ಇವುಗಳಿಗೆ ಪರಿವಿಡಿದು ಕ್ರಿಯಾಚಾರ–ಜ್ಞಾನಾಚಾರ–ಭಾವಾಚಾರಗಳು ಬೇಕು. ಒಂದೊಂದಂಗವೂ ಆರಾಗಿ ಮೂವತ್ತಾರಾಗುತ್ತವೆ. ಅಂತೆಯೇ ಆಚಾರ

ಗಳು; ವಿಚಾರಗಳು. ಹೀಗೆ ಮೂರೂ ಸೇರಿ ನೂರೆಂಟಾಗುತ್ತವೆ. ನೂರೆಂಟು ಅಂಗ ತತ್ತ್ವಶುದ್ಧಿಯೇ ವೀರಶೈವ ತತ್ತ್ವ ಸಿದ್ಧಿ. ಇದನ್ನುಂಟುಮಾಡುವ ಶ್ರೀಗುರುವೇ ನೂರೆಂಟು ಜಗತ್ ಗುರು.

ವೀರಶೈವ ತತ್ತ್ವ ಕ್ರಿಯಾನಿಷ್ಠವೂ ಅಹುದು, ಜ್ಞಾನನಿಷ್ಠವೂ ಅಹುದು; ಅನುಭವನಿಷ್ಠವೂ ಅಹುದು. ದೃಕ್ಕ್ರಿಯಾನುಭವಾತ್ಮಕ ತತ್ತ್ವಬೋಧೆಯೇ ವೀರಶೈವ ಮತದೀಕ್ಷೆ; ಎಲ್ಲ ತತ್ತ್ವಗಳನ್ನೊಳಗೊಂಡ ಶಿವಶಕ್ತಿಯೆ ಜೀವನ ರಕ್ಷೆ. ಜಗದ ರಕ್ಷೆಯೂ ಅಹುದು. ಶಿವೇತರ ಕ್ಷತಿಯನ್ನುಂಟು ಮಾಡುವ ತತ್ತ್ವಪ್ರಣಾಳಿಕೆ–ತಾತ್ವಿಕ ಸಂಸ್ಕಾರ ಯಾರಿಗೆ ಬೇಡ ? ಯಾವುದಕ್ಕೆ ಬೇಡ? ವೀರಶೈವಮತ ತತ್ತ್ವಜ್ಞಾನದ ಫಲಶ್ರುತಿ ಹೀಗಿದೆ :

> "ಮುಕ್ತಃ ಸಂಶಯಪಾಶತಃ ಸ್ಥಿರಮನಾ ಬೋಧೇ ಚ ಮುಕ್ತಿಪ್ರದೇ
> ಮೋಹಂ ದೇಹಭೃತಾಂ ದೃಶಾ ವಿಘಟಯನ್ಮೂಲಂ ಮಹಾ ಸಂಸೃತೇಃ ।
> ಸತ್ತಾನಂದಚಿದಾತ್ಮಕೇ ನಿರುಪಮೇ ಶೈವೇ ಪರಸ್ಮಿನ್ಪದೇ
> ಲೀನಾತ್ಮಾ ವಿದಿತಪ್ರಪಂಚವಿಭವೋ ಯೋಗೀ ಜನೈಃ ಸೇವ್ಯತೇ ॥

ವೀರಶೈವ ಸಿದ್ಧಾಂತ

"ಶೈವ ತಂತ್ರಮಿತಿಪ್ರೋಕ್ತಂ ಸಿದ್ಧಾಂತಾಖ್ಯಂ ಶಿವೋದಿತಂ
ಸರ್ವವೇದಾರ್ಥ ರೂಪತ್ವಾತ್ ಪ್ರಮಾಣಂ ವೇದವತ್ಸದಾ ।...
ಶಕ್ತಿಪ್ರಧಾನಂ ವಾಮಾಖ್ಯಂ, ದಕ್ಷಿಣಂ ಭೈರವಾತ್ಮಕಂ,
ಸಪ್ತಮಾತೃಪರಂ ಮಿಶ್ರಂ, ಸಿದ್ಧಾಂತಂ ವೇದ ಸಂಮತಂ ॥"

— ಸಿದ್ಧಾಂತ ಶಿಖಾಮಣಿ

ವೀರಶೈವವು ಒಂದು ಮತವಾಗಿರುವಂತೆ, ಒಂದು ತತ್ತ್ವವೂ ಅಹುದು; ಒಂದು ಸಿದ್ಧಾಂತವೂ ಅಹುದು. ಅದಕ್ಕೆ ಅದರದೆ ಆದ ಅಭಿಪ್ರಾಯವಿದೆ, ಸ್ವರೂಪವಿದೆ; ನಿರ್ಣಯವಿದೆ. ನಿರ್ಣಯವೆಂದರೆ ವಿಮರ್ಶಾಪೂರ್ವಕವಾಗಿ ಮಾಡಿದ ನಿಜನಿರ್ಣಯ; ಸತ್ಯ ಸುಂದರ ಶಿವತತ್ತ್ವ ಸಿದ್ಧಾಂತ.

ಸಿದ್ಧಾಂತದಿಂದ ಸಂಶಯ ಅಜ್ಞಾನ ಭ್ರಾಂತಿಗಳ ನಿವೃತ್ತಿ; ಜ್ಞಾನಕ್ರಿಯಾನುಭವಗಳ ವ್ಯುತ್ಪತ್ತಿ; ಸ್ವಸ್ವರೂಪದ ನಿಷ್ಪತ್ತಿ.

ಶಿವೋದಿತವಾದುದು ಶೈವತಂತ್ರ; ಅದರ ಹೆಸರು ಸಿದ್ಧಾಂತಾಗಮ. ಅದು ಎಲ್ಲ ವೇದಾರ್ಥರೂಪವಾಗಿದ್ದು ವೇದದಂತೆ ಸದಾ ಪ್ರಮಾಣವಾಗಿದೆ.

ಬೇರೆ ಆಗಮುಗಳು ಬೇಕಾದಷ್ಟಿವೆ. ಅವುಗಳಲ್ಲಿ ವಾಮ, ದಕ್ಷಿಣ, ಮಿಶ್ರ, ಸಿದ್ಧಾಂತ ಎಂಬಿವು ನಾಲ್ಕು ಮುಖ್ಯ. ಇವುಗಳಲ್ಲಿ ಶಕ್ತಿಪ್ರಧಾನವಾದುದು ವಾಮತಂತ್ರ. ಭೈರವಾತ್ಮಕವಾದುದು ದಕ್ಷಿಣತಂತ್ರ; ಸಪ್ತಮಾತೃಕಾ ಪರವಾದುದು ಮಿಶ್ರತಂತ್ರ. ವೇದಸಂಮತವಾದುದು ಸಿದ್ಧಾಂತ ತಂತ್ರ. ವೇದಧರ್ಮ*ಗಳನ್ನೆ ಪ್ರತಿಪಾದನ ಮಾಡುವುದರಿಂದ ಸಿದ್ಧಾಂತಾಗಮ ಶ್ರೇಷ್ಠವೆನಿಸಿದೆ; ಸರ್ವಪ್ರಾಮಾಣ್ಯವಾಗಿದೆ. ವೀರಶೈವಮತ

* ವೇದಧರ್ಮವೆಂದರೆ ದೃಕ್ಕ್ರಿಯಾತ್ಮಕ ಧರ್ಮ.

ಸಿದ್ಧಾಂತಾಗಮದಲ್ಲಿ ನಿರ್ದಿಷ್ಟವಾಗಿದೆ. ಮತದ ಆಕರವೆ ಸಿದ್ಧಾಂತ. ಮತ–ಬೀಜದಿಂದಾದ ತತ್ತ್ವತರುವಿನ ಪಕ್ವಫಲ ವೀರಶೈವ ಸಿದ್ಧಾಂತ.

ಈ ಸಿದ್ಧಾಂತ ವಸ್ತು ತತ್. ಅದು ವ್ಯಷ್ಟಿ ಸಮಷ್ಟಿ ಎಂದು ಇಬ್ಬಗೆ! ಜೀವಿಗಳಲ್ಲಿರುವ ಅಂದರೆ ಚರ ಪ್ರಪಂಚದಲ್ಲಿರುವ ತತ್ ಜೀವಾತ್ಮ; ಇದು ವ್ಯಷ್ಟಿ. ಜಗದಲ್ಲಿರುವ ತತ್ ದೇವ; ಅದು ಸಮಷ್ಟಿ. ಒಂದು ಸೀಮಿತ ಮತ್ತು ಔಪಾಧಿಕ, ಇನ್ನೊಂದು ಅಸೀಮಿತ ಮತ್ತು ನಿರುಪಾಧಿಕ.

"ಪಿಂಡದೊಳಗೆ ಪಿಂಡರೂಪಾಗಿ ಈ ಪರಿಯಲ್ಲಿ
ಗೌಪ್ಯವಾಗಿದ್ದು, ಎನ್ನಲ್ಲಿ ಕಾಣಿಸಿಕೊಳ್ಳದಿರ್ದಿರಿ;
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ!

ಮರದೊಳಗೆ ಮಂದಾಗ್ನಿಯ ಉರಿಯದಂತಿರಿಸಿದೆ,
ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ,
ಶರೀರದೊಳಗೆ ಆತ್ಮನ ಕಾಣದಂತಿರಿಸಿದೆ,
ನೀ ಬೆರಸುವ ಭೇದಕ್ಕೆ ಬೆರಗಾದೆನಯ್ಯಾ ರಾಮನಾಥಾ!

ಬಯಲ ಬಣ್ಣವ ಮಾಡಿ, ಸ್ವಯವ ನಿಲವ ಮಾಡಿ
ಸುಳಿವಾತನ ಬೆಡಗ ಬಲ್ಲವರಾರೈ ರಾಮನಾಥಾ!

ಒಡಲೊಳಗಣ ಕಿಚ್ಚು ಒಡಲ ಸುಡದ ಭೇದವ,
ಕುಡಿದ ಉದಕದಲ್ಲಿ ಆ ಕಿಚ್ಚು ನಂದದ ಭೇದವ,
ಮೃಡ, ನೀ ಪ್ರಾಣ ಪ್ರಕೃತಿಯೊಳಗಡಗಿದ ಭೇದವ,
ಲೋಕದ ಜಡರೆತ್ತ ಬಲ್ಲರೈ ರಾಮನಾಥಾ!"

ಇನ್ನು ಜಗದ್ಭರಿತತ್ವಕ್ಕೆ—

"ಶಿವ ತನ್ನ ವಿನೋದಕ್ಕೆ ರಚಿಸಿದನು ಅನಂತ ವಿಶ್ವವನು,
ರಚಿಸಿದವನು ವಿಶ್ವಕ್ಕೆ ಹೊರಗಾಗಿರ್ದನೆ?
ಇಲ್ಲ; ವಿಶ್ವಮಯ ತಾನಾದನು.
ವಿಶ್ವವೆಲ್ಲವೂ ತಾನಾದೊಡೆ, ವಿಶ್ವದುತ್ಪತ್ತಿಲಯಕ್ಕೊಳಗಾದನೆ? ಇಲ್ಲ,
ಅದೇನು ಕಾರಣವೆಂದಡೆ ಅಜಾತನಾಗಿ ಉತ್ಪತ್ತಿ ಇಲ್ಲ;
ಕರ್ಮರಹಿತನಾಗಿ ಸ್ಥಿತಿಗೊಳಗಲ್ಲ,
ಮರಣರಹಿತನಾಗಿ ಲಯಕ್ಕೊಳಗಲ್ಲ,
ಇಂತೀ ಗುಣತ್ರಯಂಗಳ ಹೊದ್ದಲರಿಯ,
ತಾನಿಲ್ಲದೆ ವಿಶ್ವಕ್ಕಾಧಾರವಿಲ್ಲಾಗಿ ದೂರಸ್ಥನಲ್ಲ,

ತನ್ನಲ್ಲಿ ತಾನಲ್ಲದೆ ಅನ್ಯವು ತೋರಲರಿಯದಾಗಿ, ಇದಿರಿಲ್ಲ;
ಇದಿರಿಲ್ಲಾಗಿ, ವಿಶ್ವಮಯ ತಾನಾದುದೇ ಸತ್ಯ,
ಅರಸು ಕಾಲಾಳಾಗಬಲ್ಲ ತನ್ನ ವಿನೋದಕ್ಕೆ; ಮರಳಿ ಅರಸಾಗಬಲ್ಲ,
ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು,
ಜಗವಾಗಲೂ ಬಲ್ಲ, ಜಗವಾಗದಿರಲೂ ಬಲ್ಲನಯ್ಯ."

ಈ ವಚನದಲ್ಲಿ ಉರಿಲಿಂಗಪೆದ್ದಿಗಳು ಸರ್ವಾಂತರ್ಯಾಮಿಯ ಸ್ವರೂಪಲಕ್ಷಣವನ್ನು ಸೊಗಸಾಗಿ ಮಾಡಿದ್ದಲ್ಲದೆ, ವಿಶ್ವ ಸೃಜನ ಕಾರಣವನ್ನೂ ಕಾರ್ಯಸ್ವರೂಪವನ್ನೂ ಸಿದ್ಧಾಂತೀಕರಿಸಿದ್ದಾರೆ. ಶಿವನ ವಿನೋದ(ಲೀಲೆ)ವೆ ವಿಶ್ವರಚನೆಗೆ ಮೂಲ ಕಾರಣ. ಶಿವನೇ ನಿಮಿತ್ತಕಾರಣನೂ ಉಪಾದಾನಕಾರಣನೂ ಆಗಿದ್ದಾನೆ. ಏಕೆಂದರೆ ಆತನ ಹೊರತು ಬೇರೊಂದು ವಸ್ತುವಿಲ್ಲವಾಗಿ ! ಅಲ್ಲದೆ ಮಾನವರಂತೆ ಕಾರ್ಯಕ್ಕೆ ಹೊರಗಾಗಿ ಇರುವವನಲ್ಲ. ತನ್ನ ಕಾರ್ಯವಾದ ವಿಶ್ವದ ರೂಪವೆ ತಾನಾಗಿದ್ದಾನೆ, ವಿಶ್ವಕ್ಕೆ ಹೊರಗಾಗಿಲ್ಲ; ವಿಶ್ವಮಯನೇ ಆಗಿದ್ದಾನೆ. ಕಾರ್ಯಸ್ವರೂಪವಾದರೂ ಕಾರ್ಯದ ಅವಸ್ಥೆಗಳಿಗೆ ಒಳಗಾಗಿಲ್ಲ. ಏಕೆಂದರೆ ಆತನು ಅಜಾತ, ಕರ್ಮರಹಿತ, ಮೃತ್ಯುಂಜಯ. ಆತ ಅಜಾತನಾಗಿ ಹುಟ್ಟಿಲ್ಲ. ಅಕರ್ಮನಾಗಿ ಸ್ಥಿತಿಯಿಲ್ಲ; ಅಮೃತನಾಗಿ ಮರಣವಿಲ್ಲ. 'ಸ್ವಾಮಿ ನೀನು ಶಾಶ್ವತ ನೀನು'–ಬಸವಣ್ಣ. ಗುಣತ್ರಯಕ್ಕೂ ಒಳಗಾದವನಲ್ಲ. ಒಳಗಾದರೆ ಆಮಯತ್ವಕ್ಕೆ ಅಳವಡಬೇಕಾಗುತ್ತದೆ. ಆತ ನಿರಾಮಯ. ಆತನು ಅಕಾಯನಾಗಿ ಕಾಯರೋಗವಿಲ್ಲ. ಆತನು ಭವಹರನಾಗಿ ಭವರೋಗವಿಲ್ಲ. ಆತನು ಸಚ್ಚಿದಾನಂದ ಸ್ವರೂಪನಾಗಿ ಅಂದರೆ ಸತ್ಕಾಯನಾಗಿ ಚಿತ್ಪ್ರಾಣನಾಗಿ ಆನಂದಾತ್ಮನಾಗಿ ತ್ರಿಮಲಗಳಿಲ್ಲ. ಇವನ್ನು ಹೊದ್ದನಾಗಿ ಬದ್ಧನಲ್ಲ. ಆತ ವಿಶ್ವಾಧಾರ, ವಿಶ್ವಂಭರ. ಅಂತೆಯೇ ಆತನು ವಿಶ್ವಕ್ಕೆ ದೂರನಲ್ಲ; ವಿಶ್ವಭರಿತ. "ಸ ಭೂಮಿಂ ವಿಶ್ವತೋ ವೃತ್ವಾ ಅತ್ಯತಿಷ್ಠದ್ದಶಾಂಗುಲಂ" ಎಂದಿದೆ ಪುರುಷಸೂಕ್ತ. ಶಿವನು ವಿಶ್ವದಲ್ಲಿರುವನೆಂದರೆ ತನ್ನಲ್ಲಿ ತಾನಿರುವನೆಂದರ್ಥ. ವಿಶ್ವ ಬೇರೆಯಲ್ಲ, ವಿಶ್ವೇಶ್ವರ ಬೇರೆಯಲ್ಲ. ಭೂಜ ಬೇರೆಯಲ್ಲ, ಬೀಜ ಬೇರೆಯಲ್ಲ. ಶಿವನಿಗೆ ಬೇರಾಗಿ ಒಂದೂ ಇಲ್ಲ; ಒಂದೂ ತೋರದು. ಇದರಿಂದಾಗಿ ಈಶನಿಗೆ ಇದಿರಿಲ್ಲ; ಇದಿರಿಲ್ಲಾಗಿ ವಿಶ್ವಮಯನೆಂಬುದು ಸತ್ಯ.

"ಯಸ್ಮಾದೇತತ್ ಸಮುತ್ಪನ್ನಂ ಮಹಾದೇವಾಚ್ಚರಾಚರಂ
ತಸ್ಮಾದೇತನ್ನಭಿದ್ಯೇತ ಯಥಾ ಕುಂಭಾದಿಕಂ ಮೃದಃ ।
ಶಿವತತ್ತ್ವಾತ್ ಸಮುತ್ಪನ್ನಂ ಜಗದಸ್ಮಾನ್ನಭಿದ್ಯತೇ
ಫೇನೋರ್ಮಿ ಬುದ್ಬುದಾಕಾರೋ ಯಥಾ ಸಿಂಧೋರ್‌ನಭಿದ್ಯತೇ ।

ಯಥಾ ಪುಷ್ಪ ಪಲಾಶಾದಿರ್ ವೃಕ್ಷರೂಪಾನ್ನಭಿದ್ಯತೇ
ತಥಾ ಶಿವಾತ್ ಪರಾಕಾಶಾತ್ ಜಗತೋ ನಾಸ್ತಿ ಭಿನ್ನತಾ ॥"

— ಸಿದ್ಧಾಂತ ಶಿಖಾಮಣಿ

"ಯಥೋರ್ಣ ನಾಭಿಃ ಸೃಜತೇ ಗೃಹ್ಣತೇ ಚ
ಯಥಾ ಪೃಥಿವ್ಯಾಮೋಷಧಯಃ ಸಂಭವಂತಿ
ಯಥಾ ಸತಃ ಪುರುಷಾತ್ ಕೇಶಲೋಮಾನಿ
ತಥಾಽಕ್ಷರಾತ್ ಸಂಭವತೀಹ ವಿಶ್ವಮ್ ॥"

—ಮುಂಡಕೋಪನಿಷತ್.

ಈ ಶ್ರುತಿಯ ಭಾವವನ್ನು 'ಜಗವಾಗಲೂ ಬಲ್ಲ ಜಗವಾಗದಿರಲೂ ಬಲ್ಲ' ಎಂಬ ವಚನದ ಕೊನೆಯ ಪಂಕ್ತಿ ಉಗ್ಗಡಿಸಿದೆ. ನಿಮಿತ್ತ–ಉಪಾದಾನ–ಸಹಕಾರಿ ಕಾರಣಗಳೆಲ್ಲ ಆತನೆ ಆಗಿರುವನೆಂಬುದನ್ನು ಸಿದ್ಧಾಂತಗೊಳಿಸಲಾಗಿದೆ.

ಶಿವನು ಕಾರ್ಯರೂಪದಲ್ಲಿರುವಾಗ ವಿಕಾಸನಾಗಿ ಕಾರಣರೂಪದಲ್ಲಿರುವಾಗ ಸಂಕೋಚರೂಪನಾಗಿ ಇರುವನು. ಕಾರ್ಯದಲ್ಲಿ ಭೇದವನ್ನು ಕಾರಣದಲ್ಲಿ ಅಭೇದವನ್ನು ವೀರಶೈವಮತವೊಪ್ಪುತ್ತದೆ. ಹಿಟ್ಟಿನಲ್ಲಿ ರೊಟ್ಟಿಯಲ್ಲಿ ಜೋಳ ಇದ್ದೇ ಇರುವಂತೆ ಕಾರಣ–ಕಾರ್ಯಗಳಲ್ಲಿ ಮಹಾಕಾರಣನಾದ ಪರಶಿವನು ಇದ್ದೇ ಇರುತ್ತಾನೆ. 'ಏಕಂ ಸತ್ ವಿಪ್ರಾ ಬಹುಧಾವದಂತಿ'–ಋಗ್ವೇದ. ಒಂದಿದ್ದು ಹಲವಾಗಬಲ್ಲ; ಹಲವಾಗಿಯೂ ಒಂದಾಗಿರಬಲ್ಲ. 'ದೇವನೊಬ್ಬ ನಾಮ ಹಲವು' ಬಸವಣ್ಣನ ಬಗೆಯಿದು.

"ಆತ್ಮ ಶಕ್ತಿ ವಿಕಾಸೇನ ಶಿವೋ ವಿಶ್ವಾತ್ಮನಾ ಸ್ಥಿತಃ
ಕುಟೀಭಾವಾದ್ಯಥಾ ಭಾತಿ ಪಟಃ ಸ್ವಸ್ಯ ಪ್ರಸರಣಾತ್ ।"

— ಸಿದ್ಧಾಂತ ಶಿಖಾಮಣಿ

ಇನ್ನು ಜಗತ್ ಸೃಷ್ಟಿಯ ವಿಚಾರದಲ್ಲಿ ವೀರಶೈವ ಸಿದ್ಧಾಂತ ವಿವರ್ತವಾದವನ್ನಾಗಲಿ, ವಿಕೃತ ಪರಿಣಾಮವಾದವನ್ನಾಗಲಿ ಅಂಗೀಕರಿಸುವುದಿಲ್ಲ. ಅವಿಕೃತ ಪರಿಣಾಮವಾದವನ್ನೆ ಅಂಗೀಕರಿಸಿ ನಿರ್ಣಯಿಸಿದೆ. ಈ ಸಿದ್ಧಾಂತದಲ್ಲಿ ಜಗತ್ತು ಕಲ್ಪಿತ ಅಲ್ಲ. "ಸ್ಥಿತ ಏವ ಉಪಾದಾನೇ ತದ್ಭಿನ್ನ ವ್ಯವಹಾರಯೋಗ್ಯ ಕಾರ್ಯೋತ್ಪತ್ತಿರೇವ ಪರಿಣಾಮಃ" ಶಿವಾದ್ವೈತ ಸಿದ್ಧಾಂತದ ಪರಿಣಾಮವಾದವಿದು. 'ಸ್ವರ್ಣಾಭರಣ'ವಾದವಿದು. "ಸ್ವಶಕ್ತಿ ಪ್ರಚಯೋಽಸ್ಯ ವಿಶ್ವಂ" ಈ ಶಿವಸೂತ್ರಾಭಿಪ್ರಾಯವನ್ನು ಒಪ್ಪಲಾಗುತ್ತದೆ. ಶಿವಶಕ್ತಿ ವಿಕಾಸವೇ ವಿಶ್ವವಾದ ಕಾರಣ, ವಿಶ್ವಕ್ಕೆ ಉತ್ಪತ್ತಿಯಿಲ್ಲ. ಕೊನೆಯಲ್ಲಿ ಶಿವನಲ್ಲಿ ಅಂತರ್ಭೂತವಾಗಿರುವುದರಿಂದ ನಾಶವಿಲ್ಲ. ವೀರಶೈವ ಸಿದ್ಧಾಂತದಲ್ಲಿ ವಿಶ್ವವೂ ಅನಾದಿ, ಅನಂತ; ಅನಾದಿ ನಿಧನ ಸ್ವರೂಪ ಶಿವಮಯವಾದ ಕಾರಣ !

"ತಸ್ಮಿನ್ ಹ ತಸ್ಥು: ಭುವನಾನಿ ವಿಶ್ವಾಃ" ಎಂದು ಯಜುಃಶ್ರುತಿಯು ಸಾರಿದೆ, ವೀರಶೈವವು ಪಾರಮಾರ್ಥಿಕ ಸತ್ತೆಯನ್ನು ಜಗತ್ತಿಗೆ ಒಪ್ಪುವಂತೆ ವ್ಯಾವಹಾರಿಕ ಸತ್ತೆಯನ್ನು ಒಪ್ಪಿದೆ. ಆದರೆ ಇತರರಂತೆ ಆರೋಪಿತವಾಗಿ ಅನ್ಯಾಕಾರವಾಗಿ ಒಪ್ಪುವುದಿಲ್ಲ. ಪ್ರಾತಿಭಾಸಿಕ ಸತ್ತೆ ಈ ಸಿದ್ಧಾಂತದಲ್ಲಿಲ್ಲ.

"ಸದೇವ ಸೌಮ್ಯ ಇದಮಗ್ರ ಆಸೀತ್" ಎಂಬ ಶ್ರುತಿ ಮತದಂತೆ ವೀರಶೈವವು ಜಗತ್ತಿನ ತ್ರೈಕಾಲಿಕ ಸತ್ತಾಭಾವವನ್ನು ಒಪ್ಪಿಕೊಂಡಿದೆ. ಅತ್ಯಂತಾಭಾವವನ್ನಾಗಲಿ ಅನ್ಯೋನ್ಯಾಭಾವವನ್ನಾಗಲಿ ಇದು ಒಪ್ಪುವುದಿಲ್ಲ, ಪ್ರಾಗಭಾವ–ಪ್ರಧ್ವಂಸಾಭಾವಗಳನ್ನು ವೀರಶೈವ ಸಿದ್ಧಾಂತ ಒಪ್ಪಿಕೊಂಡಿದೆ. ಕಾರ್ಯಭಾವಕ್ಕೆ ಪ್ರಾಗಭಾವವೇ ಹೊರತು ಕಾರಣಕ್ಕಲ್ಲ. ಸೃಷ್ಟಿ ಆಗಲೂ ಆ ಸದ್ವಸ್ತುವಿನಲ್ಲಿತ್ತು; ಇರುತ್ತದೆ–ಅವ್ಯಕ್ತವಾಗಿ ! ಘಟದ ಪ್ರಾಗಭಾವವು ಮೃತ್ತಿಕೆಯಲ್ಲಿರುವಂತೆ ಇರುತ್ತದೆ. ಕಾರ್ಯಭಾವಕ್ಕೆ ಪ್ರಧ್ವಂಸಾಭಾವವಲ್ಲದೆ ಕಾರಣಕ್ಕಲ್ಲ. ಬಿತ್ತಿನಲ್ಲಿ ಮರ ಅಡಗುವಂತೆ ಅಡಗುವುದಾಗಿ ಆ ಅಡಗುವಿಕೆಯನ್ನೇ ವೀರಶೈವ ಸಿದ್ಧಾಂತ ಪ್ರಧ್ವಂಸಾಭಾವವೆಂದು ಹೇಳುತ್ತದೆ. ಈ ಸಿದ್ಧಾಂತದಲ್ಲಿ ಪ್ರಧ್ವಂಸಾಭಾವವೆಂದರೆ ಅವ್ಯಕ್ತತ್ವ ಭಾವ ! ಪೂರ್ಣನಾಶವಲ್ಲ; ಮೂಲನಾಶವಲ್ಲ ಬೀಜದಿಂದ ಮರಳಿ ಮರ ಮೈದೋರುವಂತೆ ಶಿವಬೀಜದಿಂದ ಮತ್ತೆ ವಿಶ್ವ ವ್ಯಕ್ತವಾಗುವುದಾಗಿ ಅತ್ಯಂತಾಭಾವವಿಲ್ಲ. ಪ್ರಪಂಚದ ಪ್ರತಿಪದಾರ್ಥಗಳಿಗೆಲ್ಲ ಕಾರಣವೊಂದೇ ಆಗಿರುವುದರಿಂದ ಅನ್ಯೋನ್ಯಾಭಾವವಿಲ್ಲ.

ಅಸಲು 'ಅಭಾವ' ಪದಕ್ಕೆ ನಾಶ ಎಂಬ ಅರ್ಥವೇ ಇಲ್ಲ. ಕೊರತೆ ಎಂದೂ ವ್ಯಕ್ತವಾಗಿ ತೋರದಿರುವಿಕೆ ಎಂದೂ ಅದಕ್ಕೆ ಅರ್ಥಗಳಿವೆ. ಅಲ್ಲದೆ ಅಭಾವ ಭಾವಾಂತರ ರೂಪ. ಭಾವ ಪ್ರತೀಯ ಮಾನ; ಅಭಾವ ಅಪ್ರತೀಯ ಮಾನ. ಅಂದರೆ ತೋರುವಂತೆ ಇರುವಿಕೆ; ತೋರದಂತೆ ಇರುವಿಕೆ ಎಂದರ್ಥ. ಇನ್ನು ವೀರಶೈವ ಸಿದ್ಧಾಂತದಲ್ಲಿ 'ಭಾವಾಭಾವ ಲಯ ಸ್ಥಲ'ವೆಂದರೆ ಭಾವಾಭಾವಗಳೆರಡರ ನಿರ್ಲಿಪ್ತಸ್ಥಿತಿಯೆಂದರ್ಥ ಭಾವ ಅಭಾವಗಳ ಲಯ ಅಂದರೆ ತಲ್ಲೀನತೆ ! ಎಲ್ಲಿ ಅಂದರೆ, ಆ ಸ್ಥಲದಲ್ಲಿ ! ಇದರಿಂದಾಗಿ ಈ ಸಿದ್ಧಾಂತದಲ್ಲಿ ಭಾವಾಭಾವಗಳ ವಿಷಯದಲ್ಲಿ ಅಸತ್ ಖ್ಯಾತಿಗೆ ಅವಕಾಶವಿಲ್ಲ; ಇಲ್ಲಾ ಮಿಥ್ಯಾವಾದಕ್ಕಿಂಬಿಲ್ಲ.

"ಸ್ವರೂಪ–ಪರರೂಪಾಭ್ಯಾಂ ನಿತ್ಯಂ ಸದಸದಾತ್ಮಕೇ
ವಸ್ತುನಿ ಜ್ಞಾಯತೇ ಕಿಂಚಿದ್ರೂಪಂ ಕೈಶ್ಚಿತ್ಕದಾಚನ ।
ಭಾವಾಂತರಮಭಾವೋ ಹಿ ಕಯಾಚಿತ್ತು ವ್ಯಪೇಕ್ಷಯಾ
ಭಾವಾಂತರಾದಭಾವೋಽನ್ಯೋ ನ ಕಶ್ಚಿದನಿರೂಪಣಾತ್ ॥"

ಪ್ರತಿ ಪದಾರ್ಥಕ್ಕೂ ಸ್ವ–ರೂಪ, ಪರ–ರೂಪ ಎಂದು ಎರಡು ಆಕಾರಗಳುಂಟು. ಸ್ವರೂಪವೆ ಸತ್ ಪರರೂಪವೆ ಅಸತ್–ಎಂದು ಹೇಳಲಾಗುತ್ತದೆ. ಇಲ್ಲಿ ಪರ ಎಂದರೆ

ಅನ್ಯ ಎಂದರ್ಥ. ಇವನ್ನೆ ವ್ಯಕ್ತ ಅವ್ಯಕ್ತ ಎಂದು ಹೇಳಲಾಗುತ್ತದೆ, ಸ್ವರೂಪದಲ್ಲಿ ಸತ್ತಾಗಿ, ವಿರೂಪದಲ್ಲಿ ಅಸತ್ತಾಗಿ ಇರುತ್ತದೆ. ಅಸತ್ತೆಂದರೆ ಅತ್ಯಂತ ಅಭಾವವಲ್ಲ; ಅವ್ಯಕ್ತ ರೂಪ. ಅವ್ಯಕ್ತ ದೆಸೆಯಲ್ಲಿ ವ್ಯಕ್ತ ದೆಸೆಯ ರೂಪವಿರದು. ಆಗ ಸ್ವರೂಪವೇ ಇರುತ್ತದೆ. ರೂಪಿಲ್ಲದೆ ಗೋಚರಿಸುತ್ತದೆ. ಜ್ಞಾನಕ್ಕೆ ಗೋಚರವಾಗುತ್ತದೆ. ಜ್ಞಾನ ಗೋಚರವಾದ ಬಳಿಕ ಆ ಅಸದ್ರೂಪವೂ ಅಂದರೆ ಪರರೂಪ ಅವ್ಯಕ್ತವು ಅಥವಾ ರೂಪಾಂತರವು ಸದ್ರೂಪವಾಗಿಯೆ ಪರಿಣಮಿಸುತ್ತದೆ. ಮಣ್ಣಿನಲ್ಲಿ ಅವ್ಯಕ್ತವಾದ ಘಟರೂಪವು ಜ್ಞಾನಗೋಚರವಾಗದಿದ್ದರೆ ಘಟಕಾರ್ಯವಾಗದು. ನೇತ್ರೇಂದ್ರಿಯ ಸಂಯೋಗರೂಪವಿಲ್ಲದಿದ್ದರೂ ಅಂತಃಕರಣೇಂದ್ರಿಯವಾದ ಬುದ್ಧಿ ಅಥವಾ ಭಾವ ಗೋಚರವಾಗಿಯೇ ಇರುತ್ತದೆ. ಈ ವಿವೇಚನೆಯ ತಾತ್ಪರ್ಯವೇನೆಂದರೆ, ಇದರಂತೆ ಈ ಜಗತ್ತು ಮಿಥ್ಯವಲ್ಲ. ಒಮ್ಮೆ ಭೇದರೂಪದಲ್ಲಿರಬಹುದು: ಮತ್ತೊಮ್ಮೆ ಅಭೇದ ರೂಪದಲ್ಲಿರಬಹುದು. ಭೇದರೂಪದಲ್ಲಿಯೂ ಅಭೇದ ಸ್ವರೂಪ ಇರಬಲ್ಲುದು, ಇರುತ್ತದೆ. ಇಲ್ಲಿ ಭೇದರೂಪವೆಂದರೆ ಸ್ವಗತಭೇದ. ಜೀವನಂತೆ ಜಗತ್ತೂ ಸಪ ಭೇದಾಭೇದದಿಂದ ಕೂಡಿರುವುದು; ವ್ಯಕ್ತಾವ್ಯಕ್ತರೂಪದಿಂದ ಎಂದೆಂದಿಗೂ ಇರುವುದು.

ನೈಯಾಯಿಕ ಮತ್ತು ವೈಶೇಷಿಕರಂತೆ ವೀರಶೈವರು ಅಸತ್ಕಾರ್ಯವಾದಿಗಳಲ್ಲ. ಇವರು ಸತ್ಕಾರ್ಯವಾದಿಗಳು. ಸೃಷ್ಟಿಯ ಪೂರ್ವದಲ್ಲಿ ಆ ಪರಶಿವನಲ್ಲಿ ಪ್ರಪಂಚವು ಬೀಜದಲ್ಲಿ ಅಂಕುರ ಅಂಕುರಿಸದೆ ಇರುವಂತೆ ಇತ್ತೆಂದು ಹೇಳುವುದೆ ಸತ್ಕಾರ್ಯವಾದ. ಕಾರ್ಯರೂಪಾದ ಪ್ರಪಂಚವೆಂಬ ಪ್ರತಿಯೋಗಿಯು ಪ್ರಳಯದಲ್ಲಿ ಪ್ರತ್ಯಕ್ಷವಿಲ್ಲದಿದ್ದರೂ ಕಾರಣರೂಪನಾದ ಪರಶಿವನೆಂಬ ಅನುಯೋಗಿಯಲ್ಲಿ ಅಂತರ್ಭೂತವಾಗಿಯೆ ಇರುವುದು.

"ಸತ್ ಪ್ರಜ್ಞಾನ ಘನಾನಂದೇ ಶಿವೇ ಪರಮಕಾರಣೇ
ಚರಾಚರ ಜಗಜ್ಜಾಲಂ ಗ್ರೀಷ್ಮೇ ಕ್ಷ್ಮಾಲೀನ ಬೀಜವತ್
ಸೂಕ್ಷ್ಮರೂಪೇಣ ಸಂಸ್ಥಿತ್ಯ ಪುನಸ್ತಸ್ಯ ಚಕೀರ್ಷಯಾ
ಸ್ಥೂಲತ್ವೇನ ಬಹಿರ್ಯಾತಂ"

ಎಂಬೀ ಸ್ಮೃತಿವಾಣಿಯು ಸುಶ್ರುತಿಗೆ ಶ್ರೋತ್ರು ಮನಗಳನ್ನು ಕೊಡುವುದು.

ನಾಶವು ಮೂಲವಸ್ತು ಅಂದರೆ ಪದಾರ್ಥನಿಷ್ಠವಲ್ಲ. ಸ್ಥೂಲ ಕಾರ್ಯನಿಷ್ಠ. ಸ್ಥೂಲಕಾರ್ಯ ಪ್ರಾಕೃತಿಕ ನಿಷ್ಠ, ಸ್ಥೂಲ ನಾಶವೇ ನಾಶವಲ್ಲ. ಸ್ಥೂಲನಾಶವಾದರೂ ಪೂರ್ಣವಲ್ಲ. ಸ್ಥೂಲ ಭಾಗವೂ ಸಹ ತನ್ನ ಕಾರಣದಲ್ಲಿ ಅವ್ಯಕ್ತವಾಗಿ ಸತ್ತೆಯನ್ನು ಪಡೆಯುತ್ತದೆ. ಬಿತ್ತಿಬೆಳೆದ ಸೇಂಗಾ ಕಾಳಿನ ಮೇಲೆ ಮತ್ತೆ ಸಿಪ್ಪೆ ಬರುವಂತೆ ಸ್ಥೂಲ ಕಾಯವೂ ಮರಳಿ ಮರಳಿ ಬರುವುದಾಗಿ ಪೂರ್ಣ ನಾಶವನ್ನು ಒಪ್ಪಲಾಗುವುದಿಲ್ಲ.

ನಾಶಕ್ಕೆ ಕಾಲ ಮತ್ತು ಆ ಕಾಲಾಧೀನ ಕಾರಣಗಳು ಮೂಲ ಬೀಜವಾಗಿವೆ. ಕಾಲ ಕರ್ಮಾತೀತನಾದ ಆ ಪರಶಿವನೇ ಸ್ಥೂಲ ಸೂಕ್ಷ್ಮ ಜಗನ್ಮಯನಾದ ಕಾರಣ, ಜಗತ್ತು ಸರ್ವಾತ್ಮಭಾವದಿಂದ ನಾಶವಾಗುವುದಿಲ್ಲ. ಇದರಂತೆ ಕಾಲಾಧೀನವಾದ ಕರ್ಮ ಇಂದ್ರಿಯಗಳನ್ನು ಶ್ರೀಗುರುವು ಶಿವದೀಕ್ಷೆಯಿಂದ ಇಲ್ಲದಂತೆ ಮಾಡಿದನಾಗಿ ಬ್ರಹ್ಮಾಂಡದಂತೆ ಪಿಂಡಾಂಡ ಪ್ರಪಂಚಕ್ಕೂ ನಾಶವಿಲ್ಲೆಂಬುದನ್ನರಿಯಬೇಕು.

ಜಗತ್ ಸತ್ಯವಾದಿಗಳಾದ ವೀರಶೈವರ ವಿಶ್ವಸೃಷ್ಟಿವಾದ ವಿಕಾಸವಾದವೆ ಹೊರತು ವಿನಾಶವಾದವಲ್ಲ. ಸೃಷ್ಟಿರಚನೆಯಲ್ಲಿ ಸೋಪಪತ್ತಿಕವಾದ ವಿಚಾರ ಇವರದು. ಸೃಷ್ಟಿ ರಚನೆಯಲ್ಲಿ ಇವರ ಮುಖ್ಯ ಸಿದ್ಧಾಂತವಿದು: ಶಕ್ತಿವಿಶಿಷ್ಟ ಶಿವನೊಬ್ಬನೇ ಜಗನ್ನಿರ್ಮಾಪಕ! ಆತನಿಗೆ ಬೇರೊಂದು ಉಪಾದಾನ ಕಾರಣವಿಲ್ಲ. ನಿರವಯನಾದರೂ ಶಕ್ತನಾದ ಕಾರಣ ಪರಿಣಮಿಸಬಲ್ಲ, ಪರಿಣಮಿಸಿದರೂ ವಿಕಾರ ಅವನಿಗಿಲ್ಲ. ಸತ್ಯ ಶಾಶ್ವತರೂಪನಾದ ಶಿವನಿಂದಾದ ಜಗತ್ತು ಸಹ ಸತ್ಯರೂಪ. ವ್ಯಕ್ತಾವ್ಯಕ್ತ ದೆಸೆಗಳಿವೆಯಲ್ಲದೆ ವಿನಾಶವಿಲ್ಲ.

ಶಿವಾದ್ವೈತ ಸಿದ್ಧಾಂತದಲ್ಲಿ ಸೃಷ್ಟಿಗೆ ಕಾರಣವಸ್ತು ಆ ಶಕ್ತಿವಿಶಿಷ್ಟ ಅದ್ವೈತವೇ ಹೊರತು ಬೇರೆ ಇನ್ನಾವುದೂ ಇಲ್ಲ. ಸಾಂಖ್ಯರು ಹೇಳುವ ಪ್ರಧಾನವಾಗಲಿ, ನೈಯಾಯಿಕರು ಹೇಳುವ ಪರಮಾಣುವಾಗಲಿ, ಜೈಮಿನಿಯು ಹೇಳುವ ಕರ್ಮವಾಗಲಿ, ಶಾಕ್ತೇಯರು ಹೇಳುವ ಕೇವಲ ಶಕ್ತಿಯಾಗಲಿ, ಕಾಲವಾಗಲಿ, ನಿಯತಿಯಾಗಲಿ ಇನ್ನಾವುದಾಗಲಿ ಮೂಲ ಕಾರಣವಲ್ಲ. ಶಕ್ತಿವಿಶಿಷ್ಟಾದ್ವೈತವೇ ಮಹಾಕಾರಣ. ಊರ್ಧ್ವ ದೃಷ್ಟಿಯುಳ್ಳ ಉಪನಿಷತ್ಕಾಲದ ದಿವ್ಯ ದ್ರಷ್ಟಾರರು "ತೇ ಧ್ಯಾನಯೋಗಾನುಗತಾ ಅಪಸ್ಯನ್ ದೇವಾತ್ಮಶಕ್ತಿಂ ಸ್ವಗುಣೈರ್ ನಿಗೂಢಾಂ" ಎಂಬೀ ಶ್ವೇತಾಶ್ವತರ ಶ್ರುತಿಯ ಉಕ್ತಿಯು ಪರಾಮರ್ಶನೀಯ. ಅದರಲ್ಲಿಯೂ ದೇವಾತ್ಮಶಕ್ತಿ ಪದ ಗಮನೀಯ.

"ಶಿವಾಭಿದಂ ಪರಂ ಬ್ರಹ್ಮ ಜಗನ್ನಿರ್ಮಾತುಮಿಚ್ಛಯಾ
ಸ್ವರೂಪಮಾದಧೇ ಕಿಂಚಿತ್ ಸುಖಸ್ಫೂರ್ತಿ ವಿಜೃಂಭಿತಂ ।
ಅನಾದ್ಯವಿದ್ಯಾ ಸಂಬಂಧಾತ್ತದಂಶೋ ಜೀವನಾಮಕಃ
ದೇವ ತಿರ್ಯಙ್ಮನುಷ್ಯಾದಿ ಜಾತಿಭೇದೇ ವ್ಯವಸ್ಥಿತಃ ॥"

— ಸಿದ್ಧಾಂತ ಶಿಖಾಮಣಿ

ಈ ಚರಾಚರಜಗತ್ತು ಆ ಪರಶಿವಲಿಂಗದಿಂದ ಜನಿಸಿದೆಯೆಂಬುದೆ ಇವರ ಸಿದ್ಧಾಂತ! ಸೃಷ್ಟಿಗೆ ಯಾವುದು ಕಾರಣವೋ ಸ್ಥಿತಿ ಲಯಗಳಿಗೂ ಅದೇ ಕಾರಣ ವೆಂದು ಇವರ ಸಿದ್ಧಾಂತ. "ಯತೋ ವಾ ಇಮಾನಿ ಭೂತಾನಿ ಜಾಯಂತೇ, ಯತ್ಪ್ರ ವಿಶಂತ್ಯಭಿಸಂವಿಶಂತಿ ತದ್ವಿಜಿಜ್ಞಾಸಸ್ವ ತದ್ಬ್ರಹ್ಮ" ಎಂಬೀ ಶ್ರುತಿಯು ಅಭಿ

ಪ್ರಾಯವೇ ಇವರದಾದರೂ ಆ ಸರ್ವಾಂತರ್ಯಾಮಿಯೆ ಇವರ ಉಪಾಸ್ಯ ಮಾಧ್ಯಮವಲ್ಲ. ಅದು ಜಿಜ್ಞಾಸ್ಯವೂ ಅಲ್ಲ. ಬ್ರಹ್ಮಜಿಜ್ಞಾಸೆಯನ್ನು ಇವರು ಒಪ್ಪುವುದಿಲ್ಲ. ಸಮಷ್ಟಿ ಆತ್ಮರಾದ ವಿರಾಟ್‌ಪುರುಷ, ಹಿರಣ್ಯಗರ್ಭ, ಅಂತರ್ಯಾಮಿಗಳ ಬಗೆಗೆ ಇವರ ವಿಚಾರ–ವಿಮರ್ಶೆಗಳಿಲ್ಲ. ವ್ಯಷ್ಟಿ ಆತ್ಮರಾದ ಜೀವಾತ್ಮ ಅಂತರಾತ್ಮ ಪರಮಾತ್ಮರ ಬಗೆಗೆ ಇರುತ್ತದೆ. ಇವರನ್ನು ಇಷ್ಟಲಿಂಗ–ಪ್ರಾಣಲಿಂಗ–ಭಾವಲಿಂಗಗಳ ರೂಪದಲ್ಲಿ ಆರಾಧಿಸಿ ಅರಿದು ಅನುಭವಿಸುತ್ತಾರೆ. ಇವರಲ್ಲಿಯೇ ಐಕ್ಯರಾಗುತ್ತಾರೆ. ಇದರಿಂದ ಇವರು ಸೃಷ್ಟಿಗೆ ಲಿಂಗೋದ್ಭವ ಎಂದುದಾಗಿಯೂ ಸ್ಥಿತಿಗೆ ಲಿಂಗಭೋಗೋಪಭೋಗವೆಂಬುದಾಗಿಯೂ ಲಯಕ್ಕೆ ಲಿಂಗೈಕ್ಯವೆಂಬುದಾಗಿಯೂ ನಿರೂಪಿಸುತ್ತಾರೆ ಲಕ್ಷ್ಯಪ್ರಧಾನವಾಗಿ! ಇದೇ ಬಗೆಯಲ್ಲಿ ಬಾಳಿ ಬದುಕುವುದೇ ಇವರ ಜೀವನ ಸಿದ್ಧಾಂತ.

ಸೃಷ್ಟಿಯಲ್ಲಿ ಭಕ್ತ, ಸ್ಥಿತಿಯಲ್ಲಿ ಭಕ್ತ, ಲಯದಲ್ಲಿ ಭಕ್ತನಾಗಿ ಅಂತೆಯೆ ಮಾಹೇಶ ಪ್ರಸಾದಿಯಾಗಿ ಪ್ರಾಣಲಿಂಗಿ ಶರಣನಾಗಿ ಐಕ್ಯನಾಗಿರಬೇಕೆಂಬುದೆ ವೀರಶೈವಸಿದ್ಧಾಂತ. ಸೃಷ್ಟಿ ದ್ವಿವಿಧ. ಒಂದು ಸಮಷ್ಟಿ ಸೃಷ್ಟಿ, ಇನ್ನೊಂದು ವ್ಯಷ್ಟಿಸೃಷ್ಟಿ. ಸಮಷ್ಟಿ ಸೃಷ್ಟಿಯೆ ಬ್ರಹ್ಮಾಂಡ; ವ್ಯಷ್ಟಿ ಸೃಷ್ಟಿಯೆ ಪಿಂಡಾಂಡ. ಮರ ಬೀಜದಲ್ಲಿರುವಂತೆ ಬ್ರಹ್ಮಾಂಡ ಪಿಂಡಾಂಡದಲ್ಲಿ ಸಂಕ್ಷಿಪ್ತ ರೂಪದಲ್ಲಿ ಅಡಗಿರುತ್ತದೆ. ಇವೆರಡೂ ಪರಸ್ಪರವಾಗಿವೆ. ಅಂದರೆ ಅಚರ ಪ್ರಪಂಚದಲ್ಲಿ ಚರಪ್ರಪಂಚವಿದೆ; ಚರಪ್ರಪಂಚದಲ್ಲಿ ಅಚರ ಪ್ರಪಂಚವಿದೆ.

"ಏತಸ್ಮಾಜ್ಜಾಯತೇ ಪ್ರಾಣೋ ಮನಃ ಸರ್ವೇಂದ್ರಿಯಾಣಿ ಚ ।
ಖಂ ವಾಯುರ್‌ಜ್ಯೋತಿರಾಪಶ್ಚ ಪೃಥ್ವೀ ವಿಶ್ವಸ್ಯಧಾರಿಣೀ
ಸರ್ವಭೂತಸ್ಥಮಾತಾನಂ ಸರ್ವಭೂತಾನಿ ಚಾತ್ಮನಿ
ಸಂಪಶ್ಯನ್ ಬ್ರಹ್ಮಪರಮಂ ಯಾತಿ ನಾನ್ಯೇನ ಹೇತುನಾ ।"

—ಕೈವಲ್ಯೋಪನಿಷತ್

ಬ್ರಹ್ಮನಿಂದಾದುದು ಬ್ರಹ್ಮಾಂಡ; ಪಿಂಡದಿಂದಾದುದು ಪಿಂಡಾಂಡ. ಬ್ರಹ್ಮವೆಂದರೆ ಸೃಷ್ಟಿಕರ್ತ, ಅಥವಾ ವಿಶ್ವಾತ್ಮ. ಪಿಂಡ ಅಂದರೆ ಅನ್ನರಸದಿಂದಾದ ದೇಹಾತ್ಮವೆಂದರ್ಥ. 'ಶುದ್ಧಾಂತಃಕರಣೋ ದೇಹೀ ಪಿಂಡಶಬ್ದೇನ ಗೀಯತೇ' ಎಂದಿದೆ ರೇಣುಕ ಜಗದ್ಗುರು ವಚನ. ಪಿಂಡಜಗಳಿಗೆ ಅಂದರೆ ದೇವ ತಿರ್ಯಙ್ಮನುಷ್ಯಾದಿಗಳಿಗೆ ಪಿಂಡ ಮಾಧ್ಯಮ; ಬ್ರಹ್ಮ ಮೂಲಕಾರಣ; ಪರಶಿವ ಮಹಾಕಾರಣ.

ಬ್ರಹ್ಮವೆ ಅಂಡವಾಗಿ ಬ್ರಹ್ಮಾಂಡ; ಪಿಂಡವೆ ಅಂಡವಾಗಿ ಪಿಂಡಾಂಡ. ಅಂಡವೆಂದರೆ ತತ್ತಿಯಾಕಾರದ ಗರ್ಭಕೋಶ. ಬ್ರಹ್ಮ ಹಿರಣ್ಯಗರ್ಭ. ಪಿಂಡ ಅನ್ನಗರ್ಭ. ಒಂದು ದ್ರವ್ಯ, ಇನ್ನೊಂದು ಧಾನ್ಯ. ಎರಡೂ ಮಣ್ಣಿನಿಂದಾದವುಗಳು. ಮಣ್ಣು ನೀರಿನಿಂದ,

ನೀರು ಬೆಂಕಿಯಿಂದ, ಬೆಂಕಿ ಗಾಳಿಯಿಂದ, ಗಾಳಿ ಮುಗಿಲಿನಿಂದ, ಮುಗಿಲು ಆತ್ಮನಿಂದ, ಆತ್ಮ ಪರಮಾತ್ಮನಿಂದ ಆಗುವುವು. ಪರಮಾತ್ಮನ ಜನ್ಮಕ್ಕೆ ಬೇರೊಂದಿಲ್ಲ. ಆತ ಸ್ವಯಂಭು.

ಮಣ್ಣಿನಿಂದಾದ ಅನ್ನ ಪಿಂಡದಿಂದ ಪ್ರಾಣಿಗಳು ಜನಿಸುವುವು. ಪಿಂಡಜಗಳೆಂದೆನಿಸುವುವು. "ತಪಸಾ ಚೀಯತೇ ಬ್ರಹ್ಮ, ತತೋಽನ್ನಮಭಿಜಾಯತೇ; ಅನ್ನಾತ್ಪ್ರಾಣೋ ಮನಃ ಸತ್ಯಂ ಲೋಕಾಃ ಕರ್ಮಸು ಚಾಮೃತಂ ।" ಎಂದು ಮುಂಡಕೋಪನಿಷತ್ತು ಮುಂಡಿಸಿದೆ.

ಪಂಚಭೂತ, ಪಂಚತನ್ಮಾತ್ರ, ಪಂಚಕರ್ಮೇಂದ್ರಿಯ, ಪಂಚಜ್ಞಾನೇಂದ್ರಿಯ, ಬುದ್ಧಿ, ಅಹಂಕಾರ, ಮನ, ಪ್ರಕೃತಿ, ಪುರುಷ (ಆತ್ಮ)–ಈ ಇಪ್ಪತ್ತೈಯ್ದು ತತ್ತ್ವಗಳು ಕೂಡಿ ಪಿಂಡವಾಗಿದೆ. ಈ ಪಿಂಡವೇ ದೇಹಿ. ಈ ದೆಸೆಯನ್ನು ಸೋಹಿಯನ್ನಾಗಿಸುವುದೆ ವೀರಶೈವ ಸಿದ್ಧಾಂತ. ಇದು ಕೇವಲ ವಿಚಾರಪರವಾದುದಲ್ಲ, ಜೊತೆಗೆ ಪ್ರಯೋಗ ಅಂದರೆ ಆಚಾರಪರವಾದುದೂ ಅಹುದು, ಆಚಾರಪ್ರಧಾನವಾದುದೂ ಅಹುದು. ಇದು ಆ ದೇವನ ಸಿದ್ಧಾಂತವಲ್ಲ, ಈ ಜೀವನ ಸಿದ್ಧಾಂತ. ಆ ದೇವನು ಸ್ವತಃಸಿದ್ಧ. ಆತನ ಬಗೆಗೆ ಜಿಜ್ಞಾಸೆಯಾಗಲಿ ಮೀಮಾಂಸೆಯಾಗಲಿ ಬೇಕಿಲ್ಲ. ಬಯಸುವುದೂ ತರವಲ್ಲ. ಅದು ಇವಕ್ಕೆ ಮೀರಿದುದು. ಅಂದರೆ ಮಾತು ಮನ ಮತಿಗಳಿಗೆ ಮೀರಿದುದು. ಇದರಿಂದಾಗಿ ನಾವು 'ತತ್ತ್ವಮಸಿ' ಎಂದು ಹೇಳಿ ತತ್ತ್ವವನ್ನು ಮಸಿ ಮಾಡುವುದಿಲ್ಲ. 'ತ್ವಂ ತದಸಿ' ಎಂದು ಹೇಳಿ, ಹೇಳಿದಂತೆ ಆಚರಿಸ ಹಚ್ಚಿ ನಿನ್ನನ್ನು ಅಂದರೆ ದೇಹಿಯನ್ನು ಅವನನ್ನಾಗಿ ಅಂದರೆ ನಿರ್ದೇಹಿಯನ್ನಾಗಿ ಮಾಡುತ್ತೇವೆ. ನಿರ್ದೇಹಿಯೆಂದರೆ ಪರಕಾಯನೆಂದರ್ಥ. ಅಂತಾಗದೆ ಸೋಹಿಯಾಗನು. ಅಂದರೆ ತತ್‌ಸ್ವರೂಪನಾಗನು.

'ಅವನು ನೀನಾಗಿರುವಿ' ಎಂದು ಹೇಳುವುದಕ್ಕಿಂತ, 'ನೀನು ಅವನಾಗು' ಎಂದು ಹೇಳುವಲ್ಲಿದೆ ಔಚಿತ್ಯಪೂರ್ಣ ಸತ್ಯಸಿದ್ಧಾಂತ ! ಅವನಾಗಬೇಕಾದರೆ ನಾ–ನೀ ಎಂಬುದನ್ನು ಬಿಡಬೇಕು. ಇವೆರಡೂ ಬಂಧನಕಾರಿಗಳು. ಒಂದು ಅಹಂಕಾರ, ಇನ್ನೊಂದು ಮಮಕಾರ.

> "ನೀ–ನಾನೆಂಬ ಭಾವವಾರಿಂದಾಯಿತ್ತು ಹೇಳಾ ?
> ನೀನೆಂಬುದು ಅಜ್ಞಾನ, ನಾನೆಂಬುದು ಮಾಯಾಧೀನ;
> ನೀನೆನ್ನದೆ ನಾನನ್ನದೆ ಇಪ್ಪ ಸುಖವ ಭಿನ್ನವಿಲ್ಲದೆ ಅರಿಯಬಲ್ಲರೆ
> ಆ ಸುಖವು ನಿಮಗರ್ಪಿತ (ಅವಗರ್ಪಿತ) ಕಾಣಾ ಗುಹೇಶ್ವರಾ !"

ಇಲ್ಲಿ ನೀನೆಂದರೆ ಅಂಗ, ನಾನೆಂದರೆ ಆತ್ಮ. ಈ ಉಭಯ ಭಾವಕ್ಕೂ ಅವನೇ (ಸ ಏವ) ಕಾರಣ. ಅವನೇ ಆಗುವುದೆ ದಿಟದ ಆಗುವಿಕೆ. ಅಂತಾದಲ್ಲಿ ನೀನು–ನಾನು ಎಂಬ ಅಥವಾ ನಾನು–ನೀನೆಂಬ ಬಗೆಯಿಲ್ಲ, ಬಿರುಕಿಲ್ಲ. ಅಲ್ಲಮಾಪ್ರಭು ಹೇಳುವಂತೆ ಅಜ್ಞಾನ–ಮಾಯಾಧೀನಗಳಿರುವುದಿಲ್ಲ. ಇವು ಇರುವಲ್ಲಿ ದುಃಖ ದುರವಸ್ಥೆಗಳಿವೆ. ಇವಿಲ್ಲದಲ್ಲಿ ಸುಖ ಸದ್ಗತಿಗಳಿವೆ. ಸುಖ ಸದ್ಗತಿಗಳು ನನಗೆನ್ನಬಾರದು; ಅವನಿಗರ್ಪಣ ವಾಗಬೇಕು. ಆಗ ಅಂಗ–ಲಿಂಗಗಳ ಐಕ್ಯತೆ ಆ ಮಹಾಲಿಂಗದಲ್ಲಿ ಅಳವಡುತ್ತದೆ. ಆ ಮಹಾಲಿಂಗವೇ ಅವನು, ಅಥವಾ ತತ್. ಆದ್ದರಿಂದ ವೀರಶೈವ ಸಿದ್ಧಾಂತ 'ತ್ವಂ ತದಸಿ' ಎಂದೆನ್ನುತ್ತದೆ. ಇದನ್ನು ಸಾಧಿಸಲು ಷಟ್‌ಸ್ಥಲಗಳ ಮಾರ್ಗವೊಂದನ್ನು ನಿರ್ಣಯಿಸಿದೆ.

ಷಟ್‌ಸ್ಥಲ ಬರೀ ತತ್ತ್ವವಲ್ಲ, ಸಿದ್ಧಾಂತವೂ ಆಗಿದೆ. ತತ್ತ್ವ ದರ್ಶನಪ್ರಧಾನ; ಸಿದ್ಧಾಂತ ನಿರ್ಣಯಪ್ರಧಾನ, ತತ್‌ತ್ವ ಅಂದರೆ ಅದರ ಭಾವ; ಸಿದ್ಧಾಂತವೆಂದರೆ ವಿಮರ್ಶಾತ್ಮಕವಾಗಿ ಮಾಡಿದ ನಿರ್ಣಯ; ನಿರ್ಣಯದ ಕೊನೆ, ವಿಚಾರ–ಆಚಾರಗಳಿಂದಾದ ಚರಮ ಪರಿಣಾಮ. ವೀರಶೈವರಲ್ಲಿ ವಿಚಾರ ಹೂವು; ಆಚಾರ ಹಣ್ಣು. ಹೂವಿನ ಮುಂದೆ ಹಣ್ಣಿದೆ; ಹಣ್ಣಿನ ಮುಂದೆ ಏನಿಲ್ಲ, ಅಂತೆಯೆ ಸಿದ್ಧಾಂತದ ಮುಂದೆ ವಿಮರ್ಶಿಸ ಬೇಕಾದುದು ನಿರ್ಣಯಿಸಬೇಕಾದುದು ಬೇರೊಂದಿರದು. ಅದೇ ಚರಮ ಸತ್ಯ, ಪರಮ ಸತ್ಯ. ಅದು ನಿಸ್ಸೀಮ ನಿರ್ಣಯ. ಸುಸ್ಪಷ್ಟ ಸಿದ್ಧಾಂತ. ಅನನ್ಯವಾದ ಕೊನೆಯ ಮಾತು, ಅಸಾಧಾರಣವೂ ಅಸಾಮಾನ್ಯವೂ ಆದ ವಸ್ತುವಿನ ಒದಗು.

ದೃಶ್ಯದಲ್ಲಿ ಆಗುವುದು ದರ್ಶನ; ದೃಕ್ಕಿನಲ್ಲಿ ಆಗುವುದು ತೀರ್ಮಾನ. ದೃಶ್ಯದಲ್ಲಿ ಎದುರಿಟ್ಟು ನೋಡುವಿಕೆ ಇಲ್ಲವೆ ತಿಳಿಯುವಿಕೆ. ದೃಕ್ಕಿನಲ್ಲಿ ಎದುರಿಟ್ಟು ನೋಡು ವುದಿಲ್ಲ; ತಿಳಿಯುವುದಿಲ್ಲ. ಅದೇ ತಾನಾಗುವಿಕೆ ಮಾತ್ರ ಇರುತ್ತದೆ. ಅಂದರೆ ಸ್ವರೂಪ ಸಿದ್ಧವಾಗುತ್ತದೆ. ಅದುವೆ ಸಿದ್ಧಾಂತ.

> "ಚಿನ್ನವನೊರೆಯುಬಹುದಲ್ಲದೆ, ಬಣ್ಣವನೊರೆಯುಬಹುದೆ ?
> ಹೂವ ಮುಡಿಯುಬಹುದಲ್ಲದೆ ಗಂಧವ ಮುಡಿಯುಬಹುದೆ ?
> ಕರ್ಮವ ಮಾಡಬಹುದಲ್ಲದೆ ವಸ್ತುವನರಿಯುಬಹುದೆ ?
> ಗುಹೇಶ್ವರ ಲಿಂಗವೆನಬಹುದಲ್ಲದೆ (ಅರಿಯುಬಹುದಲ್ಲದೆ) ಲಿಂಗ
> ತಾನಾಗಬಾರದು."

ಚಿನ್ನ ದೃಶ್ಯ, ಬಣ್ಣ ದೃಕ್. ಹೂವು ದೃಶ್ಯ, ಗಂಧ ದೃಕ್. ಚಿನ್ನ ಹೂವುಗಳ ದರ್ಶಿಸಬಹುದು; ಬಣ್ಣ ಕಂಪುಗಳನ್ನು ದರ್ಶಿಸಲಾಗದು. ನೋಡುವಿಕೆಯಂತೆಯೆ ನುಡಿಯುವಿಕೆ. ಇವುಗಳಲ್ಲಿ ಸ್ವರೂಪ ಸಿದ್ಧಿಸದು. ಚಿನ್ನ ಬಣ್ಣ, ಹೂವು ಕಂಪುಗಳನ್ನು

ದರ್ಶಿಸುವುದಲ್ಲದೆ ಧರಿಸಿದರೂ ತಾನಾಗನು. ದರ್ಶನ ಧಾರಣಗಳಿಂದಾಚೆಯುದು ಸ್ವರೂಪ ಸಿದ್ಧಾಂತ.

"ಮಣಿಯನೆಣಿಸಿ ದಿನವ ಕಳೆಯಲು ಬೇಡ;
ಕಣಿಯ ಪೂಜಿಸಿ ಕಾಲವ ಕಳೆಯಲು ಬೇಡ,
ಕ್ಷಣವಾದರೂ ನಿಜದ ನೆನಹೇ ಸಾಕು,
ಬೆಂಕಿಯೊಳಗುಳ್ಳ ಬಿಸಿ ನೀರೊಳಗುಂಟೇ ಗುಹೇಶ್ವರಾ ?"

ತತ್ತ್ವದರ್ಶನ ಬೆಂಕಿ, ತತ್ತ್ವನಿರ್ಣಯ ನೀರು. ಬೆಂಕಿಯು ಬಿಸಿ ನೀರಿನಲ್ಲಿ ಇರದು. ಇದ್ದೂ ತಂಪಾಗಿರುತ್ತದೆ. ಸ್ವರೂಪಸಿದ್ಧಿ ತಂಪು. ತತ್ತ್ವಗಣನೆಯ ಮಣಿಯ ಎಣಿಸಿದಂತೆ, ಕಣಿಯ ಪೂಜಿಸಿದಂತೆ. ಕಾಲಕಳೆವುದಲ್ಲದೆ ಕಳೆಗೊಳ್ಳಬಾರದು.

"ತಪವೆಂಬುದು ತಗಹು, ನೇಮವೆಂಬುದು ಬಂಧನ;
ಶೀಲವೆಂಬುದು ಸೂತಕ, ಭಾಷೆಯೆಂಬುದು ಪ್ರಾಣಘಾತಕ,
ಇಂತೀ ಚತುರ್ವಿಧದೊಳಗಲ್ಲ ಗುಹೇಶ್ವರಾ,
ನಿಮ್ಮ ನಚ್ಚಿನ ಶರಣರು; ಅಗ್ರಗಣ್ಯರು."

ತಪ, ನೇಮ, ಶೀಲ, ಭಾಷೆಗಳಿಗಿಂತ ಭಕ್ತಿಭಾವ ಹೆಚ್ಚಿನದು; ಮಹಾಲಿಂಗಕ್ಕೆ ಮೆಚ್ಚಿನದು. ಭಕ್ತಿಯೆಂದರೆ ಪವಿತ್ರ ಪ್ರೇಮ. ಇದು ಗುರುವಿನಿಂದ ಸಂಸ್ಕಾರಗೊಂಡು ಆದ ಅಂಗನಿಷ್ಠ. ಅಂತೆಯೇ ಇದನ್ನು ಗುರುಸಂಸ್ಕಾರದಿಂದ ಆತ್ಮಲಿಂಗನಿಷ್ಠವಾಗಿ ಭಕ್ತಿಯೆನಿಸುತ್ತದೆ. ಈ ಭಕ್ತಿ, ಶ್ರದ್ಧೆ, ನಿಷ್ಠೆ, ಅವಧಾನ, ಅನುಭವ, ಆನಂದ, ಸಮರಸ ಎಂದು ಆರು ಬಗೆಯಾಗಿದೆ. ಇವುಳ್ಳವರು ಪರಿವಿಡಿದು ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯರೆಂದೆನಿಸುತ್ತಾರೆ. ಭಕ್ತಿ ಶಕ್ತಿ ಅಪಾರ. ಇವು ಭಿನ್ನವಾಗಿ ತೋರಿದರೂ ಅಭಿನ್ನವಾಗಿರುತ್ತವೆ. ಒಂದು ಕೈಕೊಂಡ ಕಾರ್ಯ ಕೊನೆಗೊಳ್ಳುವುದರಲ್ಲಿ ಈ ಆರು ಮುಗಿದಿರುತ್ತವೆ. ನಿದರ್ಶನಕ್ಕಾಗಿ ನೋಡಿ : ಯಾವುದೊಂದನ್ನು ಬಯಸುವುದೆ ಭಕ್ತಸ್ಥಲ, ಬಯಸಿದುದನ್ನು ಪಡೆವುದೆ ಮಾಹೇಶ್ವರ ಸ್ಥಲ, ಪಡೆದುದಕ್ಕೆ ಆತನೇ ಮಹಾ ಒಡೆಯನು. ಪಡೆದುದನ್ನು ಭೋಗಿಸಿದವನು ಪ್ರಸಾದಿ.ಅದರಲ್ಲಿ ಪ್ರಾಣವನ್ನಿರಿಸಿಕೊಂಡವನು ಇರಿಸಿಕೊಂಡು ಅನುಭವಿಸಿದವನು ಪ್ರಾಣಲಿಂಗಿ, ಪ್ರಾಣವನ್ನಿರಿಸಿಕೊಂಡುದರಲ್ಲಿ ಶರಣು ಹೋಗುವನು; ಹೋದವನೇ ಶರಣ; ಶರಣಾದುದರಲ್ಲಿ ಸಮರಸಗೊಂಡವನೆ ಐಕ್ಯ. ಇದು ಪ್ರವೃತ್ತಿಜೀವನದಲ್ಲಿಯೂ ನಡೆಯುತ್ತದೆ; ನಿವೃತ್ತಿಜೀವನದಲ್ಲಿಯೂ ನಡೆಯುತ್ತದೆ. ಆಚಾರ ವಿಚಾರ ಪಥದಲ್ಲಿಯೂ ನಡೆಯುತ್ತದೆ. ಈ ಷಟ್‌ಸ್ಥಲ ಸಿದ್ಧಾಂತ ಜೀವನ ಸಹಜವಾದುದು. ಇದು ಪ್ರವೃತ್ತಿಯಲ್ಲಿರುವಾಗ ಜಾತೀಯ ಸಂಸ್ಕೃತಿಯಾಗುತ್ತದೆ; ನಿವೃತ್ತಿಯಲ್ಲಿರುವಾಗ ಮತೀಯ ಸಂಸ್ಕೃತಿಯೆನಿಸುತ್ತದೆ. ಜಾತೀಯ ಸಂಸ್ಕೃತಿ

ಯೆಂದರೆ ಮಾನವೀಯ ಸಂಸ್ಕೃತಿ. ಜಾತಿ ಸರ್ವಮಾನವನಿಷ್ಠವಾಗಿ ಸಾಮಾನ್ಯ; ಮತ ಕೆಲವರಿಗೆ ಮಾತ್ರ ಸಂಬಂಧಿಸಿ ಅಸಾಮಾನ್ಯ. ಸಾಮಾನ್ಯ ಷಟ್‌ಸ್ಥಲ ಧರ್ಮದಿಂದ ಮಾನವೀಯತೆ; ಅಸಾಮಾನ್ಯ ಷಟ್‌ಸ್ಥಲ ಧರ್ಮದಿಂದ ಮಹಾನುಭಾವತೆ ಅಥವಾ ಮಹಾತ್ಮತೆ ಅಳವಡುತ್ತವೆ. ಎರಡಕ್ಕೂ ಸತ್ಯಶುದ್ಧತೆ, ವಿಶಾಲಶೀಲತೆಗಳು ಅಗತ್ಯ. ಎರಡರಲ್ಲಿ ವಿಭಿನ್ನ ಭಾವಕ್ಕೆಂಬಿರಬಾರದು, ಇಲ್ಲ. ಅಹಿಂಸೆ ಸತ್ಯ ಶೌಚಾದಿಗಳು ಸಾಮಾನ್ಯ ಗುಣಧರ್ಮಗಳು; ಸದಾಚಾರ ಶಿವಾಚಾರ ಲಿಂಗಾಚಾರಗಳು ಅಸಾಮಾನ್ಯ ಗುಣಧರ್ಮಗಳು. ಉಭಯ ಗುಣಧರ್ಮಗಳೂ ಅವಶ್ಯಗಳು.

ವಿಶುದ್ಧ ವಿಕಾಸವಾದ:

ವೀರಶೈವ ಸಿದ್ಧಾಂತದ ಮುಖ್ಯ ಧ್ಯೇಯ ವಿಶುದ್ಧ ವಿಕಾಸವಾದ, ಇದು ಇಬ್ಬಗೆ: ಒಂದು ಅಂಗವಿಕಾಸ, ಇನ್ನೊಂದು ಲಿಂಗವಿಕಾಸ. ಅಂಗವಿಕಾಸವೆಂದರೆ ಅಂಗಕ್ಕೆ ಅಂಗಾಭಿವೃದ್ಧಿಗೆ ಬೇಕಾದ ಅಮಲ ಅವಶ್ಯಕತೆಗಳನ್ನು ಒದಗಿಸಿಕೊಂಡು ಪೂರೈಸಿ ಕೊಳ್ಳುವಿಕೆ. ಲಿಂಗವಿಕಾಸವೆಂದರೆ ಆತ್ಮನಿಗೆ ಆತ್ಮಾಭಿವೃದ್ಧಿಗೆ ಮಹಂತತೆಗೆ ಬೇಕಾದ ಅಮಲ ಅಖಿಲ ಅವಶ್ಯಕತೆಗಳನ್ನು ಅಂಗವಿಸಿಕೊಂಡು ಸಾಂಗಗೊಳಿಸಿಕೊಳ್ಳುವಿಕೆ. ಅಂದರೆ ಅಂಗವು ಲಿಂಗವಾಸನೆಯಲ್ಲಿ ಲಿಂಗರುಚಿಯಲ್ಲಿ ಲಿಂಗರೂಪದಲ್ಲಿ ಲಿಂಗಸ್ಪರ್ಶದಲ್ಲಿ ಲಿಂಗಶಬ್ದದಲ್ಲಿ ಲಿಂಗತೃಪ್ತಿಯಲ್ಲಿ ತಲ್ಲೀನವಾಗಿ ಇರುವಿಕೆ! ಇವು ಅಂಗವಿಕಾಸದ ಹಂತಗಳು. ಶಿವಾಚಾರ ಶಿವವಿಚಾರ ಶಿವಪ್ರಸಾದಿಗಳಿಂದ ಶಿವಾವಧಾನ ಶಿವಾನುಭವ ಶಿವಾನಂದಗಳನ್ನು ಪಡೆದು ಆತ್ಮಚೇತನವನ್ನು ಇಮ್ಮಡಿ ಮುಮ್ಮಡಿ ಮಹತ್ತಾಗಿಸಿ ಕೊಳ್ಳುವುದೆ ಲಿಂಗವಿಕಾಸ. ಇಷ್ಟಕ್ಕೆಲ್ಲ ಭಕ್ತಿಯೇ ಆಧಾರ. ಭಕ್ತಿವಿಕಾಸದಿಂದ ಶಕ್ತಿ ವಿಕಾಸ; ಶಕ್ತಿ ವಿಕಾಸದಿಂದ ಆತ್ಮವಿಕಾಸ. ಅದುವೇ ವಿಭುತ್ವ.

ಅಂಗವಿಶುದ್ಧ ವಿಕಾಸಕ್ಕೆ ಭಕ್ತಿ, ಲಿಂಗವಿಶುದ್ಧ ವಿಕಾಸಕ್ಕೆ ಶಕ್ತಿ; ಭಕ್ತಿ ಶ್ರದ್ಧೆ ನಿಷ್ಠೆ ಅವಧಾನ ಅನುಭವ ಆನಂದ ಸಮರಸಗಳ ಮುಖಾಂತರ ಮುಂದುವರಿದರೆ ಶಕ್ತಿ ಕ್ರಿಯೆ ಜ್ಞಾನ ಇಚ್ಛೆ ಆದಿ ಪರೆ ಚಿತ್‌ಗಳ ಮುಖಾಂತರ ಮುಂದುವರಿಯುತ್ತದೆ. ಭಕ್ತಿಯಿಂದ ಕಲೆಗಳು ಅಭಿವೃದ್ಧಿಯಾದರೆ ಶಕ್ತಿಯಿಂದ ಕಳೆಗಳು ಅಭಿವೃದ್ಧಿಗೊಳ್ಳುತ್ತವೆ. ನಿವೃತ್ತಿ ಪ್ರತಿಷ್ಠೆ ವಿದ್ಯೆ ಶಾಂತಿ ಶಾಂತ್ಯತೀತೋತ್ತರ ಇವು ಕಲೆಗಳಾದರೆ, ಸತ್ ಚಿತ್ ಆನಂದ ನಿತ್ಯ ಪೂರ್ಣ ಅಖಂಡ ಇವು ಕಳೆಗಳು. ಕಲೆಗಳು ಅಂಗಲಕ್ಷಣಗಳು; ಕಳೆಗಳು ಲಿಂಗ ಲಕ್ಷಣಗಳು. ಇವು ಶಿವಚೇತನ ವರ್ಧನಗಳು.

ಅಂಗಸ್ಥಲವಿಕಾಸದಿಂದ ಅಂಗವೀರ, ಲಿಂಗಸ್ಥಲವಿಕಾಸದಿಂದ ಲಿಂಗವೀರ. ಇವ ರಿಬ್ಬರು ಶುಭ್ರವಾಗಿರುವುದರಿಂದ ಶೈವ. ಇದರಿಂದಾಗಿ ವೀರಶೈವನೆಂದೆನಿಸುವನು. ವೀರ ಶೈವನು ಅಂಗ ಲಿಂಗಗಳ ವಿಶುದ್ಧ ವಿಕಾಸವುಳ್ಳವನು. ಇದರಿಂದ ತಿಳಿಯುವುದೇನೆಂದರೆ

ವಿಶುದ್ಧ ವಿಕಾಸವುಳ್ಳ ಅಂಗಲಿಂಗಿಗೆ ವೀರಶೈವನೆಂಬ ಹೆಸರು. ಆತನ ಅಭಿಪ್ರಾಯ ದಿಂದಾದುದೆ ವೀರಶೈವಮತ.

ವಿಕಾಸವೆಂದರೆ ವಿಶೇಷವಾಗುವಿಕೆ, ಹೆಚ್ಚಳಗೊಳ್ಳುವಿಕೆ; ಮೇಲ್ಮೆಯನ್ನು ಮೈಗೂಡಿಸಿಕೊಳ್ಳುವಿಕೆ. ವಿಶಾಲಗೊಳ್ಳುವುದೂ ವೀರಶೈವ ಸಿದ್ಧಾಂತದ ಗುರಿ ಯಾಗಿದೆ.

ಕಲುಷಿತ ಕಾಯದಲ್ಲಿ ಪ್ರೇಮ (ಭಕ್ತಿ) ಕಲುಷಿತವಾಗಿರುತ್ತದೆ. ಸೀಮಿತ ಶರೀರ ದಲ್ಲಿ ಶಕ್ತಿ ಸಂಕೋಚಗೊಂಡಿರುತ್ತದೆ. ಷಟ್‌ಸ್ಥಲಾಚರಣೆಯಿಂದ ಭಕ್ತಿ ವಿಶುದ್ಧವಾಗು ತ್ತದೆ; ಶಕ್ತಿವಿಕಾಸವಾಗುತ್ತದೆ. ಶಕ್ತಿವಿಕಾಸ ಬರೀ ಜಿಜ್ಞಾಸೆಯಿಂದಾಗುವುದಿಲ್ಲ. ಷಟ್ ಸ್ಥಲ ಸಿದ್ಧಾಂತ ಬರೀ ಜಿಜ್ಞಾಸ್ಯವಲ್ಲ, ಜೊತೆಗೆ ಉಪಾಸ್ಯವೂ ಆಗಿದೆ. ಅದರ ಉಪಾಸನೆಗೆ ದೇಹಿಯು ತೊಡಗಬೇಕಾದರೆ ಮೊದಲು ತಾನು ಅಂಗನಾಗಬೇಕು. ಅಂಗನಾಗ ಬೇಕಾದರೆ ಗುರುಕರುಣೆಯನ್ನು ಪಡೆದು ಶುದ್ಧಾಂತಃಕರಣಿಯಾಗಬೇಕು. ಗುರು ಕಾರುಣ್ಯ ಪಡೆಯಬೇಕಾದರೆ ಮೊದಲು ಪಿಂಡ ಪಿಂಡಜ್ಞಾನ ಸಂಸಾರಹೇಯಭಾವ ಗಳನ್ನು ತಳೆಯಬೇಕು. ಇಲ್ಲಿ ಸಂಸಾರವೆಂದರೆ ಹುಟ್ಟುಸಾವಿಗೆ ಆಶ್ರಯವಾದ ಕಾಯ ಮೋಹ ಕಾಯಾಭಿಮಾನ ಕಾಯ ಮಮಕಾರಾದಿಗಳು. ಇವನ್ನು ಮಾಣಿಸಿ ಪಿಂಡ ಜ್ಞಾನಿಯಾಗಿ ಪಡೆಯಬೇಕು ಗುರುಕಾರುಣ್ಯ. ಆಗ ದೇಹಿ ಅಂಗನೆನಿಸುವನು; ಷಟ್ ಸ್ಥಲ ಸಿದ್ಧಾಂತಾನುಷ್ಠಾನಕ್ಕೆ ಅರ್ಹನಾಗುವನು. ಲಿಂಗಗುಣ ಲಿಂಗಕ್ರಿಯೆ ಲಿಂಗಾನು ಭೂತಿ ಲಿಂಗಶಕ್ತಿಗಳನ್ನು ಅಳವಡಿಸಿಕೊಳ್ಳುವನು.

ಅಂಗದಲ್ಲಿ ಲಿಂಗವು ತೋರದಂತಿರುವುದು; ಬೆಳಗನ್ನು ಬೀರುವಂತಿರುವುದು.

"ಶಿಲೆಯಲ್ಲಿ ಉದಕವೊಸರದಿಪ್ಪಂತೆ,
ಸೂರ್ಯಕಾಂತಶಿಲೆಯಲ್ಲಿ ಅಗ್ನಿ ಸ್ಫುರಿಸದಿಪ್ಪಂತೆ,
ಬೀಜದೊಳಗಣ ವೃಕ್ಷ ಅಂಕುರಿಸದಿಪ್ಪಂತೆ,
ಇಪ್ಪನಯ್ಯಾ ಶಿವನು ಪಿಂಡದೊಳಗೆ ಪಿಂಡರೂಪಾಗಿ,
ಈ ಪರಿಯಲ್ಲಿ ಗೋಪ್ಯವಾಗಿದ್ದೆನ್ನಲ್ಲಿ ಕಾಣಿಸಿಕೊಳ್ಳದಿರ್ದ್ದಿರಿ,
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ !

ಎಂಬೀ ವಚನದಲ್ಲಿ ಅಂಗದಲ್ಲಿ ಲಿಂಗವಿರುವ ಅವ್ಯಕ್ತ ಸ್ಥಿತಿಯನ್ನು ನಿರೂಪಿಸ ಲಾಗಿದೆ. ಅದನ್ನು ಅಭಿವ್ಯಕ್ತಗೊಳಿಸುತ್ತಾನೆ ಶ್ರೀಗುರು ತನ್ನ ಸಂಸ್ಕಾರಬಲದಿಂದ ! ನಿಷ್ಕಲ, ಸಕಲ–ನಿಷ್ಕಲ, ಸಕಲಗೊಳಿಸಿ ಭಾವಲಿಂಗ, ಪ್ರಾಣಲಿಂಗ, ಇಷ್ಟಲಿಂಗಗಳನ್ನಾಗಿಸಿ ಭಕ್ತನಿಗೆ ಕರುಣಿಸುತ್ತಾನೆ. ಅರ್ಚನ–ಅರ್ಪಣ–ಅನುಭವಗಳಿಂದ ಆರಾಧಿಸಲು ಹೇಳುತ್ತಾನೆ

ಬರೀ ಬ್ರಹ್ಮಜಿಜ್ಞಾಸೆಯಿಂದ ಎಂದಿಗೂ ಬ್ರಹ್ಮಾನುಭೂತಿಯುಂಟಾಗದು. ವಾಸ್ತವವಾಗಿ ಬ್ರಹ್ಮ ಜಿಜ್ಞಾಸ್ಯವಸ್ತುವಲ್ಲ; ಮೀಮಾಂಸ್ಯವೂ ಅಲ್ಲ. ಅದು ಮಾತು ಮನ ಮತಿಗಳಿಗೆ ಮೀರಿದ ವಸ್ತುವೆಂದು ವೇದಾಂತ ಹೇಳುತ್ತದೆ. ಮತ್ತೆ 'ಅಥಾತೋ ಬ್ರಹ್ಮ ಜಿಜ್ಞಾಸಾ' ಎಂದು ಸೂತ್ರಿಸಿ ಜಿಜ್ಞಾಸೆಗೆ ಮುಂದಾಗಿದೆ. ಇದು ಸರಿಯಲ್ಲ. ವೀರಶೈವ ಸಿದ್ಧಾಂತ ಹೀಗೆ ಮಾಡದು. ಇದು ಆ ಪರಶಿವಬ್ರಹ್ಮ ಜಿಜ್ಞಾಸೆಗೆ ತೊಡಗು ವುದಿಲ್ಲ. ದೇವಧಾರಣ ಮಾಡಲು ಬೇಕಾದ ಅರ್ಹತೆಯನ್ನು ಗಳಿಸಲು ಪಿಂಡ, ಪಿಂಡ ವಿಜ್ಞಾನ, ಸಂಸಾರಹೇಯ, ಗುರುಕಾರುಣ್ಯ, ಲಿಂಗಧಾರಣಗಳಿಗೆ ತೊಡಗುತ್ತದೆ. ತನ್ನಲ್ಲಿ ಆ ದೇವಸತ್ತೆಯನ್ನುಂಟು ಮಾಡಿಕೊಳ್ಳಲು ಯತ್ನಿಸುತ್ತದೆ. ಮಾತು–ಮನಗಳಿಗೂ ಕಾಯ–ಕರಣಗಳಿಗೂ ಪ್ರಾಣತ್ರಾಣಗಳಿಗೂ ಷಟ್‌ಚಕ್ರಗಳಿಗೂ ಲಭ್ಯವನ್ನಾಗಿಸಿಕೊಳ್ಳುವ ಸನ್ನಾಹ ಮಾಡುತ್ತದೆ. ಅಂಗತ್ರಯದಲ್ಲಿ ಲಿಂಗತ್ರಯವನ್ನು, ಅಂಗಷಟ್ಕದಲ್ಲಿ ಲಿಂಗ ಷಟ್ಕವನ್ನು ಅಂಗನವಕಗಳಲ್ಲಿ ಲಿಂಗನವಕಗಳನ್ನು, ಅಂಗಸ್ಥಲ ೪೪ರಲ್ಲಿ ಲಿಂಗಸ್ಥಲ ೫೭ನ್ನು ಸನ್ನಿಹಿತಗೊಳಿಸಿಕೊಳ್ಳುತ್ತದೆ. ಅದು ಕ್ರಿಯಾತ್ಮಕವಾಗಿ ಜ್ಞಾನಾತ್ಮಕವಾಗಿ ಅರ್ಚನಾರ್ಪ ಣಾನುಭವಾತ್ಮಕವಾಗಿ ಸಂತೋಷ ಸಮರಸಾತ್ಮಕವಾಗಿ ಸಮನಿಸಿಕೊಳ್ಳಲು ಸಾಹಸ ಪಡುತ್ತದೆ. ಅದರ ವಿಭುತ್ವಕ್ಕೆ ಅದರ ಸರ್ವಸಮತ್ವಕ್ಕೆ ಭಂಗ ಬರದಂತೆ ಮಂಗಳತೆ ಮಾಸದಂತೆ ಮಾಡುತ್ತದೆ ಶಿವಾದ್ವೈತ ಸಿದ್ಧಾಂತ. ಇದರಿಂದ ಇದು ಶಿವಾತ್ಮವಿದ್ಯೆ; ಸ್ವಯ ಶಿವಸಿದ್ಧಾಂತ.

ನಮ್ಮೀ ಭಾವವನ್ನೆಲ್ಲ ಈ ಮುಂದಿನ ಅಲ್ಲಮಪ್ರಭುವಿನ ವಚನ ಕ್ರೋಢೀಕರಿಸಿ ಕಥಿಸಿದೆ :

"ಆಯತವಾಯಿತ್ತು ಅನುಭಾವ, ಸ್ವಾಯತವಾಯಿತ್ತು ಶಿವಜ್ಞಾನ;
ಸಮಾಧಾನವಾಯಿತ್ತು ಸದಾಚಾರ,
ಇಂತೀ ತ್ರಿವಿಧ ಏಕಾರ್ಥವಾಗಿ, ಅರಿವಿನ ಹೃದಯ ಕಣ್ದೆರೆದು,
ಅನಂತಲೋಕಾದಿಲೋಕದ ಅಸಂಖ್ಯಾತ ಮಹಾಗಣಂಗಳೆಲ್ಲರು
ಲಿಂಗಭಾವದಲ್ಲಿ ಭರಿತರಾಗಿ, ಭಕ್ತಿರಾಜ್ಯವನೆ ಹೊಕ್ಕು,
ನಿಜಲಿಂಗ ಸುಕ್ಷೇತ್ರವನೆ ಕಂಡು–ಕೊಂಡು,
ಅಮೃತಸರೋವರದೊಳಗಣ ವಿವೇಕವೃಕ್ಷ ಪಲ್ಲವಿಸಲು,
ವಿರಕ್ತಿ ಪುಷ್ಪ ವಿಕಸಿಸಲು,
ಪರಮಾನಂದ ಮಠದೊಳಗೆ
ಪರಿಣಾಮ ಪಶ್ಚಿಮ ಜ್ಯೋತಿಯ ಬೆಳಗಿನೊಳಗೆ
ಹರುಷದಲಿ ಆಸನವನಿಕ್ಕಿ ಪ್ರಾಣಲಿಂಗಮೂರ್ತಿಗೊಂಡಿರಲು,
ದಕ್ಷಿಣವ ದಾಂಟಿ, ಉತ್ತರಾಬ್ಧಿಯಲಿ ನಿಂದು,

ಅಖಂಡ ಪರಿಪೂರ್ಣ ಪೂಜೆಯ ಮಾಡುವವರಿಗೆ
ನಮೋ ನಮೋ ಎಂಬೆ ಗುಹೇಶ್ವರಾ !

ವೀರಶೈವ ಸಿದ್ಧಾಂತದಂತೆ ಅನುಭಾವ, ಶಿವಜ್ಞಾನ, ಸದಾಚಾರಗಳು ಅಂಗನಲ್ಲಿ ಸಂಗವಾಗಿ ಏಕಾರ್ಥವಾಗಬೇಕು. ಆಗ ಹೊಡೆದೆರೆದು ಹೊಮ್ಮುವ ಶಕ್ತಿ ಅದೆಂತಹ ಅಪೂರ್ವ ದಿವ್ಯಶಕ್ತಿ ! ಅಂತಾದಾಗ ಆ ಅರಿವಿನ ಹೃದಯ ಕಣ್ದೆರೆಯದಿರುವುದೆ ? ಆ ತಿಳಿಗಣ್ಣು ತೆರೆದಾಗ ಆ ಚಿದಾನಂದ ಚಕ್ಷು ಚಿಮ್ಮಿದಾಗ ಆ ಮಹಾಬೆಳಗಿನಲ್ಲಿ 'ಅನಂತ ಲೋಕಾದಿಲೋಕದ ಅಸಂಖ್ಯಾತ ಮಹಾಗಣಂಗಳೆಲ್ಲರು ಲಿಂಗಭಾವದಲ್ಲಿ ಭರಿತರಾಗುವರಂತೆ, ಭಕ್ತಿರಾಜ್ಯವನ್ನು ಹೊಗುವರಂತೆ ! ನಿಜಲಿಂಗ ಕ್ಷೇತ್ರದಲ್ಲಿ ಅವಿಮುಕ್ತರಾಗಿ ಇರುವರಂತೆ ! ಅಮೃತದ ಸರೋವರವೆ ಹರಿವುದಂತೆ! ವಿವೇಕವೃಕ್ಷವು ಪಲ್ಲವಿಸಿ ಪಾರಮಾರ್ಥಿಕ ವಸಂತೋದಯವಾಗುವುದಂತೆ। ವಿರಕ್ತಿಪುಷ್ಪ ಅರಳಿ ಪ್ರಾಸಾದಿಕ ಪರಿಮಳ ಪಸರಿಸಿ, ಪರಮಾನಂದ ಮಠವಾಸ ಲಭಿಸಿ, ಪರಿಣಾಮ ಪಶ್ಚಿಮ ಜ್ಯೋತಿಯ ಬೆಳಗಿನಲ್ಲಿ ತೆಂಕಣ ದಾಂಟಿ, ಬಡಗಣ ಸೇರಿ ನಿಂತು, ಅಲ್ಲಿರುವ ಆ ಪ್ರಾಣಲಿಂಗದ ಪರಿಪೂರ್ಣ ಪೂಜೆಯ ಮಾಡಬೇಕಂತೆ ! ಅಂತರಂಗದ ಅರ್ಚನವೈಭವದ ವರ್ಣನೆ ನಮ್ಮನ್ನು ದೂರ ದೂರ ಕರೆದೊಯ್ದು ಸೊಗಸಿನ ಸೋಜಿಗದಲ್ಲಿ ಮುಂಗಾಣದಂತಿರಿಸುತ್ತದೆ. ಅದೇನು ಆ ಶಿವಯೋಗಿಯ ಶಿವಯೋಗ ! ಅದೇನು ಆ ವಿಕಾಸ ವೈಭವ ! ಆ ಅನಂತತೆಗೆ ಆ ಮಹಂತತೆಗೆ ಮೇರೆಗಳಿವೆಯೆ? ಆ ಪರಿಪೂರ್ಣತೆಗೆ ಕಿಂಚಿತ್ತಾದರೂ ನ್ಯೂನತೆಯಿದೆಯೆ ?

ತತ್ತ್ವ ಮತ್ತು ಸಿದ್ಧಾಂತ :

ತತ್ತ್ವಕ್ಕೂ ಸಿದ್ಧಾಂತಕ್ಕೂ ಅಂತರವಿದ್ದರೂ ಇಲ್ಲದಂತಾಗಿದೆ. ಈ ದಿಸೆಯಲ್ಲಿ ಸರಿಯಾದ ವಿಶ್ಲೇಷಣೆ–ವಿಮರ್ಶೆ ಬಾರದಿರುವುದೆ ಕಾರಣವಾಗಿದೆ. ಅದರ ಭಾವಕ್ಕೂ ನಿಜಸ್ಥಿತಿಯ ನಿರ್ಣಯಕ್ಕೂ ಅಂತರವಿಲ್ಲವೆ? ಸತ್ಯದ ತಿಳಿವಳಿಕೆಗೂ ಸತ್ಯ ಸ್ವರೂಪಕ್ಕೂ ವ್ಯತ್ಯಾಸವಿಲ್ಲವೆ? ಜ್ಞಾನ–ನಿರ್ಣಯ ಎರಡೂ ಒಂದೇ ಎಂದು ಹೇಳಬಹುದೆ?

ತತ್ತ್ವಗಳು ತಂತಮ್ಮ ಸ್ವಭಾವದಂತೆ ತದ್‌ಭಾವವನ್ನು ಅಥವಾ ತತ್‌ಸ್ವರೂಪವನ್ನು ತಿಳಿದು ಬಿಡುವುದೆ ತತ್ತ್ವ; ತಿಳಿದಂತೆ ತಳೆದುದೆ ಸಿದ್ಧಾಂತ. ತತ್ತ್ವಗಳು ಸಿದ್ಧಾಂತಕ್ಕೆ ಬರಲು ಮಾಡುವ ಮಾರ್ಗಗಳು.

ಮಾರ್ಗಗಳು ಹಲವು ಹತ್ತಿವೆ. ಇವುಗಳಲ್ಲಿ ಇದೇ ನಿರ್ದಿಷ್ಟವಾದ ಮತ್ತು ಸರ್ವ ಸಮರ್ಪಕವಾದ ಮಾರ್ಗವೆಂದು ಗುರುತಿಸಿ ನಿರ್ಣಯಿಸುವುದೆ ಸಿದ್ಧಾಂತ. ಮಾರ್ಗಗಳು ಮಾಡಿಕೊಂಡ ಗುರಿಗೆ ಮುಟ್ಟಿಸುತ್ತವೆಯೆಂಬುದು ನಿಜ. ಗುರಿಗೆ ಮುಟ್ಟಿಸುವ ಮಾರ್ಗ

ಇದುವೇ ಎಂದು ನಿರ್ಣಯಿಸುವುದೂ ಸಹ ಸಿದ್ಧಾಂತವಾಗಬಲ್ಲುದು; ಆಗುತ್ತದೆ. ಈ ದೃಷ್ಟಿಯಿಂದ ದಿಟ್ಟಿಸಿದರೆ ಮಾತ್ರ ತತ್ತ್ವಕ್ಕೂ ಸಿದ್ಧಾಂತವೆನ್ನಲಡ್ಡಿಯಿಲ್ಲ.

ವೀರಶೈವ ಮತದ ಈ ಮಾರ್ಗವೆಂದರೆ ಷಟ್‌ಸ್ಥಲ. ಇದರಾಚರಣೆಯಿಂದ ತಾತ್ತ್ವಿಕವಾಗಿ ತಲ್ಲೀಯತೆ ತನಗೊದಗುತ್ತದೆ. ಸಮ–ರಸತೆಯಿಂದ ಐಕ್ಯಗೊಳ್ಳುತ್ತದೆ. ಇದು ಷಟ್‌ಸ್ಥಲ ಪಥದ ಚರಮ ಗುರಿ. ಈ ಗುರಿ ಇದರಲ್ಲಿಯೆ ಇರುವುದರಿಂದ ಇದು ನಿರ್ಣಯವಾಗಿರುವುದರಿಂದ ಇದು ಸಿದ್ಧಾಂತವೂ ಆಗಿದೆ.

ಪಾರ್ಥಿವಾಂಗದಿಂದ ಪ್ರಾರಂಭವಾದ ಸಾಧನೆ ಆತ್ಮಾಂಗದಲ್ಲಿ ಅಂತ್ಯಗೊಳ್ಳುತ್ತದೆ. ಅಂದರೆ ಅಖಂಡ ಐಕ್ಯತೆ ಅಳವಡುತ್ತದೆ. ಮಣ್ಣಿನಿಂದ ಮೊದಲಾದ ಮರ ನಡುವಿನ ನಾಲ್ಕು ಅಂಗಗಳಿಂದ ಬೆಳೆದು ಕೊನೆಗೆ ಅದರ ಆತ್ಮಸ್ವರೂಪದಲ್ಲಿರುವ ಬೀಜದಲ್ಲಿ ಅಡಕ ವಾಗುವಂತೆ, ವೀರಶೈವಾಂಗ ಪಾರ್ಥಿವ ಭಕ್ತಸ್ಥಲದಿಂದ ಶ್ರದ್ಧೆಯಿಂದ ಮೊದಲಾಗಿ, ಸಾಲೀಲ ಮಾಹೇಶ್ವರಸ್ಥಲ, ಆಗ್ನೇಯ ಪ್ರಸಾದಿಸ್ಥಲ, ವಾಯವೀಯ ಪ್ರಾಣಲಿಂಗಿಸ್ಥಲ, ಆಕಾಶೀಯ ಶರಣಸ್ಥಲಗಳಲ್ಲಿ ಬೆಳೆದು ಆತ್ಮೀಯ ಐಕ್ಯಸ್ಥಲದಲ್ಲಿ ಮಹಾಲಿಂಗದಲ್ಲಿ ಸಮರಸಗೊಳ್ಳುತ್ತಾನೆ. ಇದು ಸಹಜ ಮಾರ್ಗ; ಸಹಜ ಸಿದ್ಧಾಂತ.

ಮೊದಲು ಅಭಿವ್ಯಕ್ತಿ, ಆಮೇಲೆ ವಿಕಾಸ, ಆ ಬಳಿಕ ಫಲರೂಪದಲ್ಲಿದ್ದು ಮರಳಿ ಅನಭಿವ್ಯಕ್ತಿತ್ವಕ್ಕೆ ಬರುವಿಕೆ ಭುವನಸಿದ್ಧಾಂತವೂ ಅಹುದು; ಜೀವನ ಸಿದ್ಧಾಂತವೂ ಅಹುದು. ಇದು ವೀರಶೈವಾಚಾರ್ಯರು ಕಂಡುಹಿಡಿದ ಸಹಜ ಸತ್ಯ; ಸಹಜ ಸಿದ್ಧಾಂತ; ನಿಜದ ನಿರ್ಣಯ. ಇದು ನೈಸರ್ಗಿಕ ಕ್ರಮಬದ್ಧವೂ ಅಹುದು; ಜೀವನದ ಚಿಂತನಪರವೂ ಅಹುದು. ಈ ಸಂಶೋಧನೆಯಲ್ಲಿ ವಿಪರ್ಯಾಸಕ್ಕೆ ಇಂಬಿಲ್ಲ. ಈ ಸಿದ್ಧಾಂತವಲ್ಲಿ ಅಪೂರ್ಣತೆಗೆ ಅನಿಶ್ಚತೆಗೆ ಅವಕಾಶವಿಲ್ಲ, ಇದು ಚಿನ್ಮಯತೆಯ ಚಿಂತನಪರ ಸತ್ಯ ಸಂಶೋಧನ. ಇದರ ಮುಖ್ಯ ಗುರಿ ಇಹಾಭ್ಯುದಯ ಶ್ರೇಯಸ್ಸು; ಮಾನವ ಜೀವನ ಕಲ್ಯಾಣ; ಪ್ರಪಂಚ ಪರಮಾರ್ಥ ಸಮನ್ವಯ ಸಾಧನ; ಸಾಧನ ಮಾತ್ರವಲ್ಲ,–ಸತ್ಯಸಿದ್ಧಿ.

ಜೀವನವನ್ನು ಹಾಸು ಹೊಕ್ಕಾಗಿ ಬಳಸಿಕೊಂಡಿದೆ ಷಟ್‌ಸ್ಥಲ ಸಿದ್ಧಾಂತ. ಇದೊಂದು ಜೀವನ ವಿಜ್ಞಾನ; ಮಹಾಜ್ಞಾನ. ಇದು ಜೀವನದಿಂದ ದೂರ ಇರುವುದಿಲ್ಲ. ಪಾಶವೀ ಪ್ರೇಮವನ್ನಳಿದು, ಮಾನವೀಯ ಪ್ರೇಮವನ್ನು ಮುಂದುವರಿಸಿ ಹೂವಾಗಿಸಿ ದೈವೀಪ್ರೇಮವೆಂಬ ಹಣ್ಣನ್ನು ಆಗಿಸುವುದೆ ಷಟ್‌ಸ್ಥಲಸಿದ್ಧಾಂತ.

ವ್ಯಕ್ತಿಯ ಜೀವನವನ್ನೆ ಭಕ್ತ ಮಾಹೇಶ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ ಎಂದು ಏರ್ಪಡಿಸಿ, ಸೋಪಾನಗಳನ್ನಾಗಿಸಿ ಏರುತ್ತಾನೆ ಅಂಗ. ಪರಿವಿಡಿದು ಒಂದೊಂದು ಸತ್ ಚಿತ್ ಆನಂದ ನಿತ್ಯ ಪೂರ್ಣ ಅಖಂಡತೆಗಳನ್ನು ಅರಗಿಸಿಕೊಳ್ಳುತ್ತಾನೆ; ಅವಿರಳಗೊಳ್ಳು

ತ್ತಾನೆ. ಆ ಆ ಸ್ಥಲದ ಸಕೀಲಗಳನ್ನು ಕಲೆ–ಕಳೆಗಳನ್ನು ರಕ್ತಗತಗಳನ್ನಾಗಿಸಿಕೊಳ್ಳು ತ್ತಾನೆ. ಬಿತ್ತಿನೊಳಗಿನ ಮರವನ್ನು ನೋಡುವಂತೆ ನೋಡುತ್ತಾನೆ. ನೋಡಿ ಕೂಡಿ ಏಕರಸವಾಗುತ್ತಾನೆ. ಈ ಸತ್‌ಸಾಧನೆಯಲ್ಲಿ ಜೀವನ ಮೌಲ್ಯವನ್ನು ದೇವನ ಮೌಲ್ಯ ವನ್ನು ಜಾಗತಿಕ ಮೌಲ್ಯವನ್ನು ಮನಗಾಣುತ್ತಾನೆ; ಮನಗಾಣಿಸುತ್ತಾನೆ. ಸರ್ವಭರಿತ ಸತ್ಯಾರಾಧಕರು, ಶಿವಾದ್ವೈತ ಸಿದ್ಧಾಂತಿಗಳು; ಷಟ್‌ಸ್ಥಲ ಧರ್ಮಿಗಳು.

ಷಟ್‌ಸ್ಥಲ ಸಿದ್ಧಾಂತದಲ್ಲಿ ಎಲ್ಲ ಬಗೆಯ ಜೀವನೋಪಾಯಗಳು ನಿರಾತಂಕವಾಗಿ ತೆರೆದಿವೆ. ನಿರರ್ಗಳವಾಗಿ ನಿಂತು ನೆರವೀಯುತ್ತವೆ. ಸತ್ಯಶುದ್ಧವಾಗಿವೆ. ಪರಿಶುದ್ಧ ವಾದ ಸರ್ವಸಮನ್ವಯವೆ ಇದರ ಅನ್ವಯ, ನಿರ್ಣಯ. ಅದು–ಇದು, ನಾನು–ನೀನು. ಅಲ್ಲಿ–ಇಲ್ಲಿ ಎಂಬ ಭೇದವಿಲ್ಲ, ತೊರೆಯ ಡೊಂಕು ಕಡಲಲ್ಲಿ ಅಡಗುವಂತೆ, ಮಾನವ ಜೀವನ ಡೊಂಕುಗಳೆಲ್ಲ ಷಟ್‌ಸ್ಥಲ ಸಿದ್ಧಾಂತದಲ್ಲಿ ಅಡಗುತ್ತವೆ. ವರ್ಗ ವ್ಯತ್ಯಾಸವಿಲ್ಲ; ಕುಲ ಪಂಥ ವ್ಯತ್ಯಾಸವಿಲ್ಲ. ಭವಿ–ಭಕ್ತ ವ್ಯತ್ಯಾಸವಿದ್ದರೂ ಶಾಶ್ವತವಲ್ಲ. ಭವಿ ಭವಿಯಾಗಿಯೇ ಇರಬೇಕೆಂಬ ಕಟ್ಟಿಲ್ಲ. ಸಾಂಸ್ಕೃತಿಕ ವ್ಯತ್ಯಾಸವಿಲ್ಲ. ದೇವನೊಬ್ಬ. ಆ ದೇವತ್ವ ಸಾಧನಷಟ್‌ಸ್ಥಲ ಪಥವೊಂದು. ಐಕ್ಯವೇ ಅದರ ಗುರಿ. ಅದರಲ್ಲಿ ಸಾಗಿ ಹೋಗಲು ಸರ್ವರಿಗೂ ಸಮಾವೇಶ. ಸಾಗಲು ಶೈವೀ ಸಂಸ್ಕಾರವೊಂದೇ ವಾಹನ, ಪರಿಶುದ್ಧ ಆಚರಣಗಳಿಗೆ, ಪರಿಪಕ್ವ ಚಿಂತನಗಳಿಗೆ ಪರಮಾನುಭೂತಿಗೆ ಅನಾಮಯ ಅವಕಾಶವಿದೆ; ಅನುಪಮ ಪ್ರಕಾಶವಿದೆ. ಅಲ್ಲದೆ ಸ್ಥಲ ಸ್ಥಲಗಳ ಆಶ್ರಯವಿದೆ. ಲಿಂಗ ಚೇತನಗಳ ಜೊತೆಯಿದೆ, ಸ್ಥಲ ಸ್ಥಲಕ್ಕೂ ಹಸ್ತ–ಮುಖ, ಪದಾರ್ಥಪ್ರಸಾದಗಳ ಪ್ರಜ್ಞೆ ಯಿದೆ. ಆ ಆ ಲಿಂಗಗಳಿಗೆ ಉಚಿತವಾದವುಗಳನ್ನೆ ಅರಿತು ಅರ್ಪಿಸುವ ಅರ್ಪಣ ವಿಧಾನ ವಿದೆ. ಅರ್ಚನ ವಿಧಾನವಿದೆ. ಅವಧಾನ ಅನುಭವಗಳಿವೆ.

ವಿಜ್ಞಾನಿ ಸಂಶೋಧನೆಯಲ್ಲಿ ಹೊರಗಿನದನ್ನು ತನ್ನನ್ನು ಮರೆತಿರುವಂತೆ ಲಿಂಗಾವ ಧಾನಿ ಮೈಮರೆತಿರುತ್ತಾನೆ. ಪಾರ್ಥಿವಾದಿ ತತ್ತ್ವಗಳನ್ನು ತಿಳಿಗೊಳಿಸಿಕೊಂಡು ತತ್ತ್ವಾ ತೀತನಾಗಿರುತ್ತಾನೆ.

> “ಇಪ್ಪತ್ತಯ್ದು ತತ್ತ್ವದಲ್ಲಿ ಹತ್ತೆಂಬ ದಾರದಲ್ಲಿ
> ಬಳಲುವ ಅಳಲುವ ವ್ಯರ್ಥಗೇಡಿ ಮನವನೇನೆಂಬೆನಯ್ಯಾ ?
> ತನ್ನ ತಾ ತಿಳಿಯಲು ತನಗೆ ತಾನನ್ಯವಲ್ಲ ಮರುಳೆ !
> ಮುತ್ತಯ್ಯನ ಬೆಣ್ಣೆಯ ಶಿಶು ತಾ ನುಂಗಿತ್ತು,
> ಶಿಶುವಿನ ಸುಖವನೇನೆಂಬೆ ಗುಹೇಶ್ವರಾ ?”

ಎಂಬಲ್ಲಿ ಆ ನಿತ್ಯಾಖಂಡ ಪರಶಿವನು ತತ್ತ್ವಾತೀತನೆಂಬುದು ಸ್ಪಷ್ಟವಾಗಿದೆ.

೩೬ ತತ್ತ್ವಗಳಲ್ಲಿ ಮತ್ತು ದಶವಾಯುಗಳಲ್ಲಿ ಸುತ್ತಿ ಸುತ್ತಿ ಜೀವಿಸುವವರಿಗೆ ಬಳಲಿಕೆ ತಪ್ಪದು, ಬಾಳು ಬೀಳಾಗದಿರದು. ತತ್ತ್ವಾತೀತವಾದ ತನ್ನನ್ನು ತಾನು ತಿಳಿದು ತಳೆಯಬೇಕಲ್ಲದೆ ತನಗನ್ಯವಾಗಿರುವ ತತ್ತ್ವಜ್ಞಾನದಿಂದ ತನಗೆ ಜಾಣತನ ಬಾರದು. ಈ ಅಂಗಲಿಶು ಆ ಪರಶಿವ ಪರಶಕ್ತಿಯರ ಮಗು. ಈ ಮಗನ ಪೂರ್ಣಾಹಾರ ಆ ಶಿವಾದ್ವೈತ ವಸ್ತುವಿನ ಪೂರ್ಣಾಖಂಡಾನುಭೂತಿ. ಅದನ್ನು ಪಡೆದ ಐಕ್ಯಾಂಗನ ಸೌಖ್ಯಕ್ಕೆ ಸೀಮೆಯಿಲ್ಲ. ಆ ಸುಖಾಭಿವ್ಯಕ್ತಿಗೆ ಮಾಧ್ಯಮ ಷಟ್‌ಸ್ಥಲ. ಅದರಲ್ಲಿಯೂ ಪ್ರಧಾನವಾಗಿ ಶರಣಸ್ಥಲ. ಅದನ್ನು ಪಡೆದ ಶಿಶುವೆ ಸಿರಾಳ ಶಿಶು, ನಿಜ ಶಿಶು.

"ಬೆಣ್ಣೆಯ ಕಂದಲಿ ಕರಗವಿಟ್ಟರೆ, ಕಂದಲ ಕರಗಿತ್ತು;
ಬೆಣ್ಣೆ ಉಳಿಯಿತ್ತು, ತುಂಬಿ ಇದ್ದಿತ್ತು;
ಪರಿಮಳವಿಲ್ಲದ ಪರಿಮಳವಿದ್ದಿತ್ತು ತುಂಬಿಯಿಲ್ಲ,
ತಾನಿದ್ದರೂ ತನ್ನ ಸ್ವರೂಪವಿಲ್ಲ;
ಗುಹೇಶ್ವರನಿದ್ದನು, ಲಿಂಗವಿಲ್ಲ.
ತುಂಬಿ ಪರಿಮಳ ಉಂಡುದೋ,
ಪರಿಮಳ ತುಂಬಿಯನುಂಡುದೋ ?
ಲಿಂಗ ಪ್ರಾಣವಾಯಿತೋ, ಪ್ರಾಣಲಿಂಗವಾಯಿತೋ ?
ಗುಹೇಶ್ವರಾ, ಈ ಉಭಯದ ಭೇದವ ನೀನೇ ಬಲ್ಲೆ"

ಅಹುದು, ಹೀಗಾಗುವುದು ಸಹಜ. ಆ ಏಕತಾನತೆಗೆ ಮಾನಸಿಕ ಬೌದ್ಧಿಕ ಭಾವಾತ್ಮಕ ಪ್ರಪತ್ತಿಯೇ ಕಾರಣ. ಆ ಸ್ಥಿತಿಯಲ್ಲಿ ಆತನು ಏನೆಲ್ಲವನ್ನೂ ಮರೆತಿರುತ್ತಾನೆ; ಅಂದರೆ ಸಮರಸಗೊಳಿಸಿಕೊಂಡಿರುತ್ತಾನೆ. ಅದು ಬಿರುಕಿಲ್ಲದ ಭಾವ, ಬಿರುಕಿಲ್ಲದ ಅಖಂಡ ಜ್ಞಾನ. ಅಂತಾದಲ್ಲಿ ಆ ಅಸಂಪ್ರಜ್ಞಾತತ್ವದಲ್ಲಿ ಆ ಜ್ಞಾನ ನಷ್ಟಸ್ಥಲದಲ್ಲಿ ಯಾವ ಭಿನ್ನತೆಗೆ ಬಿಡುವಿಲ್ಲ, ಇರದು. ಸಾಮಾನ್ಯವಾಗಿ ಭೌತವಿಜ್ಞಾನಿಯೇ ಆ ಬಗೆಯ ಪರಿಣಾಮಕ್ಕೆ ಆ ಅಭಿನ್ನತೆಗೆ ಒಳಪಟ್ಟಿರುತ್ತಾನೆ. ಐನ್‌ಸ್ಟೀನ್, ಎಡಿಸನ್‌ರ ಸಂಶೋಧನ ಜೀವನದಲ್ಲಿ ಇಂತಹ ಪ್ರಸಂಗಗಳು ಘಟಿಸಿದುದು ಲೋಕಪ್ರಸಿದ್ಧ. ಐನ್‌ಸ್ಟೀನ್ ಒಮ್ಮೆ ಮುಂಜಾವಿನಲ್ಲಿ ಎದ್ದು ಎಲ್ಲಿಯೋ ಪಯಣಿಗನಾಗಿ, ಕೋಟು–ಪಾಯಿಜಾಮುಗಳನ್ನು ಹಾಕಿಕೊಳ್ಳುತ್ತಾನೆ. ಆದರೆ ಅಗತ್ಯವಾಗಿ ಹಾಕಿಕೊಳ್ಳಬೇಕಾದ ಗುಂಡಿಗಳನ್ನೆ ಹಾಕಿಕೊಳ್ಳದೆ ಜನಭರಿತ ಸಂದರ್ಶನಕ್ಕೆ ಬಂದು ಬಿಡುತ್ತಾನೆ. ತನ್ನ ಸಂಶೋಧನದ ಆಳ ವಿಚಾರದಲ್ಲಿ ಮನ ಮಗ್ನವಾಗಿ ಹೀಗೆ ಮಾಡುತ್ತಾನೆ. ಇನ್ನೊಮ್ಮೆ ಥಾಮಸ್ ಆಲ್ವ ಎಡಿಸನ್ನನು ಒಮ್ಮೆ ಇಡೀ ಇರುಳನ್ನೆಲ್ಲ ತನ್ನ ಪ್ರಯೋಗ ಶಾಲೆಯಲ್ಲಿ ಸಂಶೋಧನಾಸಕ್ತನಾಗಿ ಕಳೆವನು. ಬೆಳಗಾದ ಬಳಿಕ ಉಪಾಹಾರಕ್ಕೆ ಕುಳಿತುಕೊಳ್ಳುವನು. ಪಡಿ ಪದಾರ್ಥಗಳನ್ನು ತಂದಿಡುತ್ತಿದ್ದಂತೆ ಆತನ ಕಣ್ಣು ಎಳೆಯತೊಡಗುವುವು. ಆಗ ಆತನು

ತೂಕಡಿಕೆಯಲ್ಲಿ ತೂಗಾಡಿ ಎಚ್ಚತ್ತು ಎದುರಿಗಿರುವ ತಿಂಡಿಯ ತಟ್ಟೆಯನ್ನು ತಿಂದ ಎಂಜಲ ತಟ್ಟೆಯೆಂದು ಬಗೆದು, ಉಣ್ಣದೆ ಹಾಗೆಯೆ ಎದ್ದು ಹೋಗುವನಂತೆ ! ವಿಜ್ಞಾನಿಗಳು ಪ್ರಕೃತಿಯ ಆರಾಧಕರು. ಪ್ರಕೃತಿ ಪರಿಶೋಧನೆಯಲ್ಲಿ ತಮ್ಮನ್ನೇ ತಾವು ಮರೆಯುತ್ತಾರೆ. ಅಂತೆಯೇ ವೀರಶೈವಾನುಭಾವಿಗಳು ಸ್ವಯಾರಾಧಕರು, ಪರಾರಾಧಕರು, ಮಹಾಚೇತನಾರಾಧಕರು. ಆ ಪೂರ್ಣಾನಂದಪೆ ತಾವಾಗಿ ತಮ್ಮನ್ನೇ ತಾವು ಮರೆತಿರುವುದರಲ್ಲಿ ಅಚ್ಚರಿಯೇನಿಲ್ಲ. ಅಲ್ಲಿ ಅಂಗ–ಲಿಂಗವೆಂಬ ಭಾವವಿರದು, ಬುದ್ಧಿಯಿರದು; ಅಂದರೆ ಭಿನ್ನ ಜ್ಞಾನವಿರದು, ಆಗ ಅಂಗನು ಪ್ರಾಣಲಿಂಗವಾಗಿರುತ್ತಾನೆ; ಲಿಂಗಪ್ರಾಣವಾಗಿರುತ್ತಾನೆ. ಹೇಗೆ ಹೇಳಿದರೂ ಒಂದೆ ! ಆಗ ನಾ ನೀನೆಂಬ ಕಲ್ಪನೆಗೆ ಅವಕಾಶವಿರದು. ಪೂರ್ಣಾಖಂಡಸ್ವರೂಪನಾಗಿರುತ್ತಾನೆ. ಅಂತವರು ಜಾಗ್ರತರಾದರೆ ಅಂದರೆ ಎಚ್ಚರಗೊಂಡು ಬಾಹ್ಯಸ್ಮೃತಿಗೆ ಬಂದರೆ ಅವರಿಂದ ಜನಹಿತಕಾರ್ಯಗಳಾಗುತ್ತವೆ. ಅವರು ಎಲ್ಲರನ್ನೂ ಆ ಪರಶಿವಸ್ವರೂಪದಲ್ಲಿ ಕಾಣುತ್ತಾರೆ. ರಾಗದ್ವೇಷಗಳಿಗೆ ಇಂಬುಗೊಡರು. ವಿಶ್ವ–ಪ್ರೇಮಿಗಳಾಗಿ ವಿಶಾಲಹೃದಯರಾಗಿ ವಿಶುದ್ಧಭಾವಿಗಳಾಗಿ ಬಾಳುವರು.

ಷಟ್‌ಸ್ಥಲ ಸಿದ್ಧಾಂತದಲ್ಲಿ ಒಂದು ನೂರೊಂದಾಗಿ, ಮರಳಿ ನೂರೊಂದು ಶೂನ್ಯಸ್ವರೂಪವನ್ನು ತಳೆಯುತ್ತದೆ. ಕಾರ್ಯದಲ್ಲಿ ವಿವಿಧವಾಗಿ ಕಾರಣದಲ್ಲಿ ಒಂದಾಗಿ ಕಾರಣಾತೀತದಲ್ಲಿ ಸರ್ವಶೂನ್ಯನಿರಾಲಂಬವಾಗಿ ಇರುತ್ತದೆ.

ಬಹುರೂಪವಾಗಿ ಪರಿಣಾಮಗೊಂಡ ಪ್ರಪಂಚದ ಪ್ರತಿಯೊಂದು ಅಣು ಅಣುವಿನಲ್ಲಿ ಆ ಸತ್ಯ ಸೌಂದರ್ಯಶಿವನನ್ನು ಕಾಣುವುದೆ ಷಟ್‌ಸ್ಥಲ ಸಿದ್ಧಾಂತದ ಧ್ಯೇಯು.

> "ಏನೂ ಏನೂ ಇಲ್ಲದ ಬಯಲೊಳಗೊಂದು
> ಬಗೆಗೊಳಗಾಗದ ಬಣ್ಣ ತಲೆದೋರಿತ್ತು.
> ಆ ಬಣ್ಣವನಾ ಬಯಲು ಶೃಂಗರಿಸಲು ಬಯಲು ಸ್ವರೂಪಗೊಂಡಿತ್ತು,
> ಅಂತಪ್ಪ ಸ್ವರೂಪಿನ ಬೆಡಗು ತಾನೆ–
> ನಮ್ಮ ಗುಹೇಶ್ವರಲಿಂಗದ ಪ್ರಥಮ ಭಿತ್ತಿ"

ಆ ಸರ್ವಶೂನ್ಯ ನಿರಾಲಂಬವಸ್ತು ನಾದ ಬಿಂದು ಕಲಾತೀತವಾದುದು. ನಿಖಿಲ ತತ್ತ್ವಾತೀತವಾದುದು. ಅದು ಏನೂ ಏನೂ ಇಲ್ಲದ ಬಟ್ಟಬಯಲು. ಅದು ಉಪಮೆಗೆ ನಿಲುಕದ ನಿಲವು: ಸಹಜ ಸ್ವರೂಪು. ಅಲ್ಲಿ (ಅದರಲ್ಲಿ) ತಲೆದೋರಿದ ಮತ್ತು ಬಗೆಗೊಳಗಾಗದ ಬಣ್ಣವೆಂದರೆ ಆ ಪರಮಚಿತ್ಕಳೆ. ಆ ಚರಮ ಚಿತ್ಕಳೆಯಿಂದ ಚಲುವೆತ್ತಿದೆ ಆ ವಸ್ತು. ಆ ಚಲುವ ಚಿತ್ಕಳೆಯಿಂದ ತೇಜೋಮೂರ್ತಿಯಾದ ಮಹಾಲಿಂಗವಾಗುತ್ತದೆ. ಆ ಮಹಾಲಿಂಗವೆ ಆ ತೇಜೋಮೂರ್ತಿಯೆ ಶಿವಸುಂದರ ಸತ್ಯಸ್ವರೂಪ. ಅದುವೆ ಆ ಚಿದ್ವಿಲಾಸದ ಪ್ರಥಮ ಭಿತ್ತಿ. ಪ್ರಪಂಚದ ಪ್ರಪ್ರಥಮ ಆಧಾರ,ಸರ್ವ ಸಕಲ

ತತ್ತ್ವಗಳಿಗೆ ಮೂಲಬೀಜ. ಆ ಚಿತ್ಕಳೆಯೆ ಸಹಜಚೇತನದೊಡಗೂಡಿ ಮಹಾನಾದ ಸ್ವರೂಪವಾಗುತ್ತದೆ. ನಿಶ್ಶೂನ್ಯವೆನಿಸುತ್ತದೆ. ಅದೇ ಮುಂದೆ ಬಲಿದು ಘನೀಭವಿಸಿ ಬಿಂದು ಕಲಾತ್ಮಕವಾಗುತ್ತದೆ. ಅದರಿಂದ ಮತ್ತೆ ನಾದ ಬಿಂದು ಕಲಾತ್ಮಕ ಸಕಲ ತತ್ತ್ವಗಳನ್ನು ತನ್ನೊಳಗೆ ಒಳಗೊಂಡ ಶೂನ್ಯಲಿಂಗವುದಿಸುತ್ತದೆ.

ಆ ಸರ್ವ ಶೂನ್ಯ ನಿರಾಲಂಬವೆಂದರೆ ಬಚ್ಚ ಬರಿಯ ಬಯಲು. ಅದುವೆ ಸಹಜ. ಅದರಿಂದಾದ ಪರಂಜ್ಯೋತಿಯೆ ನಿಶ್ಶೂನ್ಯ; ನಿರವಯಬಲು, ಅದು ನಿಷ್ಕಲ, ದ್ವಿತೀಯ ಭಿತ್ತಿ. ಅದುವೆ ಮತ್ತೆ ಘನೀಭವಿಸಿ ಬಂದು ಕಲಾತ್ಮಕವಾಗಿರುವುದೆ ಶೂನ್ಯ ಅಥವಾ ಬಯಲು. ಅದುವೆ ಸಕಲ. ಅದರ ಗರ್ಭದಲ್ಲಿ ಮಯೂರಾಂಡರಸದಲ್ಲಿರುವಂತೆ ಎಲ್ಲ ತತ್ತ್ವಗಳೂ ಇರುತ್ತವೆ; ಅವ್ಯಕ್ತವಾಗಿರುತ್ತವೆ. ಅದುವೇ ಬ್ರಹ್ಮಾಂಡ ತೃತೀಯ ಭಿತ್ತಿ. ಬ್ರಹ್ಮಾಂಡ ಸಮುನ್ಮೇಷಣ ಭಿತ್ತಿ !

"ತ್ರೈಲೋಕ್ಯ ಸಂಪದಾಲೇಖ್ಯ ಸಮುಲ್ಲೇಖನ ಭಿತ್ತಯೇ
ಸಚ್ಚಿದಾನಂದರೂಪಾಯ ಶಿವಾಯ ಬ್ರಹ್ಮಣೇ ನಮಃ ।"

ಆ ಅಧಿಷ್ಠಾನ ಶೂನ್ಯಲಿಂಗಸ್ವರೂಪವನ್ನೆ ಹಾಡಿತು;ಹೀಗೆ ಶ್ರೀರೇಣುಕ ಜಗದ್ಗುರು ವಾಣಿ !

'ಅದು ಸಚ್ಚಿದಾನಂದ ರೂಪ; ಶಿವ, ಬ್ರಹ್ಮ; ಈ ಮೂಲೋಕ ಸಂಪಚ್ಚಿತ್ರವನ್ನು ಬರೆಯಲು ಭಿತ್ತಿ; ಅದಕ್ಕೆ ಬಾಗುವೆ.'

ಸರ್ವಶೂನ್ಯ ನಿರಾಲಂಬ ವಸ್ತು ನಾದ ಬಿಂದು ಕಲಾತೀತ. ನಿಶ್ಶೂನ್ಯವಸ್ತು ಚಿನ್ನಾದ ಚಿದ್ಬಿಂದು ಚಿತ್ಕಲಾನ್ವಿತ ಲಿಂಗ. ಶೂನ್ಯವಸ್ತು ಸನ್ನಾದ ಸದ್ಬಿಂದು ಸತ್ಕಲಾನ್ವಿತ ಲಿಂಗ. ಒಂದು ಅಖಂಡ, ಇನ್ನೊಂದು ಪರಿಪೂರ್ಣ, ಮತ್ತೊಂದಾದ ಶೂನ್ಯ ನಿತ್ಯ. ಸರ್ವಶೂನ್ಯ ನಿರಂಗ. ನಿಶ್ಶೂನ್ಯಕ್ಕೆ ಚಿತ್ಪ್ರಭೆಯೆ ಅಂಗ; ಶೂನ್ಯಲಿಂಗಕ್ಕೆ ಸದ್ಬಿಂದುವೆ ಅಂಗ. ಸತ್ಕಲೆಯೇ ಅದರೊಡಲ ತಿರುಳು. ಅನಭಿವ್ಯಕ್ತ ಭಾವೀ ಬ್ರಹ್ಮಾಂಡವೆ ಅದರ ಬಾಳು, ಬದುಕು. ನಿಶ್ಶೂನ್ಯ ಚಿನ್ನಾದ ಲಿಂಗ; ಶೂನ್ಯ ಸನ್ನಾದ ಲಿಂಗ. ಈ ಶೂನ್ಯಲಿಂಗದಿಂದ ಅಂಗ ಲಿಂಗಗಳ ಉತ್ಪತ್ತಿ; ಅಕ್ಷರತ್ರಯದ ಉತ್ಪತ್ತಿ. ಪೂರ್ಣದಲ್ಲಿ ಪೂರ್ಣ ತೆಗೆದುಕೊಂಡರೆ ಪೂರ್ಣವಾಗಿಯೆ ಉಳಿವುದು ಶೂನ್ಯ. ಪೂರ್ಣನಾದಾತ್ಮಕ ನಿಶ್ಶೂನ್ಯ. ಪೂರ್ಣ ಬಿಂದು ಕಲಾತ್ಮಕ ಶೂನ್ಯ. ಪೂರ್ಣ ಬಿಂದು ಶೂನ್ಯದಿಂದ ೩೬ ತತ್ತ್ವೋತ್ಪತ್ತಿ, ೧೦೧ ಸ್ಥಲೋತ್ಪತ್ತಿ. ಮಧ್ಯಬಿಂದುವೆ ನಿತ್ಯಪೂರ್ಣವಸ್ತು. ಅದರಿಂದಾದ ಅಂಗ–ಲಿಂಗಗಳೆ ಶಕ್ತಿ–ಶಿವಗಳೆ ಆಚೆ ಈಚೆ ಇವೆ.

"ಅಯ್ಯಾ, ತತ್ತ್ವ ವಿತತ್ತ್ವಂಗಳಿಲ್ಲದಂದು,
ಪ್ರಕೃತಿ ಪುರುಷರಿಲ್ಲದಂದು,

ದೇವ ಪರಮರೆಂಬ ಭಾವ ತಲೆದೋರದಂದು,
ಏನೂ ಏನೂ ಇಲ್ಲದಂದು,
ಬಯಲು ಬಲಿದೊಂದು ಬಿಂದುವಾಯಿತ್ತು ನೋಡಾ !
ಆ ಬಿಂದು ಅಕ್ಷರತ್ರಯದ ಗದ್ದುಗೆಯಲ್ಲಿ ಕುಳ್ಳಿರಲು
ಓಂಕಾರ ಉತ್ಪತ್ಯವಾಯಿತ್ತು.
ಆ ನಾದ ಉತ್ಪತ್ಯವಾದಲ್ಲಿ ಮೂರ್ತಿಗೊಂಡನೊಬ್ಬ ಶರಣನು,
ಆ ಶರಣನಿಂದಾಯಿತ್ತು ಪ್ರಕೃತಿ;
ಆ ಪ್ರಕೃತಿಯಿಂದಾಯಿತ್ತು ಲೋಕ………"

ಮೇಲಿನ ನಮ್ಮ ಆ ಎಲ್ಲ ಅಭಿಪ್ರಾಯವನ್ನು ಈ ಅಲ್ಲಮಾಪ್ರಭುವಿನ ವಚನ ಗರ್ಭದಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದೆ. ನಿಜದ ನಿರ್ಣಯಕ್ಕೆ ಅಂದರೆ ಸತ್ಯ ಸಿದ್ಧಾಂತಕ್ಕೆ ಬರಬಹುದಾಗಿದೆ.

ಈ ವಚನದಲ್ಲಿ ಸರ್ವಶೂನ್ಯನಿರಾಲಂಬ ವಸ್ತುವಿನ ನಿರೂಪಣೆ ನೇರವಾಗಿಲ್ಲ, ಅದು ನಿರೂಪಣೆಗೆ ಒಳಗಾಗುವುದೂ ಅಲ್ಲ. ಅಂತೆಯೆ ಅದು ಸರ್ವಶೂನ್ಯ. ಇನ್ನು ನಿಶ್ಶೂನ್ಯ ಆಕಾರಕ್ಕೆ ಒಳಗಾಗದಿದ್ದರೂ ಅಕ್ಷರಕ್ಕೆ ಒಳಗಾಗಿದೆ. ಬಟ್ಟಬಯಲಾಗಿದೆ. ಅದು ಬಲಿದು ಬಿಂದುರೂಪಾದುದೆ ಶೂನ್ಯ, ಇದು ಬಿಂದ್ವಾಕಾಶಸ್ಥಲ. ಇದು ಅ–ಉ–ಮ ಈ ಅಕ್ಷರತ್ರಯದ ಗದ್ದುಗೆಯ ಮೇಲೆ ಓಂ ಕುಳಿತಿದೆ. ಕುಳಿತು ಓಂಕಾರವನ್ನಾಗಿಸಿದೆ. ವಾಚ್ಯ ವಾಚಕತ್ವಕ್ಕೆ ಐತಂದಿದೆ. ಅಂತೆಯೇ ನಾದೋತ್ಪತ್ತಿ. ಶೂನ್ಯ ಅದೊಂದು ಅವಾಗ್ಮಪ್ರಣವ. ಓಂ ವಾಚ್ಯಪ್ರಣವ. ಓಂ ಆಜ್ಞಾಚಕ್ರನಿಷ್ಠ. ಶೂನ್ಯ ಸಹಸ್ರಾರ ನಿಷ್ಠ. ಮತ್ತು ಷಡಕ್ಷರ ನಿಷ್ಠವಾಗಿ ಸರ್ವನಿಷ್ಠವು ಆಗಿದೆ. ಸಹಸ್ರಾರದಲ್ಲಿ ತಾನೇ ಕೇವಲವಾಗಿರುತ್ತದೆ. ಆಜ್ಞಾದಿ ಆಧಾರಾಂತಗಳಲ್ಲಿ ಆ ಆ ಅಕ್ಷರಮಂತ್ರಗಳೊಡಗೂಡಿ ಇರುತ್ತದೆ, ನಾದಾತ್ಮಕವಾಗಿರುತ್ತದೆ. ಆ ನಾದಾಗಸದಲ್ಲಿ ಮೂರ್ತಿಗೊಂಡ ಶರಣನೆಂದರೆ ಸದಾಶಿವನು. ಆತನು ಆ ನಾದಾಗಸದ ಚೈತನ್ಯ ಸ್ವರೂಪನು. ಅಂದರೆ ಓಂಕಾರದ ಅಕಾರಾತ್ಮಕ ನಾದವೆ ಸದಾಶಿವ; ಉಕಾರಾತ್ಮಕ ಬಿಂದು ಸ್ವರೂಪವೆ ಈಶ್ವರ; ಮಕಾರಾತ್ಮಕ ಕಲಾಸ್ವರೂಪವೆ ಶುದ್ಧವಿದ್ಯೆ. ತ್ರಿವಿಧ ಸ್ವರೂಪವಾದ ಶೂನ್ಯದಿಂದ ಒಂದು ಆ ಪರಾಶಕ್ತಿ ಉದಯವಾಗುತ್ತದೆ. ಅದರೊಡನೆ ಕ್ರಿಯಾಪ್ರಕಾಶ ಭಾವಪ್ರಕಾಶ ಜ್ಞಾನಪ್ರಕಾಶಗಳಾಗುತ್ತವೆ. ಈ ತ್ರಿವಿಧದಿಂದೊಡಗೂಡಿದುದೆ ವಿಮರ್ಶಾ ಶಕ್ತಿ. ಅದುವೇ ಪರಾಶಕ್ತಿ, ಅಂದರೆ ಪರಾವಾಣಿ. ಅದರ ಬಗೆಗೆ

ಬ್ರಹ್ಮಾಂಡ ಶತಕೋಟೀನಾಂ ಸರ್ಗಸ್ಥಿತಿಲಯಾನ್ ಪ್ರತಿ
ಸ್ಥಾನಭೂತೋ ವಿಮರ್ಶೋ ಯಸ್ತದ್ಭಾಂಡಸ್ಥಲಮುಚ್ಯತೇ ।
ವಿಮರ್ಶಾಖ್ಯಾ ಪರಾಶಕ್ತಿರ್ ವಿಶ್ವೋದ್ಭಾಸನ ಕಾರಿಣೀ

ಸಾಕ್ಷಿಣೀ ಸರ್ವತತ್ತ್ವಾನಾಂ ಸಮಿಂಧೇ ಸರ್ವತೋಮುಖೀ ।
ವಿಶ್ವಂ ಯತ್ರ ಲಯಂ ಯಾತಿ ವಿಭಾತ್ಯಾತ್ಮಾ ಚಿದಾಕೃತಿಃ
ಸದಾನಂದಮಯಃ ಸಾಕ್ಷಾತ್ ಸಾ ವಿಮರ್ಶಾಮಯೀ ಕಲಾ ।
ಪರಾಹಂತಾ ಸಮಾವೇಶ ಪರಿಪೂರ್ಣವಿಮರ್ಶವಾನ್
ಸರ್ವಜ್ಞಃ ಸರ್ವಗಃ ಸಾಕ್ಷೀ ಸರ್ವಕರ್ತಾ ಮಹೇಶ್ವರಃ ।
ವಿಶ್ವಾಧಾರಂ ಮಹಾಸಂವಿತ್ ಪ್ರಕಾಶ ಪರಿಪೂರಿತಂ
ಪರಾಹಂತಾಮಯಂ ಪ್ರಾಹುರ್ ವಿಮರ್ಶಂ ಪರಮಾತ್ಮನಃ ।
ವಿಮರ್ಶ ಭಾಂಡವಿನ್ಯಸ್ತ ವಿಶ್ವತತ್ತ್ವವಿಜೃಂಭಣಃ
ಅನನ್ಯ ಮುಖ ಸಂಪ್ರೇಕ್ಷೀ ಮುಕ್ತಃ ಸ್ವಾತ್ಮನಿ ತಿಷ್ಠತಿ ॥

ಶಿವಯೋಗಿ ಶಿವಾಚಾರ್ಯರು ತಮ್ಮ 'ಸಿದ್ಧಾಂತ ಶಿಖಾಮಣಿ'ಯಲ್ಲಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರಿಂದ ಆತ್ಮೀಯ ಶಿಷ್ಯ ಅಗಸ್ತ್ಯರಿಗೆ ಪ್ರಬೋಧಿಸಿದಂತೆ ಪ್ರತಿಪಾದಿಸಿ ವಿಮರ್ಶಾಕಲೆಯ ಬಗೆಗೆ ಒಂದು ಬೆಡಗಿನ ಭಾವಗೀತವನ್ನೇ ರೂಪಿಸಿದ್ದಾರೆ. ಇಲ್ಲಿ ಸರ್ವತತ್ತ್ವ ಸಾಕ್ಷಿಯಾಗಿ ವಿಶ್ವತತ್ತ್ವಗಳನ್ನು ವಿಜೃಂಭಿಸುತ್ತದೆಯೆಂಬುದನ್ನು ಚೆನ್ನಾಗಿ ಗಮನಿಸಬೇಕು. ಇದರಿಂದ ಸಿದ್ಧಾಂತವಾದ ತತ್‌ಕಾರಣ, ದರ್ಶನವಾದ ತತ್ತ್ವ ಅದರ ಕಾರ್ಯವೆಂಬುದು ಕಂಡುಬರುತ್ತದೆ.

'ಭಾಂಡಸ್ಥಲವೆಂದರೆ ವಿಮರ್ಶಕಲಾ ಅಥವಾ ಶಕ್ತಿ ! ಅದು ನೂರು ಕೋಟಿ ಬ್ರಹ್ಮಾಂಡಗಳ ಸೃಷ್ಟಿಸ್ಥಿತಿಲಯಗಳಿಗೆ ಸ್ಥಾನಭೂತವಾಗಿದೆ.

ವಿಮರ್ಶಾ ಅದೊಂದು ಪರಾಶಕ್ತಿ. ಅದು ಈ ವಿಶ್ವೋದ್ಭಾಸನಕಾರಿಣಿ, ಸರ್ವ ತತ್ತ್ವಸಾಕ್ಷಿಣಿ;- ಸರ್ವತೋಮುಖಿ.

ವಿಶ್ವವಿಲಯಕ್ಕೂ ವಿಶ್ವವಿಭಾಸಕ್ಕೂ ವಿಶ್ವ ಚಿದಾಕೃತಿಗೂ ಕಾರಣವಾಗಿ ಸದಾ ನಂದಮಯಿಯಾಗಿ ಸಾಕ್ಷಾತ್ತಾಗಿ ಇರುವುದೆ ವಿಮರ್ಶಾಮಯೀ ಕಲಾ !

ಪರಾಹಂತತೆಯಿಂದೊಡಗೂಡಿದ ಪರಿಪೂರ್ಣ ವಿಮರ್ಶಾಶಕ್ತಿಯುಳ್ಳವನು ಸರ್ವ ಜ್ಞನೂ ಅಂದರೆ ಸರ್ವದರಲ್ಲಿ ಪ್ರವೇಶವುಳ್ಳವನೂ ಸಾಕ್ಷಿಯೂ ಸರ್ವಕರ್ತನೂ ಆಗಿ ಮಹೇಶ್ವರನೆನಿಸುವನು.

ವಿಶ್ವಾಧಾರವಾಗಿ ಮಹಾಸಂವಿತ್ಪ್ರಕಾಶದಿಂದ ಪರಿಪೂರಿತವಾಗಿ ಪರಾಹಂತಾಮಯ ವಾಗಿ ಇರುವುದೇ ಪರಮಚೇತನ ವಿಮರ್ಶೆ !

'ವಿಜೃಂಭಿಸಿದ ಈ ವಿಶ್ವತತ್ತ್ವಗಳೆಲ್ಲ ವಿಮರ್ಶಾ ಭಾಂಡದಲ್ಲಿ ವಿನ್ಯಾಸಗೊಂಡಿವೆ ಯೆಂದು ಅನನ್ಯವಾಗಿವೆಯೆಂದು ತಿಳಿದವನೇ ಮುಕ್ತನಾಗಿ ಸ್ವಾತ್ಮದಲ್ಲಿರುತ್ತಾನೆ.'

ಆ ಸದಾಶಿವ ಶರಣನಲ್ಲಿ ಈ ಬಗೆಯ ವಿಮರ್ಶಾಕಲಾತ್ಮಶಕ್ತಿಯುದಿಸುವಳು. ಆ ಶಕ್ತಿಯು ಬಿಂದು ಕಲಾತ್ಮಕಳಾಗಿ ಪ್ರಕೃತಿಯೆನಿಸುವಳು. ಆ ಪ್ರಕೃತಿಯಿಂದ ಈ ಲೋಕಕೃತಿಯುಂಟಾಗುವುದು.

"ಸಮಸ್ತ ಜಗದಂಡಾನಾಂ ಸರ್ಗಸ್ಥಿತ್ಯಂತಕಾರಣಂ
ವಿಮರ್ಶೋ ಭಾಸತೇ ಯತ್ರ ತದ್ಭಾಜನಮಿಹೋಚ್ಯತೇ ।
ವಿಮರ್ಶಾಖ್ಯಾ ಪರಾಶಕ್ತಿರ್ ವಿಶ್ವವೈಚಿತ್ರ್ಯಕಾರಿಣೀ
ಯಸ್ಮಿನ್ ಪ್ರತಿಷ್ಠಿತಾ ಬ್ರಹ್ಮ ತದಿದಂ ವಿಶ್ವಭಾಜನಂ ।
ಯಥಾ ಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವವಸ್ತು ಪ್ರಕಾಶಿನೀ
ತಥಾ ಶಕ್ತಿರ್ ವಿಮರ್ಶಾಖ್ಯಾ ಪ್ರಕಾಶೇ ಬ್ರಹ್ಮಣಿ ಸ್ಥಿರಾ ।"

— ಸಿದ್ಧಾಂತ ಶಿಖಾಮಣಿ.

ಶೂನ್ಯವೇ ವಿಶ್ವಭಾಜನ. ತತ್ತ್ವಗಳೇ ವಿಶ್ವಭಾಜನದ ಪದಾರ್ಥಗಳು. ಈ ವಿಶ್ವದ ಎಲ್ಲ ವಿಚಿತ್ರಗಳಿಗೆ ಕಾರಿಣಿಯಾದ ವಿಮರ್ಶಾರೂಪ ಪರಾಶಕ್ತಿಯ ಪ್ರತಿಷ್ಠಿತಕ್ಕೆ ಅಧಿಷ್ಠಿತ ಶೂನ್ಯಬ್ರಹ್ಮ. ಅಂತೆಯೆ ಅದು ವಿಶ್ವಭಾಜನ. ಶೂನ್ಯ–ಶಕ್ತಿಯರು ಚಂದ್ರ ಚಂದ್ರಿಕೆ ಯರಂತೆ ಅಗಲದಂತೆ ಸ್ಥಿರವಾಗಿದ್ದು ಪ್ರಕಾಶಿಸುತ್ತಾರೆ; ವಿಶ್ವವಸ್ತುಗಳನ್ನು ಪ್ರಕಾಶ ಪಡಿಸುತ್ತಾರೆ.

"ಅಕಾರಃ ಶಿವಆಖ್ಯಾತೋ ಹಂ ಶಿವಕಾರಃ ಶಕ್ತಿರುಚ್ಯತೇ
ಶಿವಶಕ್ತಿಮಯಂ ಬ್ರಹ್ಮಸ್ಥಿತಮೇಕಮಹಂ ಪದೇ ।
ಅಹಂತಾಂ ಪರಮಾಂ ಪ್ರಾಪ್ಯ ಶಿವಶಕ್ತಿಮಯೀಂ ಸ್ಥಿರಾಂ
ಬ್ರಹ್ಮಭೂಯಂ ಗತೋ ಯೋಗೀ ವಿಶ್ವಾತ್ಮಾ ಪ್ರತಿಭಾಸತೇ ।"

— ಸಿದ್ಧಾಂತ ಶಿಖಾಮಣಿ.

ಶೂನ್ಯದಿಂದ ಓಂಕಾರ, ಓಂಕಾರದೊಳಗಿನ ಅ–ಹಂ ಗಳಿಂದ ಶಿವ–ಶಕ್ತಿಯರು. ಅಹಂ ಪದಸ್ಥಿತರು ಶಿವಶಕ್ತಿಯರು. ಅಕಾರವೆ ಶಿವ, ಹಂ–ಕಾರವೆ ಶಕ್ತಿ. ಆ ಅಹಂ ಅಪರವಲ್ಲ; ಅದು ಪರಾಹಂತಾ ! ಅದು ಪೂರ್ಣಾಹಂತಾ ! ಅದು ಶಿವಶಕ್ತಿಮಯೀ ಮತ್ತು ಸ್ಥಿರಾ ! ಅದನ್ನು ಪಡೆದವನೇ ಯೋಗಿ; ಅವನು ವಿಶ್ವಾತ್ಮನಾಗಿ ವಿಶಿಷ್ಟನಾಗಿ ಎಲ್ಲೆಲ್ಲಿಯೂ ಬೆಳಗುತ್ತಾನೆ.

ಇಲ್ಲಿ ಬಳಸಿದ ಯೋಗಿ ಪದ ವೀರಶೈವ ಶಿವಯೋಗಿಯನ್ನು ಬೋಧಿಸುತ್ತದೆ. ಶಿವಲಿಂಗದ ಯೋಗವುಳ್ಳವನು ಇವನು.

ಒಟ್ಟಿನಲ್ಲಿ ಇವರಿಂದ ಸಿದ್ಧಾಂತವಾಗುವುದೇನೆಂದರೆ, ಶಕ್ತಿವಿಶಿಷ್ಟ ಶಿವನೇ ವೀರಶೈವ ಯೋಗಿಗೆ ಉಪಾಶ್ಯವಸ್ತು. ಉತ್ಸುಕತೆಯಿಂದ ಉಪಾಸಿಸಿದವನು ವಿಶ್ವಾತ್ಮನಾಗಿ ಪ್ರತಿಭಾಸಿಸುತ್ತಾನೆ.

ಇದು ವೀರಶೈವ ತತ್ತ್ವಮಯ ಸಿದ್ಧಾಂತ. ಇದನ್ನೇ ನೇರವಾಗಿ ಈ ವಚನ ಗೀತದಲ್ಲಿ ಅಲ್ಲಮಾಪ್ರಭು ಹೀಗೆ ಹಾಡಿದ್ದಾನೆ:

"ಸಹಜದಿಂದ ನಿರಾಲಂಬವಾಯಿತ್ತು. (ಸರ್ವಶೂನ್ಯ)
ನಿರಾಲಂಬದಿಂದ ನಿರಾಳವಾಯಿತ್ತು. (ನಿಶೂನ್ಯ)
ನಿರಾಳದಿಂದ ನಿರವಯವಾಯಿತ್ತು. (ಶೂನ್ಯ)
ನಿರವಯದಿಂದ ಅನಾದಿಯಾಯಿತ್ತು. (ಆತ್ಮ)
ಅನಾದಿಯಲ್ಲಿ ಮೂರ್ತಿಯಾದನೊಬ್ಬ ಶರಣ. (ಅಂಗ)
ಆ ಶರಣನ ಮೂರ್ತಿಯಿಂದ ಸದಾಶಿವನಾದ. (ಲಿಂಗ)
ಆ ಸದಾಶಿವನ ಮೂರ್ತಿಯಿಂದ ಶಿವನಾದ. (ಚಿಲ್ಲಿಂಗ)
ಆ ಶಿವನ ಮೂರ್ತಿಯಿಂದ ರುದ್ರನಾದ. (ಲಯಚೇತನ)
ಆ ರುದ್ರನ ಮೂರ್ತಿಯಿಂದ ವಿಷ್ಣುವಾದ. (ಸ್ಥಿತಿಚೇತನ)
ಆ ವಿಷ್ಣುವಿನ ಮೂರ್ತಿಯಿಂದ ಬ್ರಹ್ಮನಾದ. (ಸೃಷ್ಟಿಚೇತನ)
ಆ ಬ್ರಹ್ಮನ ಮೂರ್ತಿಯಿಂದಲಾದವು ಸಕಲಜಗತ್ತುಗಳೆಲ್ಲಾ !
ಇವರೆಲ್ಲಾ ನಮ್ಮ ಗುಹೇಶ್ವರನ ಕರಸ್ಥಲದ ಹಂಗಿನಲ್ಲಿ ಹುಟ್ಟಿ ಬೆಳೆದರು."

ಇವರೆಲ್ಲರೂ ಇಚ್ಛಾ ಜ್ಞಾನ ಕ್ರಿಯಾಶಕ್ತಿಸಂಭೂತರಾದ ಕಾರಣ ಕರಸ್ಥಲದ ಹಂಗಿಗರು. ಕ್ರಿಯಾಪ್ರಧಾನವಾದುದು ಕರಸ್ಥಲ. ಇದರಲ್ಲಿ ಜ್ಞಾನೇಚ್ಛೆಗಳೂ ಇವೆ. ಈ ಮೂರು ಶಕ್ತಿಗಳಿಗೂ ವೀರಶೈವ ಸಿದ್ಧಾಂತದಲ್ಲಿ ಪೌರ್ವಾಪರ್ಯವಿಲ್ಲ; ತರತಮವೂ ಇಲ್ಲ. ಇವು ಆಗಂತುಕಗಳೂ ಅಲ್ಲ. ಆ ಪರಬ್ರಹ್ಮನಿಗೆ ಭಿನ್ನಗಳೂ ಅಲ್ಲ. ಇವು ನಿತ್ಯವಾಗಿ ಏಕರೂಪದಲ್ಲಿರುತ್ತವೆ. ಇವಕ್ಕೆ ಚ್ಯುತಿಯಿಲ್ಲ. ಈ ಎಲ್ಲ ಲಕ್ಷಣಗಳು ತ್ರಿವಿಧ ಲಿಂಗಗಳಿಗೂ ಸಮನ್ವಯವಾಗುತ್ತವೆ. ಎಲ್ಲ ಲಿಂಗ ಎಲ್ಲ ಶಕ್ತಿ ಎಲ್ಲ ಮುಖ ಎಲ್ಲ ಪ್ರಸಾದಗಳನ್ನೊಳಗೊಂಡ ಕರಸ್ಥಲದ ಹಿರಿಮೆ ಹೆಚ್ಚಳದ್ದು. ಸರ್ವಕ್ಕಾಧಾರ ಕರಸ್ಥಲ. ಪರಸ್ಥಲಕ್ಕೂ ಕರಸ್ಥಲಕ್ಕೂ ಭಿನ್ನವಿಲ್ಲ. "ಪರತರ ಶಿವಲಿಂಗವೆಳಸಿ ನಿನಗಾಗಿ ಕರಕಂಜದೊಳು ಕಾಣಿಸಿತು ಯೋಗಿ ಯಜಿಸೋ" ಎಂದು ಕರಸ್ಥಲದ ಬಗೆಗೆ ನಿಜಚರಿತ ನಿಜಗುಣರು ನಿರೂಪಿಸಿದ್ದಾರೆ.

ಕರಸ್ಥಲ ದ್ರಷ್ಟವ್ಯ ಪರಶಿವಸ್ಥಲ. ಎಲ್ಲವೂ ಅದರಲ್ಲಿದೆ. ಕರಸ್ಥಲಿಯು ಪರ ಶಿವ ಸ್ವರೂಪವಾದ ಸ್ವಯಸ್ವರೂಪವನ್ನೆ ಸಂದರ್ಶಿಸುತ್ತಾನೆ. "ಶಿವತತ್ತ್ವಂ ಸ್ವರೂಪೇಣ ಪಶ್ಯನ್ ಯೋಗೀ ಪ್ರಮೋದತೇ" ಎಂದು ಸಿದ್ಧಾಂತ ಶಿಖಾಮಣಿ ಸಿದ್ಧಾಂತ ಮಾಡಿದೆ. ಶಿವಾತ್ಮಾನುಸಂಧಾನ ಕ್ರಿಯೆ ಅತ್ಯಂತ ಸೂಕ್ಷ್ಮವಾದುದು. ಆ ಅತ್ಯಂತ ಸೂಕ್ಷ್ಮ ಕ್ರಿಯಾಚೈತನ್ಯವೆ ಕರಸ್ಥಲ.

"ನಿಷ್ಕಲಂಕ ಚಿದಾನಂದ ಗಗನೋಪಮರೂಪಿಣಃ
ಶಿವಸ್ಯ ಪರಿಪೂರ್ಣಸ್ಯ ವೃತ್ತಿಶ್ಚೈತನ್ಯರೂಪಿಣೀ ।
ನಿಷ್ಕಲಂಕೇ ನಿರಾಕಾರೇ ನಿತ್ಯೇ ಪರಮತೇಜಸಿ
ವಿಲೀನ ಚಿತ್ತವೃತ್ತಸ್ಯ ತಥಾ ಶಕ್ತಿಃ ಕ್ರಿಯೋಚ್ಯತೇ ।"

— ಸಿದ್ಧಾಥ ಶಿಖಾಮಣಿ.

ಶಿವಾತ್ಮರೂಪ ಕ್ರಿಯಾವೃತ್ತಿಶಕ್ತಿಗೂ ಇದಕ್ಕೆ ಆಶ್ರಯವಾದ ಸಚ್ಚಿದಾನಂದ ನಿತ್ಯಪೂರ್ಣ ವಾದ ಸ್ವಯಂಜ್ಯೋತಿಯಾದ ಚೈತನ್ಯ ಲಿಂಗಕ್ಕೂ ಭೇದವಿಲ್ಲ. ಆದ್ದರಿಂದ ಕ್ರಿಯಾ ಲೋಪವೆಲ್ಲಿಯೂ ಆಗಬಾರದು. ಆ ಸಚ್ಚಿದಾನಂದ ಕ್ರಿಯಾವೃತ್ತಿ ಚೈತನ್ಯ ಸ್ವರೂಪಿಣಿ· ಚೈತನ್ಯಪ್ರಕಾಶ ಸ್ವರೂಪಿಣಿ. ವೀರಶೈವ ಸಿದ್ಧಾಂತದಲ್ಲಿ ಕ್ರಿಯಾಶಕ್ತಿಗಿರುವ ಭಾವೌನ್ನತ್ಯ ವನ್ನಿಲ್ಲಿ ಕಾಣಬೇಕು. ಇದಕ್ಕಾಶ್ರಯಸ್ಥಾನವಾದ ಲಿಂಗಚೇತನ ಲಕ್ಷಣವನ್ನು ಲಕ್ಷಿಸಬೇಕು :

"ಅನಿರ್ದೇಶ್ಯಮನೌಪಮ್ಯಮವಾಙ್ಮಾನಸಗೋಚರಂ
ಸರ್ವತೋಮುಖಸಂಪನ್ನಂ ಸತ್ತಾನಂದಚಿದಾತ್ಮಕಂ ।
ಕಾಲಾತೀತಂ ಕಲಾತೀತಂ ಕ್ರಮಯೋಗಾದಿ ವರ್ಜಿತಂ
ಸ್ವಾನುಭೂತಿ ಪ್ರಮಾಣಸ್ಥಂ ಜ್ಯೋತಿಷಾಮುದಯಸ್ಥಲಂ ।
ಶಿವಾಖ್ಯಂ ಪರಮಂ ಬ್ರಹ್ಮ ಪರಮಾಕಾಶ ಲಕ್ಷಣಂ
ಲಿಂಗಮಿತ್ಯುಚ್ಯತೇ ಸದ್ಭಿರ್ ಯದ್ವಿನಾ ನ ಜಗತ್‌ಸ್ಥಿತಿಃ ।
ಪರಮಾಕಾಶಮವ್ಯಕ್ತಂ ಪ್ರಬೋಧಾನಂದ ಲಕ್ಷಣಂ
ಲಿಂಗಂ ಜ್ಯೋತಿರ್ಮಯಂ ಪ್ರಾಹುರ್ ಲೀಯಂತೇ ಯತ್ರಯೋಗಿನಃ ।
ಸಂದಿದೇವ ಪರಾಕಾಷ್ಠಾ ಪರಮಾನಂದರೂಪಿಣೀ
ತಾಮಾಹುಃ ಪರಮಾಕಾಶಂ ಮುನಯೋ ಮುಕ್ತಸಂಶಯಾಃ ।
ತರಂಗಾದಿರ್ ಯಥಾ ಸಿಂಧೋಃ ಸ್ವರೂಪಾನ್ನಾತಿರಿಚ್ಯತೇ
ತಥಾ ಶಿವಾತ್ ಪರಾಕಾಶಾತ್ ವಿಶ್ವಮೇತನ್ನಭಿದ್ಯತೇ ॥"

ಇದು ಕರಸ್ಥಲದ ಕುರುಹು. ಕುರುಹು ಹಿಡಿದು ಕುರುಹುಗೆಡುವ ಸಿದ್ಧಾಂತವಿದು.

"ಅರಿಯಬಹುದು, ಕುರುಹಿಡಬಾರದು,
ಭಾವಿಸಬಹುದು, ಬೆರಸಬಾರದು,
ಅಖಂಡ ನಿರಾಳವ ಕಪಿಲ ಸಿದ್ಧಮಲ್ಲಿಕಾರ್ಜುನ,
ನಿಮ್ಮ ಶರಣರು ಬಲ್ಲರು."

ಇಂತಹದು ಗುರುಕೃಪೆಯಿಂದ ಕೈಗೆ ಸಿಕ್ಕಿದೆ; ಕುರುಹಿಟ್ಟು ಬಂದಿದೆ. ಭಾವಿಸಿ ಬೆರಿಸುವ ಭಾಗ್ಯ ಮಾತ್ರ ಬೇಕು.

"ಇಷ್ಟ ಪ್ರಾಣಮಯಂ ಲಿಂಗಂ ಸಂಯೋಗಂ ಜ್ಞಾನಚಕ್ಷುಷಾಂ
ನಿರ್ದ್ವಂದ್ವಸ್ಸಮಾಧಿನಾ ಲಿಂಗಂ ಧೃತ್ವಾ ವಕ್ಷಸಾ ಚರತಿ
ಸ ಜೀವನ್ಮುಕ್ತಸ್ಯ ಬ್ರಾಹ್ಮಣಃ ಸೋಽಪಿ ವೀರಶೈವಃ ।"

—ವೀರಲೈಂಗ್ಯೋಪನಿಷತ್.

"ವಂಶಾವಳೀ ಪ್ರಯಾತಾನಾಂ ಲಿಂಗಧಾರಣಶಾಲಿನಾಂ
ಜ್ಞಾನಿನಾಂ ಶಿವಭಕ್ತಾನಾಂ ಶೂದ್ರತ್ವಂ ನೈವ ವಿದ್ಯತೇ ।"

—ಗಾರುಡ ಪುರಾಣ.

ಲಿಂಗವನ್ನು ತನು ಮನ ಭಾವಗಳಲ್ಲಿ ಧಾರಣ ಮಾಡಿ, ಅದರಲ್ಲಿ ಹಾರ್ದಿಕ ಭಕ್ತಿ ಭಾವದಿಂದ ನಡೆದುಕೊಳ್ಳುವವನೆ ನಿಜವಾದ ವೀರಶೈವನು, ಅವನೇ ನಿಜವಾದ ಬ್ರಾಹ್ಮಣನು; ಅಂದರೆ ಪರಶಿವಬ್ರಹ್ಮದಲ್ಲಿ ಚರಿಸುವವನು; ಅವನೇ ಜೀವನ್ಮುಕ್ತನು. ವಿರಶೈವರಲ್ಲಿ ಶೂದ್ರತ್ವಕ್ಕಿಂಬಿಲ್ಲ.

ವೀರಶೈವರು ಬ್ರಹಾಂಡವನ್ನೆಲ್ಲ ಪಿಂಡಾಂಡದಲ್ಲಿ. ಪಿಂಡಾಂಡವನ್ನೆಲ್ಲ ನೇತಾೃಂಡದಲ್ಲಿ ಕೇಂದ್ರಿಕೇರಿಸಿ ಏಕೋಽಷ್ಠಿ ವಾಗಿ ನೇತ್ರ ಮಹಿಮೆಯನ್ನು ಹೆಚ್ಚಿಸಿದ್ದಾರೆ.

„ಈಕ್ಷಣೇ ಧಾರ್ಯತೇ ಚೇಷ್ಟಂ, ಧಾರ್ಯತೇ ಮನಸಿ ಪ್ರಾಣಂ,
ಸ್ಪರ್ಶನೇ ಧ್ರೀಯತೇ ಭಾವಂ ತ್ರಿಲಿಂಗಧಾರಮೇವ ಚ ॥"
ಇದು ಪಿಂಡಾಂಡ ಲಿಂಗಧಾರಣವಾದರೆ,
„ ರವಿ (ನೀಲ) ಮಧ್ಯೇ ಸದೈವೇಷ್ಟಂ, ಚಂದ್ರ (ಶುಭ್ರ) ಮಧ್ಯೇತು ಪ್ರಾಣಕಂ,
ಅಗ್ನಿ (ಕೃಷ್ಣ) ಮಧ್ಯೇ ತಥಾ ಭವಂ ಶಂಭುಸಂಬಂಧಶಾಂಭವಂ ॥"

ಇದು ನೇತ್ರಾಂಡ ತ್ರಿಲಿಂಗಧಾರಣ. ಇನ್ನು ಪೃಥ್ವಿ ಅಪ್ಪುಗಳಲ್ಲಿ ಕ್ರಿಯಾಲಿಂಗವನ್ನು ತೇಜ ವಾಯುಗಳಲ್ಲಿ ಪ್ರಾಣಲಿಂಗವನ್ನು ಆಕಾಶಾತ್ಮಗಳಲ್ಲಿ ಭಾವಲಿಂಗವನ್ನು ಧಾರಣಭಾವದ ಔಚಿತ್ಯ ವೀರಶೈವಮತದ್ದು. ಕ್ರಿಯಾಪ್ರಧಾನವಾದ ಪೃಥ್ವಿ ಅಪ್ಪು

ತತ್ತ್ವಗಳೆರಡು ಇಷ್ಟಲಿಂಗದಲ್ಲಿ, ಜ್ಞಾನತೇಜತ್ವ ಚರತ್ವ ಸಂಕೇತವುಳ್ಳ ತೇಜ–ವಾಯು ಗಳೆರಡು ಪ್ರಾಣ(ಜ್ಞಾನ)ಲಿಂಗದಲ್ಲಿ, ಅವಕಾಶವೈಶಾಲ್ಯ, ತೃಪ್ತಿಚೇತನತ್ವಗಳಿಗೆ ಪರಿವಿಡಿದು ಪ್ರತೀಕಗಳಾದ ಆಕಾಶ–ಆತ್ಮ ತತ್ತ್ವಗಳೆರಡು ಭಾವಲಿಂಗದಲ್ಲಿ ಸಮಾವೇಶ ಗೊಳ್ಳುತ್ತವೆ. ಅಂತೆಯೇ ನೇತ್ರ (ನೀಲ) ರವಿಗಳಿಲ್ಲದೆ ಕಾಯದ ಕ್ರಿಯಾಭಾಗ ಸಾಗದು. ನೇತ್ರದ ಬಿಳುಪಿಲ್ಲದೆ ಅಂದರೆ ಚಂದ್ರಕಾಂತಿಯಿಲ್ಲದೆ ಪ್ರಾಣಮನಗಳು ಧಾರಣವಾಗವು. ನೇತ್ರದ ಅಗ್ನಿ (ಕಪ್ಪು) ಇಲ್ಲದೆ ಭಾವಭ್ರಾಂತಿ ಬಿಡದು, ಆನಂದೈಕ್ಯ ಅಳವಡದು. ಹೀಗೆ ವೀರಶೈವ ಸಿದ್ಧಾಂತ ಸಮಷ್ಟಿ ವ್ಯಷ್ಟಿ ತತ್ವಗಳ ಸಮನ್ವಯ ಸ್ವರೂಪವಾಗಿದೆ.

ಶಿವಶಕ್ತಿ ವಿಕಾಸ ವಿಶ್ವ :

"ಆತ್ಮಶಕ್ತಿ ವಿಕಾಸೇನ ಶಿವೋ ವಿಶ್ವಾತ್ಮನಾ ಸ್ಥಿತಃ
ಕುಟೀಭಾವಾದ್ಯಥಾ ಭಾತಿ ಪಟಃ ಸ್ವಸ್ಯ ಪ್ರಸರಣಾತ್ ।
ಪತ್ರಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ
ತಥಾ ಭೂಮ್ಯಾದಿರೂಪೇಣ ಶಿವ ಏಕೋ ವಿರಾಜತೇ ॥"

— ಸಿದ್ಧಾಂತ ಶಿಖಾಮಣಿ

ಇದು ವೀರಶೈವ ಮತಸಿದ್ಧಾಂತ. ಈ ದೃಷ್ಟಿಯಿಂದಲೇ ಇದರ ಧರ್ಮಪ್ರಣಾಳಿಕೆ ರೂಪಿತವಾಗಿವೆ. ಬುದ್ಧಿ ಭಾವನೆಗಳು ವಿಚಾರ ಆಚಾರಗಳು ಇದೇ ವೇದಿಕೆಯ ಮೇಲೆ ಪ್ರತಿಷ್ಠಿತವಾಗಿವೆ. ಇದೇ ಪಥದಲ್ಲಿ ಮುನ್ನಡೆದಿವೆ.

ಪಿಂಡಾಂಡವು ಹೇಗೆ ಶಿವಸೃಷ್ಟಿಯೋ ಬ್ರಹ್ಮಾಂಡವೂ ಹಾಗೆ ಆ ಪರಶಿವಸೃಷ್ಟಿ ಶಕ್ತಿವಿಶಿಷ್ಟ ಶಿವನಿಂದ ಹುಟ್ಟುತ್ತದೆ; ಮರಳಿ ಶಿವನಲ್ಲಿ ಅಡಗುತ್ತದೆ. ಶಿವನಿಗೂ ವಿಶ್ವಕ್ಕೂ ಭೇದವೇನೆಂದರೆ ಶಿವ ಸುತ್ತಿದ ಚಾಪೆ, ಸೃಷ್ಟಿ ಬಿಚ್ಚಿ ಹರಹಿದ ಚಾಪೆ; ಬೀಜ ಶಿವ, ಭೂಜ ವಿಶ್ವ. ಶಿವನಿಗೂ ವಿಶ್ವಕ್ಕೂ ಭೇದವಿಲ್ಲ; ಭೇದವಿಲ್ಲದಿಲ್ಲ. ಇದರಿಂದಾಗಿ ಪ್ರಪಂಚಕ್ಕೂ ಪರಮಾತ್ಮನಿಗೂ ವೀರಶೈವ ಸಿದ್ಧಾಂತದಲ್ಲಿ ಭೇದಾಭೇದಗಳೆರಡನ್ನು ಹೇಳಲಾಗುತ್ತದೆ. ಕಾರ್ಯರೂಪವೇ ವಿಶ್ವ; ಕಾರಣರೂಪವೇ ಶೂನ್ಯಶಿವಲಿಂಗ.

ತನ್ನ ವಿನೋದಕ್ಕೆ ತನ್ನ ಶಕ್ತಿಯ ಸಂತೋಷಕ್ಕೆ ವಿಶ್ವವನ್ನು ಹುಟ್ಟಿಸಿದನೆಂದು ಶಿವಶರಣರು ಹೇಳುತ್ತಾರೆ.

"ಸಕಲ, ನಿಷ್ಕಲವ ಕೂಡಿಕೊಂಡಿಪ್ಪೆಯಾಗಿ,
ಸಕಲ ನೀನೇ, ನಿಷ್ಕಲ ನೀನೇ ಕಂಡಯ್ಯ,
ವಿಶ್ವತೋ ಚಕ್ಷು ನೀನೇ ದೇವಾ,
ವಿಶ್ವತೋ ಮುಖ ನೀನೇ ದೇವಾ, ಕೂಡಲಸಂಗಮದೇವಾ;"

ಸಕಲ ನಿಷ್ಕಲದಲ್ಲಿ, ನಿಷ್ಕಲ ಸಕಲದಲ್ಲಿ ಬೆರೆದೇಕವಾಗಿವೆ. ಸಕಲ (ಸಾಕಾರ ಜಗತ್ತು)ವೂ ನಿಕ್ಷಲ (ನಿರಾಕಾರವಸ್ತುವೂ) ನೀನೆ ಆಗಿರುವೆ. ವಿಶ್ವದ ಕಣ್ಣುಗಳೆಲ್ಲ ನಿನ್ನವೆ ! ಸಕಲ ಪ್ರಾಣಿಗಳ ಕಣ್ಣುಗಳು, ಆಕಾಶದ ಚುಕ್ಕೆಗಳು ಬೇರೆ ಯಾರವು ? ಇವೆಲ್ಲ ನಿನ್ನವಲ್ಲ, ನೀನೆ ! ಅಂತೆಯೇ ಈ ವಿಶ್ವ ಮುಖಗಳೆಲ್ಲ ನೀನೆ ! ಈ ವಿಶ್ವ ಜೀವಿಗಳ ಮುಖಾಂತರ ಆಡುವವನು ಹಾಡುವವನು ಊಟ ಮಾಡುವವನು ನೀನೆ ! ವಿಶ್ವತೋ ಬಾಹು ನೀನೇ ! ವಿಶ್ವ ಜೀವಿಗಳ ಕೈಗಳೆಲ್ಲ ನೀನೆ ! ವಿಶ್ವತೋ ಪಾದ ನೀನೇ !–ವಿಶ್ವದಲ್ಲಿ ಓಡಾಡುವ ಕಾಲುಗಳೆಲ್ಲ ನೀನೆ ! ನಿನ್ನ ಹೊರತು ಏನೂ ಕಾಣುವುದಿಲ್ಲ. ‘ಎತ್ತೆತ್ತ ನೋಡಿದತ್ತತ್ತ ನೀನೇ ದೇವಾ ! ಸಕಲ ವಿಸ್ತಾರದ ರೂಹು ನೀನೇ ದೇವಾ ! ……ಕೂಡಲಸಂಗಮದೇವಾ ! ಇದು ಬಸವಣ್ಣನ ವಿಶ್ವದೃಷ್ಟಿ; ವಿಕಾಸ ದೃಷ್ಟಿ.

“ವನವೆಲ್ಲ ನೀವೆ, ವನದೊಳಗಣ ದೇವತರುವೆಲ್ಲ ನೀವೆ;
ತರುವಿನೊಳಗಾಡುವ ಮೃಗವೆಲ್ಲ ನೀವೆ;
ಚನ್ನಮಲ್ಲಿಕಾರ್ಜುನ, ಸರ್ವಭರಿತನಾಗಿ, ಎನಗೆ ಮುಖದೋರಾ!”

ಇದು ಅಕ್ಕಗಳ ವಿಶ್ವ ಚೈತನ್ಯದೃಷ್ಟಿ. ಅವಳು ವನವನ್ನೂ ವನದ ತರುಗಳನ್ನೂ ತರುವಿನೊಳಗಿನ ಹಕ್ಕಿ ಪಕ್ಕಿಗಳನ್ನೂ ಕೋತಿಗಳನ್ನೂ ಚನ್ನಮಲ್ಲಯ್ಯನನ್ನಾಗಿಯೆ ಕಂಡಳು

“ಇಳೆ ನಿಮ್ಮದಾನ, ಬೆಳೆ ನಿಮ್ಮದಾನ, ಸುಳಿದು ಸೂಸುವ ಗಾಳಿ
ನಿಮ್ಮ ದಾನ.
ಎತ್ತು ನಿಮ್ಮ ದಾನ, ಬಿತ್ತು ನಿಮ್ಮ ದಾನ, ಸುತ್ತಿ ಹರಿವ ಸಾಗರವೆಲ್ಲ
ನಿಮ್ಮ ದಾನ.
ಕಾಯು ನಿಮ್ಮ ದಾನ, ಜೀವ ನಿಮ್ಮ ದಾನ,……ರಾಮನಾಥಾ !”

ಇದು ದೇವರ ದಾಸಮಯ್ಯಗಳ ಭಾಷೆ ! ಇವೆಲ್ಲವೂ ಆತನ ಕೊಡುಗೆ ! ಆತನ ಸಿರಿಸೊಮ್ಮು.

“ಎಲ್ಲೆಲ್ಲಿ ನೋಡಿದಡಲ್ಲಲ್ಲಿ ನೀನೇ ದೇವಾ !
ಪಿಂಡಾಂಡಂಗಳೊಳಗೆಲ್ಲ ನೀನೇ ದೇವಾ !
ಮಹದಾಕಾಶರೂಪ, ನಿರುಪಾಧಿಕ ಪರಂಜ್ಯೋತಿ ನೀನೇ ದೇವಾ !
ಉಪಮಾತೀತ ವಾಙ್ಮನಕ್ಕಗೋಚರ ನೀನೇ ದೇವಾ,
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

ವಿಶ್ವದ ಅಣು ಅಣುವೂ ತೃಣ ತೃಣವೂ ಆತನೇ ಆಗಿ ತೋರಿದ್ದಾನೆ. ಬ್ರಹ್ಮಾಂಡದಲ್ಲಿ ಮಾತ್ರವಲ್ಲ ಪಿಂಡಾಂಡಗಳಲ್ಲಿಯೂ ಆತನೆ ಎಲ್ಲವೂ ಆಗಿದ್ದಾನೆ. ಸೋಪಾಧಿಕ ನಿರುಪಾಧಿಕ ಜ್ಯೋತಿಗಳೆಲ್ಲ ಆತನೆ ಆಗಿದ್ದಾನೆ. ಕೊನೆಯದಾಗಿ ಕೇಳಿ :

"ಸ್ವರ್ಗಲೋಕ ತಾನಿರ್ದಲ್ಲಿ, ಜ್ಯೋತಿರ್ಮಯ ಲೋಕ ತಾನಿರ್ದಲ್ಲಿ;
ಸಚರಾಚರಂಗಳೆಲ್ಲ ತಾನಿರ್ದಲ್ಲಿ, ತನ್ನಿಂದಧಿಕವಪ್ಪ ದೈವ ಒಂದಿಲ್ಲವಾಗಿ,
ಇವೆಲ್ಲ ತನ್ನಾಧೀನವಲ್ಲದೆ ಅವರಾಧೀನ ತಾನಲ್ಲ ನೋಡಾ
ಅಪ್ರಮಾಣ ಕೂಡಲ ಸಂಗಮದೇವಾ !

ಸಪ್ತಕೋಟಿ ಮಹಾಮಂತ್ರಂಗಳು ತಾನಿರ್ದಲ್ಲಿ,
ತೊಂಬತ್ತು ನಾಲ್ಕು ವ್ಯೋಮವ್ಯಾಪಾ ದಪಂಗಳು ತಾನಿರ್ಧಲ್ಲಿ
ಅಕಾರಾದಿ ಕ್ಷಕಾರಾಂತ್ಯವಾದ ಐವತ್ತೆರಡಕ್ಷರಗಳು ತಾನಿರ್ದಲ್ಲಿ;
ಮೂವತ್ತಾರು ತತ್ತ್ವಂಗಳು ತಾನಿರ್ದಲ್ಲಿ,
ಷಟ್ಕಲೆ, ದ್ವಾದಶ ಕಲೆ, ಷೋಡಶಕಲೆಗಳು ತಾನಿರ್ದಲ್ಲಿ;

ಅರುವತ್ತುನಾಲ್ಕು ಕಲೆಗಳು ಜ್ಞಾನಂಗಳು ತಾನಿರ್ದಲ್ಲಿ;
ಇವೆಲ್ಲವೂ ತನ್ನಲ್ಲಿ ಉತ್ಪತ್ತಿ ಸ್ಥಿತಿ ಲಯವಾದ ಕಾರಣ,
ತನ್ನಿಂದಧಿಕವಪ್ಪ ಘನ ಒಂದಿಲ್ಲವಾಗಿ, ತಾನೇ ಪರಬ್ರಹ್ಮನೋಡಾ,
ಅಪ್ರಮಾಣ ಕೂಡಲಸಂಗಮದೇವಾ !

ಶಕ್ತಿ ವಿಶಿಷ್ಟ ಶಿವನು ಜಡ–ಅಜಡವಾಗಿ ವಿಕಾಸವಾಗಿದ್ದಾನೆ; ಆಕಾರ–ನಿರಾಕಾರವಾಗಿ ವಿಕಾಸವಾಗಿದ್ದಾನೆ. ಆಕಾಶ–ಪ್ರಕಾಶವಾಗಿ ವಿಕಾಸವಾಗಿದ್ದಾನೆ. ಪದ–ಪದಾರ್ಥಗಳಾಗಿ ಅಕ್ಷರ ಅರ್ಥ ಭಾವ ರಸಗಳಾಗಿ ವಿಕಾಸವಾಗಿದ್ದಾನೆ. ಲೋಕಾದಿ ಲೋಕಗಳೆಲ್ಲ ಆಗಿ ವಿಕಾಸವಾಗಿದ್ದಾನೆ. ಬ್ರಹ್ಮಾಂಡದ ಪ್ರತಿಯೊಂದು ವಸ್ತುವೂ ಆತನ ನಿಲವು. ಇಂತಾಗಲು ಕಾರಣ ಆತನ ಒಲವು. ಆತನು ಹೊರಗೆ ನಾನಾ ರೂಪನಾಗಿದ್ದರೂ ಒಳಗೆ ಚೈತನ್ಯವಾಗಿ ಏಕರೂಪನಾಗಿದ್ದಾನೆ. ಆತ್ಮತತ್ತ್ವನಾದ ಶಿವ ಚೈತನ್ಯಕ್ಕೆ ನಾಮರೂಪಗಳಿಲ್ಲ. ಜಾತಿಭೇದವಿಲ್ಲ. ಲೈಂಗಿಕ ಭೇದವಿಲ್ಲ. ಬೇರೆ ಯಾವ ಭೇದವಿಲ್ಲ. ಮಣಿಗಳೊಳಗಿನ ಸೂತ್ರದಂತೆ ಒಬ್ಬನಿದ್ದಾನೆ. ನೂರು ತೂತುಳ್ಳ ಕೊಡದಲ್ಲಿಟ್ಟ ಸೊಡರು ನೂರಾಗಿ ಕಾಣುವಂತೆ ನಾನಾ ಪ್ರಕಾರವಾಗಿ ತೋರುತ್ತಿದ್ದಾನೆ.

"ಹಲವು ತೃಣಕಾಷ್ಠಂಗಳಲ್ಲಿ ಅಗ್ನಿ ಬೆರೆದಿರ್ದಂತೆ,
ಹಲವು ಘಟ ಜಲದಲ್ಲಿ ಸೂರ್ಯ ಬಿಂಬಿಸುತಿರ್ದಂತೆ
ಇದ್ದನಯ್ಯಾ ಶಿವನು,

ಸಕಲ ಜೀವರ ಹೃದಯದಲ್ಲಿ ಬೆರಸಿಯೂ ಬೆರಸದಂತಿರ್ಪನಯ್ಯಾ,
ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು".

ಒಂದೇ ವಸ್ತು ಹಲವಾಗಿ ತೋರುವ ಪರಿ ಇದರಲ್ಲಿ ನಿರೂಪಿತವಾಗಿದೆ. ಚಿತ್ ಶಕ್ತಿಮಯವಾದ ಆ ಪರಬ್ರಹ್ಮವೇ ಬ್ರಹ್ಮಾಂಡವಾಗಿದೆ. ಇದೆಲ್ಲವೂ ಆತನ ಆ ಶಕ್ತಿಯ ವಿಕಾಸ, ವಿಲಾಸ.

ಹೀಗೆ ಕಾರ್ಯರೂಪದಲ್ಲಿ ನಾನಾಬಗೆಯಾಗಿ ಕಂಡರೂ ಕಾರಣ ವಸ್ತುವಿನಲ್ಲಿ ಅಡಗಿದಾಗ ಯಾವ ರೂಪಭೇದಗಳಿರವು, ನಾಮಭೇದಗಳಿರವು.

"ಚಿದಾತ್ಮನಿ ಶಿವೇ ನ್ಯಸ್ತಂ ಜಗದೇತಚ್ಚರಾಚರಂ
ದೃಶ್ಯತೇ ತನ್ಮಯಂ ಸರ್ವಮಗ್ನೌ ಕಾಷ್ಠಾದಿಕಂ ಯಥಾ ।
ನ ಭಾತಿ ಪೃಥ್ವೀ ನ ಜಲಂ ನ ತೇಜೋ ನೈವ ಮಾರುತಃ
ನಾಕಾಶೋ ನಾಽಪರಂ ತತ್ತ್ವಂ ಶಿವೇದೃಷ್ಟೇ ಚಿದಾತ್ಮನಿ ।
ಜ್ಯೋತಿರ್ಲಿಂಗೇ ಚಿದಾಕಾರೇ ಜ್ವಲತ್ಯಂತರ್ ನಿರಂತರಂ
ವಿಲೀನಂ ನಿಖಿಲಂ ತತ್ತ್ವಂ, ಪಶ್ಯನ್ ಯೋಗೀ ನ ಲಿಪ್ಯತೇ ॥"

— ಸಿದ್ಧಾಂತ ಶಿಖಾಮಣಿ

ಬೆಂಕಿಯಲ್ಲಿ ಬೆಂದ ಕಟ್ಟಿಗೆಗಳೆಲ್ಲಾ ಒಂದೆ ಕೆಂಡವಾಗಿರುವಂತೆ, ಕಡಲ ಸೇರಿದ ತೊರೆಗಳೆಲ್ಲಾ ತಂತಮ್ಮ ಹೆಸರು ರೂಪುಗಳನ್ನು ಬಿಟ್ಟು ಕಡಲೇ ಆಗಿರುವಂತೆ ಇರುತ್ತವೆ. ಮುಮ್ಮೊದಲು ಒಂದೇ, ಕಟ್ಟಕಡೆಗೂ ಒಂದೇ; ನಟ್ಟನಡುವೆ ಹತ್ತುಹಲವು. ಬಿತ್ತೊಂದೆ ಹಲವು ಮರವಾದಂತೆ ಆಗಿದೆ.

"ಶೂನ್ಯೇ ಚಿದಂಬರೇಸ್ಥಾನೇ ದೂರೇ ವಾಙ್ಮನಸಾಧ್ವನಃ ।
ವಿಲೀನಾತ್ಮಾ ಮಹಾಯೋಗೀ ಕೇನ ಕಿಂ ವಾಽಪಿ ಭಾವಯೇತ್
ಶಿವ ಏವ ಜಗತ್ಸರ್ವಂ ಶಿವ ಏವಾಹಮಿತ್ಯಪಿ ।
ಭಾವಯನ್ ಪರಮೋ ಯೋಗೀ ಭವದೋಷೈರ್ ನ ಬಾಧ್ಯತೇ ॥"

— ಸಿದ್ಧಾಂತ ಶಿಖಾಮಣಿ.

ಮಲ್ಲಿಗೆ ಬಳ್ಳಿಯ ತುದಿಯ ಹೂವನ್ನು ಮೂಸಬೇಕಲ್ಲದೆ ಬಳ್ಳಿಯನ್ನೆಲ್ಲ ಮೂಸಬಾರದು. ಬಳ್ಳಿ ಬಾಡದಂತೆ ಒಣಗದಂತಿರಬೇಕಾದರೆ ಬೇರಿಗೆ ನೀರೆರೆಯಬೇಕಲ್ಲದೆ ಬಳ್ಳಿಗೆರೆಯಬಾರದು. ಅಂತೆಯೆ ಮಾವಿನ ಮರದ ತುದಿಯ ಹಣ್ಣನ್ನು ತಿನ್ನಬೇಕಲ್ಲದೆ ಮರವನ್ನೆ ತಿನ್ನಬಾರದು. ಅದರ ಬುಡಕ್ಕೆ ನೀರೆರೆಯಬೇಕು. ಈ ನಿಯತಿಯಂತೆ ಈ ವಿಶ್ವವೃಕ್ಷದ ಮೂಲವನ್ನು ಚರಮ ಸ್ವರೂಪವನ್ನು ಉಪಾಸಿಸಬೇಕು. ಈ ಅರ್ಥದಲ್ಲಿ 'ಶೂನ್ಯ

ಸಂಪಾದನ' ಅರ್ಥವತ್ತಾದುದು. 'ಶೂನ್ಯೆ ಚಿದಂಬರೇ' ಎಂಬೀ ಶಿವಾಚಾರ್ಯ ವಾಣಿಯೂ ಇದೇ ಅಭಿಪ್ರಾಯವನ್ನೇ ಅಭಿವ್ಯಕ್ತಮಾಡಿದೆ. ಏಕ ಪಾತ್ರಾಭಿನಯವನ್ನು ಮಾಡಿದಾತನೊಬ್ಬ; ಅವನು ಮಾಡಿದ ವೇಷಗಳು ಆಡಿದ ಭಾಷೆಗಳು ಹತ್ತು ಹಲವು, ಇವಕ್ಕೆಲ್ಲ ಕಾರಣನಾದವನು ಆತನೊಬ್ಬನೆ ! ಆತನನ್ನೆ ಬಿಟ್ಟು ವೇಷಗಳನ್ನೆಲ್ಲ ತಂದಿರಿಸಿಕೊಂಡರೆ ಏನು ಪ್ರಯೋಜನ ?

ಒಟ್ಟಿನಲ್ಲಿ ತರುವಿಸ್ತಾರವನ್ನೊಳಕೊಂಡ ಬೀಜದಂತೆ ಶಿವಶಕ್ತಿಯರಿದ್ದಾರೆ. ಅಂಗೈಗೆ ಬಾರದ ಅಂದರೆ ಅಂಗೈ ಒಳಕೊಳ್ಳದ ಮರವನ್ನು ಅಂಗೈಗೆ ತರಬೇಕಾದರೆ ಅದರ ಬೀಜವನ್ನೆ ತೆಗೆದುಕೊಳ್ಳಬೇಕು.

ಭಿನ್ನಾಭಿನ್ನ ಸಿದ್ಧಾಂತ ;

ಇದು ಇನ್ನೊಂದು ವೀರಶೈವಮತ ಸಿದ್ಧಾಂತ. ಯಾವುದೆ ವಸ್ತುವಾಗಲಿ, ಆತ್ಮ–ಪರಮಾತ್ಮರಾಗಲಿ ಭಿನ್ನವಾಗಿದ್ದು ಅಭಿನ್ನವಾಗಿರುವುದುಂಟು; ಮತ್ತು ಅಭಿನ್ನವಾಗಿದ್ದು ಭಿನ್ನವಾಗಿರುವುದುಂಟು. ಭಿನ್ನಾಭಿನ್ನಗಳು ಇತರ ದಾರ್ಶನಿಕರು ಹೇಳುವಂತೆ ಅತ್ಯಂತ ದೂರವಲ್ಲ; ವಿಜಾತಿಯವಲ್ಲ. ವಿಜಾತಿಯ ಭೇದವನ್ನು ವೀರಶೈವ ಸಿದ್ಧಾಂತ ಒಪ್ಪುವುದಿಲ್ಲ. ಈ ಭಿನ್ನಾಭಿನ್ನ ಅಥವಾ ದ್ವೈತಾದ್ವೈತ ವಾದಕ್ಕೆ ಈ ದಿಸೆಯ ಉದಾಹರಣೆಗಳೆಂದರೆ, ಪಟ–ಚಿತ್ರ, ತೆರೆ–ನೀರು, ವೃಕ್ಷ–ವೃಕ್ಷಾಂಗಗಳು. ಮತ್ತು ಸ್ವರ್ಣಾಭರಣಗಳು.

'ಅನಾದ್ಯವಿದ್ಯಾಸಂಬಂಧಾತ್ ತದಂಶಾ ಜೀವನಾಮಕಾಃ' ಎಂದು ಜಗದ್ಗುರು ರೇಣುಕ ಶಿವಾಚಾರ್ಯರ ನಿರೂಪಣೆ ! ಜೀವಾತ್ಮರು ವಿಶ್ವವಿಶಾಲ ಚೇತನದ ಕಿರಣಗಳು, ಅಥವಾ ಕಿಡಿಗಳು. ವಿಶ್ವವಿಶಾಲ ಚೇತನ ಅದೇಕೆ ಅತ್ಯತಿಷ್ಠದ್ದಶಾಂಗುಲ ಚೇತನ ಅದೊಂದು ಪರಂಜ್ಯೋತಿ. ಅದರ ಕಿರಣಗಳು ಅಂಶರು ಈಜೀವಾತ್ಮರು. ಬಿಂಬಕ್ಕೂ ಬಿಂಬ ಕಿರಣಗಳಿಗೂ ಅಂಶಾಂಶಿಭಾವ ಸಂಬಂಧವಿದೆ; ಭೇದಾಭೇದತ್ವವೂ ಇದೆ. ಅಚೇತನತೆಯ ಸಂಬಂಧದಿಂದ ನಸು ಭಿನ್ನತೆ ತೋರಿದರೂ ಚೇತನತೆಯಿಂದ ಅಭಿನ್ನವಾಗಿಯೆ ಇರುತ್ತವೆ. ಸಚ್ಚಿತ್ತತೆಯಿಂದ ಅಭಿನ್ನವಾಗಿವೆ. ಬಹಿರಂಗಗಳು ಭಿನ್ನವಾಗಿದ್ದರೂ ಅಂತರಾತ್ಮಗಳು ಒಂದೇ ಆಗಿರುತ್ತವೆ. ಬಹಿರಂಗಗಳ ಭಿನ್ನತೆಯೂ ಶಾಶ್ವತವಲ್ಲ; ತಾತ್ಕಾಲಿಕ. ಘಟಾಕಾಶ–ಮಠಾಕಾಶಗಳು ಹೇಗೆ ಮಹಾಕಾಶಕ್ಕೆ ಭಿನ್ನಾಭಿನ್ನಸ್ವರೂಪದದಲ್ಲಿರುವುವೋ ಹಾಗೆ ಜೀವಾತ್ಮರುಗಳಿರುತ್ತಾರೆ.

"ಮಣಿಗಳೊಳಗಣ ಸೂತ್ರದಂತೆ ತ್ರಿನಯನೆ ನೀನಿಪ್ಪೆಯಯ್ಯ,
ಎಣಿಸುವೊಡೆ ತನು ಭಿನ್ನ; (ನೆನಿಸುವೊಡೆ) ಆತ್ಮನೊಬ್ಬನೆ !

ಅಣುರೇಣು ತೃಣಕಾಷ್ಠ ಮಧ್ಯದಲ್ಲಿ
ಗುಣಭರಿತ ನೀನೆಂದು ಮಣಿಯುತ್ತಿಪ್ಪೆನಯ್ಯಾ ರಾಮನಾಥಾ !

ಮೊಲೆ ಮುಡಿ ಬಂದರೆ ಹೆಣ್ಣೆಂಬರು;
ಗಡ್ಡ ಮೀಸೆ ಬಂದರೆ ಗಂಡೆಂಬರು;
ನಡುವೆ ಸುಳಿವಾತ್ಮನು ಗಂಡೂ ಅಲ್ಲ, ಹೆಣ್ಣೂ ಅಲ್ಲ ಕಾಣಾ ರಾಮನಾಥಾ!

ಮಣಿಗಳಂತೆ ತನುಗಳು; ಸೂತ್ರ (ದಾರ) ದಂತೆ ಆತ್ಮ. ಮಣಿ ಮಣಿ, ತನು ತನು ಭಿನ್ನವಾಗಿದ್ದರೂ ಅವುಗಳ ಮೂಲವೊಂದೆ ! ಅವುಗಳ ಭಿನ್ನತೆಯಲ್ಲಿಯೆ ಅಭಿನ್ನತೆಯಿದೆ, ಇನ್ನೂ ಸೂಕ್ಷ್ಮವಾದ ಭೇದಾಭೇದಗಳನ್ನು ಕೇಳಿ :

"ಎಣ್ಣೆ ಇದ್ದು ಎಳ್ಳುನನೆಯದ ಭೇದವ,
ಕಿಚ್ಚಿದ್ದು ಕಲ್ಲು ಸಿಡಿಯದ ಭೇದವ,
ಕಾಮವಿದ್ದು ಕನ್ನೆಯನನುಭವಿಸಿದ ಭೇದವ,
ಪರವಿದ್ದು ಪ್ರಾಣನ–ಪ್ರಕೃತಿಯು ಹರಿಯದ ಭೇದವ,
ನರರೆತ್ತ ಬಲ್ಲರೈ ರಾಮನಾಥಾ ? "

ಇಲ್ಲಿ ಎಳ್ಳು ಎಣ್ಣೆ, ಕಲ್ಲು–ಕಿಚ್ಚು, ಕನ್ನೆ ಕಾಮ, ಪ್ರಾಣಪ್ರಕೃತಿ–ಪರ ಇವುಗಳ ಭೇದಾಭೇದ ನಿರೂಪಣ ಸೂಕ್ಷ್ಮವಾಗಿದೆ. ಎಳ್ಳಿನಲ್ಲಿ ಎಣ್ಣೆ ಇರುವುದು ಅಭೇದ; ಇದ್ದರೂ ನೆನೆಯಿಸದಂತಿರುವುದು ಭೇದ. ಕಿಚ್ಚು ಕಲ್ಲಿನಲ್ಲಿರುವುದು ಅಭೇದ; ಇದ್ದರೂ ಸಿಡಿಯದಂತೆ ತನ್ನಷ್ಟಕ್ಕೆ ತಾನಿರುವುದು ಭೇದ. ಇವುಗಳಂತೆ ಮುಂದಿನವುಗಳನ್ನು ಮನವರಿಕೆ ಮಾಡಿಕೊಳ್ಳುವುದು.

"ಘಟ, ಪಟ, ಭಿತ್ತಿಗಳು ಭಿನ್ನ ಎಂಬುದು ಹಾಗಿಹುದು;
ತಿಳಿದು ನೋಡಿದರೆ ಭಿನ್ನ ಉಂಟೆ ?
ಘಟದೊಳಗಣ ಬಯಲು, ಪಟದೊಳಗಣ ಬಯಲು
ಭಿತ್ತಿಯೊಳಗಣ ಬಯಲು ಒಂದಲ್ಲದೆ ಎರಡಿಲ್ಲ;
ಮೃತ್ತಿಕೆ ಒಂದಲ್ಲದೆ ಎರಡಿಲ್ಲ,
ದೇಹಗಳೊಳಗೆ ಗುಹೇಶ್ವರನಲ್ಲದೆ ಮತ್ತಾರೂ ಇಲ್ಲ,

ಈ ವಚನದಲ್ಲಿ ಅಲ್ಲಮಾಪ್ರಭು ಘಟ–ಪಟ–ಭಿತ್ತಿಗಳಲ್ಲಿರುವ ವಿಜಾತಿಯ ಭೇದವನ್ನೂ ಒಪ್ಪದೆ ಹೊಡೆದು ಹಾಕಿದ್ದಾನೆ. ಈ ಮೂರರಲ್ಲಿರುವ ಬಯಲು ಹೇಗೆ ಒಂದೋ, ಇವು ಕಾರ್ಯವಾಗಿರುವ ಮಣ್ಣೂ ಒಂದೇ ! ಇನ್ನು ಮುಗಿಲಿಗೂ ಮಣ್ಣಿಗೂ ಇರುವುದು ಭೇದಾಭೇದ. ಕಾರ್ಯದಲ್ಲಿ ಭೇದವಿದ್ದರೂ ಇವೆರಡೂ ಕಾರಣಾತ್ಮನಲ್ಲಿ ಲಯವಾದಾಗ ಒಂದೇ ಆಗಿರುತ್ತವೆ. ಭೇದಾಭೇದಗಳು ಕಾರ್ಯಕಾರಣ ನಿಷ್ಠಗಳಲ್ಲದೆ ವಾಸ್ತವವಾಗಿ ವಸ್ತು ನಿಷ್ಠಗಳಲ್ಲ.

"ಮೃತ್ತಿಕೆ ಒಂದರಲಾದ ಭಾಂಡಗಳಂತೆ,
ಚಿನ್ನ ಒಂದರಲಾದ ಆಭರಣಗಳಂತೆ,
ಉದಕ ಒಂದರಲಾದ ವಾರಿಕಲ್ಲುಗಳಂತೆ
ಬ್ರಹ್ಮದಿಂದಲಾದ ಜಗವು ಭಿನ್ನವೆಲ್ಲಿಯದು ಸಕಳೇಶ್ವರಯ್ಯ? "

ಇದರಲ್ಲಿ ಸಕಳೇಶ ಮಾದರಸನು ಸಜಾತಿಯ ಭೇದದಲ್ಲಿ ಅಭೇದವನ್ನು ತೋರುತ್ತ ಸಜಾತಿಯ ಭೇದವನ್ನು ಹೊಡೆದು ಹಾಕಿದ್ದಾನೆ. ಕಾರಣದಲ್ಲಿ ಅಭೇದ ಇರುವಂತೆ ಕಾರ್ಯದಲ್ಲಿಯೂ ಅಭೇದವಿದೆಯೆನ್ನುತ್ತಾನೆ. ಭಾಂಡ ಭಾಂಡಗಳು, ಆಭರಣ ಆಭರಣ ಗಳು, ವಾರಿಕಲ್ಲು ವಾರಿಕಲ್ಲುಗಳು ಬೇರೆ ಬೇರೆಯಾಗಿ ಇರುವವೇನೋ ನಿಜ. ಆದರೆ ವಾಸ್ತವವಾಗಿ ಅವೆಲ್ಲ ಬೇರಲ್ಲ. ಮೃತ್ತಿಕೆಗೂ ಭಾಂಡಕ್ಕೂ ಭೇದವಿಲ್ಲದಂತೆ ಒಂದು ಭಾಂಡಕ್ಕೂ ಇನ್ನೊಂದು ಭಾಂಡಕ್ಕೂ ಪ್ರಾದೇಶಿಕವಾಗಿ ಅಂದರೆ ಅಂತರವಾಗಿ ಭೇದ ವಿದ್ದರೂ ವಸ್ತುನಿಷ್ಠವಾಗಿ ಭೇದವಿಲ್ಲ. ಭೇದದಲ್ಲಿಯೆ ಅಭೇದವಿದೆ.

"ಬೀಜವೃಕ್ಷದಂತೆ ನೀನೆಪ್ಪೆಯಯ್ಯ,
ನಿರಾಕಾರವೇ ಮೂರ್ತಿಯಾಗಿ,
ಮೂರ್ತಿಯೇ ನಿರಾಕಾರವಾಗಿ,
ಇವೆಲ್ಲವನಳಿದು ಬಯಲಾಗಿಪ್ಪೆ–
ಎನ್ನ ಕಪಿಲ ಸಿದ್ಧಮಲ್ಲಿಕಾರ್ಜುನದೇವರದೇವಾ !"

ಇದರಲ್ಲಿ ಸಿದ್ಧರಾಮ ಶಿವಯೋಗಿಯು ಸ್ವಗತ ಭೇದವನ್ನು ನಿರಾಕರಿಸುವ ಮೂಲಕ ನಿರಾಕಾರ–ಸಾಕಾರ ಭೇದಾಭೇದಾಂಗೀಕಾರವನ್ನು ಮಾಡಿದ್ದಾನೆ. ನಿರಾಕಾರ ದಲ್ಲಿ ಸಾಕಾರ, ಸಾಕಾರದಲ್ಲಿ ನಿರಾಕಾರಗಳಿದ್ದು ಭೇದಾಭೇದಗಳೆರಡೂ ಸಿದ್ಧವಾಗುತ್ತವೆ.

"ಅಂಗೈಯೊಳಗೊಂದು ಅರಳ್ವ ತಲೆಯ ಹಿಡಿದುಕೊಂಡು,
ಕಂಗಳ ಮುತ್ತ ಪವಣಿಸುವಾಕೆ ನೀನಾರು ಹೇಳಾ ?
ಸಂದ ಸಂಪಿಗೆಯರಳ–ತುಂಬಿ ಬಂದುಂಬ ಭೇದವನರಿಯದೆ
ಹಂಬಲಿಸುವ ಪರಿತಾಪವೇನು ಹೇಳಾ ?
ಒಂದೆಂಬೆನೆ ಎರಡಾಗಿದೆ; ಎರಡೆಂಬೆನೆ ಒಂದಾಗಿದೆ,
ಒಂದೆರಡೆಂಬ ಸಂದೇಹವಿದೇನೊ ?
ಅರವಿನೊಳಗಣ ಮರಹಿದೇನು ಹೇಳಾ ?......"

ಎಂದು ಅಲ್ಲಮಪ್ರಭು ಮುಕ್ತಾಯಕ್ಕಗಳನ್ನು ಕೇಳುವ ನೆಪದಲ್ಲಿ ಭೇದಾಭೇದ ಸ್ವರೂಪವನ್ನು ಸ್ಪಷ್ಟವಾಗಿ ಒಪ್ಪಿ ಸಿದ್ಧ ಮಾಡಿದ್ದಾನೆ.

ಅಲ್ಲದೆ ಪ್ರಭು ವಾಗದ್ವೈತವನ್ನೂ ಒಪ್ಪನು :

"ಅಕ್ಷರವ ಬಲ್ಲೆನೆಂದು ಅಹಂಕಾರವಡೆಗೊಂಡು ಲೆಕ್ಕಗೊಳ್ಳರಯ್ಯಾ !
ಗುರು ಹಿರಿಯರು ತೋರಿದ ಉಪದೇಶದಿಂದ
ವಾಗದ್ವೈತವ ಕಲಿತು ವಾದಿಪರಲ್ಲದೆ
ಆಗು ಹೋಗೆಂಬುದನರಿಯರು.
ಯುಕ್ತಿಯನರಿಯರು, ಮುಕ್ತಿಯನರಿಯರು, ಭಕ್ತಿಯನರಿಯರು,
ವಾದಿಗಳೆನಿಸುವರು ಹೋದರು ಗುಹೇಶ್ವರಾ,
ಸಲೆ ಕೊಂಡ ಮಾರಿಂಗೆ !"

ಇನ್ನೊಬ್ಬರ ಮಾತಂತಿರಲಿ, ತನ್ನ ಕೇವಲಾದ್ವೈತವನ್ನೂ ತಾನೊಪ್ಪಿಲ್ಲ.

"ಅದ್ವೈತವ ನುಡಿದು ಅಹಂಕಾರಿಯಾದೆನಯ್ಯ,
ಬ್ರಹ್ಮವ ನುಡಿದು ನಾನು ಭ್ರಮಿತನಾದೆನಯ್ಯಾ,
ಶೂನ್ಯವ ನುಡಿದು ನಾನು ಸುಖದುಃಖಕ್ಕೆ ಗುರಿಯಾದೆನಯ್ಯಾ,
ಗುಹೇಶ್ವರಾ, ನಿಮ್ಮ ಶರಣರ ಸಾನ್ನಿಧ್ಯದಿಂದಾನು ಸದ್ಭಕ್ತನಾದೆನಯ್ಯ."

ವಾಗದ್ವೈತದಂತೆ ಕೇವಲಾದ್ವೈತ ವು ವೀರಶೈವ ಮತಸಿದ್ಧಾಂತಕ್ಕೆ ಒಪ್ಪಿಗೆಯಾದುದಲ್ಲ. ಕ್ರಿಯೆಯಿಲ್ಲದ ಕೇವಲ ಜ್ಞಾನವನ್ನು ದ್ವೈತಭಾವವಿಲ್ಲದ ಕೇವಲ ಅದ್ವೈತವನ್ನು ಭೇದವರಿಯದ ಅಭೇದವನ್ನು ಶಿವಾದ್ವೈತಿಗಳು ಸುತರಾಂ ಒಪ್ಪುವುದಿಲ್ಲ. ಒಪ್ಪಿದರೆ ಆರಂಭದ ಅರ್ಚನ ಅರ್ಪಣಾದಿಗಳಿಗೆ ಅಂಗ ಲಿಂಗ ಭಾವಕ್ಕೆ ಅವಕಾಶವಿಲ್ಲದಂತಾಗುತ್ತದೆ.

ಹೀಗೆ ವೀರಶೈವಮತದ ಭೇದಾಭೇದ ಸಿದ್ಧಾಂತ ಆಳವಾಗಿ ಇಳಿದಿದೆ; ನೀಳವಾಗಿ ಏರಿದೆ; ಅಗಲಾಗಿ ಬಿತ್ತರಗೊಂಡಿದೆ. ಸ್ಥೂಲ ಸೂಕ್ಷ್ಮ ಕಾರಣಗಳೆಲ್ಲವರಲ್ಲಿಯೂ ಭೇದಾಭೇದ ಸ್ವರೂಪವನ್ನು ಕಂಡುಕೊಂಡಿದ್ದಾರೆ. ತಾತ್ತ್ವಿಕವಾಗಿ ಮತ್ತು ಸೈದ್ಧಾಂತಿಕವಾಗಿ ವೃದ್ಧಿಸಲು ರೂಪಿಸಿಕೊಂಡ ಸಮುದಾಯವೆ ವೀರಶೈವಮತ. ವೀರಶೈವ ಕೌಟುಂಬಿಕ ಬಂಧುತ್ವ ಸಾಮಾಜಿಕ ಮತ್ತು ದೈಶಿಕ ಬಂಧುತ್ವದ ವರೆಗೂ ತನ್ನ ಭೇದಾಭೇದ ದೃಷ್ಟಿಯ ಒಲವಿನ ಕುಡಿಯನ್ನು ಮುಂಚಾಚುತ್ತದೆ. ವಿಶ್ವಭ್ರಾತೃತ್ವದಲ್ಲಿ ಸೇರಿ ವಿರಾಜಿಸುತ್ತದೆ. ಭವಿತ್ವದಿಂದ ಬೇರೆಯಾಗಿ ಕಂಡರೂ ಭಕ್ತತ್ವದಿಂದ ಒಂದಾಗಿ ಕಾಣುವ ಕಣ್ಣೂ ಅದಕ್ಕಿದೆ. ವಿಶ್ವರೂಪತ್ವವೆ ವೀರಶೈವ ಭಿನ್ನಾಭಿನ್ನ ಸ್ವರೂಪ. ವಿಶ್ವಾಕಾರ ನಿರಾಕಾರದಲ್ಲಿ ಭಿನ್ನಾಭಿನ್ನವಾಗಿ ಸತ್ತೆಗೊಂಡಿದೆ.

ಅಂತೆಯೇ ಏಕದರಲ್ಲಿ ಅನೇಕತೆಯನ್ನು ಅನೇಕದಲ್ಲಿ ಏಕತೆಯನ್ನು ಕಂಡುಕೊಂಡಿದೆ ವೀರಶೈವಮತಸಿದ್ಧಾಂತ ! ಒಂದನ್ನು ನೂರೊಂದಾಗಿಸಿ, ಮರಳಿ ನೂರೊಂದನ್ನು ಒಂದಾಗಿಸುವಲ್ಲಿದೆ ಇದರ ಏಕಾನೇಕ ಸಿದ್ಧಾಂತ. ಕಣ್ಣೊಂದಾದರೂ ಕಣ್ಣಾದ ಮೂಲ

ದ್ರವ್ಯಗಳು ಅಥವಾ ತತ್ತ್ವಗಳು ಒಂದಲ್ಲ. ಅಂತೆಯೆ ಕಾಯವೊಂದಾದರೂ ಕಾಯವಾದ ತತ್ತ್ವಗಳು ಒಂದಲ್ಲ. ಜೀವ ಒಂದಾದರೂ ಜೀವನ ಒಂದಲ್ಲ; ಭಾವ ಒಂದಾದರೂ ಭಾವನೆಗಳು ಒಂದಲ್ಲ. ಕಣ್ಣೆರಡಾದರೂ ಕಣ್ನೋಟ ಎರಡಲ್ಲ. ಕಿವಿಯೆರಡಾದರೂ ಕೇಳಿಕೆ ಎರಡಲ್ಲ.

ಷಟ್‌ಸ್ಥಲದಲ್ಲಿ ೨೧೬ ಸಕೀಲುಗಳಿವೆ. ಮುಖ್ಯವಾಗ ಅಂಗ–ಲಿಂಗ, ಭಕ್ತಿ–ಶಕ್ತಿ, ಹಸ್ತ–ಮುಖ, ಪದಾರ್ಥ–ಪ್ರಸಾದ ಈ ಎಂಟನ್ನು ಹೇಳಲಾಗುತ್ತದೆ. ಇವೆಲ್ಲವೂ ಭೇದಾಭೇದ ಸೂಚಕಗಳಾಗಿವೆ. ಏಕ ಅನೇಕವಾಗಿ ಅನೇಕ ಏಕವಾಗುವುದನ್ನು ಪರಿವಿಡಿದು ಸೂಚಿಸುತ್ತವೆ–ಭೇದ ಮತ್ತು ಅಭೇದಗಳು.

ವೀರಶೈವಮತದಲ್ಲಿ ಭೇದ ಅಭೇದಗಳೆರಡೂ ಪಾರಮಾರ್ಥಿಗಳು. ಇದರಿಂದಾಗಿ ಈ ಮತವು ದ್ವೈತಾದ್ವೈತವೆನಿಸಿದೆ; ಶಿವಾದ್ವೈತವೆನಿಸಿದೆ.

ಮೂಲಸ್ಥಲವಾದ ಆ ಚಿತ್ಕಳೆಯಿಂದೊಗೆದ ಅಂಗ–ಲಿಂಗದಲ್ಲಿ ಆರಂಭದಲ್ಲಿ ಅಂದರೆ ಸಾಧನೆಯಲ್ಲಿ ಭೇದಾಂಗೀಕಾರವನ್ನು ಮಾಡದಿದ್ದರೆ ಪೂಜಕ ಪೂಜ್ಯಭಾವನೆ ಉಂಟಾಗದು. ಅಂಗನ್ಯೂನಭಾವವುಳ್ಳುದು, ಲಿಂಗ ಅಧಿಕಭಾವವುಳ್ಳುದು; ಇದರಿಂದಾಗಿ ಭೇದ ತೋರಿದೆ. ಭೇದಾಂಗಕ್ಕೆ ಅಭೇದಲಿಂಗದ ಅನುಭವಾನಂದವಾಗಲು ಸಮರಸಭಾವ ಸಮನಿಸುತ್ತದೆ. ಪ್ರಗತಿಪರ ಪ್ರತಿಕ್ರಿಯೆಗೆ ಪಥವಾಗುತ್ತದೆ.

ಈ ಭೇದಾಭೇದ ಸಂವಿಧಾನ ಒಂದು ಗಮನೀಯ ಪ್ರಕ್ರಿಯೆ. ಸಹಕಾರ ಸಾಧನೆಗೆ ಸಹಕಾರ. ಭೇದಕ್ಕೆ ಅಭೇದದ ಹಸಿವು; ಅಭೇದಕ್ಕೆ ಭೇದದ ಹಸಿವು. ಭೇದದ ಹೊಟ್ಟೆ ಅಭೇದದಿಂದ ತುಂಬುತ್ತದೆ; ಅಭೇದದ ಹಸಿವು ಭೇದದಿಂದ ಪೂರೈಸುತ್ತದೆ. ಪಟದಲ್ಲಿ ಚಿತ್ರಗಳ ಭೇದವಿದ್ದರೇನೆ ಚಂದ. ಚಿತ್ರಗಳಿಗೆಲ್ಲ ಹಿನ್ನೆಲೆಯಲ್ಲಿ ಇರುವ ಪಟದ ಅಭೇದವಿದ್ದರೇನೆ ಸಂಯುಕ್ತತೆ! ಇವೆರಡರ ಸಂಬಂಧವಿಲ್ಲದಿದ್ದರೆ ಚಿತ್ರವೆಲ್ಲವೂ ಅಸ್ತವ್ಯಸ್ತ. ಭೇದಾಭೇದಗಳ ಮಾಧ್ಯಮದಲ್ಲಿಯೆ ಅವಿಚ್ಛಿನ್ನ ಕಲೆ ಉದಿಸಿ ಕಾಣ ಸಿಗುತ್ತದೆ. ಅಭೇದವಿಲ್ಲದೆ ಭೇದವಾಗದು, ಭೇದವಿಲ್ಲದೆ ಅಭೇದತ್ವವುಂಟಾಗದು. ಹೊನ್ನು–ಮಣ್ಣುಗಳು ಅಭೇದಗಳು; ಅವುಗಳಿಂದಾದ ಒಡವೆ ಮಡಕೆಗಳು ಭೇದಗಳು. ಇವುಗಳಲ್ಲಿ ಕಲೆ–ಕಳೆ ಎರಡೂ ಇರುತ್ತವೆ. ಅಭೇದ ಅಸ್ತಿತ್ವದ ಮೇಲೆ ಭೇದಕಲಾಭವನ ನಿರ್ಮಾಣವಾಗುತ್ತದೆ. ವೀರಶೈವಮತದ ಈ ಭಿನ್ನಾಭಿನ್ನ ಸಿದ್ಧಾಂತ ವೈಜ್ಞಾನಿಕವಾಗಿ ಹಾಗು ಅನುಭಾವಿಕವಾಗಿ ಸೂತ್ರಿಕೃತವಾಗಿದೆ. ಇದರಿಂದ ಅರ್ಚನ ಅರ್ಪಣ ಅನುಭವ ಮಾರ್ಗಗಳು ಜೀವಂತವಾಗಿ ಉಜ್ವಲಗೊಂಡಿವೆ. ತ್ರೈಲೋಕ್ಯಸಂಪದಾಲೇಖ್ಯ ಸಮುಲ್ಲೇಖನಕ್ಕೆ ಮಾರ್ಗ ಮಾಡಿ ಕೊಟ್ಟಿದೆ. ನವನವೋನ್ಮೇಷಶಾಲಿಯಾದ ಕೃತಿಗಳ ಆಕೃತಿಗಳ ಸೃಜನಶೀಲತೆಗೆ ವಿಶ್ಲೇಷಣ ಕೃತಕ್ಕೆ ಅವಕಾಶವುಂಟಾಗಿದೆ, ವಿಕಾಸವಾದಕ್ಕೂ

ಅವಕಾಶವುಂಟಾಗಿದೆ. ದ್ವೈತವಿಲ್ಲದೆ ಅದ್ವೈತವೊಂದೇ ಅಂಗೀಕೃತವಾದರೆ ಇವೆಲ್ಲವು ಗಳಿಗೆ ಅವಕಾಶವಾಗದು. ಭಕ್ತ ಭಗವಂತರ ನಡುವೆ ನಡೆವ ಹಿತಾಸಕ್ತಿಗಳಿಗೆ ಪಾರಸ್ಪರಿಕತೆಯು ಇಲ್ಲದಾಗುವುದು. 'ಭಕ್ತಕಾಯೋ ಮಮಕಾಯ' ಎನ್ನುವ ದೇವನಿಗೆ ಕಾಯ ಸಂಬಂಧ ಮತ್ತು ಸುಖಗಳು ಇಲ್ಲದಾಗುತ್ತವೆ. ಆಸ್ತಿಕವಾದಿಗೆ ಆತ್ಮಸುಖ ಸಿಕ್ಕದೆ ಹೋಗುತ್ತದೆ.

ಭಿನ್ನಾಭಿನ್ನ ಸಿದ್ಧಾಂತದಿಂದ ದೇಹಾತ್ಮಗಳಿಗೆ ಶಿವಜೀವರಿಗೆ ಜೀವ–ಜಗತ್ತು–ಜಗದೀಶರಿಗೆ ಪಾರಸ್ಪರಿಕತೆಯುಂಟಾಗಿದೆ. ಪರಸ್ಪರ ಅನ್ವೇಷಣೆಗೆ ಅವಕಾಶವುಂಟಾಗಿದೆ. ಅ–ಭಿನ್ನ, ಅ–ದ್ವೈತ ಎಂದು ಹೇಳಿಕೊಳ್ಳುವಲ್ಲಿ ಅನ್ವರ್ಥತೆಯುಂಟಾಗುತ್ತದೆ.

ಷಟ್‌ಸ್ಥಲಸಿದ್ಧಾಂತ

ಇದು ವೀರಶೈವ ಮತದಲ್ಲಿ ಮುಖ್ಯವಾದ ಸಿದ್ಧಾಂತಭಾಗ. ಅಷ್ಟಾವರಣರೂಪ ಅಂಗವನ್ನು ಪಂಚಾಚಾರರೂಪ ಪಂಚಪ್ರಾಣಗಳನ್ನು ತೊಟ್ಟುಬಂದ ಮೇಲೆ ಷಟ್‌ಸ್ಥಲ ರೂಪ ಚೈತನ್ಯವು ಅತ್ಯವಶ್ಯ. ಷಟ್‌ಸ್ಥಲಾನುಭವಾನಂದ ಅಳವಟ್ಟಾಗ ತಾತ್ತ್ವಿಕ ವ್ಯಕ್ತಿತ್ವ ತೆರಹಿಲ್ಲದಾಗುತ್ತದೆ; ಆಗಬೇಕು. ಅದೇ ಪೂರ್ಣಯೋಗ.

ಷಟ್‌ಸ್ಥಲವೆಂದರೆ ಆರು ನೆಲೆಗಳು ಎಂದರ್ಥ. ಸ್ಥಲ ಸಂಸ್ಕೃತ ಪದ. ಸ್ಥಾನ, ಆಶ್ರಯ, ವಾಸ ಎಂದು ಅರ್ಥಗಳಿವೆ. ನೆಲಕ್ಕೂ ಹೆಸರು. ಆದರೆ ವೀರಶೈವ ಮತದ ಪರಿಭಾಷೆಯಲ್ಲಿ ಇದೂ ಒಂದಾಗಿ ಇದಕ್ಕೆ ವಿಮರ್ಶಾಶಕ್ತಿಯುಕ್ತ 'ಪರಶಿವ ಬ್ರಹ್ಮ' ಎಂದು ಅರ್ಥವಿಸಲಾಗುತ್ತದೆ.

> ಸ್ಥೀಯತೇ ಲೀಯತೇ ಯತ್ರ ಜಗದೇತಚ್ಚರಾಚರಂ
> ತದ್ಬ್ರಹ್ಮಸ್ಥಮಿತ್ಯುಕ್ತಂ ಸ್ಥಲತತ್ತ್ವವಿಶಾರದೈಃ ।
>
> —ಸಿದ್ಧಾಂತ ಶಿಖಾಮಣಿ.

> ಸರ್ವೇಷಾಂ ಸ್ಥಾನಭೂತತ್ವಾಲ್ಲಯ ಭೂತತ್ವತಸ್ತಥಾ
> ತತ್ತ್ವಾನಾಂ ಮಹದಾದೀನಾಂ ಸ್ಥಲಮಿತ್ಯಭಿಧೀಯತೇ ।
>
> —ವೀರಶಿವಾಗಮ.

> ಅಧಿಷ್ಠಾನಂ ಸಮಸ್ತಸ್ಯ ಸ್ಥಾವರಸ್ಯ ಚರಸ್ಯ ಚ
> ಜಗತೋ ಯದ್ಭವೇತ್ತತ್ತ್ವಂ ತದ್ಧಿ ಪ್ರೈ ಸ್ಥಲಮುಚ್ಯತೇ ।
>
> —ಶಿವಾನುಭವ ಸೂತ್ರ.

ಈ ಚರಾಚರ ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಅಂದರೆ ವಿಕಾಸ ಸಂಕೋಚಗಳಿಗೆ ಕಾರಣವಾದ ಆ ಪರಶಿವ ಬ್ರಹ್ಮವೇ ಸ್ಥಲವೆಂದು ಸ್ಥಲತತ್ತ್ವವಿಶಾರದರು ಹೇಳುತ್ತಾರೆ.

ಎಲ್ಲ ಮಹದಾದಿ ತತ್ತ್ವಗಳ ಸ್ಥಾನವಾಗಿ ಲಯಕಾರಣವಾಗಿ ಸ್ಥಲವೆನಿಸಿದೆ. ಎಲ್ಲ ಸ್ಥಾವರ ಜಂಗಮ ಜಗತ್ತಿಗೆ ಅಧಿಷ್ಠಾನವಾದ ತತ್ತ್ವವೆ ಸ್ಥಲವೆಂದು ಹೇಳಲಾಗುತ್ತದೆ.

"ಸ್ವಶಕ್ತಿ ಕ್ಷೋಭ ಮಾತ್ರೇಣ ಸ್ಥಲಂ ತತ್ ದ್ವಿವಿಧಂ ಭವೇತ್
ಏಕಂ ಲಿಂಗಸ್ಥಲಂ ಪ್ರೋಕ್ತಮನ್ಯದಂಗಸ್ಥಲಂ ಸ್ಮೃತಂ ।"

—ಮಿಶ್ರಾರ್ಪಣ.

ಸ್ಥಲವಾಚ್ಯನೂ ಸ್ವಯಂ ಪ್ರಕಾಶಕನೂ ಆದ ಆ ಪರಶಿವನು ತನ್ನ ವಿಮರ್ಶಾಶಕ್ತಿಯ ಸ್ಫುರಣವಾಗಿ, ತೆರೆಗಳಿಲ್ಲದ ಕಡಲಲ್ಲಿ ಗಾಳಿಯ ಕಂಪನದಿಂದ ತೆರೆಗಳು ತೋರುವಂತೆ, ಅಂಗ–ಲಿಂಗವೆಂದು ಎರಡು ಬಗೆಯಾಗುವನು. ಇವುಗಳಲ್ಲಿ ಅಂಗ ಅಲ್ಪಾಂಶ; ಲಿಂಗ ಅಧಿಕಾಂಶ.

ಅಂಗನು ಮಲಿನಾತ್ಮಕನಲ್ಲ, ಪೂರ್ಣಪ್ರಕಾಶಕನಲ್ಲ, ಸರ್ವಜ್ಞನಲ್ಲ, ಸರ್ವಕರ್ತನಲ್ಲ, ಸ್ವತಂತ್ರನಲ್ಲ. ಲಿಂಗನು ನಿರ್ಮಲನು, ಪೂರ್ಣಪ್ರಕಾಶ ಸ್ವರೂಪನು, ಸರ್ವಜ್ಞನು, ಸರ್ವಕರ್ತನು, ಸ್ವತಂತ್ರನು. 'ಜ್ಯೋತಿರ್ಮಯ ಪರಂ ಲಿಂಗಂ ಶ್ರುತಿರಾಹ ಶಿವಾತ್ಮಕಂ' 'ಆಲಯಂ ಸರ್ವಭೂತಾನಾಂ ಲಯಾತ್ಮಕಂ ಲಿಂಗಮುಚ್ಯತೇ' ಲಿಂಗವೆಂಬುದು ಪರಶಕ್ತಿಯುಕ್ತ. ಪರಶಿವನ ಘನತೇಜ ನಿರತಿಶಯಾನಂದ, "ಲಿಕಾರವೆ ಶೂನ್ಯ, ಬಿಂದುವೆ ಲೀಲೆ, ಗಕಾರವೆ ಚಿತ್ತು. ಈ ತ್ರಿವಿಧದೊಳಗದೆ ಲಿಂಗವೆಂಬ ಸಕೀಲ. ಅದರ ಸಂಚವನಾವಾತಬಲ್ಲ ಆತನೇ ಲಿಂಗಸಂಗಿ; ಕೂಡಲ ಚನ್ನಸಂಗಮದೇವಾ, ಲಿಂಗಾನುಭಾವಿಗಳ ಶ್ರೀಚರಣಕ್ಕೆ ನಮೋ ನಮೋ ಎಂಬೆ." ಎಂದಿದಾನೆ ಚನ್ನಬಸವಣ್ಣ.

ಅಂಗ ಅಂದರೆ ಶ್ರೀ ಗುರುವಿನ ಶಿವದೀಕ್ಷಾ ಸಂಸ್ಕಾರದಿಂದ ಶುದ್ಧವಾದ ಜೀವ. 'ಅಂ'–ಅಂದರೆ ಆ ಪರಶಿವಲಿಂಗವನ್ನು ಕುರಿತು 'ಗ' ಅಂದರೆ ಗಮಿಸಲು ಹೊಂದಲು ಸಮರ್ಥವೂ ಸನ್ನದ್ಧವೂ ಆದ ಶುದ್ಧಾತ್ಮ. ತನ್ನೊಳಗಿರುವ ಲಿಂಗದ ಸಂಬಂಧಿಯಾಗಿರುವದರಿಂದ ಅಂಗವೆನಿಸಿದೆ. ಅಂಗ–ಲಿಂಗಗಳೆರಡೂ ಪರಸ್ಪರವಾಗಿವೆ; ಪೂರಕವಾಗಿವೆ. ಇವೆರಡಕ್ಕೂ ತಾತ್ತ್ವಿಕವಾಗಿ ಭೇದವಿಲ್ಲವಾದರೂ ನಾಮ ರೂಪು ಗುಣ ಕ್ರಿಯೆಗಳಿಂದ ಭೇದವುಂಟಾಗಿದೆ. ಮೂಲ ಚಿನ್ನವಿದ್ದಂತೆ ಲಿಂಗ; ಆ ಚಿನ್ನದಿಂದಾದ ಆಭರಣವಿದ್ದಂತೆ ಅಂಗ. ನಾಮರೂಪಗಳು ಅಡ್ಡಗೆರೆ. ಇವು ಓರೆಯಾದರೆ

ಅಂಗವೇ ಲಿಂಗವಾಗುವುದು. ಅಂಗಕ್ಕೂ ಲಿಂಗಕ್ಕೂ ಅಂತರ ಅಧಿಕವಾಗಿಲ್ಲ. ಅದ ಒಳಗಿನ ಅಡ್ಡಗೆರೆ ಅಳಿದರೆ ಅದುವೆ ಲಿಂಗ. ಅಂತಾಗಲು ಬೇಕು ಷಟ್‌ಸ್ಥಲ ಸಾಧನ. ಅದುವೆ ಆತ್ಮದರ್ಶನ; ಅಂಗದರ್ಶನ. ಅಂತೆಯೆ ಜೀವನ ದರ್ಶನ.

ಸ್ಥೂಲ ಸೂಕ್ಷ್ಮಕಾರಣಭೇದದಿಂದ ಅಂಗ–ಲಿಂಗರು ಮೂರು ಮೂರು ಬಗೆಯಾಗುತ್ತಾರೆ. ಪರಿಪಿಡಿದು ತ್ಯಾಗಾಂಗ–ಭೋಗಾಂಗ–ಯೋಗಾಂಗವೆಂದು, ಇಷ್ಟಲಿಂಗ-ಪ್ರಾಣಲಿಂಗ-ಭಾವಲಿಂಗವೆಂದು ಆಗುತ್ತಾರೆ. ಆ ಬಳಿಕ ಷಡ್ಭೂತಾಶ್ರಯ ಕಾರಣದಿಂದ ಅಂಗನು ಪರಿಪಿಡಿದು ಭಕ್ತಾಂಗ-ಮಾಹೇಶ್ವರಾಂಗ; ಪ್ರಸಾದ್ಯಂಗ-ಪ್ರಾಣಲಿಂಗ್ಯಂಗ; ಶರಣಾಂಗ-ಐಕ್ಯಾಂಗರೆನಿಸುವನು. ಇವು ಕ್ರಮವಾಗಿ ತ್ಯಾಗಾಂಗದಲ್ಲಿ ಎರಡು, ಭೋಗಾಂಗದಲ್ಲಿ ಎರಡು, ಯೋಗಾಂಗದಲ್ಲಿ ಎರಡು ಸಂಬಂಧವಿರುತ್ತವೆ. ಇನ್ನು ಸತ್ ಚಿತ್ ಆನಂದ ನಿತ್ಯ ಪೂರ್ಣ ಅಖಂಡ ಲಕ್ಷಣವಿಡಿದು ಲಿಂಗವೂ ಆಚಾರ ಲಿಂಗ-ಗುರುಲಿಂಗ, ಶಿವಲಿಂಗ-ಜಂಗಮಲಿಂಗ, ಪ್ರಸಾದಲಿಂಗ-ಮಹಾಲಿಂಗ ಎಂದು ಆರಾಗುತ್ತವೆ. ಇವೂ ಸಹ ಪರಿಪಿಡಿದು ಎರಡೆರಡು ಇಷ್ಟ-ಪ್ರಾಣ-ಭಾವ ಲಿಂಗಗಳಿಗೆ ಸಂಬಂಧಪಡುತ್ತವೆ.

ಇನ್ನು ಅಂಗ ಸಕೀಲಗಳಾದ ಭಕ್ತಿ-ಹಸ್ತ-ಪದಾರ್ಥಗಳೂ ಮೊದಲು ಮೂರಾಗಿ ಆರಾಗುತ್ತವೆ. ಲಿಂಗ ಸಕೀಲಗಳಾದ ಶಕ್ತಿ-ಮುಖ-ಪ್ರಸಾದಗಳೂ ಮೂರಾಗಿ ಆರಾಗುತ್ತವೆ. ಶ್ರದ್ಧೆ-ನಿಷ್ಠೆ, ಅವಧಾನ-ಅನುಭವ, ಆನಂದ-ಸಮರಸ, ಇವು ಎರಡೆರಡು ಸೇರಿ ಮೂರು, ಒಂದೊಂದಾಗಿ ಆರು ಭಕ್ತಿಗಳೆನಿಸಿವೆ. ಚಿತ್ತ-ಬುದ್ಧಿ, ಅಹಂಕಾರ-ಮನ, ಜ್ಞಾನ-ಭಾವ ಇವು ಹಸ್ತಗಳು. ಇವೂ ಸಹ ಎರಡೆರಡು ಸೇರಿ ಮೂರಾಗುತ್ತವೆ. ಗಂಧ-ರಸ, ರೂಪು-ಸ್ಪರ್ಶ, ಶಬ್ದ-ತೃಪ್ತಿ ಇವು ಆರು ಪದಾರ್ಥಗಳು. ರೂಪು-ರುಚಿ-ತೃಪ್ತಿ ರೂಪದಲ್ಲಿ ಮೊದಲು ಮೂರಾಗಿರುತ್ತವೆ. ಕ್ರಿಯಾಶಕ್ತಿ-ಜ್ಞಾನಶಕ್ತಿ, ಇಚ್ಛಾಶಕ್ತಿ-ಆದಿಶಕ್ತಿ, ಪರಾಶಕ್ತಿ-ಚಿಚ್ಛಕ್ತಿ ಇವಾರು ಶಕ್ತಿಯರು. ಮೂಗು, ಬಾಯಿ, ಕಣ್ಣು, ತೊವಲು, ಕಿವಿ, ಹೃದಯ ಇವಾರು ಮುಖಗಳು. ಆರು ಪದಾರ್ಥಗಳೇ ಲಿಂಗಾರ್ಪಣವಾದಬಳಿಕ ಆರು ಪ್ರಸಾದಗಳೆನಿಸುತ್ತವೆ. ಅಂಗ ಷಟ್‌ಸ್ಥಲಗಳು 'ನಿರಾಮಯ' ಷಟ್‌ಸ್ಥಲವೆನಿಸಿದರೆ, ಲಿಂಗ ಷಟ್‌ಸ್ಥಲಗಳು 'ನಿರವಯ ಷಟ್‌ಸ್ಥಲ' ವೆನಿಸುತ್ತವೆ. ಅಂಗಷಟ್‌ಸ್ಥಲಗಳಲ್ಲಿ ಪರಿಪಿಡಿದು ೧೫–೯–೭–೫–೪–೪ ಈ ಭೇದಗಳಿಂದ ೪೪ ಉಪಸ್ಥಲಗಳಿರುತ್ತವೆ. ಲಿಂಗಷಟ್‌ಸ್ಥಲಗಳಲ್ಲಿ ಪರಿಪಿಡಿದು ೯–೯–೯–೯–೧೨–೯ ಈ ಭೇದಗಳಿಂದ ೫೭ ಉಪಸ್ಥಲಗಳಿರುತ್ತವೆ. ಇವೆರಡೂ ಸೇರಿ ೧೦೧ ಉಪಸ್ಥಲಗಳಾಗುತ್ತವೆ. ಇವು ಷಟ್‌ಸ್ಥಲಗಳನ್ನು ಸಾಕಲ್ಯವಾಗಿ ಸಾಧಿಸಲು ಸಹಾಯಕವಾಗುತ್ತವೆ.

ಅಂಗನ ನಿರಾಮಯ ಷಟ್‌ಸ್ಥಲ ಗುಣವೆಂದರೆ, ಅಲ್ಲಿ ಯಾವ ಬಗೆಯ ಪ್ರಾಕೃತಿಕ ಕೃತಕ ದೋಷಗಳಿಗಿಂಬಿಲ್ಲದಿರುವಿಕೆ. ಬೇನೆ ಬೇಸರಿಕೆಗಳಿಂದ ಬರುವ ನೋವುಗಳಿಗೆ

ಭವರೋಗವನ್ನು ನಿವಾರಿಸಿಕೊಳ್ಳುವಿಕೆ. ಅಶಾಂತಿ ಅಸ್ವಸ್ಥಗಳಿಗೆ ಅವಕಾಶವನ್ನೀಯದಿರುವಿಕೆ. ಇವೆಲ್ಲ ಪ್ರಾಕೃತಿಕ ಕಾಯದ ಕರ್ಮದ ಫಲ ಪರಿಣಾಮಗಳು. ವೀರಶೈವರು ಗರ್ಭಾಷ್ಟಮ ಮಾಸದಲ್ಲಿಯೇ ಲಿಂಗಧಾರಣ ಸಂಸ್ಕಾರಕ್ಕೆ ಒಳಗಾಗುವುದರಿಂದ ಇವರಲ್ಲಿ ಪ್ರಾಕೃತಿಕತೆಯಿರದು. ಇದರಿಂದ ಇವರು ಅಪ್ರಾಕೃತರೆನಿಸಿದ್ದಾರೆ. ಹುಟ್ಟಿನಲ್ಲಿಯೆ ಪ್ರಕೃತಿಯನ್ನು ಭವಿತನವನ್ನು ಹಿಟ್ಟುಗುಟ್ಟಿರುತ್ತಾರೆ. ಗರ್ಭದಲ್ಲಿಯೆ ಗುರು ಸಂಸ್ಕಾರದಿಂದ ಗುರು ಹಸ್ತದಿಂದ ಹುಟ್ಟುವ ಕಾರಣ ಪ್ರಾಕೃತಿಕ ಭವಿದೋಷಕ್ಕಿಂಬಿಲ್ಲ. ಇವನ್ನು ಧೃಡಪಡಿಸಿಕೊಳ್ಳಲು ನಿರಾಮಯ ಷಟ್‌ಸ್ಥಲಾಚರಣೆಯಲ್ಲಿ ಇರಬೇಕು. ಇದ್ದರೆ ನಿರ್ದೋಷಿಯಾಗಿ ಶಾಂತನಾಗಿ ಸ್ವಸ್ಥನಾಗಿ ಮುಂದುವರಿಯುತ್ತಾನೆ. ಕ್ರಮೇಣ ಪಾರ್ಥಿವಾದಿಗಳಿಂದ ಪ್ರಾಪ್ತಿಸುವ ಆಮಯಗಳನ್ನು ಅಳಿಯುತ್ತಾನೆ. ಬಳಿಕ ಲಿಂಗ ನಿರವಯ ಷಟ್‌ಸ್ಥಲಾಚರಣ ಶಕ್ತಿ ಬರುತ್ತದೆ. ಅವಯವಗಳಿಂದಾಗುವ ದೋಷದುರಿತಗಳನ್ನು ನೀಗುವ, ನೀಗಿ ನಿರವಯುವಿ ಆಗುವ ಶಕ್ತಿ ಸಮನಿಸುತ್ತದೆ. ಅವಯುವಗಳಿದ್ದರೂ ಅವುಗಳ ಗುಣಧರ್ಮಗಳಿರುವದಿಲ್ಲ. ಅವೆಲ್ಲ ಲಿಂಗೇಂದ್ರಿಯಗಳಾಗಿ ಲಿಂಗಮುಖಗಳಾಗಿ ಪರಿಣಮಿಸುತ್ತವೆ. ಎಲ್ಲ ಅವಯುವಗಳು ಲಿಂಗಾರಾಧನ ನಿರತವಾಗಿ ಲಿಂಗಾರ್ಪಣಗಳಾಗುತ್ತವೆ. ಲಿಂಗಪ್ರಸಾದದಿಂದ ಲಿಂಗಗಳೇ ಆಗುತ್ತವೆ.

ಅಷ್ಟಾವರಣನಿಷ್ಠ, ಪಂಚಾಚಾರ ಪರಾಯಣನಾದ ಅಂಗನು ತನ್ನ ನಿರಾಮಯ ಷಟ್‌ಸ್ಥಲ ಸಾಧನದಿಂದ ಕ್ರಮೇಣ ವಿಕಾಸಾವಸ್ಥೆಯನ್ನು ಪಡೆದು ಭೌತಭಾವವನ್ನು ಬಿಟ್ಟು, ನಾಮರೂಪಾದಿಗಳಿಂದ ನಿರ್ಮುಕ್ತನಾಗಿ ನಿಜಶಕ್ತಿ ಸಂಪನ್ನನಾಗಿ, ನಿರವಯ ಷಟ್‌ಸ್ಥಲಗಳಲ್ಲಿ ಕ್ರಿಯಾಜ್ಞಾನ ಭಾವ ನಿಷ್ಪನ್ನನಾಗಿ ಚಿತ್ಕಳಾ ಸಂಪನ್ನನೆನಿಸಿ ಚಿಚ್ಚೈತನ್ಯದಲ್ಲಿ ಸಮರಸನಾಗುತ್ತಾನೆ; ನಿರವಯನಾಗುತ್ತಾನೆ. ತೆರೆಗಳು ಕಡಲಲ್ಲಿ, ಆಭರಣಗಳು ಸುವರ್ಣದಲ್ಲಿ, ಕರ್ಪುರ ಶಿಖಿಯಲ್ಲಿ ಅಡಗುವಂತೆ ಅವಿರಳನಾಗುತ್ತಾನೆ.

ಬಹಿರ್ಮುಖವಾಗಿ ಹರಿವ ಕರಣೇಂದ್ರಿಯಗಳನ್ನು ಅಂತರ್ಮುಖವಾಗಿಸುವುದೇ ಷಟ್‌ಸ್ಥಲದ ತಾತ್ವಿಕ ಧ್ಯೇಯ. ದೋಷ ದುಃಖಗಳಿಂದ ದೂರಾಗಿಸಿ ನಿರ್ಮಲ ನಿಜಸುಖಗಳಿಗೆ ಸಹಜವಾಗಿ ನಿಲುಕಿಸುವುದೇ ಷಟ್‌ಸ್ಥಲ ನಿರ್ಣಯ. ಇಂದ್ರಿಯ ಮುಖಗಳಲ್ಲಿ ಮನಸುಳಿಯದೆ, ಇಂದ್ರಿಯವಿಕಾರಗಳಿಗೆ ಒಳಗಾಗದೆ, ಲಿಂಗಮುಖಗಳಿಗೆ ಸುಳಿದು ಲಿಂಗಗುಣಗಳ ತಳೆದು ಲಿಂಗಾಕಾರವಾಗಿ ಲಿಂಗಲೀಯವಾಗುವಂತೆ ಮಾಡುವುದೆ ಷಟ್‌ಸ್ಥಲ ಧರ್ಮ. ತಾನಾರು? ತಾನೆಲ್ಲಿಂದ ಬಂದೆ? ತಾನೆಲ್ಲಿಗೆ ಹೋಗಬೇಕು ? ತಾನೇನಾಗಬೇಕು? ಈ ನಾಲ್ಕು ಜೀವನದ ಜೀವಂತ ಪ್ರಶ್ನೆಗಳನ್ನು ಪರಿಣಾಮಕಾರಿಯಾಗಿ ಪರಿಹರಿಸಿಕೊಳ್ಳುವುದೆ ಷಟ್‌ಸ್ಥಲಧ್ಯೇಯ. ಲೋಕಕಂಟಕನಾಗಿ ಭ್ರಷ್ಟಾಚಾರಗಳಿಂದ ಬಾಳದೆ, ಲೋಕಕಲ್ಯಾಣಕ್ಕಾಗಿ ಸತ್ಯಶುದ್ಧ ಕಾಯಕಗಳಿಂದ ದಾಸೋಹ ಸೇವೆಯಿಂದ ಶಿವಾನುಭಾವ ಪ್ರಸಂಗದಿಂದ ಬಾಳುವುದೆ ಷಟ್‌ಸ್ಥಲದ ಉದಾತ್ತ ಉದ್ದೇಶ.

ಅಹಂಕಾರ ಅಧಿಕಾರದಾಸೆ ಸ್ವಾರ್ಥಗಳಿಗೆ ತಿಲಾಂಜಲಿಯನ್ನು ಬಿಟ್ಟು ಭಕ್ತನಾಗುತ್ತಾನೆ. ವಿಷಯವಾಸನೆಗಳಿಂದ ದೂರಿರುತ್ತಾನೆ. ಚಿತ್ತಶುದ್ಧಿಯನ್ನು ಪಡೆಯುತ್ತಾನೆ. ಶಿಷ್ಟಾಚಾರಗಳಲ್ಲಿ ನಿರತನಾಗಿರುತ್ತಾನೆ. ಸಹಜದಾನಿಯಾಗಿರುತ್ತಾನೆ. ಭೋಗಭಾಗ್ಯ ಗಳಲ್ಲಿ ವಿರತಿಯೊದಗುತ್ತದೆ.

ಮಹೇಶ್ವರನಲ್ಲಿ ನಿಷ್ಠೆಯುಳ್ಳವನೆ ಮಾಹೇಶ್ವರನು. ಅಂತೆಯೆ ಮಹೇಶ್ವರನ ಸಾಕಾರ ಸ್ವರೂಪವಾದ ಲಿಂಗದಲ್ಲಿಯೂ ಲಿಂಗವನ್ನಿತ್ತ ಗುರುದೇವನಲ್ಲಿಯೂ ನಿಷ್ಠೆ ಯುಳ್ಳವನಾಗುತ್ತಾನೆ. ದೇಹಧರ್ಮಗಳನ್ನು ಪ್ರಾಕೃತಿಕ ಸ್ವಭಾವವನ್ನು ಜಯಿಸುತ್ತಾನೆ. ಪ್ರಾಕೃತಿಕರಂತೆ ಪ್ರವರ್ತಿಸನು. ಪ್ರತಿ ಪದಾರ್ಥದ ಪೂರ್ವಾಶ್ರಯ ದೋಷಗಳನ್ನು ನಿರಾಕರಿಸಿ ಗುಣಗಳನ್ನು ವಿಚಾರಿಸಿ ಗ್ರಹಿಸುವದೇ ಈ ಸ್ಥಲದ ಕರ್ತವ್ಯ. ಈತನು ನಿರಸನವಾದಿ. ನೇತಿವಾದವನ್ನು ಮಾಹೇಶ್ವರಸ್ಥಲವೊಪ್ಪುವುದಿಲ್ಲ. ಸರ್ವಾದ್ವೈತವನ್ನು ಆಹ್ವಾನ ವಿಸರ್ಜನಗಳನ್ನು ಅಷ್ಟಮೂರ್ತಿತ್ವವನ್ನು ಸರ್ವಾದ್ವೈತ ತತ್ವವನ್ನು ಒಪ್ಪುವುದಿಲ್ಲ. ಭಕ್ತದೇಹಿಕಲಿಂಗನಾಗಿರುತ್ತಾನೆ. ವಿಶ್ವದಲ್ಲಿ ಶಿವಭಾವವುಂಟಾಗಿ ವಿಶಾಲಬುದ್ಧಿಯೊದಗು ತ್ತದೆ. ಇಲ್ಲಿಗೆ ತ್ಯಾಗಾಂಗದ ಕರ್ತವ್ಯ ನೆರವೇರಿ ಆಚಾರವಳವಟ್ಟು ಗುರುಕೃಪೆಯುಂಟಾಗಿ ರುತ್ತದೆ. ರಸರುಚಿ ಗೆದ್ದು ಸ್ಥಿರಬುದ್ಧಿಯುಂಟಾಗುತ್ತದೆ.

ಗುರುಚೇತನದ ಸಾಕ್ಷಾತ್ಕಾರವಾಯಿತೆಂದು ಉನ್ಮತ್ತನಾಗಬಾರದು; ಮೈಮರೆಯ ಬಾರದು. ಅವಧಾನ ಅಂದರೆ ಎಲ್ಲ ಬಗೆಯಲ್ಲಿ ಎಚ್ಚರಿಕೆಯಿಂದ ನಡೆಯಬೇಕು. ಇಲ್ಲವಾದರೆ ಮನ ಹಿಡಿತದಲ್ಲಿರದು; ಶಾಂತಸ್ಥಿತಿಯಲ್ಲಿರದು. ಅಗ್ನಿತತ್ತ್ವದಲ್ಲಿ ಕೂಡಿ ಉಗ್ರವಾಗುತ್ತದೆ. ಅದರಂತೆ ಗುರು ಲಿಂಗ ಜಂಗಮ ಭಕ್ತ ಶರಣರ ಮಹಿಮೆಗಳತ್ತ ಲಕ್ಷ್ಯವಿತ್ತು ಅದರಂತೆ ನಡೆದು ಶಿವಪ್ರಸಾದವನ್ನು ಪಡೆಯಬೇಕು. ರೂಪದ ಅಹಂಕಾರಕ್ಕೆ ಒಳಗಾಗದಿರಬೇಕು. ಅಂತಾಗಲು ಪ್ರಸಾದಿಸ್ಥಲ ಪ್ರಾಪ್ತವಾಗುತ್ತದೆ. ಶಿವಭಾವ ಸಮನಿಸುತ್ತದೆ. ಇಲ್ಲಿಗೆ ಮಾರ್ಗಕ್ರಿಯೆ ಮುಗಿಯುತ್ತದೆ. ಈ ಮೂರು ಸ್ಥಲಪ್ರಾಪ್ತಿಗೆ ಕ್ರಿಯಾದೀಕ್ಷೆಗಳುಂಟು. ಇವಿಲ್ಲದೆ ಈ ಸ್ಥಲಗಳು ಅಳವಡುವುದಿಲ್ಲ. ಇವು ಅಳವಟ್ಟ ಬಳಿಕ ಮುಂದೆ ಮೀರಿದ ಕ್ರಿಯಾಚರಣೆಗೆ ಸಾಮರ್ಥ್ಯವುಂಟಾಗುತ್ತದೆ.

ಮೀರಿದ ಕ್ರಿಯಾಚರಣೆ ಪ್ರಾಣಲಿಂಗಿಸ್ಥಲದಿಂದ ಮೊದಲಾಗುತ್ತದೆ. ಹಿಂದಿನ ಸ್ಥಲಗಳಲ್ಲಿ ಕ್ರಿಯಾಚಾರಣೆ ಜ್ಞಾನಾಚರಣೆಗಳು ಸಾಗಿಬಂದಿರುತ್ತವೆ. ಈ ಸ್ಥಲದಲ್ಲಿ ಅನುಭವಾಚರಣೆಗಳು ಆರಂಭವಾಗುತ್ತವೆ. ಹಿಂದಿನ ಸ್ಥಲದಲ್ಲಿ ಚಿನ್ಮಯದೀಕ್ಷೆಯನ್ನು ಪಡೆದ ಪ್ರಸಾದಿ ಈ ಸ್ಥಲದಲ್ಲಿ ಚಿಲ್ಲಿಂಗಾರಾಧನಾಸಕ್ತನಾಗುತ್ತಾನೆ. ಅದುವೆ ಪ್ರಾಣಲಿಂಗ. ಆ ಚಿಲ್ಲಿಂಗವೇ ತನ್ನ ಪ್ರಾಣವನ್ನಾಗಿ ಮಾಡಿಕೊಂಡವನೆ ಪ್ರಾಣಲಿಂಗಿ. ಅದಕ್ಕೆ ಬೇಕು ಆನುಭಾವಿಕ ಪ್ರಾಣಲಿಂಗಾರ್ಚನ ಕ್ರಿಯೆ. ಆ ಚಿತ್ಕ್ರಿಯಾಬಲದಿಂದ ಶಿವಯೋಗಸಮಾಧಿಯನ್ನು ಲಿಂಗನಿಜವನ್ನು ಗಳಿಸಿಕೊಂಡು ತನ್ನ ಅಂಗವನ್ನೆ

ಲಿಂಗವನ್ನಾಗಿಸಿಕೊಳ್ಳಬೇಕು. ಪ್ರಾಣಾಪಾನಾದಿ ವಾಯು ವಿಕಾರಕ್ಕೆ ಒಳಗಾಗಬಾರದು. ಸ್ಪರ್ಶ ಸುಖಕ್ಕೆ ತುಡಕಬಾರದು. ಇದರಿಂದ ಕಾಯಕರಣೇಂದ್ರಿಯ ಮನಪ್ರಾಣಗಳು ಪರಿಶುದ್ಧವಾಗಿ ಪ್ರಬುದ್ಧವಾಗುತ್ತವೆ. ಪ್ರೌಢಿಮೆ ಒದಗುತ್ತದೆ. ಅನಾಹತ ಸುಸ್ಪರ್ಶ ಸಂವೇದನೆ ಉಂಟಾಗುತ್ತದೆ. ಸಂವಿದ್ವಿಪಾಕವಾಗಿರುತ್ತದೆ.

ಅಷ್ಟಾದ ಬಳಿಕ ಶರಣ ಸತಿತ್ವ ಸಮನಿಸುತ್ತದೆ. ಆಗಸದ ಪೂರ್ವಾಶ್ರಯವನ್ನು ಪರಿಹರಿಸಿ ಪರಿಶುದ್ಧಾಕಾಶದ ನಾದಸ್ವರೂಪವಾದ ಪ್ರಸಾದಲಿಂಗಾರಾಧನೆ ನಡೆಯುತ್ತದೆ; ತಾಮಸಭಾವವಿರದು. ತೇಜಸ್ವಿಯಾಗಿರುತ್ತಾನೆ. ಪರೋಕ್ಷವಾಗಿದ್ದ ಲಿಂಗತತ್ತ್ವವನ್ನು ಅಪರೋಕ್ಷವನ್ನಾಗಿಸಿಕೊಳ್ಳುತ್ತಾನೆ. ವಸ್ತುನಿರ್ದೇಶ ಸ್ಥಲ ಸಿದ್ಧಿಸುತ್ತದೆ. ಶಿವೈಕಶೀಲ ನಾಗಿರುತ್ತಾನೆ. ಶಬ್ದಸೂತಕವನ್ನು ತೊಡೆದಿರುತ್ತಾನೆ. ವಿಶುದ್ಧಿಯಿಂದಾಚೆಗೆ ಆಜ್ಞೆಗೆ ಏರುತ್ತಾನೆ.

ಐಕ್ಯಸ್ಥಲಿಗೂ ಆಚಾರವೇ ಸಂಪತ್ತು; ಆಚಾರವೇ ಸರ್ವಸ್ವ. ಅದರ ಬಲದಿಂದ ಏಕಭಾಜನ ಸಹಭೋಜನಸ್ಥಳಗಳನ್ನು ಅಳವಡಿಸಿಕೊಳ್ಳುತ್ತಾನೆ. ಮಹಾಲಿಂಗಕ್ಕೆ ಭಾಜನನಾಗುತ್ತಾನೆ. ಭಾವವನ್ನು ಬೆರಸಿ ನಿರ್ಭಾವಿಯಾಗುತ್ತಾನೆ. ಬಾಹ್ಯಕ್ಕೆ ಹರಿದಾಡುವ ಭಾವವೇ ಇಲ್ಲದಾಗುತ್ತದೆ. ಅಭಾವವೂ ಇಲ್ಲದಾಗುತ್ತದೆ. ಭಾವಯಿತೃ ಭಾವಗಳು ಭಾವ್ಯದಲ್ಲಿ ಬೆರದಿರುತ್ತವೆ. ಐಕ್ಯಾಂಗನಲ್ಲಿ ಸಾಪೇಕ್ಷಭಾವವಿರದು. ಭಾವಾಭಾವ ವಿವೇಚನವಿರದು. ಭೇದಭಾವವಿರದು. ಸರ್ವಾತ್ಮಭಾವದಿಂದ ಸರ್ವಾಂತರ್ಯಾಮಿಯಲ್ಲಿ ತಲ್ಲೀನನಾಗಿರುತ್ತಾನೆ. ಅಲ್ಲಿ ಜ್ಞಾತೃ ಜ್ಞಾನ ಜ್ಞೇಯ ಭಾವಗಳಿಗಿಂಬಿರದು. ನಾ. ನೀನೆಂಬುದಿರದು.

"ಜಲೇ ಜಲಮಿವ ನ್ಯಸ್ತಂ ಮಹ್ನೌ ವಹ್ನಿರಿವಾರ್ಪಿತಃ
ಪರಬ್ರಹ್ಮಣಿ ಲೀನಾತ್ಮಾ ವಿಭಾಗೇನ ನ ದೃಶ್ಯತೇ ।"

— ಸಿದ್ಧಾಂತ ಶಿಖಾಮಣಿ

ನೀರೊಳಗೆ ನೀರನ್ನು ಉರಿಯೊಳಗೆ ಉರಿಯನ್ನು ಬೆರಿಸಿದಂತೆ ಐಕ್ಯಾಂಗನು ಮಹಾಲಿಂಗದಲ್ಲಿ ಅಂದರೆ ಆತ್ಮನು ಪರಮಾತ್ಮನಲ್ಲಿ ಬೆರೆದೇಕವಾಗುತ್ತಾನೆ.

ಯ ಇದಂ ಶಿವಸಿದ್ಧಾಂತಂ ವೀರಶೈವಮತಾತ್ಮಕಂ
ಶ್ರುಣೋತಿ ಶುದ್ಧಮನಸಾ ಸ ಯಾತಿ ಪರಮಾಂ ಗತಿಂ !

ಇದರಲ್ಲಿ ಶಿವಯೋಗಿ ಶಿವಾಚಾರ್ಯನು ಇದು ಬರಿ ಸಿದ್ಧಾಂತವಲ್ಲ, ಶಿವಸಿದ್ಧಾಂತ ವೆಂದೂ ವೀರಶೈವಮತಾತ್ಮಕವೆಂದೂ ಇದನ್ನು ಮನಸ್ಸಿನಿಂದ ಕೇಳಿದವರಿಗೆ ಪರಮ ಗತಿಯಾಗುವುದೆಂದೂ ನಿಚ್ಚಳವಾಗಿ ನಿರೂಪಿಸಿದ್ದಾನೆ.

"ಯೇ ವೀರಶೈವಾ ಭುವಿಷಟ್‌ಸ್ಥಲಾಢ್ಯಾಃ
ಪಿಪೀಲಿಕಾ ಮರ್ಕಟ ಪಕ್ಷಿಗತ್ಯಾ
ಸ್ನೇಹೇನ ಗೋಮತ್ಸ್ಯಕ ಕಚ್ಛಪಾನಾಂ
ಲಿಂಗಾಂಗ ಸಂಯೋಗಯುಜೋನುಮುಸ್ಮಾನ್ ॥"

ಭುವಿಯಲ್ಲಿ ಷಟ್‌ಸ್ಥಲಾಢ್ಯರು ವೀರಶೈವರು. ಇವರ ಆಚಾರವಿಚಾರಪಥಗತಿ ಇರುವೆ, ಶಾಖಾಮೃಗ, ಪಕ್ಕಿಗಳದು. ಇವರ ಭಕ್ತಿ ಇವರ ಲಿಂಗಾಂಗ ಸಂಯೋಗತೃಪ್ತಿ ಆವು ಮೀನು ಆವೆಗಳಂತಹದು. ಷಟ್‌ಸ್ಥಲಾಢ್ಯರು ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಮತ್ತು ಅತೀತರು.

"ಸ್ಥೂಲವ ಬ್ರಹ್ಮನಳವಡಿಸಿಕೊಂಡ! ಸೂಕ್ಷ್ಮವ ವಿಷ್ಣುವಳವಡಿಸಿಕೊಂಡ ಕಾರಣವ ರುದ್ರನಳವಡಿಸಿಕೊಂಡ! ನಿಷ್ಕಾಯವ ಈಶ್ವರನಳವಡಿಸಿಕೊಂಡ! ನಿರಂಜನವ ಸದಾಶಿವನಳವಡಿಸಿಕೊಂಡ! ನಿರವಯಲವನತೀತನಳವಡಿಸಿಕೊಂಡ! ಈ ಷಟ್‌ಸ್ಥಲದವರೆಲ್ಲ ಬಯಲನಳವಡಿಸಿಕೊಂಡು ಬಯಲಾಯಿತ್ತುಕಾಣಾ ಗುಹೇಶ್ವರಾ!"

ಶಕ್ತಿ-ಭಕ್ತಿ

ಪ್ರಗತಿ ಜೀವನಕ್ಕೆ ಶಕ್ತಿ-ಭಕ್ತಿ ಇವೆರಡೂ ಅಗತ್ಯ. ಶಕ್ತಿಯಿಲ್ಲದ ಬಾಳು ಹೇಗೆ ದುರ್ಬಲವೊ ಹಾಗೆ ಭಕ್ತಿಯಿಲ್ಲದ ಬಾಳಿಗೂ ಬಲವಿರದು; ಭಾವ ಬೆಳೆಯದು.

ಇವು ಏಕಾಂಗನಿಷ್ಠಗಳಲ್ಲ. ತ್ರಿವಿಧಾಂಗಗಳಿಗೂ ಷಡಂಗಗಳಿಗೂ ಬೇಕು, ಶಾರೀರಕ ಶಕ್ತಿಯೊಂದೇ ಶಕ್ತಿಯಲ್ಲ. ಮನ ಬುದ್ಧಿ ಭಾವ ಜೀವಿಗಳಿಗೂ ಶಕ್ತಿ ಬೇಕು. ಭಕ್ತಿ ಬೇಕು. ಇವೆರಡೂ ಭಿನ್ನಗಳಲ್ಲ, ಭಿನ್ನಾಭಿನ್ನಗಳು. ಒಂದರಿಂದ ಇನ್ನೊಂದಕ್ಕೆ ಶೋಭೆ.

ನುಡಿಯೊಳಗೆ ಸತ್ಯ, ಹೃದಯದಲ್ಲಿ ಯುಕ್ತಿ
ಅಱಿವಿನಲ್ಲಿ ವಿರಕ್ತಿ ದೊರೆಕೊಂಡರೆ, (ಇವೆಲ್ಲವೂ ಶಕ್ತಿಗಳೆ)
ಅಂಥವರಲ್ಲಿಯೇ ಭಕ್ತಿ ದೊರಕೊಂಬುದು.
ಆ ಭಕ್ತಿ ತಾನೆ ಮುಕ್ತಿಮಾತೆಯಾದ ಕಾರಣ,
ಭಕ್ತಿಯಿಂದ ನಿರ್ಮಲಚಿತ್ತವನಿರಿಸಿ
ನೆನೆವುದು ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ!"
"ಭಕ್ತಿಯ ಬಲ್ಲವರು ನಚ್ಚಿ ಮಚ್ಚಿ
ಮನವನೊಚ್ಚತಗೊಡುವರು.
ಭಕ್ತಿಯನರಿಯದ ಬಲುಪಾಪಿ ಜೀವಿಗಳು
ಕಚ್ಚುವರು ಬೊಗಳುವರು ರಾಮನಾಥಾ!

ಈ ಮಾತುಗಳನ್ನು ಮೆಲಕು ಹಾಕಬೇಕು. ನುಡಿವಲ್ಲಿ ನಡೆವಲ್ಲಿ ಸತ್ಯ ಸರಳತೆಯ ಶಕ್ತಿ ಬೇಕು. ವಿನಯ ವಿಚಾರಗಳ ಭಕ್ತಿಬೇಕು. ಜೊತೆಗೆ ಸ್ವಾರ್ಥತ್ಯಾಗದ ವಿರಕ್ತಿಯೂ ಬೇಕು. ಶಕ್ತಿಯುಕ್ತಿಗಳಿಲ್ಲದೆ ಜೀವನವಿಲ್ಲ; ಭಕ್ತಿ-ವಿರಕ್ತಿಗಳಿಲ್ಲದೆ ಶ್ರೇಯಸ್ಸಿಲ್ಲ. ಶಕ್ತಿಯಿದ್ದರೆ ಶಕ್ತ, ಭಕ್ತಿ ಇದ್ದರೆ ಭಕ್ತ. ಶಕ್ತ ಸಂಕಟದಿಂದ ಪಾರಾಗುತ್ತಾನೆ, ಭಕ್ತ ಭವದಿಂದ ಬಿಡುಗಡೆಯನ್ನು ಪಡೆಯುತ್ತಾನೆ.

"ಪ್ರವೃತ್ತೌ ಶಕ್ತಿರಾಖ್ಯಾತಾ, ನಿವೃತ್ತೌ ಭಕ್ತಿರುಚ್ಯತೇ ।"

ಇದೊಂದು ಆಗಮೋಕ್ತಿ; ಅನುಭವ ಜನ್ಯ ನಿರುಕ್ತಿ. ದೇವನಲ್ಲಿರುವ ಶಕ್ತಿಯನ್ನು ಜೀವನಲ್ಲಿರುವ ಭಕ್ತಿಯನ್ನು ಇವುಗಳ ಕಾರ್ಯಗಳನ್ನು ನೋಡಿದಾಗ ಈ ಮಾತು ಸತ್ಯಕ್ಕೆ ಸತ್ಯವೆನಿಸುತ್ತದೆ. ವಿಕೇಂದ್ರೀಕರಣ ಶಕ್ತಿಯದು; ಕೇಂದ್ರೀಕರಣ ಭಕ್ತಿಯದು.

ಆ ಪರಶಿವನಲ್ಲಿ ಅವಿನಾಭಾವ ಸಂಬಂಧದಿಂದಿರುವ ಆ ಸ್ವಾಭಾವಿಕ ಶಕ್ತಿಯು ಪ್ರಪಂಚರಚನರೂಪ ಪ್ರವೃತ್ತಿಯಲ್ಲಿ ಪರಮಾತ್ಮನಿಗೆ ಸಹಾಯಕಳಾಗಿದ್ದು ಶಕ್ತಿಯೆನಿಸಿದ್ದಾಳೆ. ಪ್ರಪಂಚೋತ್ಪತ್ತಿಯಾದ ಬಳಿಕ ಜೀವರನ್ನು ಜೀವನದಲ್ಲಿ ತೊಡಗಿಸಲು ಆಸಕ್ತಿಯಾಗಿದ್ದಾಳೆ. ಜೀವನದಲ್ಲಿ ಆಸತ್ತು ಬೇಸತ್ತು ನಿಂತವರನ್ನು ಉದ್ಧರಿಸಲು ಆ ಶಕ್ತಿಯೇ ನಿವೃತ್ತಿಪಥದಲ್ಲಿ ಭಕ್ತಿಯೆನಿಸಿದ್ದಾಳೆ. ಶಿವನಿಗೆ ಸತಿಯಾಗಿ ಶಕ್ತಿ; ಶಿವಸುತರಾದ ಜೀವರಿಗೆ ಮಾತೆಯಾಗಿ ಭಕ್ತಿ. ಲೋಕದಲ್ಲಿ ಹೆತ್ತತಾಯಿ ತನ್ನ ಮಕ್ಕಳನ್ನು ಲಾಲಿಸಿ ಪಾಲಿಸುವಂತೆ, ಬದುಕಿಸಿ ಬೆಳಸುವಂತೆ, ಭಕ್ತಿಮಾತೆಯು ತನ್ನಮಕ್ಕಳಾದ ಜೀವರನ್ನು ಜೋಕೆಯಾಗಿ ಉನ್ನತಿಗೊಯ್ಯುತ್ತಾಳೆ; ಭಕ್ತಾದಿ ಆರುಸ್ಥಲಗಳಲ್ಲಿ ಕ್ರಮವಾಗಿ ಇದ್ದು ಕರುಣಾದ್ರ್ರತೆಯಿಂದ ಕೈಪಿಡಿದು, ಶಕ್ತಿಯ ಸಹಾಯಪಡೆದು ಹಂತಹಂತವಾಗಿ ಅಂಗಸತಿಯನ್ನು ಮೇಲಕ್ಕೆತ್ತಿ ಲಿಂಗಪತಿಯೊಡನೆ ಸಮರಸವಾಗಿಸುತ್ತದೆ ಭಕ್ತಿ. ತನ್ನ ಚಿತ್ಕಳೆಯ ಅನುಗ್ರಹಿಸುತ್ತದೆ ಶಕ್ತಿ.

ಭಕ್ತಸ್ಥಲದಲ್ಲಿ ಭಕ್ತಿಯು ಶ್ರದ್ಧೆಯಾಗಿ ಶಕ್ತಿಯು ಕ್ರಿಯೆಯಾಗಿ ಭಕ್ತಾಂಗನನ್ನು ಉದ್ಧರಿಸುತ್ತಾರೆ. ಮಾಹೇಶ್ವರಸ್ಥಲದಲ್ಲಿ ಮಾಹೇಶ್ವರಾಂಗನಿಗೆ ನಿಷ್ಠೆಯಾಗಿ ಜ್ಞಾನ ಶಕ್ತಿಯಾಗಿ ನೆರವಾಗುತ್ತಾರೆ. ಪ್ರಸಾದ್ಯಂಗನಿಗೆ ಅವಧಾನ ಭಕ್ತಿಯಾಗಿ ಇಚ್ಛಾಶಕ್ತಿಯಾಗಿ ಬೆಂಗಾವಲಾಗುತ್ತಾರೆ. ಪ್ರಾಣಲಿಂಗ್ಯಂಗನಿಗೆ ಅನುಭವ ಭಕ್ತಿಯಾಗಿ–ಆದಿಶಕ್ತಿಯಾಗಿ ಆಶ್ರಯವೀಯುತ್ತಾರೆ. ಶರಣಾಂಗನಿಗೆ ಆನಂದಭಕ್ತಿಯಾಗಿ ಪರಾಶಕ್ತಿಯಾಗಿ ಆಳವಟ್ಟು ಕಾಪಾಡುತ್ತಾರೆ. ಐಕ್ಯಾಂಗನಿಗೆ ಸಮರಸಭಕ್ತಿಯಾಗಿ ಚಿಚ್ಛಕ್ತಿಯಾಗಿ ಮಹಾಲಿಂಗದೊಡನೆ ಒಂದುಗೂಡಿಸುತ್ತಾರೆ.

ಈ ದಿಸೆಯಲ್ಲಿ ಪ್ರವೃತ್ತಿಯೆ ನಿವೃತ್ತಿಯಾಗಿ, ಲೌಕಿಕವೆ ಅಲೌಕಿಕವಾಗಿ, ಪ್ರಪಂಚವೆ ಪರಮಾರ್ಥವಾಗಿ ಪರಿಣಾಮಗೊಳ್ಳುತ್ತವೆ. ರಸದಾಯಿ ಭಕ್ತಿ, ಕಳಾಕಾರಿ ಶಕ್ತಿ.

ಸಮರಸವೆಂದರೇನು ? ರಸ ಸಮವಾಗುವಿಕೆ ! 'ರಸೋವೈ ಸಃ' ಎಂಬಂತೆ ಮಹೀಯಾನನಾದ ಆ ಮಹಾಲಿಂಗವೂ ದಿವ್ಯರಸ. ಆ ಮಹಾಲಿಂಗಕ್ಕೆ ತೀರ ಅಣುವಾದ ಈ ಅಂಗನು ಸಮನೆನಿಸಬೇಕಾದರೆ, ಆ ಬಗೆಯ ಪರಾಭಕ್ತಿರಸವುಳ್ಳವನಾಗಬೇಕು; ಚಿದ್ರಸವುಳ್ಳವನಾಗಬೇಕು. ಆಗ ಆ ರಸಕ್ಕೆ ಸಮವೆನಿಸಿ ಸಮರಸಕ್ಕೆ ಪಾತ್ರನಾಗುತ್ತಾನೆ. ಈ ದೃಷ್ಟಿಯಲ್ಲಿ ಶಕ್ತಿ–ಭಕ್ತಿಗಳೆರಡರ ಅವಶ್ಯಕತೆ ಅಂಗನಿಗೆ ಅದೆಷ್ಟಾದರೂ ಇದೆಯೆಂಬುದು ಮನವರಿಕೆಯಾಗುತ್ತದೆ. ಅಲ್ಲದೆ ಆವೆರಡರ ಮಹತ್ವ ಮತ್ತು ಸತ್ವ ಎರಡೂ ಅನುಭವಕ್ಕೆ ಬರುತ್ತವೆ.

ಉಜ್ಜೀವನಕ್ಕೆ ಉಪಯುಕ್ತವಾದ ಉಭಯ ಭಕ್ತಿಶಕ್ತಿಗಳು ಷಟ್‌ಸ್ಥಲ ಮಾರ್ಗದಿಂದ ಸಾಧ್ಯವೆಂದು ಶಿವಾದ್ವೈತಿಗಳ ಸ್ವಾನುಭಾವದ ಅಭಿಮತ. ಷಟ್‌ಸ್ಥಲಾರಂಭಕ್ಕೆ ಮೊದಲು ಬೇಕು ಸತ್‌ಪ್ರೇಮ, ಸತ್ಕ್ರಿಯೆ. ಸತ್‌ಪ್ರೇಮವೆ ಸದ್ಭಕ್ತಿ; ಅದುಳ್ಳವನು ಸದ್ಭಕ್ತನು. ಬಳಿಕ ಮಾಹೇಶ್ವರಾದಿ ಸ್ಥಲಗಳು. ಷಟ್‌ಸ್ಥಲಗಳ ಅಡಿಗಲ್ಲು ಭಕ್ತಿ. ಭಕ್ತಾಂಗನಿಗೆ ನಿವೃತಿಕಲೆಯ ಕರುಣಿಸುವವಳು ಕ್ರಿಯಾಶಕ್ತಿ

ಶಿವನಲ್ಲಿ ವಾಸ್ತವಿಕವಾಗಿರುವ ಶಕ್ತಿಯು ಶಿವನ ಇಚ್ಛೆಯನ್ನನುಸರಿಸಿ ಪ್ರಪಂಚಾಕಾರವಾಗಿ ಪ್ರಕೃತಿಯೆನಿಸಿದಳು. ಶುದ್ಧ ಜೀವಾತ್ಮನಲ್ಲಿ ಸ್ವಾಭಾವಿಕವಾಗಿರುವ ಭಕ್ತಿಯು ಶುದ್ಧಜೀವಿಯ ಸದಿಚ್ಛೆಯಂತೆ ಪರಮಾರ್ಥಾಕಾರವಾಗಿ ಸಂಸ್ಕೃತಿಯೆನಿಸುವಳು. ಶಕ್ತಿಯದು ಪ್ರಕೃಷ್ಟಕೃತಿ; ಭಕ್ತಿಯದು ಸಮ್ಯಕ್ ಕೃತಿ, ಅಥವಾ ಸಂಸೃಷ್ಟಕೃತಿ. ಶಕ್ತಿ ಸನಾತನಳು, ಭಕ್ತಿ ನೂತನಳು. ಶಕ್ತಿಯದು ಪರಿಣಾಮ ಪಂಥ; ಭಕ್ತಿಯದು ಪರಿಣತ ಪಂಥ. ಶಕ್ತಿ ಚಿತ್‌ಪರಿಣಾಮ; ಭಕ್ತಿ ಪರಿಶುದ್ಧ ಚಿತ್‌ಪರಿಣಾಮ. ಶಿವವಿಲ್ಲದೆ ಆ ಶಕ್ತಿಯಿಲ್ಲ. ಶುದ್ಧಜೀವನಿಲ್ಲದೆ ಈ ಭಕ್ತಿಯಿಲ್ಲ. ಶಕ್ತಿಯದು ಈ ಪ್ರಪಂಚ; ಭಕ್ತಿಯದು ಆ ಪರಬ್ರಹ್ಮಪಂಚ.

ಸ್ಥಲವು ಅಂಗ ಲಿಂಗ ಎಂದು ಎರಡಾದಂತೆ, ಆ ಸ್ಥಲಗತವಿಮರ್ಶೆಯೂ ಭಕ್ತಿ–ಶಕ್ತಿ ಎಂದು ಎರಡಾಗಿ, ಅಂಗನಲ್ಲಿ ಭಕ್ತಿ, ಲಿಂಗನಲ್ಲಿ ಶಕ್ತಿ ಆಗಿ ಸಮಾವೇಶಗೊಳ್ಳುವವು. ಲಿಂಗಸ್ಥಲದಲ್ಲಿರುವ ಶಕ್ತಿಗೆ ಕಲೆಯೆಂದು ಶಿವಾದ್ವೈತಶಾಸ್ತ್ರಸಮ್ಮತಿ. ಕಲಾಪೂರ್ಣವಾದುದೆ ಲಿಂಗ ! ಅಂಗಸ್ಥಲದಲ್ಲಿರುವ ಭಕ್ತಿರೂಪಶಕ್ತಿಯು ಅಂಗನಿಗೆ ಭೋಗಯೋಗಗಳೆರಡನ್ನೂ ಉಂಟು ಮಾಡಿಕೊಡುವ ಕಳೆಯು.

ಶಕ್ತಿಯಿಂದ ಜೀವನಕ್ಕೆ ಕಲೆ, ಕಳೆ! ಭಕ್ತಿಯಿಂದ ಬಾಳಿಗೆ ಬೆಲೆ, ನೆಲೆ! ಇವೆರಡೂ ಬಾಳಿಗೆ ಬೇಕು. ಬಾಳಿಗೆ ಅಪೂರ್ವ ಬಣ್ಣ ಬರಬೇಕು. ನಿಜಕ್ಕೂ ಇವೆರಡೂ ಜೀವನ ಮೌಲ್ಯಗಳು. ಕಾರ್ಯಕರಣದಲ್ಲಿ ಇವೆರಡೂ ಬೇರಾಗಿ ತೋರಿದರೂ ಕಾರಣದಲ್ಲಿ ಒಂದೇ ! ಇವೆರಡಕ್ಕೂ ವಾಸ್ತವಿಕವಾಗಿ ತಾತ್ತ್ವಿಕವಾಗಿ ಭಿನ್ನವಿಲ್ಲ. ಇವೆರಡೂ ಕಾರ್ಯಕರಣದಲ್ಲಿ ಬೇರಾಗಿ ತೋರಿದರೂ ಕಾರಣದಲ್ಲಿ ಒಂದೆ !

ಭಕ್ತಿ ಜೀವನದ ಮೋಹದಾಹ, ದ್ವೇಷರೋಷಗಳನ್ನು ಅಣಗಿಸುತ್ತದೆ. ಅಂದರೆ ರಾಗದ್ವೇಷಗಳನ್ನು ರಹಿತಗೊಳಿಸುತ್ತದೆ. ಹಿಂಸೆಹೀನಾಶೆಗಳನ್ನು ಹೊರದೂಡುತ್ತದೆ. ಬಳಿಕ ಆತ್ಮ (ಲಿಂಗ) ಶಕ್ತಿಯನ್ನು ಅಭಿವೃದ್ಧಿಸುತ್ತದೆ ಆ ಆತ್ಮ ಶಕ್ತಿಯಿಂದ ಅಂತರಂಗದ ಎಲ್ಲ ಅಕಿಂಚನತೆಗಳು ಅಳಿಯುತ್ತವೆ. ಹೀಗೆ ಭಕ್ತಿ ಶಕ್ತಿಗಳು ಪರಸ್ಪರ ಪೂರಕವಾಗಿವೆ.

ಭಕ್ತಿಹೃದಯದಲ್ಲಿ ಶುದ್ಧಪ್ರೇಮ, ಶುದ್ಧಜ್ಞಾನ, ಶುದ್ಧಕ್ರಿಯೆ, ಸುಭಾವ ಶಕ್ತಿಗಳು ಸಮನ್ವಯಗೊಳ್ಳುತ್ತವೆ. ಇವುಗಳಲ್ಲಿ ಯಾವುದೊಂದರ ಕೊರತೆಯಾದರೆ ಅದು ಶುದ್ಧವಾದ ಪೂರ್ಣಭಕ್ತಿಯೆನಿಸದು. ಅದಕ್ಕೆ ಸಮರಸಶಕ್ತಿಯಿರದು. ಆ ಮಹಾಲಿಂಗ ಮಾರ್ಗದಲ್ಲಿ ಬಾರದು, ವಿನಿಯೋಗವಾಗದು. ವಿಶುದ್ಧಸಿದ್ಧಿಗೇರದು.

ಎಲ್ಲ ಅವಧಾನ, ಎಲ್ಲ ಅನುಭವ, ಎಲ್ಲ ಆನಂದಗಳಿಂದ ಕೂಡಿದ ಭಕ್ತಿ ಸಮರಸಕ್ಕೆ ಸಮರ್ಥವಾಗುತ್ತದೆ. ಅದು ಆ ಮಹಾಲಿಂಗದ ಆ ಚಿಚ್ಛಕ್ತಿಯಲ್ಲಿ ಸಂಸಕ್ತವಾಗುತ್ತದೆ; ಆ ಶಕ್ತಿಸ್ವರೂಪವೇ ಆಗುತ್ತದೆ.

ಆ ಶಕ್ತಿ ವಾಸ್ತವಿಕವಾಗಿ ಒಬ್ಬಳೆ ಆದರೂ ವಿನಿಯೋಗಕಾಲದಲ್ಲಿ ವಿವಿಧಳಾಗುತ್ತಾಳೆ. ಶಕ್ತಿ ಕಣಕವಿದ್ದಂತೆ ! ಅದರಿಂದ ಯಾವ ಪದಾರ್ಥವನ್ನಾದರೂ ಮಾಡಬಹುದು. "ಏಕೈವ ಶಕ್ತಿಃ ಪರಮೇಶ್ವರಸ್ಯ ಭಿನ್ನಾ ಚತುರ್ಧಾ ವಿನಿಯೋಗಕಾಲೇ । ಭೋಗೇ ಭವಾನಿ, ಪುರುಷೇಷು ವಿಷ್ಣುಃ, ಕ್ರೋಧೇ ಚ ಕಾಲೀ ಸಮರೇ ಚ ದುರ್ಗಾ!" ಎಂಬೀ ಮಾತನ್ನು ಮೆಲಕು ಹಾಕಿದರೆ ಶಕ್ತಿಯು ಶಿವನಿಗೆ ವಿನಿಯೋಗವಾಗುವ ವೈವಿಧ್ಯವು ವಿಶದವಾಗುತ್ತದೆ. ಶುಶ್ರೂಷಭಾವವೂ ಸ್ಪಷ್ಟವಾಗುತ್ತದೆ. ಶಕ್ತಿ ಶಿವನ ಸಹಕಾರಿಣಿ, ಸಹಧರ್ಮಿಣಿ—ಎಂಬುದು ಸುವೇದ್ಯವಾಗುತ್ತದೆ. ಶಿವನ ಆ ಆ ಭಾವದಲ್ಲಿ ಶಕ್ತಿಯೂ ಆ ಆ ಭಾವರೂಪಗಳನ್ನೇ ತಾಳುತ್ತಾಳೆ. ವಿಷ್ಣುರೂಪದಲ್ಲಿ ಪುರುಷಾಕಾರಳಾಗಿ ಶಿವನ ವಿನಿಯೋಗಕ್ಕೆ ಸಲ್ಲುತ್ತಾಳೆ. ಕಾಮದಲ್ಲಿ ಕ್ರೋಧದಲ್ಲಿ ವೀರದಲ್ಲಿ ಆ ಆ ರೂಪಗಳನ್ನು ತಳೆದು ಸೇವಿಸುತ್ತಾಳೆ. ಶಿವನನ್ನು ಎಲ್ಲೆಲ್ಲಿಯೂ ಎಲ್ಲ ಕಾಲದಲ್ಲಿಯೂ ಎಲ್ಲ ಲೀಲೆಗಳಲ್ಲಿಯೂ ಬಿಡದೆ ಕೂಡಿಕೊಂಡಿರುತ್ತಾಳೆ.

"ಶಕ್ತಯಶ್ಚ ಜಗತ್ಕೃತ್ಸ್ನಂ । ಶಕ್ತಿಮಾಂಸ್ತು ಮಹೇಶ್ವರಃ ।
ಶಕ್ತಿಸ್ತು ಶಕ್ತಮದ್ರೂಪಾದ್ವ್ಯತಿರೇಕಂ ನ ಗಚ್ಛತಿ ॥
ತಾದಾತ್ಮ್ಯಮನಯೋರ್ ನಿತ್ಯಂ ವಹ್ನಿದಾಹಕಯೋರಿವ ।"

ಎಂಬುದನ್ನು ಎಚ್ಚರಿಕೆಯಿಂದ ನೆನೆಯಬೇಕು. ಶಕ್ತಿ ಸರ್ವಾಂತರ್ಯಾಮಿ ಎಂಬುದನ್ನು ಅರಿಯಬೇಕು.

ಶಕ್ತಿಯು ಲೀಲೆಗಾಗಿ ಒಮ್ಮೆ ಸಂಕೋಚವಾಗಬಲ್ಲಳು. ಒಮ್ಮೆ ವಿಕಾಸವಾಗಬಲ್ಲಳು. ಒಳಗಿದ್ದು ಹೊರಗೆ ತೋರಬಲ್ಲಳು. ಹೊರಗಿದ್ದು ತೋರದಿರಬಲ್ಲಳು. ಪಂಚಭೂತಗಳಲ್ಲಿ ವಿಧಾಯಕವಾಗಿರಬಲ್ಲಳು; ಇದ್ದಾಳೆ. ಒಮ್ಮೊಮ್ಮೆ ವಿನಾಶಕಾರಕವಾಗಿ ವಗ್ಗಳಿಸಬಲ್ಲಳು. ಕಾರ್ಯಾನುಮೇಯಳು ಆ ಶಕ್ತಿ! ಅವಳದು ಅಘಟನ ಘಟನಾ ಶಕ್ತಿ !

ಇನ್ನು ಪಿಂಡಾಂಡಗತ ಶಕ್ತಿಯ ಸಂಕೋಚವೆ ಬಂಧನ; ವಿಕಾಸವೇ ನಂದನ. ಶಕ್ತಿ ಸಂಕೋಚದಿಂದ ಜೀವನಿಗೆ ಆಗುವ ಅವಿದ್ಯಾಗ್ರಂಥಿಯು ಅಭಿವೃದ್ಧಿಯಾಗಿ ಅಂಧಕಾರಮಯವಾಗುತ್ತದೆ. ಅಕ್ರಿಯಾಗ್ರಂಥಿಪ್ರಬಲವಾಗಿ ಜಡಭಾವ ಹೆಚ್ಚುತ್ತದೆ. ವ್ಯಕ್ತಿತ್ವದ ಎತ್ತರ ಮೊಟಕಾಗುತ್ತದೆ. ಶಕ್ತಿಯ ಸಂಕೋಚದಿಂದಲೇ ತ್ರಿವಿಧಮಲಗಳು ತಲೆಯೆತ್ತುತ್ತವೆ. ಇಚ್ಛಾಶಕ್ತಿಯ ಸಂಕೋಚಾವಸ್ಥೆಯೇ ಯೋಗಾಂಗದ ಆಣವೀಯ ಮಲ. ಅದೇ ಅದಕ್ಕೆ ಆವರಣ. ಜ್ಞಾನಶಕ್ತಿಯ ಸಂಕೋಚಾವಸ್ಥೆಯೇ ಭೋಗಾಂಗದ ಮಾಯೀಯ ಮಲ. ಆದೇ ಅದಕ್ಕೆ ಬಂಧನ. ಕ್ರಿಯಾಶಕ್ತಿಯ ಸಂಕೋಚಾವಸ್ಥೆಯೇ ತ್ಯಾಗಾಂಗದ ಕಾರ್ಮಿಕ ಮಲ. ಇದೇ ಇದಕ್ಕೆ ಆವರಣ. ಶ್ರೀಗುರುದೀಕ್ಷೆಯ ಪಡೆದ ಶಿಷ್ಯನು ತನ್ನ ದೀಕ್ಷಾಗುರುದೇವನಲ್ಲಿ ಅನನ್ಯ ಭಕ್ತಿರಸವನ್ನೆರಿಸಿ, ಆಪ್ತ ಅಂಗಸ್ಥಾನ ಸದ್ಭಾವಗಳಿಂದ ಸೇವಿಸಿ, ಆತನ ಆ ಕಳಾಮಯ ಕರುಣಾಜಲದಿಂದ ತನ್ನ ತ್ರಿಮಲಗಳನ್ನು ತೊಳೆದುಕೊಳ್ಳಬೇಕು. ತ್ರಿವಿಧಲಿಂಗಪ್ರಕಾಶದಿಂದ ತ್ರಿವಿಧ ಶಕ್ತಿಗಳನ್ನು ಹೆಚ್ಚಿಸಿ ಕೊಳ್ಳಬೇಕು. ಅಂದರೆ ವಿಕಾಸಗಳನ್ನಾಗಿಸಿಕೊಳ್ಳಬೇಕು.

ಪ್ರಕೃತಿ ತ್ರಿಗುಣಾತ್ಮಕಳು. ಅಂತೆಯೇ ಅವಳು ತ್ರಿಗುಣ ಪ್ರಸಾರಕಳು; ಭಕ್ತಿ ತ್ರಿಗುಣ ಸಂಹಾರಕಳು. ಭಕ್ತಿ ಅದೊಂದು ಸಿದ್ಧ ರಸ. ಅದರ ಸೋಂಕಿನಿಂದ ಬೆಳ್ಳಿ ತಾಮ್ರ ಕಬ್ಬಿಣಗಳಂತಿರುವ ಸತ್ವ ರಜ ತಮೋಗುಣಗಳು ತಮ್ಮ ಬಿಳುಪು–ಕೆಂಪು-ಕಪ್ಪುಗಳನ್ನುಳಿದು ಚಿನ್ನವಾಗುತ್ತವೆ. ಚಲುವಾಗಿ ಬೆಲೆ ಕಲೆಯುಳ್ಳವಾಗುತ್ತವೆ. ಕಳೆಗೊಳ್ಳುತ್ತವೆ. ಪ್ರಕೃತಿ ಶಿವನನ್ನು ಜೀವನನ್ನಾಗಿಸುತ್ತದೆ. ಭಕುತಿ ಜೀವನನ್ನು ಶಿವನನ್ನಾಗಿಸುತ್ತದೆ.

ಶೂನ್ಯದಿಂದ ಸೃಷ್ಟಿಗೆ ಸೆಳೆವುದು ಪ್ರಕೃತಿ; ಸೃಷ್ಟಿಯಿಂದ ಶೂನ್ಯಕ್ಕೆ ಬರಿಸುವುದು ಭಕ್ತಿ. ಹೊಗೆಯಂತೆ ವಾಸನೆಯುಳ್ಳದು ಪ್ರಕೃತಿ; ಹೊರಪಿನಂತೆ ನಿರ್ವಾಸನೆಯುಳ್ಳದು ಭಕುತಿ. ಚಂದ್ರಿಕೆಯಂತೆ ಅಧೋಮುಖಿ ಪ್ರಕೃತಿ; ದೀಪ್ತಿಯಂತೆ ಊರ್ಧ್ವಮುಖಿ ಭಕುತಿ. ವಿಭುವಾದ ಲಿಂಗವನ್ನು ಕರಸ್ಥಲಕ್ಕೆ ಚುಳುಕಾಗಿಸಿತು ಶಕ್ತಿ; ಅಣುವಾದ ಲಿಂಗವನ್ನು ಶಿರಸ್ಥಲಕ್ಕೇರಿಸಿ ಹಿರಿದಾಗಿಸಿತು ಭಕ್ತಿ. ಭೇದಕ್ಕೆಳಸಿತು ಪ್ರಕೃತಿ; ಅಭೇದಕ್ಕೇರಿಸಿತು ಭಕುತಿ. ಬದ್ಧಜೀವಿಯೆಂದೆನಿಸಿತು ಪ್ರಕೃತಿ; ಶುದ್ಧಬುದ್ಧ ಜೀವಿಯೆಂದೆನಿಸಿತು ಭಕುತಿ. ಕುಂಜದಂತೆ ವಿಶಾಲಕಾರಿ ಪ್ರಕೃತಿ; ಬೀಜದಂತೆ ಗರ್ಭಶಾಲಿ ಭಕುತಿ. ಹೀಗೆ ಪ್ರವೃತ್ತಿ–ನಿವೃತ್ತಿಗಳಲ್ಲಿ ಪ್ರಕೃತಿ ಭಕುತಿಗಳು ಕೆಲಸಮಾಡುತ್ತವೆ.

ಪ್ರವೃತ್ತಿಗಿಳಿಯಂದ ಆ ಪರಾತ್ಪರ ಶಕ್ತಿಯಿಂದ ಶಿವನು ಸರ್ವಜ್ಞತ್ವಾದಿ ಸಕಲಶ್ರೇಷ್ಠ ಗುಣಧರ್ಮಗಳನ್ನು ಗಳಿಸುತ್ತಾನೆ. ಒಂದೇ ಜನ್ಮದಲ್ಲಿ ಜೀವನಿಗೆ ಮುಕ್ತಿ ತರುವ ಶಕ್ತಿ ಭಕ್ತಿಯಲ್ಲಿದೆ. ಇದರಿಂದಾಗಿ ಭಕ್ತಿ ಪಂಚಮ ಪುರುಷಾರ್ಥವೆನಿಸಿಕೊಂಡಿದೆ.

ಮುಕ್ತಿಗೂ ಭಕ್ತಿಗೂ ಅತ್ಯಂತ ಹತ್ತಿರದ ಸಂಬಂಧವಿದೆ. ಭಕ್ತಿಯು ಸಾಕ್ಷಾತ್ತಾಗಿ ಮುಕ್ತಿಯ ಬಳಿಗೆ ಅಂದರೆ ಶಿವಕೃಪೆಗೆ ಒಯ್ಯುತ್ತದೆ. ಉಳಿದ ಕರ್ಮಾದಿಯೋಗಗಳಂತೆ ಪ್ರಕಾರಾಂತರವಾಗಿ ಅಂದರೆ ಬಳಸಿಕೊಂಡು ಹೋಗುವುದಿಲ್ಲ. ಬೇರೊಂದರ ನೆರವನ್ನು ಬಯಸುವುದಿಲ್ಲ. 'ನಂಬಿ ಕರೆದರೆ ಅಂದರೆ ಭಕ್ತಿಯಿಂದ ಭಜಿಸಿದರೆ ಓ ಎನ್ನನೇ ಶಿವನು? ಅದೇ ಭಕ್ತಿಯಿಲ್ಲದವರು ಬೇಕಾದಷ್ಟು ಕೂಗಿದರೂ ಬಾರನು, ಕೇಳನು. ಭಕ್ತಿಭಾವ ದಿಂದೊಡಗೂಡಿ ಮೆಲುದನಿಯಲ್ಲಿ ಒಮ್ಮೆಕೂಗಿದರೆ ಸಾಕು; ಆ ಶಿವಜ್ಯೋತಿ ತಾನಾಗು ತ್ತಾನೆ; ಅಂದರೆ ಆ ಶಿವಸುಖ ತನಗಾಗುತ್ತದೆ. ಭಕ್ತಿಶಕ್ತಿ ಅಂತಹದು.

"ನಾದಪ್ರಿಯ ಶಿವನೆಂಬರು, ನಾದಪ್ರಿಯ ಶಿವನಲ್ಲವಯ್ಯ.
ವೇದಪ್ರಿಯ ಶಿವನೆಂಬರು, ವೇದಪ್ರಿಯ ಶಿವನಲ್ಲವಯ್ಯ.
ನಾದವ ನುಡಿಸಿದ ರಾವಣಂಗೆ ಅರೆ ಆಯುಷ್ಯವಾಯಿತ್ತು.
ವೇದವನೋದಿದ ಬ್ರಹ್ಮನ ಶಿರ ಹೋಯಿತ್ತು.
ನಾದಪ್ರಿಯನೂ ಅಲ್ಲ, ವೇದ ಪ್ರಿಯನೂ ಅಲ್ಲ;
ಹೃದಯ (ಭಕ್ತಿ) ಪ್ರಿಯ ನಮ್ಮಕೂಡಲ ಸಂಗಮದೇವ! "

"ಮೋಕ್ಷ ಸಾಧನ ಸಾಮುಗ್ರ್ಯಾಂ ಭಕ್ತಿರೇವ ಗರೀಯಸೀ"

"ಭಕ್ತೇರಸಾಧ್ಯಂ ನಹಿ ಕಿಂಚಿದಸ್ತಿ" "ಭಕ್ತಿಯೋಗೋ ನಿರುಪದ್ರವಃ॥"

ಇವೇ ಮೊದಲಾದ ಮಾತುಗಳನ್ನು ಮೆಲುಕು ಹಾಕಬೇಕು.

ಶಕ್ತಿ ಭಕ್ತಿಗಳೆರಡೂ ಬಾಳಿಗೆ ಎರಡು ಕಣ್ಣುಗಳಿದ್ದಂತೆ; ಎರಡು ಕಾಲುಗಳಿದ್ದಂತೆ ಕಣ್ಣು ಎರಡಾದರೂ ನೋಟವೊಂದೆ ! ಕಾಲು ಎರಡಾದರೂ ನಡಿಗೆ ಒಂದೆ ! ಧರ್ಮ- ಎರಡಾದರೂ ಧ್ಯೇಯವೊಂದೆ ! ಪ್ರೇಮವೂ ಒಂದು ಶಕ್ತಿಯಲ್ಲವೆ? ಅಂತೆಯೇ ಎಳೆ ಮಗುವಿಗೆ ಜವ್ವನದ ಶಕ್ತಿ ಬಾರದೆ ರಕ್ತಿ ವ್ಯಕ್ತವಾಗುತ್ತದೆಯೆ? "ನಾಯಮಾತ್ಮಾ ಬಲಹೀನೇನ ಲಭ್ಯಃ" ಶಕ್ತಿಯಿಲ್ಲದೆ ಆತ್ಮತ್ವ ಅಳವಡದು. 'ನಂಬಿದೆಯಾದರೆ ತನ್ನನೀವ ಕೂಡಲಸಂಗಮದೇವ." "ಶ್ರದ್ಧಾವಾನ್ ಲಭತೇ ಮಾಂ".

ಶಕ್ತಿ–ಭಕ್ತಿಗಳೆರಡನ್ನೂ ಪೂರ್ವದಲ್ಲಿ ಸಂಪೂರ್ಣವಾಗಿ ಸ್ವೀಕರಿಸಿ ಬಹುವಾಗಿ ಬೆಳಸಿದವರು ವೀರಶೈವ ಶಿವಾಚಾರ್ಯರು; ಬಳಿಕ ಶಿವಶರಣರು. ಪುರಾಣಗಳ ಕಾಲದಲ್ಲಿಯೆ ಭಕ್ತಿಯು ಕರ್ನಾಟಕದಲ್ಲಿ ಹೆಚ್ಚಾಗಿ ಹಬ್ಬಿತ್ತು. ಅಂತೆಯೇ ಪದ್ಮಪುರಾಣವು :

"ಉತ್ಪನ್ನಾದ್ರಾವಿಡೇ ಚಾಹಂ ಕರ್ನಾಟೀ ಸಂವೃದ್ಧಿಂಗತಾ ।
ಸ್ಥಿತಾ ಕಿಂಚಿನ್ಮಹಾರಾಷ್ಟ್ರೇ ಗುರ್ಜರೇ ಜೀರ್ಣತಾಂ ಗತಾ ॥" ಎಂದು

ಭಕ್ತಿಯ ಹುಟ್ಟು ಬೆಳವಣಿಗೆ ಇಳುವಿಣಿಗೆಗಳ ಬಗೆಗೆ ಬಣ್ಣಿಸಿದೆ. ಶಿವಾಚಾರ್ಯರು ಭಕ್ತಿಯನ್ನು ಬೆಳಸಿದ್ದು ಮಾತ್ರವಲ್ಲ, ಶಿವಾಚಾರ್ಯರ ಸಂತತಿಯಲ್ಲಿಯೆ ಸಂಭವಿಸಿತು ಭಕ್ತಿ.

"ಯದಾಚಾರ್ಯಕುಲೇ ಜಾತಾ ಸತಾಮಾಚಾರ ಮಾತೃಕಾ
ಶಿವಭಕ್ತಿಃ ಸ್ಥಿರಾ ಯಸ್ಮಿನ್ ಜಜ್ಞೇ ವಿಗತವಿಪ್ಲವಾ ।"
ಯೇನ ರಕ್ಷಾವತೀ ಜಾತಾ ಶಿವಭಕ್ತಿಃ ಸನಾತನೀ
ಬೌದ್ಧಾದಿ ಪ್ರತಿಸಿದ್ಧಾಂತ ಮಹಾ ಧ್ವಾಂತಾಂಶುಮಾನಿಲಾ ।

–ಸಿದ್ಧಾಂತ ಶಿಖಾಮಣಿ

ಇವುಗಳಿಂದ ಭಕ್ತಿಯ ಶಿವಾಚಾರ್ಯಸಂಕುಲಜನ್ಯತ್ವವು ಸನಾತನತ್ವವು ಸಿದ್ಧಾಂತವಾಗುತ್ತವೆ. ಭಕ್ತಿ ರಕ್ಷಣೆಯೇ ಸ್ನೇಹ ಸಹಕಾರ ಜೀವನಕ್ಕೆ ಮೂಲ. ಸಾಂಸ್ಕೃತಿಕ ಜೀವನಕ್ಕೆ ಸಹಕಾರಿ. ಭಾವಪೂರ್ಣಜೀವನಕ್ಕೆ ಸಾಮಾಜಿಕರ ಏಕಸೂತ್ರತೆಗೆ, ಪ್ರಗತಿ ಶಕ್ತಿಗೆ ಸಹಾಯಕ. ಬಲಿಷ್ಠ ಸಮಾಜವಾದಿ ಸಮಾಜರೂಪಣ ಸಾಮರ್ಥ್ಯ.

ಮತ–ತತ್ತ್ವ-ಸಿದ್ಧಾಂತ
(ಸಂಯೋಜನ ಸಂವಿತ್)

ಈ ಮೂರು ನಾಮ ರೂಪುಗಳಿಂದ ಬೇರೆಯಾಗಿ ಕಂಡರೂ ವಾಸ್ತವವಾಗಿ ಬೇರೆಯಲ್ಲ, ಇವು ಪರಿವಿಡಿದು ಬಿತ್ತು–ಮರ ಹಣ್ಣುಗಳಂತಿವೆ. ಮತಕ್ಕೆ ಭೂಮಿಯೆಂದು ಹೇಳಿದರೂ ಪ್ರತ್ಯವಾಯವಿಲ್ಲ. ಮರಕ್ಕೆ ಬೀಜ ಹೇಗೋ ಭೂಮಿಯೂ ಹಾಗೆಯೆ ಕಾರಣವಾಗಿರುತ್ತದೆ. ಬೀಜ ಸಂಕೋಚಗೊಂಡ ಕಾರಣ, ಭೂಮಿ ವಿಶಾಲವಾದ ಕಾರಣ ತತ್ತ್ವವೃಕ್ಷಕ್ಕೆ ವಾಸ್ತವವಾಗಿ ಆ ಪರವಸ್ತುವೆ ಅಂದರೆ ಶೂನ್ಯಲಿಂಗವೆ ಬೀಜ. ಆದರೆ ವೀರಶೈವದ ತತ್ತ್ವಗಳಿಗೆ ಮೂಲವಾಗಿರುವುದರಿಂದ 'ಸ್ಥಲ' ವೆಂದು ಹೇಳುವುದರಿಂದ ಅದನ್ನು ಭೂಮಿಯೆಂದು ಭಾವಿಸಲಾಗಿದೆ. ಅದಕ್ಕೆ ಅಭಿನ್ನ ನಿಮಿತ್ತೋಪಾದಾನ ಕಾರಣತ್ವವನ್ನು ಅಂಗೀಕರಿಸಿರುವಲ್ಲಿ ಸಹಕಾರಿ ಕಾರಣವಾಗುವ ಭೂಮಿಯನ್ನು ಮತವೆಂದೆ ಹೇಳಬೇಕಾಗುತ್ತದೆ. ಬೀಜ ಭೂಮಿಯ ಗಂಧರಸಗಳು ಫಲದಲ್ಲಿ ಬರುವುದರಿಂದ ಮತ ಮತ್ತು ಶೂನ್ಯವಸ್ತು ಎರಡನ್ನೂ ಭೂಮಿಯನ್ನಾಗಿಯೂ ಬೀಜವನ್ನಾಗಿಯೂ ಅಂಗೀಕರಿಸಿದಲ್ಲಿ ತಪ್ಪಿರದು. ಅಲ್ಲದೆ ಭೂಮಿಯ ಶೂನ್ಯ ಬೀಜದಲ್ಲಿಯೂ ಇರುವುದರಿಂದ ಅದಕ್ಕೆ ತ್ರಿವಿಧ ಕಾರಣತ್ವವೂ ಅಳವಡುತ್ತದೆಯಾಗಿ ಮತ ಬಿತ್ತೆಂದು ಹೇಳುವಲ್ಲಿ ಅತಿವ್ಯಾಪ್ತಿ ದೋಷ ಘಟಿಸದು. ನೇತಿವಾದ ವೀರಶೈವಮತದಲ್ಲಿ ಇಲ್ಲವಾಗಿ ಅತದ್ವ್ಯಾವೃತ್ತಿ ಲಕ್ಷಣದ ಪ್ರಸಂಗವೇ ಪ್ರಾಪ್ತಿಸದು.

ವಿಶುದ್ಧಿಯಾದ ವಿವೃದ್ಧಿಯಾದ ತತ್ತ್ವಗಳುಳ್ಳುದು ವೀರಶೈವಮತ. ಆಚಾರ ವಿಚಾರಗಳಿಂದ ಅವಧಾನ ಅನುಭವಗಳಿಂದ ವಿಶುದ್ಧವಾಗಿದೆ. ಸರ್ವಸಮನ್ವಯದಿಂದ ಷಟ್‌ಸ್ಥಲ ಸಿದ್ಧಾಂತದಿಂದ ವಿವೃದ್ಧಿಯಾಗಿದೆ; ವಿಶಾಲಭಾವವುಳ್ಳುದಾಗಿದೆ. ಎಲ್ಲಮತ, ಎಲ್ಲ ತತ್ತ್ವ, ಎಲ್ಲ ಸಿದ್ಧಾಂತಗಳು ಒಂದಿಲ್ಲ ಒಂದುರೂಪದಲ್ಲಿ ಇದರಲ್ಲಿ ಸಮಾವೇಶ ಗೊಳುತ್ತವೆ. ಸಾಲದ್ದಕ್ಕೆ ಇದರದೇ ಆದ ವಿಶಿಷ್ಟ ಆಚಾರ ವಿಚಾರಗಳು ಸಾಕಷ್ಟಿವೆ. ಸ್ವಯಾನುಭಾವಸಾಹಿತ್ಯ ಸಮೃದ್ಧಿಯಾಗಿದೆ. ಸರ್ವ ಸಿದ್ಧಿಗಳಿಗೆ ಆಶ್ರಯವಿದೆ. ಸರ್ವರಿಗೆ ಆಶ್ರಯವಿದೆ. ಸರ್ವರೂ ಅನುಸರಿಸಲು ಆಚರಿಸಲು ಅನುಕೂಲವಾದ ಸಾಧನಗಳು ಸೌಕರ್ಯವಿದೆ. ವೀರ ಶಿವಾಚಾರ ಮಾನವೀಯ ಸಚಾರಿತ್ರವನ್ನು ರೂಪಿಸಿದರೆ, ವೀರಶೈವ ವಿಚಾರ ಮಾನವೀಯ ಸಮ್ಯಗ್‌ದರ್ಶನವನ್ನು ಸಮ್ಯಗ್ ಸಿದ್ಧಾಂತವನ್ನು ರೂಪಿಸಿ ಮಾನವೀಯ ಮೌಲ್ಯವನ್ನು ಎತ್ತಿಹಿಡಿದಿದೆ. ವೀರವತ್ತ್ವವೂ ಶಿವ(ಶುಭ) ಸಂಪನ್ನವೂ ಆದ ಸಂಸ್ಕೃತಿಯನ್ನು ರೂಪಿಸಿದೆ. ಕಾಯ ಕರಣ ಹರಣ ಭಾವ ಜೀವಗಳ ಉತ್ಥಾನ ಕಾರಣವಾಗಿದೆ. ಸಾಮಾಜಿಕೋತ್ಥಾನ ಪ್ರಣಾಳಿಕೆಗಳಿವೆ. ಸ್ವಾರ್ಥ ಸಂಕೋಚ ದೃಷ್ಟಿಗೆ ಅವಕಾಶವಿಲ್ಲ. ನಿವೃತ್ತಿ–ಪ್ರತಿಷ್ಠಾ ವಿದ್ಯಾಶಾಂತಿ ಮೊದಲಾದ ಕಲೆಗಳ, ಕ್ರಿಯಾ ಜ್ಞಾನ ಅನುಭವಾದಿ ಕಳೆಗಳ ಸಂಗಮವಾಗಿದೆ. ಅಂತೆಯೆ ತತ್ತ್ವಜ್ಞಾನ ವಿಜ್ಞಾನ ಕಲೆ ಕಳೆ ಸಂಸ್ಕೃತಿಗಳ ಸೃಷ್ಟಿ ಸ್ಥಿತಿಗಳಿಗೆ ಕ್ಷೇತ್ರವಾಗಿದೆ. ಅಂಗಸುಖ–ಲಿಂಗ ಸುಖಗಳನ್ನು ತ್ಯಾಗ ಭೋಗ ಯೋಗ ಸಮನ್ವಯದೊಡನೆ ಅನ್ವಯಿಸಿ ಅನುಭವಿಸುವ, ಅನುಭವಿಸಿಯೂ ಅನುಭವಿಸದಂತಿರುವ ಅಲಿಪ್ತರೂಪ ಅಗ್ಗಳಿಕೆಯಿದೆ. ಸಂಗಡಿಸಿ ಅಂಗವಿಸಿಕೊಳ್ಳುವ ಅಳವಿದೆ. ಸೋಸಿ ತೆಗೆದ ಮಾನವೀಯ ಆದರ್ಶಗಳ ಆಗರವಾಗಿದೆ. ಇದು ಭೋಗಪ್ರದವೂ ಅಹುದು, ಯೋಗಪ್ರದವೂ ಅಹುದು. ಆ ಭೋಗ ಭದ್ರ ಭೋಗ ಆ ಯೋಗ ಶಿವಯೋಗ; ಪೂರ್ಣಯೋಗ.

"ಸರ್ವೇಷಾಮಪಿ ಶೈವಾನಾಂ ವೀರಶೈವಂ ಮಹತ್ತರಂ
ಅಲ್ಪಕ್ರಿಯಾ ಬಹುಫಲಂ ವೀರಶೈವಂ ಚ ಷಣ್ಮುಖ ।"

—ವಾತುಲಾಗಮ

ವೀರಶೈವಮತದ ತತ್ತ್ವಗಳು ಸಿದ್ಧಾಂತಗಳು ಬಹಳ ಪುರಾತನಕಾಲದಲ್ಲಿ ಉಗಮ ಗೊಂಡು ಸರ್ವೋತ್ಕೃಷ್ಟವಾದ ಸಂಸ್ಕೃತಿಯಿಂದ ಬೆಳೆದುರೂಪುಗೊಂಡಿವೆ. ಸಮಾಜದ ಸ್ವರೂಪವನ್ನು ಸುಂದರಗೊಳಿಸಿವೆ. ಭಾರತೀಯ ಎಲ್ಲ ತತ್ತ್ವಗಳನ್ನು ದರ್ಶನಗಳನ್ನು ಒಳಗೊಂಡು ಮುನ್ನಡೆದಿವೆ; ಮೇಲ್ಮೆಗೊಂಡಿವೆ. ಅನುಭಾವಿಕವಾಗಿ ಜೀವಂತವಾಗಿವೆ, ಜ್ವಲಂತವಾಗಿವೆ; ಮಹಂತವಾಗಿವೆ. ಸಾಮಾಜಿಕರೆಲ್ಲರ ಜೀವನೋನ್ನತಿಗೆ ಸಹಾಯಕ ವಾಗಿವೆ. ಶುಷ್ಕ ಜೀವನದಲ್ಲಿ ಚಿಲುಮೆಯಂತೆ ಚಿಮ್ಮಬಲ್ಲ ಭಕ್ತಿರಸಪ್ರಭಾವ, ಸೋಲು ಬಾಳಿನಲ್ಲಿ ಸಾಮರ್ಥ್ಯವನ್ನು ತುಂಬಬಲ್ಲ ಶಕ್ತಿಯ ಪ್ರತಿಭೆ, ಭ್ರಷ್ಟ ಜೀವನದಲ್ಲಿ ಶಿಷ್ಟಾಚಾರ

ಗಳನ್ನು ಭಾವಪೂರ್ಣವಾಗಿ ತುಂಬಬಲ್ಲ ಶೀಲ ಸಂಪತ್ತು—ವಿಚಾರ ಮಹತ್ತು ಎಲ್ಲಕ್ಕೂ ಮಿಗಿಲಾಗಿ ಎಂಥವರಿಗೂ ಸುಲಭವಾಗಿ ಮೇಲೇರಲು ಸಾಧ್ಯವಾದ ಷಟ್‌ಸ್ಥಲ ಸಿದ್ಧಾಂತ ಸೋಪಾನಗಳ ಸಹಕಾರ ಅಷ್ಟಿಷ್ಟಲ್ಲ. ಸಕಲರೂ ಅಭ್ಯುದಯ ಹೊಂದಿ ಶ್ರೇಯಸ್ಸಿನತ್ತ ಸಾಗಲು ಅತ್ಯಂತ ಅನುಕೂಲವಾದ ಸತ್ಯಶುದ್ಧ ಕಾಯಕತತ್ತ್ವವಿದೆ. ಸಕಲರೂ ಕೂಡಿ ತೃಪ್ತಿಪಡುವ ದಾಸೋಹ ಸೇವೆಗಿಂಬಿದೆ. ಸಕಲ ಭ್ರಷ್ಟಾಚಾರಗಳಿಗೆ ಕಾರಣವಾದ ಆರ್ಥಿಕವ್ಯಾಮೋಹವನ್ನು ಕಡಿಮೆ ಮಾಡುವುದಲ್ಲದೆ ಸೋಮಾರಿಗಳಾಗದೆ ಸದಾಶುದ್ಧ ವಾಗಿ ದುಡಿಮೆ ಮಾಡುವ ಧೃತಿಯನ್ನುಂಟುಮಾಡುತ್ತದೆ. ಕ್ರಿಯಾ ಸಂಪತ್ತೇ ಮೂಲ ಬಂಡವಾಳವೆಂಬುದನ್ನು ಕಂಡುಕೊಂಡಿದೆ. ಇದರಿಂದಾಗಿ ಯಾರಾದರೂ ಯಾವ ಕಾಯಕವನ್ನಾದರೂ ಕೈಕೊಳ್ಳಲು ಸದವಕಾಶವಿದೆ. ಕುಲ ಪಂಥಗಳು ಇದಕ್ಕೆ ಸೋಂಕವು. ಕಾಯಕದಲ್ಲಿರುವುದೆ ಕೈಲಾಸವೆಂಬುದು ವೀರಶೈವ ಸಿದ್ಧಾಂತ. ರಾಷ್ಟ್ರದ ದೃಷ್ಟಿ ಯಿಂದಲೂ ಇದು ಸರ್ವೋನ್ನತ ತತ್ತ್ವವಾಗಿದೆ, ಸಿದ್ಧಾಂತವಾಗಿದೆ. ಸರ್ವೋನ್ನತಿಗೆ ಸತ್ಯಸಾಧನವಾಗಿದೆ. ಸಕ್ರಿಯಾಶೀಲತೆ ಯಾವ ಸಮಾಜಕ್ಕೆ ಯಾವದೇಶಕ್ಕೆ ಬೇಡ? ಸತ್ಯಶುದ್ಧಕಾಯಕ ತತ್ತ್ವಾಚರಣೆಯಿಂದ ಆಹಾರ ಅಭಾವವಿರದು, ಆಚಾರ-ವಿಚಾರಗಳ ಅಭಾವವಿರದು, ಅನುಭವದ ಅಭಾವವಿರದು, ದಾಸೋಹತತ್ತ್ವಾಚರಣೆಯಿಂದ ಸಾಮಾಜಿಕತೆ ಸಂಘಟನಶೀಲತೆ ವಿತರಣಪರತೆ ಹಸಿದು ನಿಂತ ಆತ್ಮರುಗಳನ್ನು ತೃಪ್ತಿಪಡಿ ಸುವಿಕೆ ಸಾಗಿಬರುತ್ತವೆ. ಅನುಭಾವ ಗೋಷ್ಠಿಯಿಂದ ಸ್ವಯಾನುಭಾವಾನಂದ ಸಮು ನಿಸುತ್ತದೆ.

ಆಚಾರ ಸಹಿತ ವಿಚಾರವನ್ನು ಬೆಳಸುವ ಸತ್ ಸಂಸ್ಕಾರ ವೀರಶೈವಮತದ್ದು. ಮಾನವನ ಸರ್ವಾಂಗ ಸಂಸ್ಕಾರಕ್ಕೆ ಶೀಲಸಂಪನ್ನ ಪ್ರಜ್ಞೆಗೆ ಸಚ್ಚಿಕ್ರಿಯೆಗೆ ಸ್ವಾನುಭೂತಿಗೆ ಸತ್ಯವೂ ಸರ್ವೋನ್ನತವೂ ಆಗಬಲ್ಲ ಸತ್ವಸಂಪನ್ನಸಂವಿಧಾನವಿದು. ಇದನ್ನೇ ಸಮುಸ ಮುಚ್ಚಯದ ದೃಕ್ಕ್ರಿಯಾತತ್ತ್ವ ಅಥವಾ ಶಿವ ಸಿದ್ಧಾಂತವೆಂದು ಹೇಳಲಾಗುತ್ತದೆ. ಇದರಿಂದ ಸಕ್ರಿಯ ಜೀವನ, ಸಮ್ಯಗ್‌ಜ್ಞಾನ ಜೀವನ, ಅಪರೋಕ್ಷಾನುಭಾವ ಜೀವನ ರೂಪಿತವಾಗುತ್ತದೆ. ಏನೆಲ್ಲ ಬಗೆಯ ಬಾಳಿನ ಶುದ್ಧಿವೃದ್ಧಿ ಸಂಸಿದ್ಧಿಗಳುಂಟಾಗುತ್ತವೆ. ಸಹಜ ಸಿದ್ಧಿಯೇ ಸಂಸಿದ್ಧಿ. ಪೂರ್ಣಕ್ರಿಯೆ, ಪೂರ್ಣಜ್ಞಾನ, ಪೂರ್ಣಯೋಗ, ಪೂರ್ಣಾನುಭವ ಪೂರ್ಣಪ್ರಭಾವಗಳಿಗೆ ಆ ಸಹಜ ಸಂಸಿದ್ಧಿ ಕಾರಣವಾಗುತ್ತದೆ.

ಇದು ಸರ್ವಸಮಂಜಸ ಮಾರ್ಗ. ಇದರಿಂದ ಎಲ್ಲ ಅಭಾವಗಳ ವಿಮೋಚನ; ಎಲ್ಲ ಸದ್ಭಾವಗಳ ಏಳ್ಗೆಗಳ ಸಂವರ್ಧನ. ವೀರಶೈವಮತದಲ್ಲಿ ಎಲ್ಲದರ ಸಮನ್ವಯ ವಿರುವಂತೆ ಸರ್ವಶ್ರುತಿ ಸಮನ್ವಯವೂ ಇದೆ.

"ಶ್ರುತ್ಯೇಕದೇಶ ಪ್ರಾಮಾಣ್ಯಂ ದ್ವೈತಾದ್ವೈತಮತಾದಿಷು,
ದ್ವೈತಾದ್ವೈತಮತೇ ಶುದ್ಧೇ ವಿಶೇಷಾದ್ವೈತಸಂಜ್ಞಿಕೇ
ವೀರಶೈವೈಕಸಿದ್ಧಾಂತೇ ಸರ್ವಶ್ರುತಿ ಸಮನ್ವಯಃ ।"

–ಶ್ರೀಕರಭಾಷ್ಯ

'ದ್ವೈತ ಮತ್ತು ಅದ್ವೈತಾದಿ ಮತಗಳಲ್ಲಿ ಶ್ರುತಿಯು ಏಕದೇಶಪ್ರಾಮಾಣ್ಯವಿದೆ. ದ್ವೈತಮತ ಕರ್ಮಕಾಂಡವನ್ನು ಒಪ್ಪುತ್ತದೆ, ಜ್ಞಾನಭಾಗವನ್ನು ಒಪ್ಪುವುದಿಲ್ಲ. ಅದ್ವೈತ ಮತ ಜ್ಞಾನಭಾಗವನ್ನು ಒಪ್ಪುತ್ತದೆ. ಕರ್ಮಭಾಗವನ್ನು ಒಪ್ಪುವುದಿಲ್ಲ.ಇದರಿಂದಾಗಿ ಇವುಗಳಲ್ಲಿ ಸರ್ವಶ್ರುತಿ ಪ್ರಾಮಾಣ್ಯವಿಲ್ಲ; ಸಮನ್ವಯ ಮುನ್ನವೆ ಇಲ್ಲ. ದ್ವೈತಾದ್ವೈತ ಶುದ್ಧವೆಂದು ವಿಶೇಷಾದ್ವೈತವೆಂದು ಹೇಳಿಸಿಕೊಳ್ಳುವ ವೀರಶೈವ ಸಿದ್ಧಾಂತವೊಂದರಲ್ಲಿ ಸರ್ವಶ್ರುತಿ ಸಮನ್ವಯವಿದೆ; ಏಕೆಂದರೆ ಇದು ಜ್ಞಾನ–ಕ್ರಿಯೆಗಳೆರಡನ್ನು ಒಪ್ಪುತ್ತದೆ. ಇದರಿಂದಾಗಿ ಪೂರ್ಣಶ್ರೌತಮತ ವೀರಶೈವಮತವೊಂದೆ ! ಅಲ್ಲದೆ ಇದರಲ್ಲಿ ದ್ವೈತ–ಅದ್ವೈತ–ವಿಶೇಷಾದ್ವೈತಗಳ ಸಮನ್ವಯವೂ ಇದೆ; ಇದು ಶುದ್ಧವಾಗಿದೆ.'

ಇದಲ್ಲದೆ ಸಿದ್ಧಾಂತಶಿಖಾಮಣಿಯಲ್ಲಿ ವೀರಶೈವಸಿದ್ಧಾಂತವನ್ನು ಕುರಿತು ಹೀಗೆ ಹೇಳಲಾಗಿದೆ.

"ಈದೃಶಂ ಶಿವಬೋಧಸ್ಯ ಸಾಧನಂ ನಾಸ್ತಿ ಕುತ್ರಚಿತ್ ।
ರಹಸ್ಯಮೇತತ್ ಸರ್ವಜ್ಞಃ ಸರ್ವಾನುಗ್ರಾಹಕಃ ಶಿವಃ
ಅವಾದೀತ್ ಸರ್ವಲೋಕಾನಾಂ ಸಿದ್ಧಯೇ ಪಾರ್ವತೀಪತಿಃ ॥"

ಇಂತಹ ಶಿವಬೋಧ ಸಾಧನ ಬೇರೆಲ್ಲಿಯೂ ಇಲ್ಲ. ರಹಸ್ಯವಾದ ಇದನ್ನುಸರ್ವಜ್ಞನೂ ಸರ್ವಾನುಗ್ರಹಶಕ್ತನೂ ಆದ ಶಿವನು ಸರ್ವಲೋಕೋದ್ಧಾರಕ್ಕಾಗಿ ಹೇಳಿದನು.

"ತದಿದಂ ಸರ್ವಸಿದ್ಧಾಂತಸಾರಾಣಾ ಮುತ್ತಮೋತ್ತಮಂ ।
ವೇದವೇದಾಂತ ಸರ್ವಸ್ವಂ ವಿದ್ಯಾಚಾರಪ್ರಕಾಶಕಂ ॥"

-ಸಿ. ಶಿಖಾಮಣಿ

ಎಂದು ಹೇಳಿದೆ. 'ಅದರಿಂದಾಗಿ ಇದು ಅಂದರೆ ಈ ವೀರಶೈವ ಸಿದ್ಧಾಂತವು ಉಳಿದೆಲ್ಲ ಸಿದ್ಧಾಂತಸಾರಗಳಲ್ಲಿ ಉತ್ತಮೋತ್ತಮ ಸಿದ್ಧಾಂತವಾಗಿದೆ. ಇದು ಎಲ್ಲ ವೇದ ವೇದಾಂತಗಳ ಸರ್ವಸ್ವವಾಗಿದೆ; ಮತ್ತು ಜ್ಞಾನಾಚಾರ ಪ್ರಕಾಶಕವಾಗಿದೆ.' ಇದು ಶಿವಸಿದ್ಧಾಂತ ವೆನಿಸಿದೆ; ಅದರಲ್ಲಿಯೂ ವೀರಶಿವನಿಗೆ ಸಂಬಂಧ ಪಟ್ಟ ನಿರ್ಣಯವಾಗಿದೆ. ಆದ್ದರಿಂದ ಇದು ವೀರಶೈವಸಿದ್ಧಾಂತ. ಅಂತೆಯೆ ಇದು ವೀರಶೈವಮತ ಸಿದ್ಧಾಂತವೂ ಆಗಿದೆ.

ವೀರಶೈವ ಮತ ಸಿದ್ಧಾಂತ ಅಂಗ-ಲಿಂಗ-ಸಾಮರಸ್ಯ. ಅಂಗಲಿಂಗ ಸಾಮರಸ್ಯ ವೆಂದರೆ ವಿದೇಹ ಮುಕ್ತಿಯಲ್ಲ, ಜೀವನ್ಮುಕ್ತಿ. ಬ್ರಹ್ಮಾದ್ವೈತದಲ್ಲಿ ವಿದೇಹ ಮುಕ್ತಿಯನ್ನು

ಮಾತ್ರ ಒಪ್ಪುತ್ತದೆ. ವಿದೇಹವೆಂದರೆ ದೇಹನಾಶವಾಗುವಿಕೆಯೆಂದು ಅದರ ಗ್ರಹಿಕೆ. ದೇಹೋಪಾಧಿಯಿರುವವರೆಗೆ ಐಕ್ಯ ಅಳವಡದೆಂದು ಕೇವಲಾದ್ವೈತಿಯ ಮತ. ಇದಕ್ಕೆ ಆತ ಕೊಡುವ ನಿದರ್ಶನವಿದು; ಉಪಾಧಿಯಾದ ಘಟ ಒಡೆಯದೆ ಘಟಾಕಾಶ ಮಹಾಕಾಶವಾಗದೆನ್ನುತ್ತಾನೆ. ಇದನ್ನು ವೀರಶೈವವು ಒಪ್ಪುವುದಿಲ್ಲ. ಘಟವೂ ಬಯಲೇ ಎನ್ನುತ್ತದೆ. ಅಲ್ಲದೆ ಘಟನಾಶವನ್ನೂ ಶಿವಾದ್ವೈತ ಸಿದ್ಧಾಂತ ಒಪ್ಪುವುದಿಲ್ಲ. ಇದರಲ್ಲಿ ಸಮರಸತ್ವವೆ ಮುಕ್ತಿಯಲ್ಲದೆ ಸಾವು ಮುಕ್ತಿಯಲ್ಲ. ಸಾವು ಮುಕ್ತಿಯೆಂದರೆ ಜೀವನ ಮುಕ್ತಿಯೆ ಸಂಭವಿಸುವುದಿಲ್ಲ. ಮತ್ತು ಸತ್ತವರಿಗೆಲ್ಲರಿಗೂ ಮುಕ್ತಿ ಸಂಭವಿಸುವ ಅತಿವ್ಯಾಪ್ತಿ ದೋಷ ಸಂಭವಿಸುತ್ತದೆ. ಆದ್ದರಿಂದ ವೀರಶೈವ ಸಿದ್ಧಾಂತ ಘಟನಾಶವೆ ಮುಕ್ತಿಯೆಂಬುದನ್ನೊಪ್ಪುವುದಿಲ್ಲ.

"ಘಟವನೊಡೆದು ಬಯಲ ನೋಡಲದೇಕೆ,
ಆ ಘಟದೊಳಗಿಪ್ಪುದೇ ಬಯಲೆಂದರಿದಡೆ ಸಾಲದೆ?
ಪಟವ ಹರಿದು ತಂತುವ ನೋಡಲದೇಕೆ,
ಆ ಪಟವೇ ತಂತುವೆಂದರಿದಡೆ ಸಾಲದೆ?
ಕಟಕವ ಮುರಿದು ಕಾಂಚನವ ನೋಡಲದೇಕೆ,
ಆ ಕಟಕವೇ ಕಾಂಚನವೆಂದರಿದೆಡೆ ಸಾಲ
ತನ್ನನಳಿದು ಘನವ ನೋಡಲದೇಕೆ,
ತಾನೇ ಘನವೆಂದರಿದೊಡೆ ಸಾಲದೆ ಹೇಳಾ ರಾಮನಾಥ?"

ಶ್ರೀ ದೇವರದಾಸಿಮಯ್ಯಗಳು ಘಟನಾಶದಿಂದ ಆಕಾಶಗಳೆರಡರ ಐಕ್ಯವನ್ನು ಸಾಧಿಸುವ ಬ್ರಹ್ಮಾದ್ವೈತ ಮತ ಖಂಡನವನ್ನು ಈ ವಚನದಲ್ಲಿ ಒಂದಲ್ಲ ಎರಡಲ್ಲ ಮೂರು ದೃಷ್ಟಾಂತಗಳ ಮೂಲಕ ಸುಸ್ಪಷ್ಟವಾಗಿ ಮಾಡಿ ವೀರಶೈವ ಸಿದ್ಧಾಂತವನ್ನು ಎತ್ತಿ ಹಿಡಿದಿದ್ದಾರೆ.*

ಇನ್ನು ವಿದೇಹ ಶಬ್ದಕ್ಕೆ ವೀರಶೈವವು ದೇಹಗುಣ ದೇಹ ಮೋಹ ದೇಹಭಾವ ಗಳಿಲ್ಲದಿರುವಿಕೆ ಎಂದು ಹೇಳುತ್ತದೆ. ಮತ್ತು ಶಿವದೀಕ್ಷಾ ಸಂಸ್ಕಾರರೂಪ ಅಗ್ನಿಯಿಂದ ದೇಹಭಾವವನ್ನು ದಹಿಸಿ ಅಂಗವನ್ನಾಗಿಸಲಾಗುತ್ತದೆ. ವೀರಶೈವ ಸಿದ್ಧಾಂತದಲ್ಲಿ ಅಂಗವೆಂದರೆ ಕಪ್ಪುರ; ಲಿಂಗವೆಂದರೆ ಉರಿ. ಇವೆರಡರ ಸಂಯೋಗವೇ ಐಕ್ಯ.

ವೀರಶೈವಸಿದ್ಧಾಂತದಲ್ಲಿ ಕಾಯ ಅಕಾಯವಾಗಿ ಪರಕಾಯವಾಗುತ್ತದೆ. ಇದು ವೀರಶೈವರು ಸಾಧಿಸುವ ಕಾಯಯೋಗ; ಕ್ರಿಯಾಯೋಗ. ಲಿಂಗಕ್ರಿಯೆ ಲಿಂಗಪ್ರಜ್ಞೆ ಲಿಂಗಾನುಭೂತಿ ಕಾಯದಲ್ಲಿ ಆಗಮ (ಬರುವಿಕೆ) ವಾಗುವುದೆ ಕ್ರಿಯಾಗಮ ಜ್ಞಾನಾಗಮ ಭಾವಾಗಮವೆಂದು ಹೇಳಲಾಗುತ್ತದೆ. ಇವು ಕಾಯವಿಲ್ಲದೆ ಬಾರವು.

* ಈ ಬಗೆಗೆ ಇನ್ನೂ ಹೆಚ್ಚು ಅರಿಯಬೇಕಾದರೆ ೧೯೬೫ರಲ್ಲಿ ನಾವೇ ಬರದ "ವೇದಾಂತ" ಎಂಬ ಕಿರುಹೊತ್ತಗೆಯನ್ನು ತಪ್ಪದೆ ಓದಬೇಕು.

"ಕಾಯಂ ವಿನಾ ಸಮಾಸ್ತಾನಾಂ ನ ಕ್ರಿಯಾ, ನ ಚ ಭಾವನಾ,
ನ ಜ್ಞಾನಂ ಯತ್ತತೋ ಯೋಗೀ ಕಾಯವಾನೇವ ಸಂಚರೇತ್ ।
ಶಿವೈಕ್ಯಜ್ಞಾನಯುಕ್ತಸ್ಯ ಯೋಗಿನೋಽಪಿ ಮಹಾತ್ಮನಃ
ಕಾಯಯೋಗೇನ ಸಿದ್ಧ್ಯಂತಿ ಭೋಗ ಮೋಕ್ಷಾದಯಃ ಸದಾ ।
ಕಾಷ್ಠಂ ವಿನಾಯಥಾ ವಹ್ನಿರ್‌ಜಾಯತೇ ನ ಪ್ರಕಾಶವಾನ್
ಮೂರ್ತಿಂ ವಿನಾ ತಥಾ ಯೋಗೀನಾತ್ಮತತ್ತ್ವ ಪ್ರಕಾಶವಾನ್ ।

ಇದು ವೀರಶೈವಸಿದ್ಧಾಂತದ ಸಕಾಲಸ್ಥಲದ ಸಾಧನೆ. ಕಾಯಯೋಗದ ಸಾಧನೆ. ಮುಂದೆ ಅಕಾಯಸ್ಥಲವೂ ಉಂಟು.

ದೇಹಾಭಿಮಾನಹೀನಸ್ಯ ಶಿವಭಾವೇ ಸ್ಥಿರಾತ್ಮನಃ
ಜಗದೇತಚ್ಛರೀರಂ ಸ್ಯಾತ್‌ದೇಹೇನೈಕೇನ ಕಾವ್ಯದಾ? ।
ಶಿವಜ್ಞಾನೈಕನಿಷ್ಠಸ್ಯ ನಾಹಂಕಾರಭವೋ ಭ್ರಮಃ
ನ ಚೇಂದ್ರಿಯ ಭವಂ ದುಃಖಂ ತ್ಯಕ್ತದೇಹಾಭಿಮಾನಿನಃ ।

ಅಕಾಯವೆಂದರೆ ಕಾಯವಿಲ್ಲದಂತಾಗುವಿಕೆಯಲ್ಲ, ಕಾಯಾಭಿಮಾನವನ್ನು ಕಳಚಿ ಶಿವಭಾವವನ್ನು ಸ್ಥಿರಗೊಳಿಸಿ ಜಗತ್ಕಾಯನಾಗುವಿಕೆ! ಅಂದರೆ ಕಾಣುವ ಜಗತ್ತೆಲ್ಲ ತನ್ನ ಕಾಯವೆಂದು ಜಗತ್ಕಲ್ಯಾಣಕ್ಕಾಗಿ ಬಾಳುವಿಕೆ!

ದೇಹಾಭಿಮಾನವುಳ್ಳವನಿಗೆ ಇಂದ್ರಿಯ ಜನ್ಯದುಃಖವುಂಟಾಗುತ್ತದೆ. ಅಂತೆಯೆ ಇದರ ಅಹಂಕಾರವುಳ್ಳವನಿಗೆ ಭ್ರಾಂತಿಯುದಿಸುತ್ತದೆ. ಅದೇ ಅಭಿಮಾನ ಅಹಂಕಾರ ಗಳನ್ನು ಬಿಟ್ಟು ಶಿವಜ್ಞಾನೈಕನಿಷ್ಠನಾದರೆ ಭ್ರಾಂತಿಯೂ ಇಲ್ಲ ಭವದುಃಖವೂ ಇಲ್ಲ.

"ಪರಸ್ಯ ದೇಹಯೋಗೇಽಪಿ ನ ದೇಹಾಶ್ರಯ ವಿಕ್ರಿಯಾ
ಶಿವಸ್ಯೇವ ಯತಸ್ತಸ್ಮಾತ್ ಅಕಾಯೋಽಯಂ ಪ್ರಕೀರ್ತಿತಃ ।
ಪರಲಿಂಗೇ ವಿಲೀನಸ್ಯ ಪರಮಾನಂದ ಚಿನ್ಮಯೇ
ಕುತೋ ದೇಹೇನ ಸಂಬಂಧೋ ದೇಹಿವದ್ಭಾಸನಂ ಭ್ರಮಃ"

ಆ ಪರಶಿವನ ಕ್ರಿಯಾಜ್ಞಾನಾನುಭವಗಳಲ್ಲಿಯೆ ವೀರಶೈವನಿರುವುದರಿಂದ ಆತನ ಚಿತ್ತ ಬುದ್ಧಿ ಭಾವಗಳೆಲ್ಲ ಪರಶಿವಲಿಂಗದಲ್ಲಿಯೆ ಸಂಗವಾಗಿರುತ್ತದೆ. ಪರಮಾನಂದದಲ್ಲಿಯೆ ತಲ್ಲೀನವಾಗಿರುತ್ತವೆ. ಅಂತವನಿಗೆ ಕಾಯವಿದ್ದೂ ಇಲ್ಲದಂತಾಗಿರುತ್ತದೆ. ಅದೇ ಅಕಾಯಸ್ಥಲ.

"ಸಮ್ಯಗ್ ಜ್ಞಾನಾಗ್ನಿ ಸಂದಗ್ಧ ಜನ್ಮ ಬೀಜ ಕಲೇವರಃ
ಶಿವತತ್ತ್ವಾವಲಂಬೀ ಯಃ ಪರಕಾಯಃ ಸ ಉಚ್ಯತೇ ।
ಪರಾಹಂತಾಮನುಪ್ರಾಪ್ಯ ಪಶ್ಯೇದ್ವಿಶ್ವಂ ಚಿದಾತ್ಮಕಂ

ನ ದೇಹೀತಿ ಭ್ರಮಸ್ತಸ್ಯ ನಿಶ್ಚಿತಾ ಹಿ ಶಿವಾತ್ಮತಾ ।
ಸ್ವಸ್ವರೂಪಂ ಶಿವಾಕಾರಂ ಜ್ಯೋತಿಸ್ಸಾಕ್ಷಾದ್ವಿಚಿಂತಯನ್
ದೇಹವಾನಪಿ ನಿರ್ದೇಹೋ ಜೀವನ್ಮುಕ್ತೋಹಿ ಸಾಧಕಃ ।
ದೇಹಸ್ತಿಷ್ಠತು ವಾ ಯಾತು ಯೋಗಿನಃ ಸ್ವಾತ್ಮಬೋಧಿನಃ
ಜೀವನ್ಮುಕ್ತಿರ್ ಭವೇತ್ ಸದ್ಯಶ್ಚಿದಾನಂದಪ್ರಕಾಶಿನೀ ।"

ಕಾಯಭಾವವಿಲ್ಲದವನೇ ಅಕಾಯ. ಕಾಯವೂ ಪರವೆಂದು ಅರಿತವನು ಪರಕಾಯ ಕಾಯವೂ ಪರಸ್ವರೂಪ. ಅಂಗ ಲಿಂಗಸ್ವರೂಪ ಎಂದರಿದಾಚರಿಸುವುದೆ ಸಮ್ಯಗ್ ಜ್ಞಾನ. ಅದರಿಂದ ಜನ್ಮಬೀಜ ದಗ್ಧವಾಗುತ್ತದೆ. ಹುರಿದ ಬಿತ್ತು ಇದ್ದಂತಿರುತ್ತದೆ. ಆಗ ಶಿವತತ್ತ್ವವನ್ನೇ ಅವಲಂಬಿಸಿರುತ್ತದೆ. ಇನ್ನುಳಿದ ಪೃಥಿವ್ಯಾದಿ ೨೫ ತತ್ತ್ವಗಳೆಲ್ಲ ಶಿವತತ್ತ್ವದಲ್ಲಿ ಲೀನವಾದಾಗ ಕಾಲ ಕರ್ಮ ಮಾಯೆಗಳು ಆವರಿಸುವವು. ಅವಿದ್ಯೆ ರಾಗ ನಿಯತಿಗಳು ಬಂಧಿಸವು. ಇವಕ್ಕೆಲ್ಲ ತಾನೇ ಈಶ್ವರ(ಒಡೆಯ)ನಾಗಿ ಇವನ್ನು ತನ್ನ ಅಂಕಿತದಲ್ಲಿರಿಸಿಕೊಳ್ಳುತ್ತಾನೆ. ಇವಕ್ಕೆ ಅಧೀನನು ತಾನಾಗನು. ಇದೇ ಈಶ್ವರತ್ವ. ಇದು ಲಭಿಸಿದಲ್ಲಿ ತನಗೆ ಆ ಪರಾಹಂತತೆ ಅಂದರೆ ಪೂರ್ಣಾಹಂಭಾವ ವುಂಟಾಗುತ್ತದೆ. ಅಪರಾಹಂತತೆ ಅಳಿಯುತ್ತದೆ. ಚೂರ್ಣಾಹಂಕಾರವಿರದು; ಸ್ವಾರ್ಥವಿರದು. ಆಗ ವಿಶ್ವವನ್ನೇ ಚಿನ್ಮಯವನ್ನಾಗಿ ಭಾವಿಸುತ್ತಾನೆ. ಶಿವಾತ್ಮವನ್ನಾಗಿ ಭಾವಿಸುತ್ತಾನೆ. ವಿಶ್ವವೇ ಚಿನ್ಮಯಶಿವಸ್ವರೂಪವಾಗಿ ಪರಿಣಮಿಸಿದಲ್ಲಿ ವಿಶ್ವಘಟಕವಾದ ತನ್ನ ತನು ಚಿನ್ಮಯ ಶಿವಸ್ವರೂಪವಾಗದೆ? ಆಗ ಆತನಿಗೆ ಎಲ್ಲವೂ ಶಿವಾತ್ಮವೆಂಬ ನಿಶ್ಚಿತ ಬುದ್ಧಿಯುಂಟಾಗುತ್ತದೆ. ಈ ನಿರ್ಣಯವೇ ವೀರಶೈವಸಿದ್ಧಾಂತ. ಇದರಿಂದ ತಾನೂ ತಾನಿರುವ ಈ ವಿಶ್ವವೂ ಶಿವಸ್ವರೂಪವಾಗಿ ಪರಿಣಮಿಸುತ್ತದೆ; ಶಿವ ಜ್ಯೋತಿಯಾಗಿ ಬೆಳಗುತ್ತದೆ. ಆಗ ದೇಹ ಇದ್ದರೆಷ್ಟು, ಇಲ್ಲದಿದ್ದರೆಷ್ಟು? ಆತನು ಮಾತ್ರ ಸ್ವಾತ್ಮಬೋಧಿಯಾಗಿ ಸದ್ಯಶ್ಚಿದಾನಂದಿಯಾಗಿ ಜೀವನ್ಮುಕ್ತನಾಗಿ ಇರುತ್ತಾನೆ. ಜೀವನ್ಮುಕ್ತನಿಗೆ ದೇಹವಿದ್ದರೂ ಅದು ನಿರ್ದೇಹ; ಆತ ನಿರ್ದೇಹಿ. ಸದಾ ಶಿವತತ್ತ್ವಾವಲಂಬಿಯಾಗಿ ಪರಕಾಯನೆನಿಸುತ್ತಾನೆ. ಇದುಃ ವೀರಶೈವ ಸಿದ್ಧಾಂತ ರಹಸ್ಯ; ಸ್ವಾರಸ್ಯ. ಈ ಬಗೆಯ ನಿರ್ಣಯಾತ್ಮಕ ಶಿವಬೋಧಸಾಧನ ಬೇರೆಯಿಲ್ಲ. ಆದ್ದರಿಂದ ಇದು ಅಪ್ರತಿಮ ಸಿದ್ಧಾಂತ; ಉತ್ತಮೋತ್ತಮ ಸಿದ್ಧಾಂತ.

ಕನ್ನಡ ಅಧ್ಯಯನ ಪೀಠ : ವಿಶೇಷ ಉಪನ್ಯಾಸ ಗ್ರಂಥಗಳು

೧. ಸೌಂದರ್ಯ ಮೀಮಾಂಸೆ — ೩-೦೦
—ವಿ. ಕೃ. ಗೋಕಾಕ

೨. ಚಿತ್ರ, ಶಿಲ್ಪ, ವಾಸ್ತುಕಲೆಗಳು — ೪-೦೦
—ಶಿವರಾಮ ಕಾರಂತ

೩. ಪಾಶ್ಚಾತ್ಯ ವಿಮರ್ಶೆಯ ಮಧ್ಯಯುಗ — ೬-೦೦
—ವ್ಹಿ. ಎಂ. ಇನಾಮದಾರ

೪. ವೀರಶೈವಧರ್ಮ ವಿವೇಚನೆ — ೪-೦೦
—ನಾಗಭೂಷಣ ಶಾಸ್ತ್ರಿ

೫. ಕನ್ನಡ ಜಾನಪದ ಸಾಹಿತ್ಯ — ೬-೦೦
—ಬೆಟಗೇರಿ ಕೃಷ್ಣಶರ್ಮಾ

೬. ಶರಣರ ಅನುಭವ, ಅನುಭಾವ, ಅನುಭೂತಿ — ೭-೦೦
—ಆರ್. ಆರ್. ದಿವಾಕರ

೭. ಬಸವಣ್ಣನವರ ಜೀವನ ಹಾಗೂ ಸಂದೇಶ — (ಸಾದಾ) ೭-೦೦
—ಸಿದ್ಧಯ್ಯ ಪುರಾಣಿಕ — (ಉತ್ತಮ) ೧೦-೦೦

ವ್ಯಾಸಂಗ ವಿಸ್ತರಣ-ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

'RNATAK UNIVERSITY PRESS, DHARWAD